ಸಂವಾದ

ಆಗಸ್ಟ್ ೨೦೦೭ ರೂ.೨೦

ತತ್ತರಿಸಿದ ಮಲೆನಾಡು

ರಾಮದಾಸ್: ಸಾಯುವ ತನಕ ಪ್ರತಿರೋಧ

ಕುಲೀನ ವರ್ಗಕ್ಕೆ ಚಿಕಿತ್ಸೆ!

ಸಂವಾದ

ಮಾಸ ಪತ್ರಿಕೆ

ಸಂಪುಟ ೫ ಸಂಚಿಕೆ ೧೦
ಆಗಸ್ಟ್ ೨೦೦೭

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಾ॥ ಡಿ. ಡೊಮಿನಿಕ್
ಬಿ.ಯು.ಸುಮಾ
ಡಾ॥ ಜಿ. ಪಾಂಡುನಾಯಕ್
ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ
ಅಂಜನಾನಗರ, ಮಾಗಡಿ ರಸ್ತೆ.
ವಿಶ್ವನೀಡಂ ಅಂಚೆ
ಬೆಂಗಳೂರು-೫೬೦ ೦೯೧
✆ ೨೩೨೮೭೯೪೩/೯೪೪೮೦ ೪೮೩೦೬
ಇ-ಮೇಲ್ : samvaada@hotmail.com
honnapura@yahoo.co.in

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
✆ 080-23287943, 94480 48306
e-mail : samvaada@hotmail.com
honnapura@yahoo.co.in

EDITOR :
INDUDHARA HONNAPURA

ಒಳಪುಟಗಳಲ್ಲಿ

❑ ಪತ್ರಗಳು ೦೩
❑ ಹೊಸ ಪುಸ್ತಕ ೦೪
❑ ಅಂತರಂಗ ೦೫
❑ ತತ್ತರಿಸಿದ ಮಲೆನಾಡು ೦೬
○ ಭಾಸ್ಕರ್
❑ ರಾಷ್ಟ್ರಪತಿ ಚುನಾವಣೆ ಸುತ್ತ... ೦೮
○ ನಾ. ದಿವಾಕರ
❑ ಮೇರಾ ಭಾರತ್ ಮಹಾನ್ ೧೧
❑ ರಾಮದಾಸ್: ಸಾಯುವ ತನಕ... ೧೨
○ ರಹಮತ್ ತರೀಕೆರೆ

❑ ಭಗತ್‌ಸಿಂಗ್ ಮತ್ತು ಯುವಜನತೆ ೧೬
○ ಮ.ಶ್ರೀ. ಮುರಳಿ ಕೃಷ್ಣ
❑ ಬಲಿ (ಕಥೆ) ೧೮
○ ದೇವಿ ಭಾರತಿ
❑ ಬುದ್ಧನೆಡೆಗೆ ಮರಳಿ ಮನೆಗೆ
ದಲಿತರ ಚಾರಿತ್ರಿಕ ನಿರ್ಧಾರ
○ ವಡ್ಡಗೆರೆ ನಾಗರಾಜಯ್ಯ ೨೨
○ ಎಸ್. ಮರಿಸ್ವಾಮಿ ೨೪
○ ದೇವನೂರ ಮಹಾದೇವ ೨೫
❑ ದಲಿತ ಸಂಸ್ಕೃತಿ ಪರಿಭಾಷೆಗಳು ೨೬
○ ಲಕ್ಕೂರು ಸಿ. ಆನಂದ
❑ ದಲಿತ ವೀರನಾರಿಯರು ೩೦
○ ಚಾರುಗುಪ್ತ/ ಸತ್ಯ ಪ್ರಕಾಶ್
❑ ಸಮಾಜ ವಿಜ್ಞಾನಿಯ ಆಲೋಚನೆಗಳು ೩೪
○ ಮಲ್ಲಿಕಾರ್ಜುನ ಹೀರೆಮಠ
❑ ಪೇಟೆಂಟ್ ಕದನ ೩೬
○ ಡಾ॥ ಗೋಪಾಲ ದಾಬಡೆ
❑ ದಲಿತ್ ಡೈರಿ ೩೮
○ ಚಂದ್ರಭಾನ್ ಪ್ರಸಾದ್/ ಡೊಮಿನಿಕ್
❑ ಬುದ್ಧಾಯಣ ೪೨
○ ಸಿ. ಎಚ್. ರಾಜಶೇಖರ್

ಕವನಗಳು :
❑ ಸುರಿವ ಮರಳ ಕಣಗಳ ನಡುವೆ ೧೫

ಮುಖಪುಟ ವಿನ್ಯಾಸ: ರಾಠೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

ಅಧಿಕಾರ ಹುಳು ತಲೆ ಹೊಕ್ಕಾಗ...

ಮಾನ್ಯ ಸಂಪಾದಕರೇ,

ಬ್ರಾಹ್ಮಣರನ್ನು ಎಕ್ಕಡದಲ್ಲಿ ಹೊಡೆಯಬೇಕು ಎನ್ನುತ್ತಿದ್ದ ಕಾನ್ಸಿರಾಮ್ ಮತ್ತು ಅವರ ಮಾನಸ ಪುತ್ರಿ ಮಾಯಾವತಿ ಈಗ ಬ್ರಾಹ್ಮಣರ ಸಹಯೋಗದಲ್ಲಿ ಉತ್ತರ ಪ್ರದೇಶದ ಮುಖ್ಯಮಂತ್ರಿಯಾದರು. ಇದು ಭಾರತದ ಎಲ್ಲ ರಾಜ್ಯಗಳ ಎಲ್ಲ ರಾಜಕೀಯ ಪಕ್ಷಗಳನ್ನು ದಂಗುಬಡಿಸಿದೆ.

ದಲಿತ ಮುಖಂಡರು ಜಾತಿ ಪದ್ಧತಿ ತೊಲಗಬೇಕು ಎನ್ನುತ್ತಿದ್ದವರು ಮಾಯಾವತಿಯ ಮಾಂತ್ರಿಕತೆಯನ್ನು ಮೆಚ್ಚಿಕೊಳ್ಳುತ್ತಿದ್ದಾರೆ. ದಲಿತರು ಅಧಿಕಾರಕ್ಕೆ ಬರುವುದಾದರೆ ಜಾತೀಯತೆ ಇರಲಿ, ಅದಿಲ್ಲವಾದರೆ ಜಾತೀಯತೆ ಕೊನೆಗೊಳ್ಳಲಿ ಎಂಬುದು ಬಹುತೇಕ ದಲಿತ ಮುಖಂಡರ ಆಶಯವಿದ್ದಂತೆ ತೋರುತ್ತದೆ. ಈ ಬಗೆಯ ಇಬ್ಬಂದಿ ನೀತಿ ಖಂಡಿತವಾಗಿ ಪ್ರಗತಿಯ ಚಿಹ್ನೆಯಲ್ಲ. ಅದು ಸಮಯ ಸಾಧಕ ನೀತಿ ಎಂಬುದನ್ನು ದಲಿತರು ಮನಗಾಣಬೇಕು.

ಬ್ರಾಹ್ಮಣರು ಉತ್ತರ ಪ್ರದೇಶದ ಜನಸಂಖ್ಯೆಯ ಶೇ.೧೪ ರಷ್ಟಿರುವುದರಿಂದ ಅಲ್ಲಿನ ಬ್ರಾಹ್ಮಣ ದಲಿತ ಒಗ್ಗೂಡುವಿಕೆಯಿಂದ ಬಿಎಸ್‌ಪಿಯ ಮಾಯಾವತಿ ಮುಖ್ಯಮಂತ್ರಿ ಪದವಿಗೆ ಏರಲು ಅವಕಾಶವಾಯಿತು. ಭಾರತದ ಉಳಿದ ರಾಜ್ಯಗಳಲ್ಲಿ ಬ್ರಾಹ್ಮಣರ ಸಂಖ್ಯೆ ಶೇ. ೪ಕ್ಕಿಂತ ಹೆಚ್ಚಾಗಿಲ್ಲವಾದ್ದರಿಂದ ಅಲ್ಲಿ ಈ ಮಂತ್ರ, ಈ ತಂತ್ರ ನಡೆಯುವುದಿಲ್ಲವೆಂದು ರಾಜಕೀಯವನ್ನು ಕಸಬು ಮಾಡಿಕೊಂಡಿರುವವರು ಹೇಳುತ್ತಾರೆ. ಆದ್ದರಿಂದ ಭಾರತದ ಇತರ ಕಡೆಗಳಲ್ಲಿ ಈ ತಂತ್ರವನ್ನು ಬಳಸಲು ಸಾಧ್ಯವಿಲ್ಲವೆಂಬ ಅಭಿಪ್ರಾಯಕ್ಕೂ ಎಲ್ಲ ರಾಜಕೀಯ ಪಕ್ಷಗಳು ಸಹಮತ ಸೂಚಿಸುವುವೆಂದು ಜನ ಆಡಿಕೊಳ್ಳುತ್ತಿದ್ದಾರೆ.

ಮಾಯಾವತಿ ಕೋಟಿಕೋಟಿ ರೂಪಾಯಿಗಳ ಆಸ್ತಿವಂತರು ಎಂದು ಇತ್ತೀಚಿನ ವರದಿಗಳು ಹೇಳುತ್ತವೆ. ಈ ಹಣವೂ ಆಕೆಯ ಚುನಾವಣೆಯ ಗೆಲುವಿಗೆ ಸಹಕಾರಿಯಾಗಿರಬಹುದೆ ಎಂದು ಪ್ರಶ್ನಿಸುವವರೂ ಇದ್ದಾರೆ. ಇಂದಿನ ರಾಜಕೀಯ ಪದ್ಧತಿಯಲ್ಲೂ ಹಣ ಚೆಲ್ಲದೆ ದಲಿತರೂ ಗೆದ್ದು ಬರುವ ಸಂಭವವಿಲ್ಲ.

ಅಂದ ಹಾಗೆ ಹತ್ತು ವರ್ಷಗಳ ಹಿಂದೆ ಬರಿಗೈಯಲ್ಲಿದ್ದ ಮಾಯಾವತಿ ಹಠಾತ್ತನೆ ಕೋಟ್ಯಾಧಿಪತಿಯಾದದ್ದು ಹೇಗೆ ಎಂದು ಯಾರಾದರೂ ಅಚ್ಚರಿ ಪಡಬೇಕಾದದ್ದೇ. ಈ ಶಂಕೆಗೆ ಮಾಯಾವತಿಯವರೇ ಉತ್ತರ ನೀಡಿದ್ದಾರೆ. ಅವರ ಅಭಿಮಾನಿಗಳು ಮಾಯಾವತಿ ಅವರಿಗೆ ತಾವಾಗಿಯೇ ಇಷ್ಟು ಹಣವನ್ನು ನೀಡಿರುವುದಾಗಿ ಹೇಳಿದ್ದಾರೆ. ಆದರೆ ಈ ಮಾತನ್ನೂ ನಂಬುವುದು ಕಷ್ಟ. ವಂತಿಗೆಯ ಮಹಾಪೂರ ಹೀಗೆ ಹರಿದು ಬಂದದ್ದು ಹಿಂದೆಂದೂ ನಡೆಯದಿರುವ ಪವಾಡ. ಬುದ್ಧಭಗವಾನ್ ಸತ್ತಾಗ ಅವರ ಶವವನ್ನು ಹೂಳಲು ಅವರ ಶಿಷ್ಯರು ಸ್ಥಳ ಯಾಚಿಸಿದರಂತೆ. ಆ ನೆಲದ ಒಡೆಯ ಕೇಳಿದಷ್ಟು ನೀಡಿದ ಮೇಲೆ ಬುದ್ಧನ ಶವ ಸಂಸ್ಕಾರಕ್ಕೆ ಅವಕಾಶ ಮಾಡಿಕೊಟ್ಟನಂತೆ. ಮಾಯಾವತಿ ಅವರಿಗೆ ಅವರು ಮುಖ್ಯಮಂತ್ರಿಯಾದ ಮೂರು ಅವಧಿಯಲ್ಲಿ ಇಷ್ಟೊಂದು ಹಣ ಹರಿದು ಬಂದಿದೆ. ಸ್ಥಾನ ಮಹಿಮೆಯಿಂದ ಹರಿದು ಬಂದಿರುವ ಪಾಪದ ಹಣ ಇದು!

ಭಾರತ ದೇಶದಲ್ಲಿ ಹೀಗೆ ದಿಢೀರಾಗಿ ಕೋಟ್ಯಾಧಿಪತಿಗಳಾಗಿರುವವರು ಬಹಳ ಜನ ಇದ್ದಾರೆ. ಇವರೆಲ್ಲ ಇಷ್ಟೆಲ್ಲಾ ಹಣವನ್ನು ದಿಢೀರನೆ ಹೇಗೆ ಸಂಪಾದಿಸಿದರು ಎಂದು ವಿಚಾರಿಸುವವರೇ ಇಲ್ಲ. ಚಿದಂಬರಂ ಅವರಿಗೆ ಇದನ್ನು ಕುರಿತು ಯೋಚನೆ ಮಾಡಲು ಸಮಯವಿಲ್ಲ. ಮನಮೋಹನ್‌ಸಿಂಗರಿಗೆ ಬಂಡವಾಳಶಾಹಿ ಭಾರತ ನಿರ್ಮಾಣ ಮಾಡುವ ಆತುರ ಇದೆಯಾಗಿ ಅವರು ಇಂತಹ ದಢೀರ್ ಕೋಟ್ಯಾಧಿಪತಿಗಳ ಸಂಖ್ಯೆ ಇನ್ನೂ ಹತ್ತು ಪಟ್ಟು ಬೆಳೆಯಲಿ ಎಂದು ಆಶಿಸುತ್ತಾರೆ.

ಮುಂದಿನ ಲೋಕಸಭೆ ಶಾಸನ ಸಭೆಗಳ ಚುನಾವಣೆಯ ಕಾಲಕ್ಕೆ ಅನೇಕ ರಾಜ್ಯಗಳಲ್ಲಿ ಅನೇಕ ರಾಜಕೀಯ ಪಕ್ಷಗಳು ಬ್ರಾಹ್ಮಣನನ್ನು ಒಳಗೊಂಡಂತೆ ಜನಿವಾರ ಧರಿಸುವ ಲಿಂಗಾಯಿತ, (ಶಿವದಾರ) ವೈಶ್ಯ, ದೇವಾಂಗ, ಕ್ಷತ್ರಿಯ ಗಾಣಿಗ ಇವರೆಲ್ಲರ ಮೈತ್ರಿಕೂಟ ರಚಿಸಿಕೊಳ್ಳಲು ತರಾತುರಿಯಿಂದ ಪ್ರಯತ್ನ ಶೀಲರಾಗುವರೆಂದು ನಿರೀಕ್ಷಿಸಬಹುದಾಗಿದೆ. ದಲಿತರೂ ಬಹುಜನ ಸಮಾಜ ಪಕ್ಷದ ಜೊತೆಗೂಡಿ, ಈ ಎಲ್ಲ ಜನಿವಾರಧಾರಿ ಜಾತಿಗಳವರನ್ನು ಒಲಿಸಿಕೊಳ್ಳುವ ಹುನ್ನಾರ ಮಾಡಬಹುದೆಂದು ಅಂದಾಜು ಮಾಡಬಹುದು. ಅಲ್ಲಿಗೆ ದಲಿತರ ಜಾತಿ ನಿರ್ಮೂಲನಾ ಅಜೆಂಡಾ ಸಹಜ ಸಾವನ್ನಪ್ಪುವುದು ಖಚಿತ.

ಅಧಿಕಾರ ಹಿಡಿಯುವ ಹುಳು ತಲೆಯನ್ನು ಹೊಕ್ಕಾಗ ದಲಿತರಿಗೂ ತಮ್ಮ ಗೊತ್ತು ಗುರಿಗಳೆಲ್ಲ ಗಾಳಿಗೆ ಹಾರಿ ಹೋಗುವುದಲ್ಲದೆ.

ಮಾಯಾವತಿಯ ಮಾಯಾಜಾಲದಲ್ಲಿ ದಲಿತ ಸಮೂಹ ಬಂಧಿಗಳಾಗುವ ಸಂಭವವೂ ಉಂಟೆಂದು ಖಚಿತವಾಗಿ ಹೇಳಬಹುದು.

ಎಚ್.ಎಸ್ ದೊರೆಸ್ವಾಮಿ,
ಬೆಂಗಳೂರು



ಪತ್ರಗಳು

ಬ್ರಾಹ್ಮಣ ಮನಸ್ಥಿತಿಯ ಲಿಂಗಾಯತರು

ಪ್ರಿಯ ಸಂಪಾದಕರೇ,

ಸಂಶೋಧಕ ಡಾ.ಬಂಜಗೆರೆ ಜಯಪ್ರಕಾಶ್ ಅವರ ಬಸವಣ್ಣನವರ ಜಾತಿ ಮೂಲ ವಿಶ್ಲೇಷಣೆ ಕುರಿತ "ಅನುದೇವಾ ಹೊರಗಣವನು" ಕೃತಿ ಹಾಗೂ ಜುಲೈನ 'ಸಂವಾದ' ಸಂಚಿಕೆಯಲ್ಲಿನ ಅನು ದೇವ... ಕೃತಿಯ ಕುರಿತ ಲೇಖನಗಳನ್ನು ಓದಿದ್ದೇನೆ.

ಬಸವಾನುಯಾಯಿಗಳೆಂದು ಹೇಳಿಕೊಳ್ಳುತ್ತಿರುವ ಜನ ನಡೆಸುತ್ತಿರುವ ಧರಣಿ, ಸತ್ಯಾಗ್ರಹಗಳು ಬಸವ ತತ್ವಕ್ಕೇ ವಿರುದ್ಧವಾಗಿವೆ. ಸಂಶೋಧಕರಾಗಿ ಡಾ. ಬಂಜಗೆರೆಯವರು ಬಸವಣ್ಣನ ಜಾತಿ ಮೂಲದ ಬಗ್ಗೆ ಅಧ್ಯಯನ ನಡೆಸಿ ವಿಶ್ಲೇಷಿಸಿರುವುದರಲ್ಲಿ ನನಗೆಲ್ಲೂ ತಪ್ಪು ಕಾಣಿಸುತ್ತಿಲ್ಲ.

ಈ ಕೃತಿಯಲ್ಲಿ ಬಂಜಗೆರೆಯವರೆಲ್ಲೂ ಇತಿಹಾಸಕ್ಕೆ ಅಥವಾ ಲಿಂಗಾಯತರ ಭಾವನೆಗಳಿಗೆ ಅಪಚಾರ ಎಸಗಿಲ್ಲ.

ವೈದಿಕರಿಂದ ತುಳಿತಕ್ಕೊಳಗಾಗಿ ಸಮಾಜದಲ್ಲಿ ಅಸ್ತಿತ್ವವೇ ಇಲ್ಲದೆ ಬದುಕುತ್ತಿದ್ದ ದೀನ-ದಲಿತರು, ಅಸ್ಪೃಶ್ಯರ ಬದುಕಿಗೆ ಬೆಳಕಾದ ಸಮಾಜ ಸುಧಾರಕ ಬಸವಣ್ಣನ ಜಾತಿ ಮೂಲ ಹುಡುಕಿದ್ದಕ್ಕೆ ಬ್ರಾಹ್ಮಣರು ಹಾಗೂ ಬ್ರಾಹ್ಮಣ ಮನಸ್ಥಿತಿಯ ಲಿಂಗಾಯತರು ಇಂಥ ಗಲಭೆ ಎಬ್ಬಿಸುವ ಅಗತ್ಯವಿರಲಿಲ್ಲ.

ಬಸವಣ್ಣ ಹುಟ್ಟಿನಿಂದ ಬ್ರಾಹ್ಮಣನಲ್ಲದಿರಬಹುದು ಎಂಬ ಅನುಮಾನಕ್ಕೆ ಸಾಂಸ್ಕೃತಿಕ ಅಂಶಗಳನ್ನು ಅಳವಡಿಸಿಕೊಂಡು ಜಾತಿ ಮೂಲ ಹುಡುಕಲು ಪ್ರಯತ್ನಿಸಿದರೆ ಬಸವಣ್ಣನ ಅನುಯಾಯಿಗಳೆನ್ನಿಸಿಕೊಂಡವರು ಈ ರೀತಿ ಬೀದಿ ರಂಪ ಮಾಡಬೇಕಿತ್ತೇ?

ಪ್ರತಿಭಟನೆಗಳನ್ನು ಬಿಟ್ಟು ಸಾತ್ವಿಕ ಚರ್ಚೆಗೆ ಮುಂದಾದರೆ ಬಸವಣ್ಣನಿಗೂ ಸಂಶೋಧಕರಿಗೂ ಗೌರವ.

ಜುಲೈ ಸಂಚಿಕೆಯಲ್ಲಿನ ಲೇಖನದಲ್ಲಿ ರಹಮತ್ ತರಿಕೆರೆ ಅವರು ಹೇಳುವಂತೆ ಕರ್ನಾಟಕದ ಲಿಂಗಾಯತರ ಒಂದು ಸಮುದಾಯಕ್ಕೂ ಬಸವಣ್ಣನಿಗೂ ಇರುವ ಧಾರ್ಮಿಕ ಸಂಬಂಧ ಆಳವಾದುದು. ತಮ್ಮನ್ನು ತಾವು ಶರಣ ಸಂಜಾತರು ಎಂದು ಕರೆದುಕೊಳ್ಳುತ್ತಿರುವವರು ಒಮ್ಮೆ ಆತ್ಮಾವಲೋಕನ ಮಾಡಿಕೊಳ್ಳಲಿ.

ದಲಿತ ವೀರನಾರಿಯರ ಕುರಿತ ಲೇಖನವು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಿ ಮಡಿದ ದಲಿತ ನಾರಿಯರ ಬಗ್ಗೆ ತಿಳಿಸಿದೆ. ಒಟ್ಟಿನಲ್ಲಿ ಜುಲೈ ಸಂಚಿಕೆ ಸಮೃದ್ಧವಾಗಿದೆ.

ಅನುಷಾ ಹೊನ್ನೇಕೂಲು,
ಬೆಂಗಳೂರು

ಚಂದಾ ವಿವರ

ಬಿಡಿ ಪ್ರತಿ ರೂ.೨೦/-

	೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವಿದ್ಯಾರ್ಥಿಗಳು/ಕಾರ್ಯಕರ್ತರಿಗೆ	ರೂ.೧೦೦/-	ರೂ.೩೦೦/-	ರೂ.೫೦೦/-
ನೌಕರರು ಮತ್ತು ವೃತ್ತಿಪರರಿಗೆ	ರೂ.೨೦೦/-	ರೂ.೫೦೦/-	ರೂ.೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ	ರೂ.೨೫೦/-	ರೂ.೬೦೦/-	ರೂ.೧೦೦೦
ವಿಶೇಷ ಹಿತೈಷಿ ಚಂದದಾರರಿಗೆ	ರೂ.೫೦೦/-	ರೂ.೧೫೦೦/-	ರೂ.೨೫೦೦/-

ಆಜೀವ ಚಂದಾ ರೂ.೫,೦೦೦/-
ಪೋಷಕ ಚಂದಾ ರೂ.೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು.

ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ
ಲೇ: ಹಾಲಭಾವಿ ವೀರಭದ್ರಪ್ಪ
ಸಂ: ಡಾ.ಎಂ.ಎಂ.ಕಲಬುರ್ಗಿ
ಬೆಲೆ: ರೂ. ೬೦/

ಲಿಂಗಾಯತ ಸಮುದಾಯದ ಗಣ್ಯ ವ್ಯಕ್ತಿಗಳಲ್ಲೊಬ್ಬರಾದ ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆಯ ಸಂಪಾದಿತ ಕೃತಿ ಇದಾಗಿದೆ. ೧೮೭೮ರಲ್ಲಿ ಜಮಖಂಡಿಯ ಗೋರೆಯಲ್ಲಿ ಜನಿಸಿದ ಇವರು ಲಿಂಗಾಯತ ಸಮುದಾಯಕ್ಕೆ ನೀಡಿದ ಕಾಣಿಕೆ ಮಹತ್ವದ್ದು. ಲಿಂಗಾಯತ ಸಮುದಾಯದ ಎರಡನೇ ಎಲ್.ಎಲ್.ಬಿ ಪದವೀಧರರೂ ಹೌದು. ಈ ಕೃತಿಯಲ್ಲಿ ಕೌಟುಂಬಿಕ ಮತ್ತು ಸಾಮಾಜಿಕ ಸಂಗತಿಗಳು ಸಮಪ್ರಮಾಣದಲ್ಲಿ ಒಳಗೊಂಡಿವೆ. ಸಮಾಜಕ್ಕೆ ತಾವು ನೀಡಿದ ಕೊಡುಗೆಗಳ ಬಗ್ಗೆ ಹಾಲಭಾವಿಯವರು ತಮ್ಮ ಆತ್ಮಚರಿತ್ರೆಯಲ್ಲಿ ನಿರೂಪಿಸಿದ್ದಾರೆ.

ಪ್ರಕಾಶಕರು: ಲಿಂಗಾಯತ ಅಧ್ಯಯನ ಸಂಸ್ಥೆ, ಗದಗ.

ಗಾಂಧಿ ಮತ್ತು ಅಸ್ಪೃಶ್ಯರ ಬಂಧವಿಮೋಚನೆ
ಮೂಲ: ಬಿ.ಆರ್. ಅಂಬೇಡ್ಕರ್
ಅನು: ಟಿ.ಕೆ. ಬಸವರಾಜು
ಬೆಲೆ: ರೂ. ೫೦/

ಅಸ್ಪೃಶ್ಯರನ್ನು ಅಧೋಗತಿಗೆ ತಳ್ಳಿ ಅವರನ್ನು ದಾಸ್ಯ ವೃತ್ತಿ ಇಳಿಸಿದ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ದುರವಸ್ಥೆಗಳನ್ನು ಈ ಕೃತಿ ಪರಿಚಯಿಸುತ್ತದೆ. ಜನಸಾಮಾನ್ಯರಿಗೂ ಅರ್ಥವಾಗುವಂತೆ ಅಂಬೇಡ್ಕರ್ ಅವರ ಚಿಂತನೆಯನ್ನು ಸರಳ ಭಾಷೆಯಲ್ಲಿ ಸಮರ್ಥವಾಗಿ ಲೇಖಕರು ಅನುವಾದಿಸಿದ್ದಾರೆ.

ದಲಿತರು ಜಾಗೃತರಾಗುತ್ತಿರುವ ಈ ದಿನಗಳಲ್ಲಿ ಅಂಬೇಡ್ಕರ್ ಚಿಂತನೆಗಳ ಅಗತ್ಯ ಬಹಳವಿದ್ದು ಈ ಕೃತಿ ಅಂಥ ಅಗತ್ಯವನ್ನು ಪೂರೈಸ ಬಲ್ಲುದಾಗಿದೆ.

ಪ್ರಕಾಶಕರು: ಗೌತಮ ಪ್ರಕಾಶನ, ಮೈಸೂರು -೧



ಹೊಸ ಪುಸ್ತಕ

ಯಮಲೋಕದಲ್ಲಿ ಸಾಹಿತಿ (ಲಘು ಹಾಸ್ಯ ಬರಹಗಳು)
ಲೇ: ಡಾ.ಚಂದ್ರಶೇಖರ ರೊಟ್ಟಿಗವಾಡ
ಬೆಲೆ: ರೂ. ೨೫/

ಕನ್ನಡದ ಸೃಜನಶೀಲ ಬರಹಗಾರ ಡಾ. ಚಂದ್ರಶೇಖರ ರೊಟ್ಟಿಗವಾಡರ ನಾಡಿನ ವಿವಿಧ ಪತ್ರಿಕೆಗಳಲ್ಲಿ ಪ್ರಕಟಿತವಾಗಿರುವ ಲಘು ಹರಟೆಗಳ ಸಂಕಲನ ಇದು. ಈ ಪುಸ್ತಕದಲ್ಲಿ ಹನ್ನೊಂದು ಹಾಸ್ಯ ಬರಹಗಳಿವೆ. ದಿನನಿತ್ಯದ ಆಗುಹೋಗುಗಳನ್ನು ಆಧರಿಸಿ ರಚಿಸಿದ ಹಾಸ್ಯ ಪ್ರಬಂಧಗಳು ಇಲ್ಲಿವೆ. ಸಾಮಾಜಿಕ, ಆರ್ಥಿಕ, ರಾಜಕೀಯ ರಂಗಗಳ ಕುರಿತ ವಿಡಂಬನೆ ಇಲ್ಲಿದೆ.

ಪ್ರಕಾಶಕರು: ದಲಿತ ಸಾಹಿತ್ಯ ಪರಿಷತ್ತು, ಗದಗ.

ಬಸವಣ್ಣ ಮತ್ತು ಅಂಬೇಡ್ಕರ್
ಲೇ: ಡಾ. ಜಯದೇವಿ ಎಂ. ಗಾಯಕವಾಡ.
ಬೆಲೆ: ರೂ . ೬೦/

ಹೈದ್ರಾಬಾದ್ ಕರ್ನಾಟಕದ ಕಿರಿಯ ತಲೆಮಾರಿನ ಲೇಖಕಿಯರಲ್ಲಿ ಭರವಸೆ ಮೂಡಿಸುವಲ್ಲಿ ಗಮನ ಸೆಳೆದಿರುವ ಡಾ. ಜಯದೇವಿ ಎಂ. ಗಾಯಕವಾಡರು, ಅಂಬೇಡ್ಕರ್ ಮತ್ತು ಬಸವಣ್ಣ ಅವರ ಬಗ್ಗೆ ತಮ್ಮ ಮಿತಿಯಲ್ಲಿ ಸಾಕಷ್ಟು ಅಧ್ಯಯನ ನಡೆಸಿ ರಚಿಸಿದ ಉತ್ತಮ ವಿಮರ್ಶಾ ಕೃತಿ ಇದಾಗಿದೆ.

ಈ ಇಬ್ಬರು ಸಮಾಜಸುಧಾರಕರ ವಿಚಾರಧಾರೆಗಳ ಪ್ರಸ್ತುತತೆ ಕುರಿತು ಲೇಖಕಿ ತಮ್ಮ ವಿಚಾರಗಳನ್ನು ಇಲ್ಲಿ ಮಂಡಿಸಿದ್ದಾರೆ.

ಪ್ರಕಾಶಕರು: ಶ್ರೀ ಸಿದ್ದಲಿಂಗೇಶ್ವರ ಪ್ರಕಾಶನ, ಗುಲ್ಬರ್ಗಾ



ಬದುಕೊಂದು ಭಾವಗೀತೆ (ಕವನ ಸಂಕಲನ)
ಕವಿ: ಯಲ್ಲಪ್ಪ ಬಿ.ಎಂ.
ಬೆಲೆ: ರೂ . ೨೫/

ಕಿರಿಯ ವಯಸ್ಸಿನಲ್ಲೇ ಬರೆಯಲು ತೊಡಗಿದ ಯುವ ಕವಿ ಯಲ್ಲಪ್ಪ ಬಿ.ಎಂ. ಅವರ ಚೊಚ್ಚಲ ಕವನ ಸಂಕಲನ ಇದು. ಈ ಕೃತಿಯಲ್ಲಿ ಯುವ ಕವಿ ತಮ್ಮ ವಯಸ್ಸಿನ ಸಹಜ ಸ್ಫೂರ್ತಿಯಿಂದ ರಚಿಸಿದ ಕೆಲವು ಪ್ರೇಮ ಕವನಗಳಿವೆ. ಸುನಾಮಿದುರಂತದ ಬಗ್ಗೆ ಕವಿ ಮನಮಿಡಿದು ಬರೆದ ಕವನಗಳಿವೆ. "ಓ ಅಂಬೇಡ್ಕರ್ ನೀನಿಲ್ಲದಿದ್ದರೆ ನಾವೆಲ್ಲಾ" ಕವಿತೆಯಲ್ಲಿ ಅಂಬೇಡ್ಕರ್ ಬಗ್ಗೆ ಕೊಂಡಾಡಿದ್ದಾರೆ. ಕವಿತೆಗಳು ಸರಳವಾಗಿದ್ದು ಓದಿಸಿಕೊಂಡು ಹೋಗುತ್ತವೆ.

ಪ್ರಕಾಶಕರು: ದಲಿತ ಸಾಹಿತ್ಯ ಪರಿಷತ್ತು, ಹುಲಕೋಟಿ, ಗದಗ ಜಿಲ್ಲೆ.



ಆಂಧ್ರರು ಚಿತ್ರಿಸಿದ ಬಸವಣ್ಣ
ಮೂಲ: ಡಾ.ಬಾಡಾಲ ರಾಮಯ್ಯ
ಅನು: ಡಾ.ಜಾಜಿದೇವೇಂದ್ರಪ್ಪ
ಬೆಲೆ: ರೂ . ೫೦/

ಕನ್ನಡನಾಡಿನಲ್ಲಿ ವಚನಚಳವಳಿಗೆ ತನ್ನದೇ ಆದ ಇತಿಹಾಸವಿದೆ. ಬಸವಣ್ಣನವರ ನೇತೃತ್ವದಲ್ಲಿ ವಚನ ಚಳವಳಿಯು ಕರುನಾಡ ಹೊರಗೂ ಪಸರಿಸಿತು. ಬಸವಣ್ಣನವರ ಬಗ್ಗೆ ಹಲವಾರು ತೆಲುಗು ಕವಿಗಳು ಕಾವ್ಯ ರಚಿಸಿದ್ದಾರೆ. ಪಂಡಿತಾರಾಧ್ಯ, ಯಥಾವಾಕ್ಕುಲ ಅನ್ನಮಯ್ಯ, ಶಿವಕವಿನಾಥ ಸೋಮನಾಥ, ಮಹಾಕವಿ ಸೇರಿದಂತೆ ಹತ್ತಾರು ತೆಲುಗು ಕವಿಗಳು ರಚಿಸಿದ ಗದ್ಯದ ಅನುವಾದ ಇಲ್ಲಿದೆ. ಬಸವಣ್ಣನವರ ವಚನಗಳ ಕುರಿತು ತೆಲುಗು ಕವಿಗಳು ಕಂಡ ಬಗ್ಗೆ ತೌಲನಿಕವಾಗಿ ಅಧ್ಯಯನ ಮಾಡುವವರಿಗೆ ಇದೊಂದು ಅಪರೂಪದ ಕೃತಿಯಾಗಿದೆ.

ಪ್ರಕಾಶಕರು: ಲಿಂಗಾಯತ ಅಧ್ಯಯನಸಂಸ್ಥೆ, ತೋಂಟದಾರ್ಯ ಸಂಸ್ಥಾನ ಮಠ, ಗದಗ.

ಸಂಪಾದಕೀಯ



ಅಕ್ಷರ ದಾಸೋಹದ ಗುತ್ತಿಗೆದಾರರು

ಅಕ್ಷರ ದಾಸೋಹ ಯೋಜನೆಯನ್ನು ಖಾಸಗಿ ಸಂಸ್ಥೆಗಳಿಗೆ ವಹಿಸಲು ಸರ್ಕಾರ ಮುಂದಾಗಿದೆ. ಹಾಗೆ ಮಾಡುವ ಮೂಲಕ ಗ್ರಾಮೀಣ ಪ್ರದೇಶದಲ್ಲಿ ಅನಿವಾರ್ಯವಾಗಿ ಸೃಷ್ಟಿಯಾಗಿದ್ದ ವಿವಿಧ ಜಾತಿಗಳ ನಡುವಿನ ಬಾಂಧವ್ಯಕ್ಕೆ ಕೂಡ ಸರ್ಕಾರ ಕೊಡಲಿ ಪೆಟ್ಟು ಹಾಕಿದೆ.

ಅಕ್ಷರ ದಾಸೋಹ ಯೋಜನೆ ಮೂಲಕ ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿಯೂಟ ಆರಂಭವಾದಾಗ ಗ್ರಾಮೀಣ ಪ್ರದೇಶಗಳಲ್ಲಿ ಹಾಹಾಕಾರವೇ ಎದ್ದಿತ್ತು. ಬಿಸಿಯೂಟ ತಯಾರಿಕೆಯಲ್ಲಿ ದಲಿತರ ಪಾಲ್ಗೊಳ್ಳುವಿಕೆಯನ್ನು ಕಡ್ಡಾಯ ಮಾಡಿದ್ದು ಇದಕ್ಕೆ ಕಾರಣವಾಗಿತ್ತು. ಎಷ್ಟೋ ಕಡೆ ಮೇಲ್ಜಾತಿ ಮಕ್ಕಳು ಬಿಸಿಯೂಟವನ್ನೇ ತಿರಸ್ಕರಿಸಿದ್ದಾರೆ. ಮತ್ತೆ ಕೆಲವು ಕಡೆ ದಲಿತರ ಹೆಸರಿನಲ್ಲಿ ಬೇರೆಯವರು ಅಡುಗೆ ಮಾಡಿ ಬಡಿಸಲಾರಂಭಿಸಿದ್ದರು. ಮತ್ತೆ ಕೆಲವು ಕಡೆ ದಲಿತರು ಸಿದ್ಧಪಡಿಸಿದ ಊಟ ತಿಂದ ಮಕ್ಕಳನ್ನು ಸಗಣಿ ನೀರಿನಿಂದ ಸ್ವಚ್ಛಗೊಳಿಸಲಾಗಿತ್ತು.

ಈ ಎಲ್ಲಾ ಅಮಾನವೀಯ ನಡವಳಿಕೆಗಳ ನಡುವೆ ಕೂಡ ಈ ಯೋಜನೆ ಜನಪ್ರಿಯವಾಗತೊಡಗಿತ್ತು. ಕ್ರಮೇಣ ಎಲ್ಲ ಜನವರ್ಗದ ಮಕ್ಕಳೂ ಊಟ ಮಾಡಲು ಆರಂಭಿಸಿದ್ದರು. ದಲಿತರು ಮಾಡಿದ ಅಡುಗೆ ತಿಂದರೆ ತಪ್ಪಿಲ್ಲ ಎನ್ನುವ ಜಾಗೃತಿ ಮೂಡಿ ಪರಿಸ್ಥಿತಿ ತಿಳಿಯಾಗತೊಡಗಿತ್ತು. ಸಾಮಾನ್ಯ ಗ್ರಾಮೀಣ ಜನ ಇದನ್ನು ಸಹಜವಾಗಿ ಸ್ವೀಕರಿಸುತ್ತಿರುವಾಗ ಇದರ ಮೇಲೆ ಜಾತಿವಾದಿ ಪುಡಾರಿಗಳು, ಮಠಮಾನ್ಯಗಳು ಹಾಗೂ ಸರ್ಕಾರೇತರ ಸಂಸ್ಥೆಗಳ ಕಣ್ಣು ಬಿದ್ದು ಇಡೀ ಯೋಜನೆ ಈಗ ತಪ್ಪು ಹಾದಿ ಹಿಡಿಯತೊಡಗಿದೆ.

ಅಕ್ಷರ ದಾಸೋಹ ಯೋಜನೆ ಮೂಲತಃ ಕೇಂದ್ರ ಸರ್ಕಾರದ ಕೂಸು. ಕೇಂದ್ರ ಸರ್ಕಾರ ಈ ಯೋಜನೆಯ ಶೇ. ೯೦ ಪಾಲನ್ನು ಭರಿಸಿದರೆ ರಾಜ್ಯ ಸರ್ಕಾರ ಕೇವಲ ಶೇ. ೧೦ ರಷ್ಟು ಖರ್ಚನ್ನು ಭರಿಸುತ್ತಿದೆ. ದೇಶದ ವಿವಿಧ ರಾಜ್ಯಗಳಲ್ಲಿ ಬಹಳ ಹಿಂದಿನಿಂದಲೂ ಈ ಯೋಜನೆ ಜಾರಿಯಲ್ಲಿದೆ. ತಮಿಳುನಾಡಿನಲ್ಲಿ ಆರಂಭವಾಗಿ ಈಗಾಗಲೇ ೨೦ ವರ್ಷಗಳಾಗಿವೆ. ಸುಪ್ರಿಂ ಕೋರ್ಟ್ ೨೦೦೧ರಲ್ಲಿ ಈ ಯೋಜನೆಯನ್ನು ಎಲ್ಲ ರಾಜ್ಯ ಸರ್ಕಾರಗಳೂ ಜಾರಿಗೆ ತರಬೇಕೆಂದು ಆಜ್ಞೆ ಹೊರಡಿಸಿದ ನಂತರ ಕರ್ನಾಟಕ ಅತ್ತ ಕಣ್ಣು ಹಾಯಿಸಿತು. ಈಗ ವಾರ್ಷಿಕ ೨೬೨ ಕೋಟಿ ವೆಚ್ಚದಲ್ಲಿ ಈ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ.

ಮಕ್ಕಳ ಕಲಿಕೆಯ ಏಕಾಗ್ರತೆಗೆ ಅಡ್ಡಿ ಉಂಟು ಮಾಡುತ್ತಿರುವ ಪೌಷ್ಟಿಕಾಂಶ ಕೊರತೆ, ಹಸಿವು ಮತ್ತು ಈ ಎಲ್ಲದರ ಪರಿಣಾಮವಾಗಿ ಶಾಲೆ ತೊರೆಯುವ ಮಕ್ಕಳ ಸಂಖ್ಯೆ ಹೆಚ್ಚಾಗುತ್ತಿರುವ ಕಾರಣ ನೀಡಿ ಸುಪ್ರೀಂ ಕೋರ್ಟ್ ಈ ಆಜ್ಞೆ ಹೊರಡಿಸಿತ್ತು. ಮಕ್ಕಳಿಗೆ ಕನಿಷ್ಠ ೩೦೦ ಕ್ಯಾಲೋರಿ ಆಹಾರವನ್ನು ಕಡ್ಡಾಯವಾಗಿ ನೀಡಬೇಕೆಂಬುದು ಹಲವು ಆಯೋಗಗಳ ಶಿಫಾರಸ್ಸು ಕೂಡ ಆಗಿತ್ತು. ಹಾಗಾಗಿ ೨೦೦೨ ರಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಆರಂಭವಾದ ಈ ಯೋಜನೆಯನ್ನು ೨೦೦೩ರಲ್ಲಿ ರಾಜ್ಯದ ಇತರ ಎಲ್ಲ ಪ್ರದೇಶಗಳಿಗೂ ವಿಸ್ತರಿಸಲಾಯಿತು.

ರಾಜ್ಯಾದ್ಯಂತ ಇರುವ ಸುಮಾರು ೪೦ ಸಾವಿರ ಶಾಲೆಗಳಲ್ಲಿ ೬೦ ಲಕ್ಷ ಮಕ್ಕಳು ಬಿಸಿಯೂಟ ಮಾಡುತ್ತಿದ್ದಾರೆ. ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಮಹಿಳೆಯರು ಅಡುಗೆ ಸಿದ್ಧಪಡಿಸುವುದರಲ್ಲಿ ನಿರತರಾಗಿದ್ದಾರೆ. ಕನಿಷ್ಠ ಕೂಲಿಗೂ ಕಡಿಮೆ ದರದಲ್ಲಿ ಈ ಮಹಿಳೆಯರು ಈ ಅಡುಗೆ ಸಿದ್ಧಪಡಿಸುವ ಕೆಲಸದಲ್ಲಿ ತೊಡಗಿದ್ದಾರೆಂದರೆ ಗ್ರಾಮೀಣ ಪ್ರದೇಶದಲ್ಲಿ ಇಂದಿಗೂ ಇರುವ ಸ್ಥಿತಿಗತಿ ಅರ್ಥವಾಗುತ್ತದೆ. ಒಂದು ರೀತಿಯಲ್ಲಿ ಈ ಯೋಜನೆ ಸಾಮಾಜಿಕ ಸಾಮರಸ್ಯಕ್ಕೆ ಕಾರಣವಾದರೆ ಮತ್ತೊಂದು ರೀತಿಯಲ್ಲಿ ಮಹಿಳಾ ಸಬಲೀಕರಣಕ್ಕೂ ನೆರವಾಗಿದೆ. ಶಾಲೆಗಳಲ್ಲಿ ಮಕ್ಕಳ ಹಾಜರಾತಿ ಹೆಚ್ಚಿದೆ. ಕಲಿಕಾ ಸಾಮರ್ಥ್ಯವೂ ವೃದ್ಧಿಯಾಗಿದೆ.

ದುರಂತವೆಂದರೆ ಸರ್ಕಾರದ ಈ ಅತ್ಯುತ್ತಮ ಕಾರ್ಯಕ್ರಮದ ಜತೆಯಲ್ಲೇ ದಲ್ಲಾಳಿಗಳೂ ಹುಟ್ಟಿಕೊಂಡಿದ್ದಾರೆ. ಇಂಥ ದಲ್ಲಾಳಿಗಳಲ್ಲಿ ಮೊದಲನೆಯವರೇ ಬೆಂಗಳೂರು ಇಸ್ಕಾನ್‌ನ ಪಂಡಿತರು. ಇಸ್ಕಾನ್‌ನ ಪ್ರಚಂಡ ವ್ಯಾಪಾರಿ ಬುದ್ಧಿ ಈ ಯೋಜನೆ ಆರಂಭವಾದೊಡನೆ ಜಾಗೃತಿಗೊಂಡು 'ಅಕ್ಷಯ ಪಾತ್ರಾ ಫೌಂಡೇಷನ್' ರೂಪ ಪಡೆಯಿತು. ಹೈಟೆಕ್ ದೇವಸ್ಥಾನ ಮತ್ತು ಹೈಟೆಕ್ ಪೂಜೆಗೆ ಹೆಸರಾದ ಇಸ್ಕಾನ್ ಅಂದಿನ ಹೈಟೆಕ್ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರ ಮನವೊಲಿಸಿ ಬೆಂಗಳೂರು ನಗರ ವ್ಯಾಪ್ತಿಯ ಎಲ್ಲಾ ಶಾಲೆಗಳಿಗೆ ಬಿಸಿಯೂಟ ನೀಡುವ ಗುತ್ತಿಗೆ ಪಡೆಯಿತು. ಇದರ ಜತೆ ಸಂಸದ ಅನಂತ ಕುಮಾರ್ ಪತ್ನಿ ನಡೆಸುತ್ತಿರುವ 'ಅದಮ್ಯ ಚೇತನ ಟ್ರಸ್ಟ್' ಕೂಡ ಈಗ ಸೇರಿಕೊಂಡಿದೆ.

ಕೇವಲ ಅಡುಗೆ ಮಾಡಿಕೊಡುವ 'ಕಾಂಟ್ರಾಕ್ಟ್' ಕೆಲಸ ಮಾಡುವ ಈ ಸಂಸ್ಥೆಗಳು ಮೇಲು ನೋಟಕ್ಕೆ ಸ್ವಯಂಸೇವಾ ಸಂಸ್ಥೆಗಳು. ಆದರೆ ಅಂತರಂಗದಲ್ಲಿ ಪಕ್ಕಾ ವ್ಯಾಪಾರಿ ಸಂಸ್ಥೆಗಳು. ಈ ಸಂಸ್ಥೆಗಳು ಇತರೆ ಕೆಲವು ಸರ್ಕಾರೇತರ ಸಂಸ್ಥೆಗಳ ಜತೆ ಸೇರಿ ಈಗ ರಾಜ್ಯಾದ್ಯಂತ ಸುಮಾರು ೨೯೩೧ ಶಾಲೆಗಳ ೬.೫ ಲಕ್ಷ ಮಕ್ಕಳಿಗೆ ಬಿಸಿಯೂಟ ಸರಬರಾಜು ಮಾಡುತ್ತಿವೆ. ಸರ್ಕಾರದ ಈಗಿನ ಯೋಜನೆಯಂತೆ ಇನ್ನೊಂದು ವರ್ಷದಲ್ಲಿ ಕನಿಷ್ಠ ಶೇ. ೫೦ರಷ್ಟು ಶಾಲೆಗಳು ಈ ಕಾಂಟ್ರಾಕ್ಟರ್‌ಗಳ ಪಾಲಾಗಲಿವೆ.

ಪ್ರತಿ ಮಗುವಿನ ಬಿಸಿಯೂಟಕ್ಕೆ ಸರ್ಕಾರಿ ಶಾಲೆಗಳಲ್ಲಿ ಅವರೇ ಅಡುಗೆ ಸಿದ್ಧ ಪಡಿಸಿದರೆ ಬರುವ ಖರ್ಚು ಸುಮಾರು ೩ ರೂಪಾಯಿ. ಆದರೆ 'ಅಕ್ಷಯ ಪಾತ್ರಾ ಫೌಂಡೇಶನ್' ಸರ್ಕಾರದಿಂದ ಪಡೆಯುತ್ತಿರುವುದು ಪ್ರತಿ ಮಗುವಿಗೆ ೬ ರೂಪಾಯಿ. ಇದರ ಜತೆಗೆ 'ಅಕ್ಷಯ ಪಾತ್ರಾ ಫೌಂಡೇಶನ್' ಭಾರತದ ಬಡಮಕ್ಕಳಿಗೆ ಬಿಸಿಯೂಟ ಕೊಡಲು ವಿದೇಶಗಳಿಂದ ಡಾಲರ್ ರೂಪದ ಹಣವನ್ನು ಪಡೆಯುತ್ತಿದೆ. ಸ್ಥಳೀಯ ಜನರಿಂದ ವಂತಿಗೆ ಪಡೆಯುತ್ತಿದೆ. ಇಲ್ಲಿ ಮುಖ್ಯ ವಿಷಯವೆಂದರೆ, ಈ ಸರ್ಕಾರೇತರ ಸಂಸ್ಥೆಗಳು ಸೇವೆಯ ಹೆಸರಿನಲ್ಲಿ ಗುತ್ತಿಗೆದಾರರ ಕೆಲಸ ಮಾಡುತ್ತಿರುವುದು. ಅದಕ್ಕಿಂತಲೂ ಹೆಚ್ಚಾಗಿ ಎಲ್ಲ ಜಾತಿಯ ಜನ ಬೆರೆತು ಉಂಟಾಗುತ್ತಿರುವ ಸಾಮಾಜಿಕ ಹೊಂದಾಣಿಯನ್ನು ತಪ್ಪಿಸಿ, ಮತ್ತೆ ಜಾತಿ ಕೇಂದ್ರಗಳ ಕಪಿಮುಷ್ಟಿಗೆ ಈ ಯೋಜನೆ ಹೋಗುತ್ತಿರುವುದು. ಜತೆಗೆ ಗ್ರಾಮೀಣ ಪ್ರದೇಶದ ೧ ಲಕ್ಷ ಮಹಿಳೆಯರಿಗೆ ಸಿಕ್ಕಿರುವ ಜೀವನಾಧಾರವನ್ನು ಕಸಿದುಕೊಳ್ಳುತ್ತಿರುವುದು.

ವಿಚಿತ್ರವೆಂದರೆ ಸರ್ಕಾರದ ಯಾವ ಪ್ರತಿನಿಧಿಗಳು ಈ ಸಮಸ್ಯೆಯನ್ನು ಸ್ವೀಕರಿಸಲು ಸಿದ್ಧರಿಲ್ಲ. ಸದ್ಯ ಆಡಳಿತದಲ್ಲಿರುವ ಕೋಮುವಾದಿ-ಜಾತಿವಾದಿ ಸರ್ಕಾರವಂತೂ ಇದನ್ನು ಹೇಗಾದರೂ ಮಾಡಿ ಮಠಮಾನ್ಯಗಳಿಗೆ, ಮತ್ತು ಸರ್ಕಾರೇತರ ಸಂಸ್ಥೆಗಳಿಗೆ ಒಪ್ಪಿಸುವ ತರಾತುರಿಯಲ್ಲಿದೆ.

ಜನಪರ ಸಂಘಟನೆಗಳು, ಶಕ್ತಿಗಳು ಈಗ ಎಚ್ಚೆತ್ತುಕೊಳ್ಳಬೇಕಾಗಿದೆ. ಅಕ್ಷರ ದಾಸೋಹದ ಇಡೀ ಯೋಜನೆ ಸಂಪೂರ್ಣವಾಗಿ ಸರ್ಕಾರದ ಕೈಯಲ್ಲೇ ಇರುವಂತೆ ನೋಡಿಕೊಳ್ಳಬೇಕಾಗಿದೆ. ೬೧ನೇ ಸ್ವಾತಂತ್ರ್ಯೋತ್ಸವದ ಮುನ್ನಾ ದಿನ ಕನಿಷ್ಠ ಇಷ್ಟು ಕೆಲಸ ಮಾಡಿದರೆ ಸ್ವಾತಂತ್ರ್ಯಕ್ಕೆ, ಪ್ರಜಾಪ್ರಭುತ್ವಕ್ಕೆ ಅರ್ಥ ಬರುತ್ತದೆ.

○ ಇಂದೂಧರ ಹೊನ್ನಾಪುರ



ತತ್ತರಿಸಿದ ಮಲೆನಾಡು

ನಕ್ಸಲೀಯರ ಸಮಸ್ಯೆ ಸಾಮಾಜಿಕ ಆರ್ಥಿಕ ಸಮಸ್ಯೆಯೇ ಹೊರತು ಕಾನೂನು ಹಾಗೂ ಸುವ್ಯವಸ್ಥೆ ಸಮಸ್ಯೆ ಅಲ್ಲ ಎಂದು ಹೇಳುತ್ತ ಪ್ರಭುತ್ವವು ನಕ್ಸಲೀಯ ಚಳವಳಿಯನ್ನು ಪೋಲೀಸ್ ಕಾರ್ಯಾಚರಣೆ ಮೂಲಕ ದಮನ ಮಾಡಲು ಹೊರಟಂತಿದೆ. ಪ್ರಭುತ್ವ ಪ್ಯಾಕೇಜ್‌ಗಳನ್ನು ಘೋಷಿಸಿ ಅನುದಾನ ಬಿಡುಗಡೆ ಮಾಡದೇ ಮಲೆನಾಡಿನ ಜನತೆಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸದೇ ಕೇವಲ ಬಂದೂಕಿನ ಗುಂಡಿನಿಂದಲೇ ಉತ್ತರ ನೀಡಲು ನಿರ್ಧರಿಸಿದಂತಿದೆ. ನಕ್ಸಲ್ ಚಳವಳಿ ಹುಟ್ಟಿಗೆ ಕಾರಣ ಯಾವುದೆಂದು ತಿಳಿದುಕೊಂಡು ಆ ಸಮಸ್ಯೆಗಳನ್ನು ಬಗೆಹರಿಸಲು ಕ್ರಮ ತೆಗೆದುಕೊಳ್ಳಬೇಕೇ ಹೊರತು ಅಮ್ಮಡ್ಲುನಲ್ಲಿ ಅಮಾಯಕ ಜನರನ್ನು ಹಾಗೂ ನಕ್ಸಲರನ್ನು ಕೊಲೆ ಮಾಡುವ ಮಾರ್ಗ ಸರಿಯಲ್ಲ.

ಭಾಸ್ಕರ್

ಪ್ರಭುತ್ವ ವ್ಯವಸ್ಥೆಯು ನಕ್ಸಲೀಯರೆಂದರೆ ದಾರಿ ತಪ್ಪಿದ ಮಕ್ಕಳು, ಸಮಾಜಘಾತಕರು ಎಂದು ಹೇಳಿದರೆ ನಕ್ಸಲರ ಚಳವಳಿಯನ್ನು ಬೆಂಬಲಿಸುತ್ತಿರುವ ಸಾಮಾನ್ಯ ಬಡಜನತೆ ನಕ್ಸಲೀಯರೆಂದರೆ "ಅಣ್ಣಂದಿರು" ಎಂದು ಹೇಳುತ್ತಿದ್ದಾರೆ. ನಕ್ಸಲ್ ವಾದವನ್ನು ಒಪ್ಪುತ್ತಿರುವ ಪ್ರಗತಿಪರ ಸಂಘಟನೆಗಳು, ಪ್ರಗತಿಪರ ಬುದ್ಧಿಜೀವಿಗಳ ಪ್ರಕಾರ ನಕ್ಸಲೀಯರೆಂದರೆ ಅವರದೊಂದು ಗೊತ್ತುಗುರಿಯಿಲ್ಲದ ಅಶಾಂತ ಮನಸ್ಸಿನ ಯುವಕರ ಗುಂಪಲ್ಲ, ನಿರ್ದಿಷ್ಟ ತತ್ವಸಿದ್ಧಾಂತ ರಾಜಕೀಯ ಕಾರ್ಯಕ್ರಮ. ವ್ಯೂಹತಂತ್ರ, ಕಾರ್ಯತಂತ್ರ ಪಕ್ಷ ರಚನೆ ದೇಶದ ೧೩ ರಾಜ್ಯಗಳಲ್ಲಿ ಪಕ್ಷ ಸಂಘಟನೆಯುಳ್ಳ ದೇಶಾದ್ಯಂತ ಕೋಟ್ಯಾಂತರ ಜನರ ಬೆಂಬಲ, ಸಹಾನುಭೂತರನ್ನು, ಸದಸ್ಯರನ್ನು ಒಳಗೊಂಡಿರುವ ಸುವ್ಯವಸ್ಥಿತ ರಾಜಕೀಯ ಪಕ್ಷ. ಒಟ್ಟಾರೆ ನಕ್ಸಲೀಯರೆಂದರೆ ಕ್ರಾಂತಿಕಾರಿ ಕಮ್ಯುನಿಸ್ಟರು ಎಂದು ಹೇಳುತ್ತಿದ್ದಾರೆ.

ನಕ್ಸಲೀಯರ ಪ್ರಕಾರ ಪ್ರಜಾಪ್ರಭುತ್ವವೆಂದರೆ ಈ ದೇಶದ ನೆಲ, ಜಲ, ಸಂಪನ್ಮೂಲಗಳ ಮೇಲೆ ಅಧಿಕಾರ ಹಾಗೂ ಅವುಗಳನ್ನು ಉಪಯೋಗಿಸುವ ಮತ್ತು ವಿಚಾರಿಸುವ ಹಕ್ಕು ಜನರದ್ದೇ ಎಂದು ಅರ್ಥ. ಪ್ರಜಾಸತ್ತೆ ಎಂದರೆ ಕೋಟ್ಯಾಂತರ ರೂಪಾಯಿ ಖರ್ಚು ಮಾಡುವ ಚುನಾವಣೆಗಳು ಮಾಡುವಲ್ಲಿ ಈ ದೇಶದ ಕೂಲಿ-ಕಾರ್ಮಿಕರ-ರೈತರನ್ನು ಭೂಮಾಲೀಕರ ಶೋಷಣೆ ಹಿಡಿತದಿಂದ ಬಿಡುಗಡೆಗೊಳಿಸಿ ಜನರ ಬದುಕಿನಲ್ಲಿ ಆರ್ಥಿಕ-ಸಾಮಾಜಿಕ ಸಮಾನತೆ ದೊರಕಿದಾಗ ಮಾತ್ರ ಪ್ರಜಾತಂತ್ರ ಸಾಧ್ಯ. ೧೯೪೭ರ ಪ್ರಜಾಪ್ರಭುತ್ವ ಹೆಸರಿಗೆ ಮಾತ್ರ ಇದೆ ಅದು ವಾಸ್ತವದಲ್ಲಿ ಭೂಮಾಲೀಕರ, ಬಂಡವಾಳಶಾಹಿಗಳ ಹಿತಾಸಕ್ತಿಯನ್ನು ಕಾಪಾಡುತ್ತದೆ. ಆದುದರಿಂದ ಇದು ಪ್ರಜಾಪ್ರಭುತವೇ ಅಲ್ಲ. ಅಮೆರಿಕಾ ಹಾಗೂ ಇನ್ನಿತರ ದೇಶಗಳು ಸೇರಿ ಇಲ್ಲಿನ ರೈತರನ್ನು ಸುಲಿಗೆ ಮಾಡುತ್ತಿವೆ. ಆದುದರಿಂದ ಈ ದೇಶದ ಜನತೆಗೆ ನಿಜವಾದ ನವಪ್ರಜಾತಂತ್ರ ಬೇಕು. ಅದು ಸದ್ಯದಲ್ಲಿರುವ ಪ್ರಭುತ್ವವನ್ನು ಕಿತ್ತೊಗೆಯುವ ಕ್ರಾಂತಿಯಿಂದ ಮಾತ್ರ ಸಾಧ್ಯ ಎಂದು ನಕ್ಸಲೀ ಯರು ನಂಬಿದ್ದಾರೆ.

ಈ ಕ್ರಾಂತಿಯ ಮೂಲಕ ದೇಶದ ಶೋಷಣೆಗೆ ಒಳಪಟ್ಟಿರುವ ಸಾಮಾನ್ಯ ಬಡಜನತೆ ಶತ್ರುಗಳಾಗಿರುವ ಊಳಿಗಮಾನ್ಯ ಭೂಮಾಲೀಕ ವರ್ಗ ಹಾಗೂ ಜಾಗತೀಕರಣ ಮುಖವಾಡ ಹಾಕಿಕೊಂಡು ಈ ದೇಶದ ಜನತೆಯನ್ನು ಶೋಷಣೆ ಮಾಡುತ್ತಿರುವ ಸಾಮ್ರಾಜ್ಯಶಾಹಿಗಳಿಂದ ಈ ದೇಶದವನ್ನು ಬಿಡುಗಡೆ ಮಾಡುವುದು. ಈ ಗುರಿಸಾಧನೆಗೆ ನಕ್ಸಲೀಯರು ಆಯ್ದುಕೊಂಡ ಮಾರ್ಗ ಸಶಸ್ತ್ರ ಸಂಗ್ರಾಮ. ಈ ಸಂಗ್ರಾಮ ಪ್ರಭುತ್ವದ ಜತೆ ಎಂದು ನಕ್ಸಲೀಯರು ಹೇಳುತ್ತಿದ್ದಾರೆ.

ಎನ್‌ಕೌಂಟರ್ ಹೆಸರಲ್ಲಿ ಪೊಲೀಸರು ನಕ್ಸಲೀಯರನ್ನು ಹಾಗೂ ಅಮಾಯಕ ಜನರನ್ನು ಕೊಲ್ಲುವುದು ಪರಿಪಾಠವಾಗುತ್ತಿದ್ದಂತಿದೆ. ಚಿಕ್ಕಮಗಳೂರು ಜಿಲ್ಲೆ ಪಕ್ಕ ಅಮ್ಮಡ್ಲುನಲ್ಲಿ ಪೊಲೀಸರು ನಾಲ್ಕು ಜನ ಗಿರಿಜನರನ್ನು ಹಾಗೂ ಓರ್ವ ನಕ್ಸಲನನ್ನು ಸಾಯಿಸಿದ ಇತ್ತೀಚಿನ ಉದಾಹರಣೆ. ಆದರೆ ಅಲ್ಲಿನ ಸ್ಥಳೀಯ ಗಿರಿಜನರು ಸರಕಾರ ಮತ್ತು ಪೊಲೀಸರಿಗೆ ತಿರುಗಿ ಬಿದ್ದಿದ್ದಾರೆ. ಗಿರಿಜನರು ತಮ್ಮ ಆಕ್ರೋಶವನ್ನು ವಿವಿಧ ರೂಪಗಳಲ್ಲಿ ಹೊರ ಹಾಕಿದ್ದಾರೆ. ಧಾರಾಕಾರವಾಗಿ ಸುರಿಯುತ್ತಿದ್ದ ಮಳೆಯನ್ನು ಲೆಕ್ಕಿಸದೇ ಜೀಪುಗಳಿಗೆ ಬೆಂಕಿ ಹಚ್ಚುವ ಮೂಲಕ ರಸ್ತೆಯನ್ನು ಅಗೆಯುವ ಮೂಲಕ ಮರ-ಗಿಡಗಳನ್ನು ಕಡಿದು ಹಾಕಿ ರಸ್ತೆಗೆ ಅಡ್ಡ ಹಾಕುವುದರ ಮೂಲಕ ಪೊಲೀಸರನ್ನು ಥಳಿಸಿ-ತರಾಟೆಗೆ ತೆಗೆದುಕೊಳ್ಳುವುದರ ಮೂಲಕ ಹಾಗೂ ನೊಂದು ಪೊಲೀಸರೇ ಬನ್ನಿ ನಮ್ಮನ್ನು ಸಾಯಿಸಿ, ಗುಂಡು ಹಾರಿಸಿ, ಎಂದು ಎದೆಯೊಡ್ಡುವುದರ ಮೂಲಕ ತಮ್ಮ ಆಕ್ರೋಶವನ್ನು ಹೊರಹಾಕಿದ್ದಾರೆ. ವಿಶೇಷವಾಗಿ ಪೊಲೀಸ್ ಕಾರ್ಯಾಚರಣೆ ವಿರುದ್ಧ ಆದಿವಾಸಿಗಳು ರೊಚ್ಚಿಗೆದ್ದಿದ್ದಾರೆ. ಪೊಲೀಸರೇ ನಿಮ್ಮ ವರ್ತನೆ ಹೀಗೆ ಮುಂದುವರೆದರೆ ನಾವೆಲ್ಲಾ ನಕ್ಸಲರಾಗಬೇಕಾಗುತ್ತದೆ ಎಂಬ ಎಚ್ಚರಿಕೆಯನ್ನು ಆದಿವಾಸಿಗಳು ಪ್ರಭುತ್ವಕ್ಕೆ ಕೊಟ್ಟಿದ್ದಾರೆ. ಆದರೆ ಪೊಲೀಸರು ತಮ್ಮ ವರ್ತನೆಯನ್ನು ಹಾಗೇ ಮುಂದುವರೆಸಿದರೆ ಆದಿವಾಸಿಗಳು ಎಲ್ಲರೂ ನಕ್ಸಲೀಯರಿಯರಾಗುವ ದಿನಗಳು ಬಹು ದೂರವಿಲ್ಲವೆನಿಸುತ್ತದೆ.

ಮಲೆನಾಡಿನಲ್ಲಿ ಜಮೀನ್ದಾರಿ ಪದ್ಧತಿ ಇನ್ನೂ ಜೀವಂತವಾಗಿದೆ. ಮಲೆನಾಡು ಪ್ರದೇಶದಲ್ಲಿ ಕೂಲಿ ಕಾರ್ಮಿಕರ ಮೇಲೆ ಜಮೀನ್ದಾರರ ದೌರ್ಜನ್ಯ ಹೆಚ್ಚಾಗಿದೆ. ಕೂಲಿಕಾರ್ಮಿಕರಿಗೆ ಕಡಿಮೆ ಕೂಲಿ ಕೊಡುವುದು, ಜನರಿಗೆ ಕೊಡುವ ಸಾಲಗಳಿಗೆ ಬಡ್ಡಿ-ಚಕ್ರಬಡ್ಡಿ ಹಾಕಿ ಹಣ ವಸೂಲಿ ಮಾಡುವುದು ಸಾಮಾನ್ಯವಾಗಿದೆ. ಈ ಪ್ರದೇಶದಲ್ಲಿ ಭೂಮಾಲೀಕರ ಶೋಷಣೆ ಜಾಸ್ತಿಯಾಗಿದೆ. ಶೋಷಕ ವರ್ಗದಿಂದ ನಡೆಯುತ್ತಿರುವ ಶೋಷಣೆಯನ್ನು ಮುಂದುವರೆಸಲು ಭೂಮಾಲೀಕರಿಗೆ ಈಗಿನ ಪ್ರಭುತ್ವ ಸಹಾಯ ಮಾಡುತ್ತಿದೆ. ಇಲ್ಲಿ ದಿನಾಲು ಜನರ ಮೇಲೆ ಭೂಮಾಲೀಕರ ದಬ್ಬಾಳಿಕೆಗಳು ಸುಸಂಬದ್ಧವಾಗಿ ಪೂರ್ವ ಯೋಜಿತವಾಗಿ ನಡೆಯುತ್ತಿವೆ. ಇದಕ್ಕೆ ಪ್ರಭುತ್ವ ಭೂಮಾಲೀಕರಿಗೆ ರಕ್ಷಣೆ ನೀಡುತ್ತದೆಂದು ಶೋಷಣೆ ವಿರುದ್ಧ ಹಲವು ವರ್ಷಗಳಿಂದ ಜನರು ತಮ್ಮ ರೋದನೆ ಮುಗಿಲು ಮುಟ್ಟುವವರೆಗೂ ಕೂಗಿದರೂ ಮತ್ತು ಪ್ರಜಾಸತ್ತಾತ್ಮಕವಾಗಿ ಹೋರಾಟ ಮಾಡಿದರೂ ಪ್ರಭುತ್ವ ಯಾವ ಸಮಸ್ಯೆ ಪರಿಹರಿಸಿಲ್ಲ ಎಂದು ಜನರು ಪ್ರಶ್ನೆ ಮಾಡುತ್ತಿದ್ದಾರೆ. ಜನರ ಸಮಸ್ಯೆಗಳನ್ನು ಪ್ರಭುತ್ವ ಪರಿಹರಿಸದೇ ಹೋದಾಗ ಜನರ ಮೇಲೆ ಭೂಮಾಲೀಕರ ಶೋಷಣೆ, ದೌರ್ಜನ್ಯ, ದಬ್ಬಾಳಿಕೆಗಳು ಜಾಸ್ತಿಯಾದಾಗ ಗಿರಿಜನರಿಗೆ ಪ್ರಭುತ್ವ ಸಹಾಯ ಮಾಡದೇ ಹೋದಾಗ ಆದಿವಾಸಿಗಳು ತಮ್ಮ ಅಸ್ತಿತ್ವಕ್ಕಾಗಿ ಎಲ್ಲೋ ಹುಟ್ಟಿ ಬೆಳೆದು ಬಂದು ತಮಗಾಗಿ ಪ್ರಾಣವನ್ನೇ ಕೊಡುತ್ತಿರುವ ನಕ್ಸಲೀಯರನ್ನು ಬೆಂಬಲಿಸುತ್ತ ಗಿರಿಜನರು ನಕ್ಸಲೀಯರನ್ನು ತಮ್ಮ ಮಡಿಲಲ್ಲಿಟ್ಟುಕೊಂಡು ಇಂದು ಕಾಪಾಡುತ್ತಿದ್ದಾರೆ ಎಂದೆನಿಸುತ್ತದೆ. ಇಂದು ಮಲೆನಾಡಿನಲ್ಲಿ ಬಂದೂಕನ್ನೇ ನೋಡಿರದ ಬಂದೂಕಿನ ಶಬ್ದವನ್ನೇ ಕೇಳಿರದ ಒಬ್ಬ ಗಿರಿಜನ ಅನಕ್ಷರಸ್ಥ ಮಹಿಳೆ ಬಂದೂಕು ಏಕೆ ಓಡಿದಿದ್ದಾಳೆ...? ಅದರ ಹಿನ್ನೆಲೆ ಏನು...? ಅಷ್ಟು ಅವಶ್ಯಕತೆಯಾದರೂ ಏನಿತ್ತು... ಎಂಬುದನ್ನು ಪ್ರಭುತ್ವ ಹಾಗೂ

ಎನ್‌ಕೌಂಟರ್ ಹೆಸರಲ್ಲಿ ಪೊಲೀಸರು ನಕ್ಸಲೀಯರನ್ನು ಹಾಗೂ ಅಮಾಯಕ ಜನರನ್ನು ಕೊಲ್ಲುವುದು ಪರಿಪಾಠವಾಗುತ್ತಿದ್ದಂತಿದೆ. ಚಿಕ್ಕಮಗಳೂರು ಜಿಲ್ಲೆ ಪಕ್ಕ ಅಮ್ಮಡ್ಲುನಲ್ಲಿ ಪೊಲೀಸರು ನಾಲ್ಕು ಜನ ಗಿರಿಜನರನ್ನು ಹಾಗೂ ಓರ್ವ ನಕ್ಸಲನನ್ನು ಸಾಯಿಸಿದ ಇತ್ತೀಚಿನ ಉದಾಹರಣೆ. ಆದರೆ ಅಲ್ಲಿನ ಸ್ಥಳೀಯ ಗಿರಿಜನರು ಸರಕಾರ ಮತ್ತು ಪೊಲೀಸರಿಗೆ ತಿರುಗಿ ಬಿದ್ದಿದ್ದಾರೆ. ಗಿರಿಜನರು ತಮ್ಮ ಆಕ್ರೋಶವನ್ನು ವಿವಿಧ ರೂಪಗಳಲ್ಲಿ ಹೊರ ಹಾಕಿದ್ದಾರೆ. ಧಾರಾಕಾರವಾಗಿ ಸುರಿಯುತ್ತಿದ್ದ ಮಳೆಯನ್ನು ಲೆಕ್ಕಿಸದೇ ಜೀಪುಗಳಿಗೆ ಬೆಂಕಿ ಹಚ್ಚುವ ಮೂಲಕ ರಸ್ತೆಯನ್ನು ಅಗೆಯುವ ಮೂಲಕ ಮರ-ಗಿಡಗಳನ್ನು ಕಡಿದು ಹಾಕಿ ರಸ್ತೆಗೆ ಅಡ್ಡ ಹಾಕುವುದರ ಮೂಲಕ ಪೊಲೀಸರನ್ನು ಥಳಿಸಿ-ತರಾಟೆಗೆ ತೆಗೆದುಕೊಳ್ಳುವುದರ ಮೂಲಕ ಹಾಗೂ ನೊಂದು ಪೊಲೀಸರೇ ಬನ್ನಿ ನಮ್ಮನ್ನು ಸಾಯಿಸಿ, ಗುಂಡು ಹಾರಿಸಿ, ಎಂದು ಎದೆಯೊಡ್ಡುವುದರ ಮೂಲಕ ತಮ್ಮ ಆಕ್ರೋಶವನ್ನು ಹೊರಹಾಕಿದ್ದಾರೆ.

ಪ್ರಗತಿಪರರು ಆಲೋಚನೆ ಮಾಡಬೇಕಾದ ಸಮಯ ಇಂದು ಒದಗಿ ಬಂದಿದೆ.

ರಾಜ್ಯದಲ್ಲಿ ಆಡಳಿತಕ್ಕೆ ಬಂದ ರಾಜಕೀಯ ಪಕ್ಷಗಳು ನಕ್ಸಲರ ಹುಟ್ಟಿಗೆ ಕಾರಣವಾಗಿರುವ ಸಮಸ್ಯೆಗಳನ್ನು ಗುರುತಿಸಿ ಅವುಗಳನ್ನು ಪರಿಹರಿಸುವುದಾಗಿ ಸಾಮಾನ್ಯ ಜನರಿಗೆ ಹೇಳುತ್ತ ಸಮಿತಿಗಳನ್ನು ರಚನೆ ಮಾಡಿ ವರದಿಗಳನ್ನು ತರಿಸಿಕೊಂಡಿವೆ. ಆ ವರದಿಗಳೆಲ್ಲಾ ಇಂದು ವಿಧಾನಸೌಧದಲ್ಲಿ ಧೂಳು ತಿನ್ನುತ್ತಿವೆ. ನಕ್ಸಲೀಯರ ಸಮಸ್ಯೆ ಸಾಮಾಜಿಕ ಆರ್ಥಿಕ ಸಮಸ್ಯೆಯೇ ಹೊರತು ಕಾನೂನು ಹಾಗೂ ಸುವ್ಯವಸ್ಥೆ ಸಮಸ್ಯೆ ಅಲ್ಲ ಎಂದು ಹೇಳುತ್ತ ಪ್ರಭುತ್ವವು ನಕ್ಸಲೀಯ ಚಳವಳಿಯನ್ನು ಪೊಲೀಸ್ ಕಾರ್ಯಾಚರಣೆ ಮೂಲಕ ದಮನ ಮಾಡಲು ಹೊರಟಂತಿದೆ. ಪ್ರಭುತ್ವ ಪ್ಯಾಕೇಜ್‌ಗಳನ್ನು ಘೋಷಿಸಿ ಅನುದಾನ ಬಿಡುಗಡೆ ಮಾಡದೇ ಮಲೆನಾಡಿನ ಜನತೆಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸದೇ ಕೇವಲ ಬಂದೂಕಿನ ಗುಂಡಿನಿಂದಲೇ ಉತ್ತರ ನೀಡಲು ನಿರ್ಧರಿಸಿದಂತಿದೆ. ನಕ್ಸಲ್ ಚಳವಳಿ ಹುಟ್ಟಿಗೆ ಕಾರಣ ಯಾವುದೆಂದು ತಿಳಿದುಕೊಂಡು ಆ ಸಮಸ್ಯೆಗಳನ್ನು ಬಗೆ ಹರಿಸಲು ಕ್ರಮ ತೆಗೆದುಕೊಳ್ಳಬೇಕೇ ಹೊರತು ಅಮ್ಮಡ್ಲುನಲ್ಲಿ ಅಮಾಯಕ ಜನರನ್ನು ಹಾಗೂ ನಕ್ಸಲರನ್ನು ಕೊಲೆ ಮಾಡುವ ಮಾರ್ಗ ಸರಿಯಲ್ಲ. ನಕ್ಸಲೀಯರು ಆಯ್ದುಕೊಂಡ ಮಾರ್ಗದ ಬಗ್ಗೆ ಅಸಮಾಧಾನಗಳು, ಸೈದ್ಧಾಂತಿಕವಾಗಿ ಭಿನ್ನಾಭಿಪ್ರಾಯಗಳು ಇರಬಹುದು. ಆದರೆ ನಕ್ಸಲೀಯರು ಎತ್ತಿರುವ ಸಾಮಾಜಿಕ-ಆರ್ಥಿಕ ಪ್ರಶ್ನೆಗಳನ್ನು ಇಂದು ಅರ್ಥಮಾಡಿಕೊಳ್ಳುವ ಪರಿಸ್ಥಿತಿ ಉದ್ಭವಿಸಿದೆ. ಆದರೆ ಪ್ರಭುತ್ವವು ನಕ್ಸಲೀಯರು ಎತ್ತಿರುವ ಸಾಮಾಜಿಕ ಆರ್ಥಿಕ ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕುವ ಬದಲು ಪೊಲೀಸರ ಮೂಲಕ ಅಮಾಯಕ ಗಿರಿಜನರನ್ನು-ನಕ್ಸಲೀಯರನ್ನು ಕೊಲೆ ಮಾಡುವುದು ಅಪ್ರಜಾತಾಂತ್ರಿಕವಾದುದು. ಪ್ರತಿಯೊಂದು ಚಳವಳಿ, ಸಂಘಟನೆಗಳ ಮೇಲೆ ಕಾನೂನುಬದ್ಧವಾಗಿ ಕ್ರಮ ತೆಗೆದುಕೊಳ್ಳಲು ಪ್ರಭುತ್ವಕ್ಕೆ ಅಧಿಕಾರವಿದೆ. ಆದರೆ ಪ್ರಭುತ್ವದ ವ್ಯವಸ್ಥೆಯ ವಿರುದ್ಧ ದನಿ ಎತ್ತಿದವರನ್ನು ಕೊಲೆ ಮಾಡುವ ಅಧಿಕಾರ ಪ್ರಭುತ್ವಕ್ಕಿಲ್ಲ.

ನಕ್ಸಲ್ ಸಮಸ್ಯೆ ಸಾಮಾಜಿಕ ಆರ್ಥಿಕ ಸಮಸ್ಯೆ. ಅದನ್ನು ಸರಕಾರವು ಕಾನೂನು ಹಾಗೂ ಸುವ್ಯವಸ್ಥೆ ಎಂದು ಪರಿಗಣಿಸಿದರೆ ನಕ್ಸಲ್ ಚಳವಳಿಯನ್ನು ಹತ್ತಿಕ್ಕಲು ಸಾಧ್ಯವಿಲ್ಲ. ಶೋಷಣೆ ರಹಿತ ಸಮಾಜ ನಿರ್ಮಾಣವಾದರೆ ನಕ್ಸಲ್‌ವಾದವು ತನ್ನಷ್ಟಕ್ಕೆ ತಾನೆ ಕೊನೆಯುಸಿರೆಳೆಯುತ್ತದೆ.

ಕೋಮುವಾದ, ಜಾತಿಯತೆ ಮತ್ತು ಆರ್ಥಿಕ-ಸಾಮಾಜಿಕ ಅಸಮಾನತೆಗಳ ಬಗ್ಗೆ ಮಾತನಾಡಿದರೆ ಜಾಗತೀಕರಣ ಉದಾರೀಕರಣ-ಖಾಸಗೀಕರಣಗಳಿಂದ ರೈತರ, ವಿದ್ಯಾರ್ಥಿ-ಕಾರ್ಮಿಕರ ಹಾಗೂ ಮಹಿಳೆ, ಗುಡಿಕೈಗಾರಿಕೆಗಳ ಮೇಲೆ ಆಗುತ್ತಿರುವ ದುಷ್ಪರಿಣಾಮಗಳ ಬಗ್ಗೆ ದನಿ ಎತ್ತಿದರೆ ಪ್ರಭುತ್ವ ನಕ್ಸಲೀಯರು ಎಂದು ಹಣೆಪಟ್ಟಿ ಕಟ್ಟುತ್ತಿದೆ ದ್ದಾರೆ. ಇಂದು ದೇಶದಲ್ಲಿ ಪ್ರಭುತ್ವ ಮತ್ತು ಜನತೆಯ ನಡುವಿನ ಅಂತರ ಜಾಸ್ತಿಯಾಗುತ್ತದೆ ಇಂದಿನ ಪ್ರಭುತ್ವ ಆಳುವವರ ಪರವಾಗಿ ಇದೆಯೇ ಹೊರತು ಜನರ ಪರವಾಗಿಲ್ಲ ಎಂಬುದು ಜನರ ವಾದವಾಗಿದೆ. ಈ ದೇಶದ ಶೋಷಿತ ಜನತೆ ಈ ವ್ಯವಸ್ಥೆ ಮೇಲೆ ಸಂಪೂರ್ಣವಾಗಿ ನಂಬಿಕೆಯನ್ನು ಕಳೆದುಕೊಂಡು ಪರ್ಯಾಯ ವ್ಯವಸ್ಥೆಗಾಗಿ ಕಾಯುತ್ತಿದ್ದಾರೆ.

ಶೋಷಿತ ವರ್ಗಗಳ ಹೋರಾಟಗಳನ್ನು ಆಳುವವರು ದಮನ ಮಾಡಿದ ಉದಾಹರಣೆಗಳು ಇತಿಹಾಸದಲ್ಲಿ ಸಾಕಷ್ಟು ಇವೆ. ನಕ್ಸಲ್ ಚಳವಳಿ ಶಾಂತಿಯುತ ನರ್ಮದಾ ನದಿ ಬಚಾವೋ ಆಂದೋಲ ಒರಿಸ್ಸಾದ ಕಳಿಂಗನಗರದ ಬುಡಕಟ್ಟು ಜನರ ಹೋರಾಟ, ಗುರುಗಾಂವ್ ಹೊಂಡಾ ಕಾರ್ಖಾನೆ ಕಾರ್ಮಿಕರ ಚಳವಳಿ ಮುಂತಾದವುಗಳ ಆಳುವ ವರ್ಗಗಳು ಆಕ್ರಮಣ ಮಾಡಿ ಮಾನವ ಹಕ್ಕುಗಳನ್ನು ದಮನ ಮಾಡಿರುವುದು ಎಲ್ಲರಿಗೂ ಗೊತ್ತಿದೆ.

ನಕ್ಸಲ್ ಸಮಸ್ಯೆ ಸಾಮಾಜಿಕ ಆರ್ಥಿಕ ಸಮಸ್ಯೆ. ಅದನ್ನು ಸರಕಾರವು ಕಾನೂನು ಹಾಗೂ ಸುವ್ಯವಸ್ಥೆ ಎಂದು ಪರಿಗಣಿಸಿದರೆ ನಕ್ಸಲ್ ಚಳವಳಿಯನ್ನು ಹತ್ತಿಕ್ಕಲು ಸಾಧ್ಯವಿಲ್ಲ. ಶೋಷಣೆ ರಹಿತ ಸಮಾಜ ನಿರ್ಮಾಣವಾದರೆ ನಕ್ಸಲ್‌ವಾದವು ಕೊನೆಯುಸಿರೆಳೆಯುತ್ತದೆ. ಇದನ್ನು ಅರ್ಥಮಾಡಿಕೊಳ್ಳುವುದರಲ್ಲಿ ಪ್ರಭುತ್ವ ವಿಫಲವಾಗಿದೆ. □

ರಾಷ್ಟ್ರಪತಿ ಚುನಾವಣೆ ಸುತ್ತ...

ನಾ. ದಿವಾಕರ

ಯು.ಪಿ.ಎ. ಮೈತ್ರಿಕೂಟ ಪ್ರತಿಭಾ ಪಾಟೀಲರ ಹೆಸರನ್ನು ಸೂಚಿಸುವ ಮುನ್ನ ಪ್ರಣಬ್ ಮುಖರ್ಜಿ, ಕರಣ್ ಸಿಂಗ್, ಶಿವ ರಾಜ್ ಪಾಟೀಲ್, ಸುಶೀಲ್ ಕುಮಾರ್ ಶಿಂಧೆ ಮುಂತಾದ ಹೆಸರುಗಳನ್ನು ಪರಿಶೀಲಿಸಿತ್ತು. ಆದರೆ ಮಿತ್ರ ಪಕ್ಷಗಳ ಒಪ್ಪಿಗೆ ದೊರೆಯದಿದ್ದ ರಿಂದ ಹಠಾತ್ತನೆ ಪ್ರತಿಭಾ ಪಾಟೀಲರ ಹೆಸರು ಸೂಚಿತವಾಗಿದ್ದು, ಇಡೀ ರಾಜಕೀಯ ಪ್ರಹಸನದ ಕುರುಹಾಗಿದೆ. ಇಲ್ಲಿ ಪ್ರತಿಭಾ ರಾಷ್ಟ್ರಪತಿ ಹುದ್ದೆಗೆ ಅರ್ಹರೇ ಅಲ್ಲವೇ ಎಂಬ ಪ್ರಶ್ನೆಗಿಂತಲೂ, ರಾಷ್ಟ್ರದ ಗೌರವ ಸೂಚಕ ವಾದ ಹುದ್ದೆಗೆ ನಡೆಯುವ ಒಂದು ಚುನಾವಣೆಯ ಸ್ವರೂಪ ಯಾವ ರೀತಿಯಲ್ಲಿರಬೇಕೆಂಬುದೇ ಮುಖ್ಯ ಪ್ರಶ್ನೆಯಾಗುತ್ತದೆ. ಹಾಲಿ ರಾಷ್ಟ್ರಪತಿಗಳಾದ ಅಬ್ದುಲ್ ಕಲಾಂರವರು ಎರಡನೇ ಅವಧಿಗೆ ಮುಂದುವರಿಯಲು ಮೊದಲೇ ತಮ್ಮ ಅಸಮ್ಮತಿ ಸೂಚಿಸಿದ್ದು, ಪ್ರತಿಭಾ ಅವರ ಹೆಸರು ಸೂಚಿಸಿದ ನಂತರದಲ್ಲಿ, ತುಂಬಾ ಉತ್ತಮ ಆಯ್ಕೆ ಎಂದು ಪ್ರತಿಕ್ರಿಯಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಭಾರತೀಯ ಸಂವಿಧಾನದಲ್ಲಿ ರಾಷ್ಟ್ರಪತಿಗಳ ಸ್ಥಾನ ಅಲಂಕಾರಿಕವೆಂದೇ ಹಲವಾರು ತಜ್ಞರ, ರಾಜಕೀಯ ವಿಶ್ಲೇಷಕರ ಅಭಿಪ್ರಾಯ. ಭಾರತೀಯ ಸಂಸದೀಯ ಪ್ರಜಾತಂತ್ರದಲ್ಲಿ ಉನ್ನತ ಸ್ಥಾನ ಹೊಂದಿರುವ ರಾಷ್ಟ್ರಪತಿ ಚುನಾವಣೆಯ ಸಂದರ್ಭದಲ್ಲಿ ಇಡೀ ದೇಶದ ಗಮನ ರಾಷ್ಟ್ರಪತಿ ಭವನದತ್ತ ಹೊರಳಿರುತ್ತದೆ. ನಮ್ಮ ದೇಶದ ಪ್ರಥಮ ಪ್ರಜೆ ಯಾರಾಗಬಹುದು ಎಂಬ ಕುತೂಹಲ ರಾಜಕೀಯ ವಲಯದಲ್ಲಷ್ಟೇ ಅಲ್ಲದೆ ಜನಸಾಮಾನ್ಯರಲ್ಲೂ ಕಂಡು ಬರುತ್ತದೆ. ಈ ಪ್ರಕ್ರಿಯೆಯಲ್ಲಿ ಕೆಲವು ರಾಜಕೀಯ ದೊಂಬರಾಟಗಳನ್ನೂ ನೋಡಬಹುದು. ಹಲವಾರು ವಾರಗಳ ಊಹಾಪೋಹಗಳ ನಂತರ ಕಾಂಗ್ರೆಸ್ ನೇತೃತ್ವದ ಯು.ಪಿ.ಎ ಮೈತ್ರಿಕೂಟ, ಮಹಾರಾಷ್ಟ್ರ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷೆ ಮತ್ತು ರಾಜಸ್ತಾನದ ರಾಜ್ಯಪಾಲೆಯಾಗಿದ್ದ ಶ್ರೀಮತಿ ಪ್ರತಿಭಾ ಪಾಟೀಲರನ್ನು ತನ್ನ ಅಭ್ಯರ್ಥಿಯಾಗಿ ಆಯ್ಕೆ ಮಾಡಿರುವುದು, ಸ್ವಾತಂತ್ರ್ಯೋತ್ತರ ಭಾರತದ ಇತಿಹಾಸದಲ್ಲಿ ಪ್ರಥಮ ಮಹಿಳಾ ರಾಷ್ಟ್ರಪತಿಯನ್ನು ನೋಡುವ ಸಾಧ್ಯತೆಗಳು ಹೆಚ್ಚಾಗಿವೆ. ಪ್ರತಿಭಾ ಪಾಟೀಲರ ಗೆಲುವು ಬಹುತೇಕ ಖಚಿತವಾಗಿರುವುದರಿಂದ, ಪುರುಷರ ಏಕಸ್ವಾಮ್ಯದಲ್ಲಿ ೬೦ ವರ್ಷ ವಿಜೃಂಭಿಸಿದ ಭಾರತೀಯ ಸೇನಾಪಡೆ ಈಗ ಮಹಿಳೆಯ ನಿಯಂತ್ರಣಕ್ಕೊಳಪಡುವ ಸಂತಸದ ಕ್ಷಣಗಳು ಹತ್ತಿರ ಬರುತ್ತಿವೆ.

ಸ್ವತಂತ್ರ ಭಾರತದ ೬೦ನೇ ವರ್ಷದಲ್ಲಿ ಒಬ್ಬ ಮಹಿಳೆಯನ್ನು ರಾಷ್ಟ್ರಪತಿ ಗದ್ದುಗೆಯಲ್ಲಿ ಕೂಡಿಸುವ ಮೂಲಕ, ತಮ್ಮ ಮೈತ್ರಿಕೂಟ ಮಹಿಳಾ ಸಬಲೀಕರಣದಲ್ಲಿ ಮಹತ್ತರ ಹೆಜ್ಜೆ ಇಡುತ್ತಿದೆ ಎಂದು ಯು.ಪಿ.ಎ. ಭಾವಿಸಿದ್ದಲ್ಲಿ ಅದು ಭಾವನಾತ್ಮಕ ಹೇಳಿಕೆಯಾಗುತ್ತದಷ್ಟೆ. ಮಹಿಳಾ ಮೀಸಲಾತಿ ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಿ ಹತ್ತು ವರ್ಷಗಳೇ ಕಳೆದಿವೆ. ಆರು ವರ್ಷಗಳ ಎನ್.ಡಿ.ಎ ಆಳ್ವಿಕೆ ಮತ್ತು ಮೂರು ವರ್ಷಗಳ ಯು.ಪಿ.ಎ ಆಳ್ವಿಕೆಯಲ್ಲಿ ಈ ಮಸೂದೆಯನ್ನು ಅನುಮೋದಿಸಲೂ ಸಿದ್ಧವಿಲ್ಲದ ಪಕ್ಷಗಳು, ಮಹಿಳೆಯನ್ನು ರಾಷ್ಟ್ರಪತಿ ಮಾಡುವ ಮೂಲಕ ಮಹಿಳಾ ಸಬಲೀಕರಣ ಸಾಧ್ಯವೇ? ಮಹಿಳೆಯರ ಬಗ್ಗೆ ಕಾಂಗ್ರೆಸ್ ಮತ್ತು ಮಿತ್ರ ಪಕ್ಷಗಳಿಗೆ ಅಷ್ಟು ಕಾಳಜಿ ಇದ್ದಿದ್ದಲ್ಲಿ, ಕಳೆದ ರಾಷ್ಟ್ರಪತಿ ಚುನಾವಣೆಯಲ್ಲಿ ಎನ್.ಡಿ.ಎ.ದೊಡನೆ ಕೈಗೂಡಿಸುವ ಬದಲು ಲಕ್ಷ್ಮಿ ಸೆಹಗಲ್‌ರವರನ್ನು ಬೆಂಬಲಿಸಬಹುದಿತ್ತಲ್ಲವೇ?

ಇನ್ನೊಂದೆಡೆ, ತೃತೀಯ ರಂಗವು ತನ್ನದೇ ಆದ ಅಭ್ಯರ್ಥಿಯನ್ನು ಆಯ್ಕೆ ಮಾಡಲಾಗದೆ ಹೋದಾಗ, ಎನ್.ಡಿ.ಎ ಮೈತ್ರಿಕೂಟವು ಹಾಲಿ ಉಪರಾಷ್ಟ್ರಪತಿ ಭೈರೋನ್ ಸಿಂಗ್ ಶೆಖಾವತ್‌ರವರನ್ನು ಸ್ವತಂತ್ರ ಅಭ್ಯರ್ಥಿಯನ್ನಾಗಿ ಕಣಕ್ಕಿಳಿಸಿದೆ. ಆರು ದಶಕಗಳ ಕಾಲ ತಮ್ಮ ಪಕ್ಷದ ಮತ್ತು ಸಂಘ ಪರಿವಾರದ ನಿಷ್ಠಾವಂತ ಸೇವಕನಂತೆ ದುಡಿದ ಶೆಖಾತ್‌ರವರನ್ನು ತಮ್ಮ ಪಕ್ಷದ ಅಭ್ಯರ್ಥಿ ಎಂದು ಗುರುತಿಸಲೂ ಭಾಜಪ ಹಿಂಜರಿಯುವುದು, ಸೆಕ್ಯುಲಾರ್ ಮತಗಳನ್ನು ಗಳಿಸುವ ಉದ್ದೇಶದಿಂದಲೇ ಎಂದು ಹೇಳಬೇಕಿಲ್ಲ. ಆದರೂ ಶೆಖಾವತ್‌ರವರ ರಾಜಕೀಯ ಪೂರ್ವೇತಿಹಾಸ ಗುಟ್ಟಾದ ವಿಷಯವೇನೂ ಅಲ್ಲವಾದ್ದರಿಂದ ಅವರ ಸೋಲು ಖಚಿತವೆಂದೇ ಹೇಳಬಹುದು.

ಯು.ಪಿ.ಎ. ಮೈತ್ರಿಕೂಟ ಪ್ರತಿಭಾ ಪಾಟೀಲರ ಹೆಸರನ್ನು ಸೂಚಿಸುವ ಮುನ್ನ, ಪ್ರಣಬ್ ಮುಖರ್ಜಿ, ಕರಣ್ ಸಿಂಗ್, ಶಿವರಾಜ್ ಪಾಟೀಲ್, ಸುಶೀಲ್ ಕುಮಾರ್ ಶಿಂಧೆ ಮುಂತಾದ ಹೆಸರುಗಳನ್ನು ಪರಿಶೀಲಿಸಿತ್ತು. ಆದರೆ ಮಿತ್ರ ಪಕ್ಷಗಳ ಒಪ್ಪಿಗೆ ದೊರೆಯದಿದ್ದರಿಂದ ಹಠಾತ್ತನೆ ಪ್ರತಿಭಾ ಪಾಟೀಲರ ಹೆಸರು ಸೂಚಿತವಾಗಿದ್ದು ಇಡೀ ರಾಜಕೀಯ ಪ್ರಹಸನದ ಕುರುಹಾಗಿದೆ. ಇಲ್ಲಿ ಪ್ರತಿಭಾ ರಾಷ್ಟ್ರಪತಿ ಹುದ್ದೆಗೆ ಅರ್ಹರೇ ಅಲ್ಲವೇ ಎಂಬ ಪ್ರಶ್ನೆಗಿಂತಲೂ, ರಾಷ್ಟ್ರದ ಗೌರವ ಸೂಚಕವಾದ ಹುದ್ದೆಗೆ ನಡೆಯುವ ಒಂದು ಚುನಾವಣೆಯ ಸ್ವರೂಪ ಯಾವ ರೀತಿಯಲ್ಲಿರಬೇಕೆಂಬುದೇ ಮುಖ್ಯ ಪ್ರಶ್ನೆಯಾಗುತ್ತದೆ. ಹಾಲಿ ರಾಷ್ಟ್ರಪತಿಗಳಾದ ಡಾ. ಅಬ್ದುಲ್ ಕಲಾಂರವರು ಎರಡನೇ ಅವಧಿಗೆ ಮುಂದುವರಿಯಲು ಮೊದಲೇ ತಮ್ಮ ಅಸಮ್ಮತಿ ಸೂಚಿಸಿದ್ದು, ಪ್ರತಿಭಾ ಅವರ ಹೆಸರು ಸೂಚಿಸಿದ ನಂತರದಲ್ಲಿ, ತುಂಬಾ ಉತ್ತಮ ಆಯ್ಕೆ ಎಂದು ಪ್ರತಿಕ್ರಿಯಿಸಿದ್ದನ್ನು ಇಲ್ಲಿ ಸ್ಮರಿಸಬಹುದು. ಆದರೆ ಇದಾದ ಕೆಲವೇ ದಿನಗಳ ನಂತರ ತೃತೀಯ ರಂಗದ ಸೂಚನೆಯ ಮೇರೆಗೆ, ಗೆಲುವು ನಿಶ್ಚಿತವಾದಲ್ಲಿ ತಾವು ಮತ್ತೊಮ್ಮೆ ಸ್ಪರ್ಧಿಸಲು ಸಿದ್ಧ ಎಂದು ಹೇಳಿದ್ದು ರಾಜಕೀಯ ವಲಯದಲ್ಲಿ ಅಚ್ಚರಿ ಮೂಡಿಸಿತ್ತು.

ಈ ಹಿನ್ನೆಲೆಯಲ್ಲಿ, ಇಡೀ ರಾಷ್ಟ್ರಪತಿ ಚುನಾವಣಾ ಪ್ರಕ್ರಿಯೆಯೇ ಒಂದು ರೀತಿಯ ಬೀದಿ ಕಾಳಗದ ರೂಪ ತಾಳಿರುವುದು ಭಾರತೀಯ ಪ್ರಜಾತಂತ್ರದ ವಿಡಂಬನೆಯಾಗಿದೆ. ದೇಶದ ಪ್ರಥಮ ಪ್ರಜೆಯಾಗಿ ಆಯ್ಕೆಯಾಗುವವರ ಯೋಗ್ಯತೆ, ಘನತೆಗಳ ಬಗ್ಗೆ ಕಾಳಜಿ ಇರಬೇಕಾದುದು ಸಹಜವೇ. ಆದರೂ, ಈಗ ನಡೆಯುತ್ತಿರುವ ಬೀದಿಕಾಳಗ ಮತ್ತು ಪರಸ್ಪರ ದೋಷಾರೋಪಗಳು ಸಮರ್ಥನೀಯವಲ್ಲ. ಅಭ್ಯರ್ಥಿಗಳ ಬಗ್ಗೆ ನಡೆಯುತ್ತಿರುವ ವಾಗ್ವಾದಗಳು ವ್ಯಕ್ತಿ ಕೇಂದ್ರಿತವಾಗಿದ್ದು ಪಕ್ಷಪಾತ ಧೋರಣೆ ಸ್ಪಷ್ಟವಾಗಿ ಗೋಚರಿಸುತ್ತಿವೆ. ಹಿಂದಿನ ರಾಷ್ಟ್ರಪತಿ ಕೆ.ಆರ್. ನಾರಾಯಣನ್‌ರವರಿಗೆ ಎರಡನೇ ಅವಧಿಗೆ ಅವಕಾಶವೀಯಲು ಸುತಾರಾಂ ಒಪ್ಪದೆ ೨೦೦೨ರಲ್ಲಿ ವಾಜಪೇಯಿಯವರೇ ನಾರಾಯಣನ್‌ರವರಿಗೆ ನೇರವಾಗಿ ಈ ನಿರ್ಧಾರವನ್ನು ತಿಳಿಸಿದ್ದರು. ಆದರೆ ಈ ಬಾರಿ ಕಲಾಂರವರನ್ನು ಎರಡನೇ ಅವಧಿಗೆ ಚುನಾಯಿಸಲು ಭಾಜಪ ಸಿದ್ಧವಾಗಿದ್ದುದು, ಈ ಧೋರಣೆಯನ್ನು ಸ್ಪಷ್ಟಪಡಿಸುತ್ತದೆ. ಈ ಬಗ್ಗೆ ಪತ್ರಿಕಾಗೋಷ್ಠಿಯಲ್ಲಿ ಪ್ರಶ್ನಿಸಿದಾಗ ಭಾಜಪದ ವಕ್ತಾರರಾದ ಸುಷ್ಮಾ ಸ್ವರಾಜ್‌ರವರು"ಇಬ್ಬರೂ ವ್ಯಕ್ತಿಗಳನ್ನು ಹೋಲಿಸಬೇಡಿ" ಎಂದು ಉತ್ತರ ನೀಡಿದ್ದು ರಾಜಕೀಯ ಅವಕಾಶವಾದದ ನಿದರ್ಶನವಷ್ಟೇ.

ಪ್ರತಿಭಾ ಪಾಟೀಲರು ಅಭ್ಯರ್ಥಿಯಾಗಿ ಆಯ್ಕೆಯಾದ ನಂತರ "ಈಕೆ ಯಾರು" ಎಂಬ ಪ್ರಶ್ನೆ ಮಾಧ್ಯಮಗಳಲ್ಲಿ, ರಾಜಕೀಯ ವಲಯಗಳಲ್ಲಿ ಕೇಳಿ ಬಂದದ್ದು ಒಂದು ರೀತಿಯ ವಿಪರ್ಯಾಸ. ಈ ಪ್ರಶ್ನೆಯ ಹಿಂದಿನ ಗೂಢಾರ್ಥವೆಂದರೆ ಯಾವುದೇ ಸಾರ್ವಜನಿಕ ಅಧಿಕಾರಯುತ ಹುದ್ದೆಯನ್ನು ಅಲಂಕರಿಸುವ ವ್ಯಕ್ತಿಯ ಘನತೆ, ಯೋಗ್ಯತೆ, ಸಾಧನೆಗಳಿಗಿಂತಲೂ ಸಾಮುದಾಯಿಕ ವಿದ್ಯಮಾನಗಳು ಮುಖ್ಯವಾಗಿರುತ್ತದೆ.

ರಾಷ್ಟ್ರಪತಿ ಹುದ್ದೆಗೆ ಆಯ್ಕೆಯಾಗುವವರು ಕೆಲವು ವಿಶಿಷ್ಟ ಲಕ್ಷಣಗಳನ್ನು, ಸಾಮರ್ಥ್ಯವನ್ನು ಹೊಂದಿರಬೇಕೆಂಬ ಅಂಶ ನಿರ್ವಿವಾದವಾದರೂ ಅದನ್ನು ಚರ್ಚೆ ಮಾಡುವ ವಿಧಾನಗಳಲ್ಲಿ ರಾಜಕೀಯ, ಸಾಂಸ್ಕೃತಿಕ ಘನತೆ ಮುಖ್ಯವಾಗುತ್ತದೆ. ಈ ನಿಟ್ಟಿನಲ್ಲಿ ಇಡೀ ಚುನಾವಣಾ ಪ್ರಕ್ರಿಯೆಯನ್ನು ವಿಶ್ಲೇಷಿಸಬಹುದು.

ಪ್ರತಿಭಾ ಪಾಟೀಲರ ಆಯ್ಕೆಯನ್ನು ವಿರೋಧಿಸುವವರ ಮುಖ್ಯ ಆರೋಪವೆಂದರೆ, ಆಕೆ ಸೋನಿಯಾ ಗಾಂಧಿಯವರ ಆಯ್ಕೆ. ಹಾಗಾಗಿ ಮತ್ತೊಂದು ರಬ್ಬರ್ ಸ್ಟಾಂಪ್ ರಾಷ್ಟ್ರಪತಿ ಆಗುತ್ತಾರೆ ಎಂಬ ಅಂಶ. ಬೇರೆ ಯಾವುದೇ ಅಭ್ಯರ್ಥಿಗಳು ದೊರೆಯದಿದ್ದ

ಕಾರಣ ಅವರನ್ನು ಆಯ್ಕೆ ಮಾಡಲಾಗಿದೆ. ಇಡೀ ರಾಷ್ಟ್ರಕ್ಕೆ ಅವರ ಪರಿಚಯವಿಲ್ಲ. ರಾಷ್ಟ್ರದ ಉನ್ನತ ಪದವಿಯನ್ನು ಅಲಂಕರಿಸುವ ವರ್ಚಸ್ಸು ಅವರಲ್ಲಿಲ್ಲ ಇತ್ಯಾದಿ ಆರೋಪಗಳು. ಈ ಆರೋಪಗಳನ್ನು ತಳ್ಳಿ ಹಾಕಲಾಗುವುದಿಲ್ಲವಾದರೂ, ಪ್ರತಿಭಾ ಪಾಟೀಲರ ರಾಜಕೀಯ ಅನುಭವ ಮತ್ತು ಸಾಮಾಜಿಕ ಸೇವೆಯನ್ನು ಪರಿಗಣಿಸಿದರೆ, ಸತತವಾಗಿ ಐದು ಬಾರಿ ವಿಧಾನಸಭೆಗೆ ಆಯ್ಕೆಯಾಗಿದ್ದಾರೆ. ರಾಜ್ಯ ಸಭೆಯ ಉಪಸಭಾಪತಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಹತ್ತನೇ ಸಂಸತ್ತಿನ ಸದಸ್ಯೆಯಾಗಿದ್ದಾರೆ. ಹಾಲಿ ರಾಜಸ್ತಾನದ ರಾಜ್ಯಪಾಲರಾಗಿ ಉತ್ತಮವಾಗಿ ಕಾರ್ಯನಿರ್ವಹಿಸಿದ್ದಾರೆ. ಗ್ರಾಮೀಣ ವಿದ್ಯಾರ್ಥಿಗಳಿಗಾಗಿ ಇಂಜಿನಿಯರಿಂಗ್ ಕಾಲೇಜು, ದುಡಿಯುವ ಮಹಿಳೆಯರಿಗಾಗಿ ಹಾಸ್ಟೆಲ್, ಆರ್ಥಿಕವಾಗಿ ಹಿಂದುಳಿದ ಮಹಿಳೆಯರಿಗಾಗಿ ಸಹಕಾರಿ ಬ್ಯಾಂಕ್ ಮುಂತಾದ ಉತ್ತಮ ಕೆಲಸಗಳನ್ನೂ ಮಾಡಿದ್ದಾರೆ ಹಾಗೂ ರಾಜಸ್ತಾನ ರಾಜ್ಯಪಾಲರಾಗಿ ಅಲ್ಲಿನ ಭಾಜಪ ಸರ್ಕಾರದ ಧಾರ್ಮಿಕ ಸ್ವಾತಂತ್ರ್ಯ ಮಸೂದೆಗೆ ಅಂಕಿತ ಹಾಕಲು ನಿರಾಕರಿಸಿ ಹಿಂದಿರುಗಿಸಿದ್ದು, ಅಲ್ಲಿನ ಮಾಧ್ಯಮಗಳಲ್ಲಿ ಪ್ರಚಾರ ಗಳಿಸದಿದ್ದರೂ, ಹೆಗ್ಗಳಿಕೆಯ ವಿಷಯವೇ.

ಈ ರಾಜಕೀಯ ವಾದ ವಿವಾದಗಳ ನಡುವೆಯೇ ಕಳೆದು ಹೋಗಿರುವ ಒಂದು ಅಂಶವೆಂದರೆ ರಾಷ್ಟ್ರಪತಿ ಚುನಾವಣಾ ಪ್ರಕ್ರಿಯೆಯ ಘನತೆ ಮತ್ತು ಗೌರವ. ಈ ಹಿಂದೆ ನಡೆದ ಚುನಾವಣೆಗಳಲ್ಲಿ, ಅಭ್ಯರ್ಥಿಗಳು ಯಾರೇ ಆಗಿದ್ದರೂ, ಭಾರತೀಯ ಸಂವಿಧಾನದ ಬಗ್ಗೆ, ಸಂವಿಧಾನದಡಿಯಲ್ಲಿ ರಾಷ್ಟ್ರಪತಿಗಳು ವಹಿಸಬೇಕಾದ ಜವಾಬ್ದಾರಿಯುತ ಪಾತ್ರದ ಬಗ್ಗೆ ಭಾರತದ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕತೆಗಳ ಸಂರಕ್ಷಣೆಯ ಬಗ್ಗೆ ಮತ್ತು ಭಾರತದ ವಿದೇಶೀ ನೀತಿಗಳ ಬಗ್ಗೆ ಅವರ ಅಭಿಪ್ರಾಯಗಳನ್ನು ಸಂಗ್ರಹಿಸಲಾಗುತ್ತಿತ್ತು. ಆದರೆ ಪ್ರಸ್ತುತ ರಾಜಕೀಯ ಮತ್ತು ಮಾಧ್ಯಮ ಸಂಸ್ಕೃತಿಯಲ್ಲಿ ಈ ಗಂಭೀರವಾದ ಚಿಂತನೆಗಳೇ ಮಂಗಮಾಯವಾಗಿವೆ. ೨೦೦೪ರ ಚುನಾಣೆಯ ಸೋಲಿನ ನಂತರದಲ್ಲಿ ಹತಾಶ ಭಾವನೆಯಿಂದ ಸೊರಗುತ್ತಿರುವ ಭಾ.ಜ.ಪ ಮತ್ತು ಎನ್.ಡಿ.ಎ. ಮೈತ್ರಿಕೂಟವು, ಪ್ರತಿಭಾ ಪಾಟೀಲರ ಚಾರಿತ್ರ್ಯವಧೆಯಲ್ಲಿ ತೊಡಗಿವೆ. ಈ ಹಿಂದೆ ಅವರ ಮೇಲಿದ್ದ ಯಾವುದೋ ಬ್ಯಾಂಕ್ ವ್ಯವಹಾರದ ಪ್ರಕರಣವನ್ನು ಹೊರತೆಗೆದು, ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿ, ವ್ಯತಿರಿಕ್ತವಾದ ತೀರ್ಪು ಬಂದ ನಂತರ ಇಂಗು ತಿಂದ ಮಂಗನಂತಾಗಿ ಭಾ.ಜ.ಪ ಪರದಾಡುತ್ತಿದೆ. ಇತ್ತ ಕಾಂಗ್ರೆಸ್ ಮತ್ತು ಎಡಪಕ್ಷಗಳ ವಕ್ತಾರರು, ತಮ್ಮ ಪಕ್ಷದಲ್ಲೇ ಆಗಲೀ, ದೇಶದಲ್ಲೇ ಆಗಲೀ, ಇನ್ನಾರೂ ಅಭ್ಯರ್ಥಿಗಳೇ ಇಲ್ಲವೇನೋ ಎಂಬಂತೆ ಪ್ರತಿಭಾ ಪಾಟೀಲರನ್ನು ಬೆಂಬಲಿಸುತ್ತಿರುವುದು, ಅವರ ಮೇಲಿನ ಆರೋಪಗಳನ್ನು ಸುಳ್ಳೆಂದು ತಳ್ಳಿ ಹಾಕುತ್ತಿರುವುದೂ, ರಾಜಕೀಯ ಲಂಪಟತನವನ್ನು ತೋರುತ್ತದೆ.

ಇದಕ್ಕಿಂತಲೂ ಹೆಚ್ಚು ದುರಂತವೆಂದರೆ, ಈ ಬಾರಿಯ ಚುನಾವಣೆಗಳಲ್ಲಿ, ಪ್ರಾಂತೀಯ ಭಾವನೆಗಳು, ಭಾಷೆ, ಜಾತಿ ಪ್ರಮುಖ ಪಾತ್ರ ವಹಿಸುತ್ತಿವೆ. ಪ್ರತಿಭಾ ಪಾಟೀಲರು ಅಭ್ಯರ್ಥಿಯಾಗಿ ಆಯ್ಕೆಯಾದ ಕೂಡಲೇ "ಮುನ್ನೂರು ವರ್ಷಗಳ ನಂತರ ಮರಾಠರು ದೆಹಲಿಯ ಗದ್ದುಗೆ ಏರುತ್ತಿದ್ದಾರೆ. ಕೊನೆಗೂ ಮರಾಠಾ ಸೂರ್ಯ ಉದಯಿಸಿದ್ದಾನೆ" ಎಂಬ ಎಸ್ಸೆಮ್ಮೆಸ್‌ಗಳು ತಾಂಡವವಾಡಿದ್ದವು. ಎನ್.ಡಿ.ಎ. ಮೈತ್ರಿಕೂಟದಲ್ಲಿನ ಪ್ರಮುಖ ಪಕ್ಷವಾದ

'ಸಂವಾದ'ದ ಅಭಿನಂದನೆ

ದೇಶದ ಮೊದಲ ಮಹಿಳಾ ರಾಷ್ಟ್ರಪತಿಯಾಗಿ ಆಯ್ಕೆಯಾಗುವ ಮೂಲಕ ಯುಪಿಎ–ಎಡರಂಗದ ಅಭ್ಯರ್ಥಿ ಪ್ರತಿಭಾ ಪಾಟೀಲ್ ಇತಿಹಾಸ ನಿರ್ಮಿಸಿದ್ದಾರೆ.

ನಿರೀಕ್ಷೆಯಂತೆ ತಮ್ಮ ಪ್ರತಿಸ್ಪರ್ಧಿ ಎನ್‌ಡಿಎ ಬೆಂಬಲಿತ ಭೈರೋನ್ ಸಿಂಗ್ ಶೆಖಾವತ್ ಅವರನ್ನು ೩ ಲಕ್ಷಕ್ಕೂ ಅಧಿಕ ಮತಗಳ ಅಂತರದಿಂದ ಸೋಲಿಸಿ ಪ್ರತಿಭಾ ಜಯ ಗಳಿಸಿದ್ದಾರೆ.

ಪತ್ರಿಕೆ ಅಚ್ಚಿಗೆ ಹೋಗುವ ಸಂದರ್ಭದಲ್ಲಿ ರಾಷ್ಟ್ರಪತಿ ಚುನಾವಣಾ ಫಲಿತಾಂಶ ಬಂದಿದ್ದು ಜುಲೈ ೨೫ರಂದು ಪ್ರತಿಭಾ ಪಾಟೀಲ್ ನೂತನ ರಾಷ್ಟ್ರಪತಿಯಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ಸ್ವಾತಂತ್ರ್ಯ ಬಂದು ೬೦ ವರ್ಷಗಳ ಬಳಿಕ ದೇಶದ ಅತ್ಯುನ್ನತ ಹುದ್ದೆಗೆ ಏರಿದ ಮೊದಲ ಮಹಿಳೆ ಎಂಬ ಗೌರವಕ್ಕೆ ಪಾತ್ರರಾಗಿರುವ ಪ್ರತಿಭಾ ಪಾಟೀಲ್ ಅವರಿಗೆ "ಸಂವಾದ" ಅಭಿನಂದನೆ ಸಲ್ಲಿಸುತ್ತದೆ.

ಸುಮಾರು ೪೦ ವರ್ಷಗಳ ರಾಜಕೀಯ ಅನುಭವ ಹೊಂದಿರುವ ಪ್ರತಿಭಾ ಪಾಟೀಲ್ ಅತ್ಯುತ್ತಮ ರಾಷ್ಟ್ರಪತಿ ಎಂಬುದನ್ನು ಸಾಧಿಸಿ ತೋರಿಸಲಿ ಎಂದು "ಸಂವಾದ" ಹಾರೈಸುತ್ತದೆ.

ಶಿವಸೇನಾ ಸಹ, ಸೋನಿಯಾಗಾಂಧಿಯವರ ಆಯ್ಕೆ ಎಂಬ ಆರೋಪವನ್ನೂ ಲೆಕ್ಕಿಸಿದೆ, ಮರಾಠಿಗರೆಂಬ ಒಂದೇ ಕಾರಣಕ್ಕೆ ಪ್ರತಿಭಾ ಪಾಟೀಲರಿಗೆ ಬೆಂಬಲ ಸೂಚಿಸಿರುವುದು ದುರಂತಮಯ. ಶಿವಸೇನೆಯ ಈ ನಿರ್ಧಾರದಿಂದ ಎನ್.ಡಿ.ಎ. ಒಕ್ಕೂಟದಲ್ಲಿಯೂ ಒಡಕುಂಟಾಗಿದೆ. ಬಲ್ಲ ರಾಜಕೀಯ ಮೂಲಗಳ ಪ್ರಕಾರ, ಪ್ರತಿಭಾರ ಆಯ್ಕೆಗೆ ಅವರು ಮರಾಠಿಗರೆಂಬ ಅಂಶ ಒಂದೆಡೆಯಾದರೆ, ಅವರ ಪತಿ ಶೆಖಾವತ್ ಕುಟುಂಬಕ್ಕೆ ಸೇರಿದವರಾಗಿದ್ದು. ಉಪರಾಷ್ಟ್ರಪತಿ ಶೆಖಾವತ್‌ರವರಿಗೆ ಉತ್ತಮ ಪೈಪೋಟಿ ನೀಡಬಲ್ಲರೆಂಬ ಅಂಶವೂ ಸೇರಿದೆ. ಇನ್ನೊಂದೆಡೆ, ರಾಜಸ್ತಾನದಲ್ಲಿ ರಜಪೂತರು, ಇಬ್ಬರು ಅಭ್ಯರ್ಥಿಗಳೂ ತಮ್ಮ ರಾಜ್ಯದ ಶೆಖಾವತ್ ಕುಟುಂಬಕ್ಕೆ, ಅರ್ಥಾತ್, ರಜಪೂತ ವಂಶಕ್ಕೆ ಸೇರಿದವರೆಂದು ಹೆಮ್ಮೆಪಡುತ್ತಿದ್ದಾರೆ. ಯಾವುದೇ ಒಂದು ಜಾತಿಯ ಪ್ರತಿಪಾದನೆಯ ಮೇಲೆ ರಾಷ್ಟ್ರಪತಿ ಚುನಾವಣೆ ನಡೆಯುತ್ತಿರುವುದು, ಜಾತ್ಯತೀತ ಸಂವಿಧಾನಕ್ಕೆ ಅವಮಾನವಲ್ಲವೇ?

ಪ್ರತಿಭಾ ಪಾಟೀಲರ ಆಯ್ಕೆಯ ಹಿಂದೆ ಸೋನಿಯಾರವರ ಕೈವಾಡವೇ ಇದ್ದರೂ ಸಹ, ಒಮ್ಮೆ ಅವರು ರಾಷ್ಟ್ರಪತಿ ಸ್ಥಾನಕ್ಕೆ ಅಭ್ಯರ್ಥಿಯಾಗಿ ಆಯ್ಕೆಯಾದ ನಂತರ, ಅವರು ಕಳಂಕಿತ ರಾಜಕಾರಣಿ ಎಂದು ನಿರೂಪಿಸಲು ಭಾ.ಜ.ಪ ಮತ್ತು ಮಿತ್ರ ಪಕ್ಷಗಳು ಹರಸಾಹಸ ನಡೆಸುತ್ತಿರುವುದು ಇಡೀ ಪ್ರಕ್ರಿಯೆಯನ್ನು ಕಳಂಕಮಯವಾಗಿಸಿದೆ. ಪ್ರತಿಭಾ ಪಾಟೀಲರು ನಡೆಸುತ್ತಿದ್ದ ಸಹಕಾರಿ ಬ್ಯಾಂಕಿನ ದಿವಾಳಿ ಪ್ರಕರಣ, ಅವರ ಸೋದರನ ವಿರುದ್ಧ ಕೊಲೆ ಮೊಕದ್ದಮೆ ಮುಂತಾದವುಗಳನ್ನು ಹೊರಗೆಳೆಯುವುದರ ಮೂಲಕ ಪ್ರತಿಭಾ ಪಾಟೀಲರು ರಾಷ್ಟ್ರಪತಿ ಹುದ್ದೆಗೆ ಅರ್ಹರಲ್ಲ ಎಂದು ಪ್ರತಿಪಾದಿಸುತ್ತಿರುವ ಭಾ.ಜ.ಪ, ಆರು ದಶಕಗಳ ಕಾಲ, ತಮ್ಮದೇ ಪಕ್ಷದ ಹಿಂದುತ್ವವಾದವನ್ನು, ಸಂಘ ಪರಿವಾರದ ಫ್ಯಾಸಿಸ್ಟ್ ಧೋರಣೆಗಳನ್ನು ಬೆಂಬಲಿಸಿಕೊಂಡೇ ಬಂದು, ಅನಿವಾರ್ಯ ಕಾರಣಗಳಿಗಾಗಿ, ಉಪರಾಷ್ಟ್ರಪತಿಯಾಗಿ ಆಯ್ಕೆಯಾದ ಶೆಖಾವತ್‌ರವರನ್ನು ಹೇಗೆ ಯೋಗ್ಯರೆಂದು ಪರಿಗಣಿಸುತ್ತದೆ? ಒಂದು ರೀತಿಯಲ್ಲಿ ೨೦೦೨ರ ರಾಷ್ಟ್ರಪತಿ ಚುನಾವಣೆಯಲ್ಲಿ ಡಾ॥ ಅಬ್ದುಲ್ ಕಲಾಂರವರೂ ಸಹ ಕೊನೆ ಘಳಿಗೆಯಲ್ಲಿ ಆಯ್ಕೆಯಾದವರೇ ಎಂಬ ಅಂಶವನ್ನು ಇಲ್ಲಿ ಸ್ಮರಿಸಬಹುದು. ಭಾ.ಜ.ಪದ ಅಭ್ಯರ್ಥಿಯಾಗಿದ್ದ ಪಿ.ಸಿ. ಅಲೆಕ್ಸಾಂಡರ್ ಮಿತ್ರ ಪಕ್ಷಗಳಿಗೆ ಬೇಕಿರಲಿಲ್ಲ, ಇನ್ನೊಂದೆಡೆ ಅಂದಿನ ಉಪರಾಷ್ಟ್ರಪತಿ ಕೃಷ್ಣಕಾಂತ್ ಭಾ.ಜ.ಪಕ್ಕೆ ಬೇಕಿರಲಿಲ್ಲ. ಈ ಹಂತದಲ್ಲಿ ಎಲ್ಲರ ಒಪ್ಪಿಗೆ ಪಡೆದ ಅಭ್ಯರ್ಥಿಯಾಗಿ ಡಾ॥ ಕಲಾಂ ಅಂದು ಆಯ್ಕೆಯಾಗಿದ್ದರು.

ಈ ಬಾರಿಯ ಚುನಾವಣಾ ಪ್ರಕ್ರಿಯೆಯಲ್ಲಿ ಮಾಜಿ ಮುಖ್ಯಮಂತ್ರಿಗಳ ಸಂಘಟನೆ, ಅಥವಾ ತೃತೀಯ ರಂಗದ ಪಾತ್ರವನ್ನೂ ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಸೋನಿಯಾಗಾಂಧಿಯ ಕೃಪಾಕಟಾಕ್ಷದ ಪ್ರತಿಭಾ ಪಾಟೀಲರನ್ನೂ ಬೆಂಬಲಿಸಲಾಗದೆ, ಸಂಘ ಪರಿವಾರಕ್ಕೆ ಸೇರಿದ ಶೆಖಾವತ್‌ರವನ್ನೂ ಬೆಂಬಲಿಸಲಾಗದೆ, "ಇತ್ತ ದರಿ ಅತ್ತ ಪುಲಿ" ಎಂಬ ಸೂಕ್ಷ್ಮದಲ್ಲಿ ಸಿಲುಕಿದ್ದ ತೃತೀಯ ರಂಗಕ್ಕೆ ಬೇರಾವ ಅಭ್ಯರ್ಥಿಯೇ ದೊರೆಯದೆ ಅಬ್ದುಲ್ ಕಲಾಂರವರ ಮೊರೆ ಹೋಗಿದ್ದು ಒಂದು ತಮಾಷೆಯ ಪ್ರಸಂಗವಾಗಿತ್ತು. ಅಲ್ಲಿಯವರೆಗೂ ತಾವು ಮತ್ತೊಮ್ಮೆ ಸ್ಪರ್ಧಿಸುವುದಿಲ್ಲವೆಂದೇ ಹೇಳುತ್ತಿದ್ದ ಡಾ॥ ಅಬ್ದುಲ್ ಕಲಾಂರವರು ಹಠಾತ್ತನೆ ಸ್ಪರ್ಧಿಸಲು ಸಿದ್ಧರಾಗಿದ್ದೂ ರಾಜಕೀಯ ವಲ

ಯಗಳಲ್ಲಿ ಅಚ್ಚರಿ ಮೂಡಿಸಿತ್ತು. ಈ ಹಂತದಲ್ಲಿ ಡಾ॥ ಕಲಾಂರವರು ಸಹ ಕೊಂಚ ವಿಚಲಿತರಾಗಿದ್ದುದು ಸಹಜವೇ ಆಗಿತ್ತು. ಈಗ ತೃತೀಯ ರಂಗದ ನಾಯಕರು ಚುನಾವಣೆಯಲ್ಲಿ ತಟಸ್ಥ ನಿಲುವು ತಾಳಲು ನಿರ್ಧರಿಸಿರುವುದು, ರಾಜಕೀಯ ಅರಾಜಕತೆಯ ಪರಾಕಾಷ್ಠೆ. ಎಂದಷ್ಟೇ ಹೇಳಬಹುದು. ದೇಶದ ಅತ್ಯುನ್ನತ ಹುದ್ದೆಗೆ ನಡೆಯುವ ಚುನಾವಣೆಯಲ್ಲಿ ತಮ್ಮ ನೈತಿಕ ಜವಾಬ್ದಾರಿ ಇದೆ ಎಂಬುದನ್ನು ಈ ಪಕ್ಷಗಳು ಮರೆತಂತಿದೆ.

ಹಾಲಿ ರಾಷ್ಟ್ರಪತಿ ಕಲಾಂರವರನ್ನು, ಕೆ.ಆರ್. ನಾರಾಯಣನ್‌ರವರೊಡನೆ ಹೋಲಿಸಬೇಡಿ ಎಂದು ಸುಷ್ಮಾ ಸ್ವಾರಾಜ್ ಹೇಳಿದ್ದರೂ, ಈ ಸಂದರ್ಭದಲ್ಲಿ ಹೋಲಿಕೆ ಅಗತ್ಯವೆನಿಸುತ್ತದೆ. ನಾರಾಯಣನ್‌ರವರು ತಮ್ಮ ಅವಧಿಯಲ್ಲಿ ಎರಡು ಬಾರಿ ಕೇಂದ್ರ ಮಂತ್ರಿ ಮಂಡಲದ ನಿರ್ಣಯಗಳನ್ನು ಒಪ್ಪಿಗೆ ಸೂಚಿಸದೆ ಹಿಂದಕ್ಕೆ ಕಳುಹಿಸಿದ್ದರು. ವೀರ ಸಾವರ್ಕರ್‌ರವರಿಗೆ ಭಾರತ ರತ್ನ ಪ್ರಶಸ್ತಿ ನೀಡುವ ಪ್ರಸ್ತಾಪ ಬಂದಾಗ ನಿರಾಕರಿಸಿದ್ದರು, ಗುಜರಾತ್ ಗಲಭೆಗಳ ಬಗ್ಗೆ "ಇದೊಂದು ರಾಷ್ಟ್ರ ಮಟ್ಟದ ಗಂಭೀರ ಸಾಮಾಜಿಕ ಬಿಕ್ಕಟ್ಟಿನ ಪರಿಸ್ಥಿತಿ" ಎಂದು ನಿರ್ಭಯದಿಂದ ಹೇಳಿಕೆ ನೀಡಿದ್ದರು. ಗುಜರಾತ್ ಹತ್ಯಾಕಾಂಡವನ್ನು ನಿಲ್ಲಿಸಲು ಸೇನೆಯನ್ನು ಉಪಯೋಗಿಸಲೂ ವಾಜಪೇಯಿಯವರಿಗೆ ಪತ್ರ ಬರೆದಿದ್ದುಂಟು. ಈ ಪತ್ರವೇ ಅವರ ಎರಡನೇ ಅವಧಿಗೆ ತೊಡಕಾಯಿತೆಂಬ ಅಂಶ ಬಹುತೇಕ ಜನತೆಗೆ ತಿಳಿದಿರಲಿಕ್ಕಿಲ್ಲ.

ಹಾಲಿ ರಾಷ್ಟ್ರಪತಿ ಡಾ॥ ಅಬ್ದುಲ್ ಕಲಾಂರವರ ಹಿರಿಮೆ ಎಂದರೆ ಅವರು, ಸ್ವತಂತ್ರ ಭಾರತದಲ್ಲಿ, ಪ್ರಥಮ ಬಾರಿಗೆ ರಾಷ್ಟ್ರಪತಿ ಹುದ್ದೆಯನ್ನು ಜನತೆಯ ಸಮೀಪಕ್ಕೆ ಕೊಂಡೊಯ್ದಿದ್ದರು. ಶಾಲಾ ಮಕ್ಕಳೊಡನೆ ಅವರು ಬೆರೆತು, ಸಂಭಾಷಣೆಗಳನ್ನು ನಡೆಸುತ್ತಿದ್ದ ರೀತಿ, ಮುಂಬರುವ ರಾಷ್ಟ್ರಪತಿಗಳಿಗೆ ಮಾರ್ಗದರ್ಶಕವೆಂದರೂ ಅತಿಶಯೋಕ್ತಿಯಲ್ಲ. ರಾಜಕಾರಣಿಯಲ್ಲದ ವ್ಯಕ್ತಿ ರಾಷ್ಟ್ರದ ಉನ್ನತ ಹುದ್ದೆ ಅಲಂಕರಿಸಿದಲ್ಲಿ, ಪರಿಣಾಮ ಹೇಗಿರಬಹುದೆಂಬ ಅಂಶವನ್ನು ಕಲಾಂರವರು ತಮ್ಮ ಘನತೆಯಿಂದ, ಜನಪರ ನಿಲುವುಗಳಿಂದ ವ್ಯಕ್ತಪಡಿಸಿದ್ದಾರೆ. ಆದರೂ ಕಲಾಂರವರ ಅವಧಿಯಲ್ಲಿ ಕಪ್ಪು ಚುಕ್ಕೆಗಳಿಲ್ಲವೆಂದು ಹೇಳಲಾಗುವುದಿಲ್ಲ. ಬಿಹಾರ ವಿಧಾನ ಸಭೆಯ ವಿಸರ್ಜನೆ, ಆ ತೀರ್ಮಾನ ಸಂವಿಧಾನದ ಉಲ್ಲಂಘನೆ ಎಂಬ ಸರ್ವೋಚ್ಚ ನ್ಯಾಯಾಲಯದ ತೀರ್ಪು, ಸಂಸತ್ತಿನ ಕೇಂದ್ರ ಸಭಾಂಗಣದಲ್ಲಿ, ಗಾಂಧೀಜಿ ಭಾವಚಿತ್ರದ ಎದುರಿನಲ್ಲೇ ಅವರ ಹತ್ಯೆಯಲ್ಲಿ ಭಾಗಿಯಾಗಿದ್ದ ವೀರ ಸಾವರ್ಕರ್‌ರವರ ಭಾವಚಿತ್ರದ ಅನಾವರಣ, ಈ ಪ್ರಸಂಗಗಳನ್ನು ಕಲಾಂರವರ ಅವಧಿಯ ಕೆಲವು ಅಪಭ್ರಂಶಗಳೆಂದು ಹೇಳಬಹುದು. ಆದಾಗ್ಯೂ, ಇನ್ನೊಂದು ಅವಧಿಗೆ ಕಲಾಂರವರನ್ನು ಮುಂದುವರೆಸುವುದರಲ್ಲಿ ಯಾವುದೇ ಗೊಂದಲ ಬೇಕಿರಲಿಲ್ಲ. ಸಾಮಾನ್ಯ ಜನತೆಯ ದೃಷ್ಟಿಯಲ್ಲಿ ರಾಷ್ಟ್ರಪತಿಯಾಗಿರದೆ, ಪುಟ್ಟ ಮಕ್ಕಳಿಂದ ಹಿರಿಯ ನಾಗರಿಕರವರೆಗೂ ನೆಚ್ಚಿನ ಮೇಷ್ಟ್ರು ಆಗಿದ್ದ ಕಲಾಂ ಸ್ವತಂತ್ರ ಭಾರತ ಕಂಡ ಅಪೂರ್ವ ವ್ಯಕ್ತಿತ್ವಗಳಲ್ಲಿ ಒಬ್ಬರು.

ಆದರೆ ನಮ್ಮ ರಾಜಕೀಯ ಪಕ್ಷಗಳ ಚಿಂತನೆಗಳು, ಜನರ ಭಾವನೆಗಳಿಗಿಂತಲೂ, ರಾಜಕೀಯ ಲಾಭ ನಷ್ಟಗಳ ಸುತ್ತ ಗಿರಕಿ ಹೊಡೆಯುತ್ತಿರುತ್ತವೆ. ರಾಷ್ಟ್ರಪತಿ ಸ್ಥಾನ ಅಲಂಕರಿಸುವವರು ರಾಜಕೀಯದಲ್ಲಿ ಸಕ್ರಿಯವಾಗಿ ಪಳಗಿದವರೇ ಆಗಿರಬೇಕೆಂಬ ಸಿ.ಪಿ.ಎಂ ಪಕ್ಷದ ನಿಲುವು ಈ ಅಂಶವನ್ನು ನಿರೂಪಿಸುತ್ತದೆ. ಕೆ.ಆರ್. ನಾರಾಯಣನ್‌ರವರನ್ನು ರಾಷ್ಟ್ರಪತಿಯಾಗಿ ಆಯ್ಕೆ ಮಾಡಿದಾಗ, ಒಬ್ಬ ದಲಿತ ವ್ಯಕ್ತಿಯನ್ನು ಆಯ್ಕೆ ಮಾಡಿದ್ದಕ್ಕಾಗಿ, ಕಲಾಂರವರ ಆಯ್ಕೆಯಾದಾಗ ಮುಸ್ಲಿಂ ವ್ಯಕ್ತಿಯನ್ನು ಆರಿಸಿದ್ದಕ್ಕಾಗಿ ಭಾ.ಜ.ಪ. ಮತ್ತು ಮಿತ್ರ ಪಕ್ಷಗಳು ತಮ್ಮ ಬೆನ್ನು ತಟ್ಟಿಕೊಂಡರೆ, ಈಗ ಮಹಿಳೆಯನ್ನು ಆಯ್ಕೆ ಮಾಡಿ ಸ್ವಪ್ರಶಂಸೆ ಮಾಡಿಕೊಳ್ಳಲು ಕಾಂಗ್ರೆಸ್ ವೇದಿಕೆ ಸಜ್ಜುಗೊಳಿಸುತ್ತಿದೆ. ಪ್ರತಿಭಾ ಪಾಟೀಲ್ ಮಹಿಳೆ ಮಾತ್ರವಲ್ಲ, ಹೆಮ್ಮೆಯ ಮರಾಠರಾಗಿ, ರಜಪೂತ ವಂಶಜರಾಗಿ, ಕಾಂಗ್ರೆಸ್ ಪಕ್ಷದ ಹಿರಿಮೆ ಹೆಚ್ಚಿಸಲಿದ್ದಾರೆ.

ಇಡೀ ರಾಷ್ಟ್ರಪತಿ ಚುನಾವಣಾ ಪ್ರಕ್ರಿಯೆಯ ದುರಂತ ಇದೇ ಆಗಿದೆ. ಒಂದು ಬಾರಿ ರಾಷ್ಟ್ರಪತಿಯಾಗಿ ಚುನಾಯಿತರಾದ ಮೇಲೆ, ಯಾವುದೇ ವ್ಯಕ್ತಿಯಾದರೂ ತಮ್ಮ ಎಲ್ಲಾ ಪಕ್ಷ ಭೇದಗಳನ್ನೂ ಮರೆತು, ನಿಷ್ಪಕ್ಷಪಾತವಾಗಿ, ಸಂವಿಧಾನ ನಿಷ್ಠೆಯಿಂದ ನಡೆದುಕೊಳ್ಳಬೇಕಾಗುತ್ತದೆ. ಭಾರತೀಯ ಸಂವಿಧಾನದಲ್ಲಿ ರಾಷ್ಟ್ರಪತಿಗಳ ಸ್ಥಾನ ಅಲಂಕಾರಿಕವಾದರೂ, ಕೆಲವೊಮ್ಮೆ ಪ್ರಧಾನಮಂತ್ರಿಗಳಿಗೆ, ಮಂತ್ರಿ ಮಂಡಲಕ್ಕೆ ಸೂಕ್ತ ನಿರ್ದೇಶನ ನೀಡಬೇಕಾಗುತ್ತದೆ. ರಾಜಕೀಯ ಅನಿಶ್ಚಿತತೆ, ಸಂವಿಧಾನಿಕ ಬಿಕ್ಕಟ್ಟು, ಗಡಿ ಸಮಸ್ಯೆ, ಅಂತರ್ ರಾಜ್ಯಗಳ ಸಮಸ್ಯೆಗಳು ಎದುರಾದಾಗ ರಾಷ್ಟ್ರಪತಿಗಳ ತೀರ್ಮಾನ ಮಹತ್ವ ಗಳಿಸುತ್ತದೆ. ಹಾಗಾಗಿ, ರಾಷ್ಟ್ರಪತಿಗಳ ಹುದ್ದೆ ಅಲಂಕರಿಸಲು, ರಾಜಕೀಯ ಪ್ರಭಾವ, ವರ್ಚಸ್ಸು ಅನುಭವಕ್ಕಿಂತಲೂ ಹೆಚ್ಚಾಗಿ, ಸಂವಿಧಾನದ ಬಗ್ಗೆ ಜ್ಞಾನ, ಬದ್ಧತೆ, ರಾಷ್ಟ್ರದ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಹಿನ್ನೆಲೆಗಳ ಬಗ್ಗೆ ತಿಳಿವಳಿಕೆ ಮತ್ತು ಎಲ್ಲಕ್ಕಿಂತಲೂ ಹೆಚ್ಚಾಗಿ, ಪಕ್ಷಾತೀತವಾಗಿ, ಸಂವಿಧಾನ ಬದ್ಧವಾಗಿ ಜನಪರವಾದ ನಿಲುವುಗಳನ್ನು ಕೈಗೊಳ್ಳುವ ಸ್ಥೈರ್ಯ ಇರಬೇಕಾಗುತ್ತದೆ. ಈ ಎಲ್ಲ ಅಂಶಗಳು ಪ್ರತಿಭಾ ಪಾಟೀಲರಲ್ಲಿ ಇದೆ ಅಥವಾ ಇಲ್ಲ ಎಂದು ಹೇಳಲು ಯಾವುದೇ ಪುರಾವೆಗಳಿಲ್ಲ. ಆದರೆ ರಾಜಕೀಯ ರಂಗದಿಂದ ಹೊರತಾದ ಅನೇಕ ಮುತ್ಸದ್ದಿಗಳು ನಮ್ಮ ದೇಶದಲ್ಲಿ ಈ ಹುದ್ದೆಯನ್ನಲಂಕರಿಸಲು ಲಭ್ಯವಿದ್ದಾರೆ, ಎಂದು ನಿಸ್ಸಂದೇಹವಾಗಿ ಹೇಳಬಹುದು.

ತಾತ್ವಿಕವಾಗಿ ರಾಷ್ಟ್ರಪತಿ ಹುದ್ದೆ ಒಂದು ರಾಜಕೀಯ ಹುದ್ದೆಯೇ. ಅಂತಾರಾಷ್ಟ್ರೀಯ ಮಟ್ಟದಲ್ಲಿ ರಾಷ್ಟ್ರವನ್ನು ಪ್ರತಿನಿಧಿಸುವುದೇ ಅಲ್ಲದೆ ಅನೇಕ ಆಂತರಿಕ ವಿಷಯಗಳಲ್ಲಿ ಮತ್ತು ಆಳ್ವಿಕೆಯಲ್ಲಿ ರಾಷ್ಟ್ರಪತಿಗಳ ನಿರ್ಧಾರ ಮಹತ್ವವುಳ್ಳದ್ದಾಗಿರುತ್ತದೆ. ಯಾವುದೇ ಒಂದು ವಿಷಯದ ಬಗ್ಗೆ ಸಾರ್ವಜನಿಕ ಅಭಿಪ್ರಾಯ ಮೂಡಿಸುವುದರಲ್ಲಿ ರಾಷ್ಟ್ರಪತಿಗಳ ಪಾತ್ರ ಮಹತ್ವವುಳ್ಳದ್ದಾಗಿರುತ್ತದೆ. ಭಾರತದ ಪ್ರಜಾತಂತ್ರದ ಅಳಿವು ಉಳಿವು ಹಲವಾರು ಸಂದರ್ಭಗಳಲ್ಲಿ ರಾಷ್ಟ್ರಪತಿಗಳ ನಿರ್ಧಾರವನ್ನು ಅವಲಂಬಿಸಿರುವುದನ್ನು ಇತಿಹಾಸದಲ್ಲಿ ಕಂಡಿದ್ದೇವೆ. ತುರ್ತು ಪರಿಸ್ಥಿತಿ ಒಂದು ಚಾರಿತ್ರಿಕ ನಿದರ್ಶನವಾದರೆ, ಸಿಪಾಯಿ ದಂಗೆಯ ೧೫೦ನೆಯ ವಾರ್ಷಿಕೋತ್ಸವದ ಸಂದರ್ಭದಲ್ಲಿ, ಡಾ॥ ಅಬ್ದುಲ್ ಕಲಾಂರವರು, ದೇಶದಲ್ಲಿ ದ್ವಿಪಕ್ಷೀಯ ವ್ಯವಸ್ಥೆ ಇರಬೇಕೆಂದು ಹೇಳಿಕೆ ನೀಡಿದ್ದು ಇತ್ತೀಚಿನ ನಿದರ್ಶನವಷ್ಟೆ. ಹಾಗಾಗಿ ಭಾರತದ ರಾಷ್ಟ್ರಪತಿಗಳ ಚುನಾವಣೆ ಜನತೆಯಲ್ಲಿ ಸಂವಿಧಾನದ ಬಗ್ಗೆ ವಿಶ್ವಾಸ ಮೂಡಿಸುವ ನಿಟ್ಟಿನಲ್ಲಿ ಸಾಗಬೇಕಾಗಿದೆ. ವೈಯಕ್ತಿಕ ನೆಲೆಗಟ್ಟಿನಲ್ಲಿ ರಾಷ್ಟ್ರಪತಿ ಚುನಾವಣಾ ಅಭ್ಯರ್ಥಿಗಳ ಚಾರಿತ್ರ್ಯವಧೆ ಮಾಡುವ ಭಾ.ಜ.ಪದ ರಾಜಕಾರಣವಾಗಲೀ, ತಮ್ಮ ಪಕ್ಷದ ರಾಜಕೀಯ ತಂತ್ರಗಳಿಗೆ ಅನುಕೂಲವಾಗುವಂತಹ ಅಭ್ಯರ್ಥಿಯನ್ನು ಆಯ್ಕೆ ಮಾಡುವ ಕಾಂಗ್ರೆಸ್ ಪಕ್ಷದ ನೀತಿಯಾಗಲೀ ಈ ದೃಷ್ಟಿಯಿಂದ ಖಂಡನಾರ್ಹ. □

ಪರಿಚಯ



ಹೈದ್ರಾಬಾದ್ ಕರ್ನಾಟಕದ ಯುವ ಜನರ ವೇದಿಕೆಯಾಗಿರುವ "ಸಖಿ" ತ್ರೈಮಾಸಿಕ ಪತ್ರಿಕೆಯು ಯುವ ಜನರ ಅನಿಸಿಕೆ, ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಮುಕ್ತ ಅವಕಾಶ ನೀಡಿದೆ.

ಕಳೆದ ಮೂರು ವರ್ಷಗಳಿಂದ ಹೊಸಪೇಟೆಯಿಂದ ಖಾಸಗಿ ಪ್ರಸಾರಕ್ಕಾಗಿ ಪ್ರಕಟಗೊಳ್ಳುತ್ತಿರುವ ಈ ಪತ್ರಿಕೆಯನ್ನು ಡಾ. ಎಂ. ಭಾಗ್ಯಲಕ್ಷ್ಮಿ ಹಾಗೂ ಕೆ.ನೇತ್ರಾವತಿ ಹೊರ ತರುತ್ತಿದ್ದಾರೆ.

ಸೌಮ್ಯ, ಪ್ರಿಯಾಂಕ ರೆಬೆಲ್ಲೋ, ಕನಕಮ್ಮ ಮುತ್ತಾಳ್, ಕೊಟ್ರಮ್ಮ ಹಾಗೂ ಕಮಲ ಅವರೂ ಇವರೊಂದಿಗೆ ಶ್ರಮಿಸುತ್ತಿದ್ದಾರೆ.

ಹೈದ್ರಾಬಾದ್ ಕರ್ನಾಟಕದ ಯುವ ಜನತೆ ರಚಿಸಿದ ಕತೆ, ಕವನ, ಲೇಖನ, ಹನಿಗವನಗಳು, ವ್ಯಂಗ್ಯಚಿತ್ರಗಳು, ಅನುಭವ ಕಥನಗಳು ಇಲ್ಲಿವೆ.

ಹೊಸ ಲೇಖಕರು ಪ್ರಕಟಿಸಿದ ಪುಸ್ತಕ ವಿಮರ್ಶೆಗಳಿಗೂ ಸಖಿಯಲ್ಲಿ ಆಹ್ವಾನವಿದೆ. ಸಖಿಗೆ ಚಂದಾ ಹಣ ನಿಗದಿ ಮಾಡಿರುವುದಿಲ್ಲ. ಕಾಲೇಜು ಹಾಗೂ ವಿಶ್ವವಿದ್ಯಾಲಯಗಳಲ್ಲಿ ಸಂಕಷ್ಟದಲ್ಲಿ ವಿದ್ಯಾಭ್ಯಾಸ ಮುಂದುವರಿಸುತ್ತಿರುವ ವಿದ್ಯಾರ್ಥಿಗಳಿಗಾಗಿ ಉಚಿತವಾಗಿ ಈ ಪತ್ರಿಕೆ ತಲುಪಿಸುವುದು ಸಖಿಯ ಉದ್ದೇಶ. ಸಖಿಯ ಆರ್ಥಿಕ ಸ್ವಾಯತ್ತತೆಗಾಗಿ ಸ್ಥಾಯಿ ನಿಧಿ ಸ್ಥಾಪಿಸಲು ನಿರ್ಧರಿಸಿದ್ದು ಆಸಕ್ತರು ೫೦೦ ರೂ.ಗಳಿಗಿಂತ ಮೇಲ್ಪಟ್ಟು ವಂತಿಗೆ ನೀಡುವಂತೆ ಸಖಿ ಬಳಗ ಮನವಿ ಮಾಡಿದೆ. ಆಸಕ್ತರು ಸಂಪರ್ಕಿಸಬೇಕಾದ ವಿಳಾಸ: ಸಖಿ "ಏಕಾಂತ ನಿಲಯ", ಡಿ.ಇಡಿ ಕಾಲೇಜು ಎದುರು, ಸದಾಶಿವನಗರ, ಹೊಸಪೇಟೆ, ಬಳ್ಳಾರಿ ಜಿಲ್ಲೆ. ಫೋ-೮೦೩೯೪-೨೨೫೦೮೫

ತಪ್ಪು ಕಲ್ಪನೆಗೆ ಹೆದರಿ ಕೊಪ್ಪ ಶಾಲೆ ಬರಿದು

ಕೊಪ್ಪ, ಜೂ. ೧೬– ಏಡ್ಸ್ ಪೀಡಿತ ಕುಟುಂಬವೊಂದರ ಬಾಲಕಿಯ ಶಾಲಾ ಪ್ರವೇಶದಿಂದ ಶಾಲೆ ಬಾಗಿಲು ಮುಚ್ಚುವ ಪರಿಸ್ಥಿತಿ ನಿರ್ಮಾಣವಾಗಿರುವ ಘಟನೆ ಇಲ್ಲಿಗೆ ಸಮೀಪದ ಅಮ್ಮಡಿಯಿಂದ ವರದಿಯಾಗಿದೆ.

ಅಮ್ಮಡಿ ಹಿರಿಯ ಪ್ರಾಥಮಿಕ ಶಾಲೆಗೆ ಇದೇ ಗ್ರಾಮದ ಬಾಲಕಿಯೊಬ್ಬಳು ಮೇ ೨೯ರಂದು ದಾಖಲಾದಳು.

ಆ ದಿನದಿಂದಲೇ ಇತರ ಪೋಷಕರು ತಮ್ಮ ಮಕ್ಕಳನ್ನು ಶಾಲೆಯಿಂದ ಬಿಡಿಸಿ ಬೇರೆಡೆಗೆ ಕರೆದೊಯ್ಯಲು ಪ್ರಾರಂಭಿಸಿದರು.

ಶಾಲೆಯ ೧೧ ವಿದ್ಯಾರ್ಥಿಗಳಲ್ಲಿ ೮ ಮಂದಿ ಕಳೆದ ೧೫ ದಿನಗಳಲ್ಲಿ ಶಾಲೆ ಬಿಟ್ಟಿದ್ದಾರೆ. ಒಂದನೇ ತರಗತಿಗೆ ಒಬ್ಬಳು ಹಾಗೂ ೩ನೇ ತರಗತಿಗೆ ಇಬ್ಬರು ಮಕ್ಕಳು ಹಾಜರಾಗುತ್ತಿದ್ದಾರೆ. ೨, ೪ ಹಾಗೂ ೫ನೇ ತರಗತಿಯಲ್ಲಿ ಮಕ್ಕಳೇ ಇಲ್ಲ. ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷರೇ ತಮ್ಮ ಇಬ್ಬರು ಮಕ್ಕಳನ್ನು ಶಾಲೆ ಬಿಡಿಸಿದ್ದಾರೆ.

ದೇವರ ಮನೆ, ನರಸಿಂಹರಾಜಪುರಗಳಿಂದ ಈ ಗ್ರಾಮದ ಬಂಧುಗಳ ಮನೆಯಲ್ಲಿ ನೆಲಸಿ ಶಾಲೆಗೆ ಬರುತ್ತಿದ್ದ ನಾಲ್ವರು ತಮ್ಮ ತಮ್ಮ ಊರುಗಳಿಗೆ ತೆರಳಿದ್ದಾರೆ.

ಇಬ್ಬರು ಶಿಕ್ಷಕಿಯರು ಈ ಶಾಲೆಯ ೩ ಮಕ್ಕಳಿಗೆ ಪಾಠ ಪ್ರವಚನ, ಬಿಸಿ ಊಟ ಮಾಡಿ ಬಡಿಸುವ ಪರಿಸ್ಥಿತಿಯಿದೆ.

ಶಿಕ್ಷಣ ಇಲಾಖೆ ಅಧಿಕಾರಿಗಳು, ಗ್ರಾಮ ಪಂಚಾಯ್ತಿ ಸದಸ್ಯೆ ಸುಧಾಮೋಹನ್ ಹಾಗೂ ಗ್ರಾಮದ ಹಿರಿಯರು ಮನೆಮನೆಗೆ ತೆರಳಿ ಶಾಲೆಗೆ ಹಾಜರಾಗಲು ಮನವಿ ಮಾಡುತ್ತಿದ್ದರೂ ಫಲ ನೀಡಿಲ್ಲ. ನೂತನವಾಗಿ ಸೇರಿದ ಬಾಲಕಿಗೆ ಯಾವುದೇ ಕಾಯಿಲೆ ಇಲ್ಲವೆಂದು ವೈದ್ಯರೇ ದೃಢೀಕರಿಸಿದ್ದರೂ ಆಕೆಯ ಪೋಷಕರು ಏಡ್ಸ್‌ನಿಂದ ಬಾಧಿತರೆಂಬ ಗ್ರಾಮಸ್ಥರ ತಪ್ಪು ತಿಳಿವಳಿಕೆ ಹಾಗೂ ಅದು ಹರಡುವ ಭಯ ಈ ಎಲ್ಲಾ ಅನಾಹುತಕ್ಕೆ ಕಾರಣ ಎನ್ನಲಾಗಿದೆ.

ಶಾಲೆ ಬಿಡಲು ಕಾರಣಳಾದ ಏನೂ ಅರಿಯದ ಮಗು ಆರೋಗ್ಯದಿಂದ ಕೂಡಿದ್ದು ಚುರುಕು ಬುದ್ಧಿಯವಳಾಗಿದ್ದಾಳೆ. ಆಕೆಯ ತಾಯಿಗೆ ಹೆರಿಗೆ ಸಂದರ್ಭದಲ್ಲಿ ಎಚ್‌ಐವಿ ಸೋಂಕು ಇತ್ತು ಎನ್ನಲಾಗಿದ್ದರೂ ಆಕೆ ಗಟ್ಟಿಮುಟ್ಟಾಗಿದ್ದು, ಕೂಲಿ ಮಾಡಿ ಬದುಕುತ್ತಿದ್ದಾಳೆ.

ಯಾವ ರೋಗ ಲಕ್ಷಣವೂ ಆಕೆಯಲ್ಲಿ ಇಲ್ಲ. ಈ ಮಗುವಿನ ತಂದೆ ಈಕೆ ಹುಟ್ಟಿದ ಎರಡು ವರ್ಷದ ನಂತರ ಏಡ್ಸ್ ರೋಗದಿಂದ ಮೃತರಾಗಿದ್ದಾರೆ. ಜನರ ತಪ್ಪು ತಿಳಿವಳಿಕೆಯಿಂದಾಗಿ ಏಳು ವರ್ಷಗಳಿಂದ ನಡೆಯುತ್ತಿದ್ದ ಶಾಲೆಗೆ ಬೀಗ ಬೀಳುವ ಸ್ಥಿತಿ ಬಂದೊದಗಿದೆ.

(ಪ್ರಜಾವಾಣಿ)

ಹಂದಿಗೋಡು; ಅಸ್ಪೃಶ್ಯತೆ ಬೀಡು

ಶಿವಮೊಗ್ಗ, ಮೇ. ೧೬– ಮುಖ್ಯಮಂತ್ರಿ ಕುಮಾರಸ್ವಾಮಿ ತಮ್ಮ ೨೮ನೇ ಗ್ರಾಮ ವಾಸ್ತವ್ಯಕ್ಕೆ ಆಯ್ದುಕೊಂಡಿರುವ ಹಂದಿಗೋಡು ಗ್ರಾಮದಲ್ಲಿ ಅಸ್ಪೃಶ್ಯತೆ ಇನ್ನೂ ಹಸಿರಾಗಿದೆಯೇ!?

ಹೌದು ಎನ್ನುತ್ತಾರೆ ಅಲ್ಲಿಯ ದಲಿತ ಕೇರಿಯ ಮುಖ್ಯಸ್ಥ ಓಂಕಾರಪ್ಪ. ಸ್ವತಃ ಹಂದಿಗೋಡು ಕಾಯಿಲೆಗೆ ತುತ್ತಾಗಿರುವ ಓಂಕಾರಪ್ಪ, ಅಸ್ಪೃಶ್ಯತೆ ಹೋಗಲಾಡಿಸಿ ಎಂದು ಮುಖ್ಯಮಂತ್ರಿಗೆ ಮನವಿ ಮಾಡುವುದಾಗಿ ಸುದ್ದಿಗಾರರಿಗೆ ಹೇಳಿದರು.

'ಕಾಯಿಲೆ ಹಾಗೂ ಜಾತಿ ಕಾರಣಕ್ಕೆ ಕೀಳರಿಮೆಯಿಂದ ಬದುಕುವಂತಾಗಿದೆ. ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳಿಗೆ ಈ ವಿಷಯ ಗೊತ್ತಿಲ್ಲ ಎಂದಲ್ಲ. ಆದರೆ ಅವರು ಲಿಖಿತ ದೂರು ಬಯಸುತ್ತಾರೆ. ರೋಗ ಪೀಡಿತರೆಂಬ ಕಾರಣಕ್ಕೆ ನಮ್ಮನ್ನು ದೂರ ಇಡಲಾಗುತ್ತಿದೆ' ಎಂದು ನೊಂದು ಹೇಳಿದರು.

ಈ ಕೇರಿಯ ೨೬ ದಲಿತ ಕುಟುಂಬಗಳ ೧೦೦ಕ್ಕೂ ಹೆಚ್ಚು ಮಂದಿ ಮುಖ್ಯವಾಹಿನಿಯಿಂದ ದೂರ ಉಳಿಯುತ್ತಿದ್ದಾರೆ. ಕಾಯಿಲೆ ಹೆಚ್ಚಾಗಿ ಏನೂ ಕೆಲಸ ಮಾಡಲಾಗದೆ ತಿಂಗಳಿಗೆ ಬರುವ ಮಾಸಾಶನ, ಸರಕಾರಿ ಮಾತ್ರೆ ನೆಚ್ಚಿಕೊಂಡು ಜಗಲಿ ಮೇಲೆ ಕುಳಿತೇ ಇಹಲೋಕ ತ್ಯಜಿಸುವವರು ಒಂದೆಡೆಯಾದರೆ, ಇನ್ನೊಂದೆಡೆ ಮೈಯಲ್ಲಿ ಒಂದಿಷ್ಟು ಕಸುವಿದ್ದರೂ, ರೋಗದ ಕಾರಣಕ್ಕೆ ಅವರಿಗೆ ಕೂಲಿ ಕೆಲಸ ಸಿಗುತ್ತಿಲ್ಲ. ಕೆಲಸ ಸಿಕ್ಕರೂ ಇತರೆ ಜಾತಿಯವರಿಗೆ ಇರುವ ಅನುಕೂಲ ಇಲ್ಲ. ಆಹಾರ ಸೇವಿಸಲು ಪ್ಲಾಸ್ಟೀಕ ಲೋಟ, ತಟ್ಟೆ ಬಳಸಬೇಕು.

ಇಡೀ ಊರಿನ ಬಾವಿ, ಕೆರೆಗಳು ಬತ್ತಿದರೂ ನಮ್ಮ ಕೇರಿಯ ಸರಕಾರಿ ಬಾವಿಯಲ್ಲಿ ನೀರು ಇರುತ್ತದೆ, ಆದರೆ ಇಲ್ಲಿಯ ನೀರನ್ನು ಯಾರೂ ಬಳಸುವುದಿಲ್ಲ ಎಂಬ ನೋವು ವ್ಯಕ್ತಪಡಿಸಿದರು.

(ಪ್ರಜಾವಾಣಿ)

ದೇಶದಲ್ಲಿ ಶಾಲೆಗೆ ಹೋಗದ ೮೫ ಮಿಲಿಯನ್ ಮಕ್ಕಳು

ಬೆಂಗಳೂರು. ಜೂ. ೨೩. ನಮ್ಮ ದೇಶದಲ್ಲಿ ೮೫ ಮಿಲಿಯನ್ ಮಕ್ಕಳು ಶಾಲೆಗೆ ಹೋಗುತ್ತಿಲ್ಲ ಎಂದು ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷರಾದ ಡಾ॥ ಶಾಂತ ಸಿನ್ಹಾ ಇಂದು ಇಲ್ಲಿ ತಿಳಿಸಿದರು.

ಕರ್ನಾಟಕ ಬಾಲ ಕಾರ್ಮಿಕರ ಯೋಜನೆಯಡಿಯಲ್ಲಿ 'ಬಾಲ ಕಾರ್ಮಿಕರ ಸಮಸ್ಯೆ ನಿರ್ಮೂಲನೆಯಲ್ಲಿ ನಾಗರಿಕ ಸಮಾಜದ ಸಂಘಟನೆಗಳ ಪಾತ್ರ' ವಿಷಯ ಕುರಿತು ಏರ್ಪಡಿಸಿದ್ದ ರಾಜ್ಯ ಮಟ್ಟದ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಲಭ್ಯವಿರುವ ಅಂಕಿ-ಅಂಶಗಳ ಪ್ರಕಾರ ದೇಶದಲ್ಲಿ ೮೫ ಮಿಲಿಯನ್ ಮಕ್ಕಳು ಶಾಲೆಗೇ ಹೋಗುತ್ತಿಲ್ಲ. ಪ್ರಾಥಮಿಕ ಶಿಕ್ಷಣಕ್ಕೆ ದಾಖಲಾದ ಮಕ್ಕಳಲ್ಲಿ ಶೇ. ೬೬ ರಷ್ಟು ಮಕ್ಕಳು ಐದನೆ ತರಗತಿಯನ್ನೂ ಪೂರೈಸದೇ ಶಾಲೆಯನ್ನು ಬಿಡುತ್ತಿದ್ದಾರೆ ಎಂದರು.

(ಉದಯವಾಣಿ)

ನ್ಯಾಯಕ್ಕಾಗಿ ದಲಿತ ಕುಟುಂಬದ ಧರಣಿ

ಬಿಜಾಪುರ, ಏ. ೧೬– ತಾಲೂಕಿನ ಸಾರವಾಡ ಗ್ರಾಮದ ಪರಿಶಿಷ್ಟ ಕುಟುಂಬದ ಮಲ್ಲಿಕಾರ್ಜುನ ಬಟಗಿ ತನ್ನ ತಾಯಿ, ಹೆಂಡತಿ ಹಾಗೂ ಮಕ್ಕಳ ಸಮೇತ ಜಿಲ್ಲಾಧಿಕಾರಿ ಮುಂದೆ ೯ ದಿನಗಳಿಂದ ನಿರಂತರವಾಗಿ ಧರಣಿ ಸತ್ಯಾಗ್ರಹ ಕೈಗೊಂಡಿದ್ದಾರೆ.

ನಮ್ಮ ಕುಟುಂಬಕ್ಕೆ ಸವರ್ಣೀಯರಿಂದ ಆದ ಅನ್ಯಾಯ ಸರಿಪಡಿಸಿ, ನ್ಯಾಯ ಕೊಡಿಸಿ ಎಂದು ಈ ಕುಟುಂಬ ಅಂಗಲಾಚಿ ಬೇಡಿಕೊಳ್ಳುತ್ತಿದೆ.

ಸಾರವಾಡ ಗ್ರಾಮದಲ್ಲಿ ಸವರ್ಣೀಯರಿಗೆ ಸೇರಿದ ಕುಟುಂಬ ಹಾಗೂ ಪರಿಶಿಷ್ಟ ಜನಾಂಗಕ್ಕೆ ಸೇರಿದ ಬಟಗಿ ಕುಟುಂಬದ ಮಧ್ಯೆ ಸಣ್ಣ, ಪುಟ್ಟ ವಿಷಯಗಳಿಗೆ ಆಗಾಗ ಜಗಳವಾಗುತ್ತಿತ್ತು. ಅದು ಕೆಲ ದಿನಗಳು ಕಳೆದ ಬಳಿಕ ತಣ್ಣಗಾಗುತ್ತಿತ್ತು. ಎರಡೂ ಕುಟುಂಬದವರು ಮತ್ತೆ ಸೌಹಾರ್ದದಿಂದ ಬದುಕುತ್ತಿದ್ದರು. ಆದರೆ ಡಿಸೆಂಬರ್ ೧೬, ೨೦೦೬ ರಂದು ಮನೆ ಕಟ್ಟಡದ ವಿಷಯದಲ್ಲಿ ಸವರ್ಣೀಯರ ಕುಟುಂಬವೊಂದು ಪರಿಶಿಷ್ಟ ವರ್ಗದ ಬಟಗಿ ಕುಟುಂಬದವರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿತು. ಇದಾದ ಬಳಿ ೩೬–೩–೨೦೦೭ ರಂದು ಸವರ್ಣೀಯರ ಕುಟುಂಬದ ಕೆಲ ಸದಸ್ಯರು ಸಾರ್ವಜನಿಕ ಸ್ಥಳದಲ್ಲಿ ಮಲ್ಲಿಕಾರ್ಜುನ ಬಟಗಿ ಮೇಲೆ ಹಿಗ್ಗಾಮುಗ್ಗಾ ಹಲ್ಲೆ ನಡೆಸಿ ತಲೆ ಒಡೆದರು. ಈ ಎರಡೂ ಕುಟುಂಬಗಳ ನಡುವಿನ ಜಗಳ ಪದೇ ಪದೇ ಮರುಕಳಿಸುತ್ತಿರುವುದಕ್ಕೆ ಸವರ್ಣೀಯರ ಕುಟುಂಬಕ್ಕೆ ಪ್ರಭಾವಿ ರಾಜಕಾರಣಿಗಳು ತೆರೆಮರೆಯಲ್ಲಿ ಬೆಂಬಲಕ್ಕೆ ನಿಂತಿರುವುದದು ಪ್ರಮುಖ ಕಾರಣವಾಗಿದೆ ಎನ್ನಲಾಗಿದೆ.

ಸವರ್ಣೀಯರಿಂದ ಏಟು ತಿಂದು ತೀವ್ರವಾಗಿ ಗಾಯಗೊಂಡಿದ್ದ ಮಲ್ಲಿಕಾರ್ಜುನ ಬಟಗಿ ಸುಮಾರು ೨೨ ದಿನಗಳ ವರೆಗೆ ಬಿಜಾಪುರ ಸರ್ಕಾರಿ ದವಾಖಾನೆಯಲ್ಲಿ ಚಿಕಿತ್ಸೆ ಪಡೆದು ಚೇತರಿಸಿಕೊಂಡು ಧರಣಿಗೆ ಮುಂದಾಗಿದ್ದಾರೆ.

ಉಪವಾಸದಿಂದ ಬಳಲುತ್ತಿರುವ ಈ ಪರಿಶಿಷ್ಟ ಕುಟುಂಬ ಧರಣಿ ಸ್ಥಳದಲ್ಲಿಯೇ ಒಲೆ ಹೂಡಿ ಅಡುಗೆ ತಯಾರಿಸಿ ಹಸಿವು ನೀಗಿಕೊಳ್ಳುತ್ತಿದೆ.

(ಕನ್ನಡಪ್ರಭ)

ರಾಮದಾಸ್: ಸಾಯುವ ತನಕ ಪ್ರತಿರೋಧ

ಮಾತಿನ ರಂಗು

ರಹಮತ್ ತರೀಕೆರೆ

ನಾನು ಎಂ.ಎ.ಓದಲು ಮೈಸೂರಿಗೆ ಹೋದ ಹೊಸತರಲ್ಲಿ (೧೯೮೨), ಮಾನಸ ಗಂಗೋತ್ರಿಯ ನಮ್ಮ ವಿಭಾಗದ ಪಕ್ಕ, ಸಿರಿಕಲ್ಚರ್ ವಿಭಾಗ ಆರಂಭವಾಯಿತು. ವಿಭಾಗದ ಉದ್ಘಾಟನೆಗೆ ಮುಖ್ಯಮಂತ್ರಿ ಗುಂಡೂರಾವ್ ಬಂದಿದ್ದರು. ಕಾರ್ಯಕ್ರಮ ಇನ್ನೇನು ಶುರುವಾಗಬೇಕು ಅನ್ನುವಷ್ಟರಲ್ಲಿ ನೋಡಲು ಹಿಂದಿ ಸಿನಿಮಾದ ಅಶೋಕಕುಮಾರ್‌ನಂತಿದ್ದ, ಆಜಾನುಬಾಹು ವ್ಯಕ್ತಿಯೊಬ್ಬರು ಸಭಾ ಮಧ್ಯದಿಂದ ಧಡ್ಡನೆ ಎದ್ದು, ಮಂತ್ರಿಯ ವಿರುದ್ಧ ಘೋಷಣೆ ಕೂಗಲಾರಂಭಿಸಿದರು; ಅಂಚಿನಲ್ಲಿ ನಿಂತಿದ್ದ ಕೆಲವು ವಿದ್ಯಾರ್ಥಿಗಳೂ ಘೋಷಣೆ ಕೂಗುತ್ತ ಅವರತ್ತ ಧಾವಿಸಿದರು. ಕಪ್ಪು ಚಶ್ಮ ಹಾಕಿ ಕೊಂಡು ಸಿನಿಮಾ ನಟನಂತಿದ್ದ ಮುಖ್ಯಮಂತ್ರಿಗಳೂ ಉಪಕುಲಪತಿ ಹೆಗ್ಗಡೆಯವರೂ ಈ ಅನಿರೀಕ್ಷಿತ ದಂಗೆಗೆ ಕಂಗಾಲಾದರು.

ಅದು ಗೋಕಾಕ್ ಚಳವಳಿ ತಾರಕಕ್ಕೆ ಏರಿದ್ದ ಕಾಲ. ಗುಂಡೂರಾಯರು ವರದಿಯನ್ನು ಜಾರಿಮಾಡದೆ ಸಂಸ್ಕೃತ ಪರವಾದ ನಿಲುವನ್ನು ತಾಳಿದ್ದಾರೆ ಎಂಬುದು ಪ್ರತಿಭಟನಾಕಾರರ ಆಕ್ರೋಶಕ್ಕೆ ಕಾರಣವಾಗಿತ್ತು. ಸಣ್ಣಪಟ್ಟಣದಿಂದ ಬಂದು ಇನ್ನೂ ಮೈಚಳಿಬಿಡದೆ ಮೈಸೂರಿನಲ್ಲಿ ಪರಕೀಯರಾಗಿಯೇ ಇದ್ದ– ಕನ್ನಡ ಅಧ್ಯಯನ ಸಂಸ್ಥೆಯ ಗುರು ಪರಂಪರೆಯಂತೆ ರಾಜಕೀಯ ಪ್ರತಿರೋಧ ಸಂಸ್ಕೃತಿಯ ಕೊರತೆಯಿದ್ದ –ನಾವು, 'ಇದ್ಯಾರಪ್ಪ ಇಷ್ಟು ಧೈರ್ಯದವರು' ಎಂದು ಬೆರಗಾಗಿ ನೋಡುತ್ತಿದ್ದೆವು. ಇದನ್ನು ನಿರೀಕ್ಷಿಸಿದ್ದವರಂತೆ ಮೈಸೂರಿನ ಪೊಲೀಸರು ವಿದ್ಯಾರ್ಥಿಗಳ ಮೇಲೆ ಲಾಠಿ ಬೀಸತೊಡಗಿದರು. ಜುಬ್ಬದ ವ್ಯಕ್ತಿಯ ಮೇಲೆ ದಬದಬ ಬಿದ್ದು ಹಿಡಿದುಕೊಂಡರು. ಪ್ರತಿಭಟನಾಕಾರ ವ್ಯಕ್ತಿಯೂ ಇದನ್ನು ನಿರೀಕ್ಷಿಸಿದ್ದರು ಎಂದು ಕಾಣುತ್ತದೆ.

ಪೊಲೀಸರ ಹಿಡಿತಕ್ಕೆ ಸಿಗದಂತೆ ನೆಲದ ಮೇಲೆ ಮಲಗಿಬಿಟ್ಟರು. ಆಗ ಪೋಲಿಸರು ರಟ್ಟೆ ಹಿಡಿದು ದರದರ ಎಳೆದುಕೊಂಡು ಹೊರಹೋದರು. ಆ ಪ್ರತಿಭಟನಾಕಾರನ ಕಪ್ಪು ಕ್ಯಾನವಾಸಿನ ಶೂಗಳು ತನ್ನ ಒಡೆಯನನ್ನು ಹಿಂಬಾಲಿಸಲಾಗದೆ ಅಲ್ಲೆ ಕಳಚಿ ಬಿದ್ದವು. ನಂತರ ಮಂತ್ರಿಗಳ ಕಾರ್ಯಕ್ರಮವು ಒಡೆದ ಕುಂಡ, ಚೆಲ್ಲಿದ ಮಣ್ಣಿನ ಬೇರು ಹೊರಗೆ ಕಾಣುವ ಗಿಡಗಳ ಸಮ್ಮುಖದಲ್ಲಿ ಅಸ್ತವ್ಯಸ್ತವಾಗಿಯೇ ಮುಗಿಯಿತು. ಆಮೇಲೆ ವಿಚಾರಿಸಲು ತಿಳಿಯಿತು: ಅವರು ರಾಮದಾಸ್. ಮಹಾರಾಜಾ ಕಾಲೇಜಿನ ಕನ್ನಡ ಅಧ್ಯಾಪಕರು–ಎಂದು.

ರಾಮದಾಸರ ಮೊದಲ ದರ್ಶನವಾಗಿದ್ದು ನನಗೆ ಹೀಗೆ. ಮೈಸೂರಲ್ಲಿದ್ದ ಎರಡು ವರ್ಷ ನನಗೆ ರಾಮದಾಸರ ಸಂಪರ್ಕವೇ ಬರಲಿಲ್ಲ. ಸಂಪರ್ಕಕ್ಕೆ ಬಂದಿದ್ದು ನಾನು ಶಿವಮೊಗ್ಗೆಗೆ ಬಂದು ಕಾಲೇಜು ಮೇಷ್ಟರಾಗಿ ಸೇರಿಕೊಂಡ ಬಳಿಕ; ರಾಮದಾಸ್ ಶಿವಮೊಗ್ಗೆಗೆ ಆಗಾಗ್ಗೆ ಬರುತ್ತಿದ್ದರು. ಆಗ ಅವರು ಶಿವಮೊಗ್ಗ ಕಡೆಯವರೇ ಅಂತ ಗೊತ್ತಾಯಿತು.

ನಂತರ ೧೯೮೬ರ ಸುಮಾರಿನಲ್ಲಿ ಸೊರಬ ತಾಲೂಕಿನ ತತ್ತೂರು ಎಂಬ ಹಳ್ಳಿಯಲ್ಲಿ ಚಂದ್ರಪ್ಪ ಎಂಬ ದಲಿತನಿಗೆ ಅಲ್ಲಿಯ ಜಮೀನ್ದಾರನೊಬ್ಬ ಮೂತ್ರ ಕುಡಿಸಿದ (?) ಪ್ರಕರಣವೊಂದು ನಡೆಯಿತು. ಬಿ. ಕೃಷ್ಣಪ್ಪನವರು ಸಂಚಾಲಕರಾಗಿದ್ದ ದಲಿತ ಸಂಘರ್ಷ

ಅದು ಗೋಕಾಕ್ ಚಳವಳಿ ತಾರಕಕ್ಕೆ ಏರಿದ್ದ ಕಾಲ. ಗುಂಡೂರಾಯರು ವರದಿಯನ್ನು ಜಾರಿಮಾಡದೆ ಸಂಸ್ಕೃತ ಪರವಾದ ನಿಲುವನ್ನು ತಾಳಿದ್ದಾರೆ ಎಂಬುದು ಪ್ರತಿಭಟನಾಕಾರರ ಆಕ್ರೋಶಕ್ಕೆ ಕಾರಣವಾಗಿತ್ತು. ಸಣ್ಣಪಟ್ಟಣದಿಂದ ಬಂದು ಇನ್ನೂ ಮೈಚಳಿಬಿಡದೆ ಮೈಸೂರಿನಲ್ಲಿ ಪರಕೀಯರಾಗಿಯೇ ಇದ್ದ- ಕನ್ನಡ ಅಧ್ಯಯನ ಸಂಸ್ಥೆಯ ಗುರು ಪರಂಪರೆಯಂತೆ ರಾಜಕೀಯ ಪ್ರತಿರೋಧ ಸಂಸ್ಕೃತಿಯ ಕೊರತೆಯಿದ್ದ -ನಾವು, 'ಇದ್ಯಾರಪ್ಪ ಇಷ್ಟು ಧೈರ್ಯದವರು' ಎಂದು ಬೆರಗಾಗಿ ನೋಡುತ್ತಿದ್ದೆವು. ಇದನ್ನು ನಿರೀಕ್ಷಿಸಿದ್ದವರಂತೆ ಮೈಸೂರಿನ ಪೊಲೀಸರು ವಿದ್ಯಾರ್ಥಿಗಳ ಮೇಲೆ ಲಾಠಿ ಬೀಸತೊಡಗಿದರು. ಜುಬ್ಬದ ವ್ಯಕ್ತಿಯ ಮೇಲೆ ದಬದಬ ಬಿದ್ದು ಹಿಡಿದುಕೊಂಡರು. ಪ್ರತಿಭಟನಾಕಾರ ವ್ಯಕ್ತಿಯೂ ಇದನ್ನು ನಿರೀಕ್ಷಿಸಿದ್ದರು ಎಂದು ಕಾಣುತ್ತದೆ.

ಸಮಿತಿಯ ನೇತೃತ್ವದಲ್ಲಿ ತತ್ತೊರಿಗೆ ಹೋಗಿ ಜಮೀನ್ದಾರನ ಮನೆ ಮುಂದೆ ಧರಣಿ ಕೂರುವ ಕಾರ್ಯಕ್ರಮ ಏರ್ಪಾಡಾಯಿತು. ಆಗ ಮೈಸೂರಿಂದ ರಾಮದಾಸ್ "ಅಯ್ಯೋ ಆ ಜಮೀನ್ದಾರ ನನ್ನ ಕ್ಲಾಸುಮೇಟು ಕಂಡ್ರಿ. ಧರಣಿಗೆ ನಾನಿಲ್ಲದಿದ್ದರೆ ಹೇಗೆ?" ಎಂದು ಬಂದು ಸೇರಿಕೊಂಡರು. ಇಡೀ ದಿನ ಗೌಡನ ಮನೆಯ ಮುಂದೆ ಉಪವಾಸ ಸತ್ಯಾಗ್ರಹ. ಧರಣಿ ಮುಗಿಸುವ ಹೊತ್ತಲ್ಲಿ ತಮ್ಮಟೆ ಹೊಡೆಯುತ್ತ ಮೆರವಣಿಗೆ ಗೌಡನ ಮನೆಯ ಮುಂದೆ ಬಂದಾಗ, ರಾಮದಾಸ್ ಘೋಷಣೆ ಕೂಗಿಸಿದರು ಎಂದು ನೆನಪು.

ಕಂಚಿನಕಂಠ ರಾಮದಾಸರ ಅಸ್ತ್ರ. ಅವರೊಬ್ಬ ಪರಿಣಾಮಕಾರಿ ಮಾತುಗಾರರಾಗಿದ್ದರು. ಯಾವುದೇ ಕಾರ್ಯಕ್ರಮವಿರಲಿ, ಉಳಿದವರ ಭಾಷಣಗಳನ್ನು ಮಂಕುಗೊಳಿಸಿ ಅಥವಾ ಅಳಿಸಿ ಕೊನೆಗೆ ಮನಸ್ಸಿನಲ್ಲಿ ಉಳಿಯುತ್ತಿದ್ದುದು ಅವರ ಭಾಷಣವೊಂದೆ. ಕರ್ನಾಟಕದ ಯಾವ ಊರಲ್ಲಿ ಜನಪರವಾದ ಧರಣಿ–ಕಾರ್ಯಕ್ರಮ–ಕಮ್ಮಟ ಇಟ್ಟುಕೊಂಡು ಕರೆದರೂ ಹೋಗುತ್ತಿದ್ದರು.

ಕರ್ನಾಟಕವನ್ನು ನಮ್ಮ ಹಿರಿಯ ಲೇಖಕರು ಏಕೀಕರಣಕ್ಕಾಗಿ ಸುತ್ತಿದ್ದರು; ರಾಮದಾಸ್ ವೈಚಾರಿಕ ಪ್ರತಿರೋಧದ ಮನೋಭಾವ ಹರಡಲು ಸುತ್ತಿದರು. ಚಿಂತಕರು ಲೇಖನ ಕಲೆಯಿದ್ದರೆ ತಮ್ಮ ಪ್ರತಿನಿಧಿಯಾಗಿ ಬರಹವನ್ನು ಜನರಿದ್ದಲ್ಲಿ ಕಳಿಸುತ್ತಾರೆ; ಭಾಷಣಕಾರರಾದರೆ ತಾವೇ ಜನರ ಬಳಿಗೆ ಹೋಗಬೇಕು. ರಾಮದಾಸ್ ಜನರ ಬಳಿಗೆ ಹೋದ ಚಿಂತಕ.

೨೦ನೇ ಶತಮಾನದ ಉತ್ತರಾರ್ಧ ಕಂಡ ಅಪೂರ್ವ ಚಳವಳಿಗಾರರಲ್ಲಿ ಒಬ್ಬರಾದ ರಾಮದಾಸ್ ಅವರಿಗೆ ಅಭಿವ್ಯಕ್ತಿಯ ಮಾಧ್ಯಮವಾಗಿದ್ದು, ಬರವಣಿಗೆಯಲ್ಲ, ಮಾತು. ಮಾತನ್ನು ಕತ್ತಿಯಂತೆ ಬಳಸಿದ ಚಳವಳಿಗಾರರಲ್ಲಿ ಅವರೊಬ್ಬರು. ಕರ್ನಾಟಕದ ಅನೇಕ ಲೋಹಿಯಾವಾದಿಗಳು ಲೋಹಿಯಾ ಅವರ ಸ್ಪಿರಿಟ್ಟಿಗೆ ವಿರುದ್ಧವಾಗಿ ಪ್ರಭುತ್ವದ ಜತೆ ಕೈಕೈ ಮಿಲಾಯಿಸಿದರು; ಡಿಮಾರಲೈಜ್ ಆದರು. ಆದರೆ ರಾಮದಾಸ್ ಅವರಂತಹ ಕೆಲವರು ಮಾತ್ರ ಲೋಹಿಯಾ ತರಹ, ಕೊನೆಯ ತನಕ ಪ್ರಭುತ್ವದ ಜತೆ ಜಗಳಮಾಡಿಕೊಂಡಿದ್ದ ಚಳವಳಿಗಾರರಾಗಿಯೆ ಉಳಿದರು.

ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿದ್ದ ರಾಮದಾಸ್, ಅಲ್ಲಿಗೆ ಆರ್ಟ್ಸ್ ಕನ್ನಡ ಮಾಧ್ಯಮ ತೆಗೆದುಕೊಂಡು ಬರುತ್ತಿದ್ದ ಬಹುತೇಕ ದಲಿತರೂ, ಬಡವರೂ ಇತರೆ ಕೆಳಜಾತಿಗೆ ಸೇರಿದ ವಿದ್ಯಾರ್ಥಿಗಳಿಗೆ ವೈಚಾರಿಕ ದೀಕ್ಷೆ ಕೊಡುವ ಕೆಲಸವನ್ನು ೩ ದಶಕಗಳ ಕಾಲ ಮಾಡಿದವರು. ಅವರ ವೈಚಾರಿಕ ಶಿಷ್ಯವೃತ್ತಿಯನ್ನು ಸ್ವೀಕರಿಸಿ ಆರೆಸ್ಸೆಸ್ ಹಿನ್ನೆಲೆಯಿಂದ ಬಂದ ಕೆಲವರೂ ಬದಲಾದರು.

ಕೆ.ಪಿ. ಸುರೇಶ ಅವರು ಬರೆದ ತಮ್ಮ ಗುರುವಿನ ನೆನಪಿನಲ್ಲಿ ಬರೆದ ಬರಹ ಓದುವಾಗ ಇದು ಗೊತ್ತಾಯಿತು; ಕಾಲೇಜು ಅವರ ಪಾಲಿಗೆ ವೈಚಾರಿಕ ಚಿಂತನೆ ಬಿತ್ತುವ ಒಂದು ಮಾಧ್ಯಮವಾಗಿತ್ತು. ಸಾಹಿತ್ಯವನ್ನು ಸಾಮಾಜಿಕ ರಾಜಕೀಯ ವಿಚಾರಗಳ ಜತೆ, ಶಿಕ್ಷಣವನ್ನು ಬದುಕಿನ ಜತೆ, ಸ್ವಂತ ಬದುಕನ್ನು ಸಾರ್ವಜನಿಕ ಜೀವನದ ಜತೆ, ಅವರಂತೆ ಬೆರೆಸಿ ಬೆಸೆದು ನೋಡಲು ಯತ್ನಿಸಿದವರು ಕಡಿಮೆ. ಮನೆಯಲ್ಲೂ ಸಾರ್ವಜನಿಕ ಬದುಕಿನ ಧೋರಣೆಯಲ್ಲಿ ಬದುಕಿದ್ದನ್ನು ಅವರ ಮಗಳ ಲೇಖನವು ತೋರಿಸಿದೆ.

ರಾಮದಾಸ್, ತಾವು ಭಾಗವಹಿಸಿದ ಕಾರ್ಯಕ್ರಮದ ಹೀರೋ ಆಗಿರುತ್ತಿದ್ದರು. ಕಾರಣ ಕಾರ್ಯಕ್ರಮದ ವಿಷಯ ಏನೇಯಿದ್ದರೂ, ಅವರು ಮಾತಾಡುತ್ತಿದ್ದುದು ಸಮಕಾಲೀನ ರಾಜಕೀಯ, ಸಾಮಾಜಿಕ, ಧಾರ್ಮಿಕ ವಿದ್ಯಮಾನಗಳ ಮೇಲೆಯೆ. ನಾನು ರಾಮದಾಸರನ್ನು ಕಂಡ ಕೊನೆಯ ಕಾರ್ಯಕ್ರಮ, ಗೌರಿಲಂಕೇಶ್ ಪತ್ರಿಕೆಯ ಎರಡನೇ ವಾರ್ಷಿಕೋತ್ಸವ; ಅದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿತ್ತು. ಆಗ ರಾಮದಾಸ್, ಜನರ ಕಷ್ಟಗಳನ್ನು ಆಲಿಸಿ ಪರಿಹರಿಸಲು ಕೊಡಬೇಕಾದ ಸಮಯವನ್ನು ಮೈತುಂಬ ತಾಯಿತ ದಾರ ಕಟ್ಟಿಕೊಂಡು, ಹೋಮ ಹವನ ಪೂಜೆ ಮಾಡುತ್ತ ದೇವಸ್ಥಾನ ಗಳನ್ನು ತಿರುಗುತ್ತಿರುವ ರಾಜಕಾರಣಿ ಗಳನ್ನು ಛೇಡಿಸಿ ಮಾತಾಡಿ ಸಭೆಯನ್ನು ನಗಿಸಿದರು. ಮಾತು ತಮ್ಮ ಕೊನೆಗಾಲದಲ್ಲಿ ತಾಯಿತ ಕಟ್ಟಿಸಿಕೊಂಡಿದ್ದ ತಮ್ಮ ಸೈದ್ಧಾಂತಿಕ ಗುರು ನಂಜುಂಡಸ್ವಾಮಿ ಅವರತ್ತಲೂ ತಿರುಗಿತು.

ರಾಮದಾಸರ ಹೆಸರಲ್ಲಿ ಇರುವ ಪುಸ್ತಕದ ಹೆಸರು ನನಗೆ ಯಾವುದೂ ತೋಚುತ್ತಿಲ್ಲ. ಆದರೆ ಅವರು ಅಧ್ಯಾಪಕರಾಗಿ ಕಟ್ಟಿದ ಸಾವಿರಾರು ಮನಸ್ಸುಗಳು, ಚಳವಳಿಗಾರರಾಗಿ ಪ್ರಭಾವಿಸಿದ ಸಾವಿರಾರು ಮನಸ್ಸುಗಳು ಕರ್ನಾಟಕದ ತುಂಬ ಇವೆ. ಬಹುಶಃ ಮೈಸೂರು ವಿವಿಯ ಚರಿತ್ರೆಯಲ್ಲಿ ಕುವೆಂಪು ನಂತರ ಇಷ್ಟೊಂದು ಜನರ ಮೇಲೆ ವೈಚಾರಿಕ ಪ್ರಭಾವ ಬೀರಿದ ಶಿಕ್ಷಕ ರಾಮದಾಸರೇ ಇರಬೇಕು. ಹಾಗೆ ಕಂಡರೆ, ಕುವೆಂಪು ಅವರ 'ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ' ಬರಹದ ನೇರ ಉತ್ಪನ್ನ ಅವರು. ಇವತ್ತು ನಾವೇನಾದರೂ ಆಗಿದ್ದರೆ ಅದಕ್ಕೆ ರಾಮದಾಸ್ ಕಾರಣ ಎಂದು ಹೇಳಬಲ್ಲ ಸಾವಿರಾರು ಜನ ಶಿಷ್ಯರು ನಾಡಿನಲ್ಲಿದ್ದಾರೆ. ಅವರಲ್ಲಿ ಬಹಳ ಜನ ಚಳವಳಿಗಳಲ್ಲಿ ಪಾಲ್ಗೊಂಡರು. ಅಂತರ್ಜಾತಿ ವಿವಾಹ ಮಾಡಿಕೊಂಡರು. ಒಬ್ಬ ಗುರುವಿಗೆ ಇದಕ್ಕಿಂತಲೂ ದೊಡ್ಡ ಪ್ರಶಸ್ತಿ ಯಾವುದು?

ರಾಮದಾಸ್, ತಾವು ಭಾಗವಹಿಸಿದ ಕಾರ್ಯಕ್ರಮದ ಹೀರೋ ಆಗಿರುತ್ತಿದ್ದರು. ಕಾರಣ ಕಾರ್ಯಕ್ರಮದ ವಿಷಯ ಏನೇಯಿದ್ದರೂ, ಅವರು ಮಾತಾಡುತ್ತಿದ್ದುದು ಸಮಕಾಲೀನ ರಾಜಕೀಯ, ಸಾಮಾಜಿಕ, ಧಾರ್ಮಿಕ ವಿದ್ಯಮಾನಗಳ ಮೇಲೆಯೆ. ನಾನು ರಾಮದಾಸರನ್ನು ಕಂಡ ಕೊನೆಯ ಕಾರ್ಯಕ್ರಮ, ಗೌರಿಲಂಕೇಶ್ ಪತ್ರಿಕೆಯ ಎರಡನೇ ವಾರ್ಷಿಕೋತ್ಸವ; ಅದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿತ್ತು. ಆಗ ರಾಮದಾಸ್, ಜನರ ಕಷ್ಟಗಳನ್ನು ಆಲಿಸಿ ಪರಿಹರಿಸಲು ಕೊಡಬೇಕಾದ ಸಮಯವನ್ನು ಮೈತುಂಬ ತಾಯಿತ ದಾರ ಕಟ್ಟಿಕೊಂಡು, ಹೋಮ ಹವನ ಪೂಜೆ ಮಾಡುತ್ತ ದೇವಸ್ಥಾನಗಳನ್ನು ತಿರುಗುತ್ತಿರುವ ರಾಜಕಾರಣಿಗಳನ್ನು ಛೇಡಿಸಿ ಮಾತಾಡಿ ಸಭೆಯನ್ನು ನಗಿಸಿದರು. ಮಾತು ತಮ್ಮ ಕೊನೆಗಾಲದಲ್ಲಿ ತಾಯಿತ ಕಟ್ಟಿಸಿಕೊಂಡಿದ್ದ ತಮ್ಮ ಸೈದ್ಧಾಂತಿಕ ಗುರು ನಂಜುಂಡ ಸ್ವಾಮಿ ಅವರತ್ತಲೂ ತಿರುಗಿತು.

ಅವರ ಭಾಷಣಗಳೇ ಹಾಗೆ ಕತ್ತಿವರಸೆಯ ಹಾಗೆ. ಗೆಳೆಯರು, ಗುರುಗಳು, ಶಿಷ್ಯರು ಎಲ್ಲರನ್ನು ಅವರು ಗಾಯಗೊಳಿಸುತ್ತಿದ್ದರು. ಅವರು ಜಾಗತೀಕರಣದಿಂದ ಪ್ರಯೋಜನವಿದೆ ಎಂಬ ದನಿಯಲ್ಲಿ ಮಾತಾಡುತ್ತಿದ್ದ ತೇಜಸ್ವಿಯವರನ್ನು ಟೀಕಿಸದೆ ಬಿಡಲಿಲ್ಲ. ಬಹಳ ಸೌಮ್ಯವಿಧಾನದಲ್ಲಿ ಅತಿ ಎಚ್ಚರದಲ್ಲಿ ಕೋಮುವಾದಿ ವಿರೋಧ ಸಮ್ಮೇಳನ ಮಾಡಿದರೆಂದು ಜಿ.ಎಚ್. ನಾಯಕರನ್ನು ಟೀಕಿಸಿದರು. ಮತ್ತೆ ಯಾವ್ಯಾವುದೊ ಕಾರಣದಿಂದ ದೇವನೂರರನ್ನು, ಅನಂತಮೂರ್ತಿಯವರನ್ನು ಟೀಕಿಸಿದರು. ಸಮಾಜವಾದಿ ಹಿನ್ನೆಲೆಯ ರಾಜಕಾರಣಿ ವಿಶ್ವನಾಥರನ್ನು ಅವರ ಟೀಕೆಯ ಪ್ರಹಾರಕ್ಕೆ ಸಿಲುಕಿದ್ದರು. (ಬಹುಶಃ ಅವರಿಂದ ಹೆಚ್ಚು ಟೀಕೆಗೆ ಒಳಗಾಗದವರು ಲಂಕೇಶ್ ಎಂದೇ ಕಾಣುತ್ತದೆ.) ಬಹಳ ಜನರ ಪಾಲಿಗೆ ಅವರ ಸಹವಾಸ, ಕುಮಾರವ್ಯಾಸ ಹೇಳುವಂತೆ, ಸಿಡಿಲ ಪೊಟ್ಟಣಗಟ್ಟಿ ಸೆಕವ ಕೊಟ್ಟುಕೊಳ್ಳುವಂತೆ ಇತ್ತು.

ಅಧಿಕಾರಸ್ಥರ ಮೇಲೆ ಆಕ್ರಮಣ ಮಾಡುವಂತೆ ವ್ಯಂಗ್ಯ ಹಾಗೂ ತೀಕ್ಷ್ಣವಾದ ಧಾಟಿಯಲ್ಲಿ ಮಾತಾಡುತ್ತಿದ್ದ ರಾಮದಾಸ್ ನಮ್ಮ ಕಾಲದ ಒಬ್ಬ ದೊಡ್ಡ ಪ್ರಭುತ್ವದ ವಿಮರ್ಶಕ; ಆದರೆ ಈಚೆಗೆ ಮೈಸೂರಿನ ಸಭೆಗಳಲ್ಲಿ ಅವರು ಮಾಡುತ್ತಿದ್ದ ಪ್ರತಿಭಟನೆ, ತೋರಿಸುತ್ತಿದ್ದ ವಿರೋಧವು ಓವರ್ ರಿಯಾಕ್ಷನ್ ಆಗಿತ್ತೇ? ಒಂದು ಸಾಂಕೇತಿಕ ಆಚರಣೆಯಂತೆ ಆಗಿತ್ತೇ? ಅವರಾ, ಎಲ್ಲದಕ್ಕೂ ಟೀಕಿಸುತ್ತಾರೆ ಎಂದು ಎಷ್ಟೋ ಜನ ಹೇಳಿದ್ದನ್ನು ಕೇಳಿಸಿಕೊಂಡಿದ್ದೇನೆ.

ಜನ ಪ್ರತಿರೋಧ, ಪ್ರತಿಭಟನೆಯನ್ನು ಮಾಮೂಲಿ ಎಂದು ತೆಗೆದುಕೊಳ್ಳುವಷ್ಟು ಜಡರೂ ಸಿನಿಕರೂ ಆಗಿದ್ದರೇ? ಅಥವಾ ತಮ್ಮ ಜತೆ ಯಾರಿದ್ದಾರೆ ಎಷ್ಟು ಜನ ಇದ್ದಾರೆ ಇದನ್ನು ಲೆಕ್ಕಿಸದೆ ಏಕಾಂಗಿಯಾದರೂ ಸರಿ, ತಮಗೆ ಸರಿಕಂಡಂತೆ ಪ್ರತಿರೋಧಿಸುವ ಒಂದು ಬಗೆಯ ಹೀರೋಯಿಸಂ ರಾಮದಾಸರಲ್ಲಿತ್ತೇ? ತಮ್ಮ ಚಿಂತನೆ ಸಮುದಾಯಕ್ಕೂ ಸಂವಹಿಸಿ ಅದೂ ತನ್ನ ಭಾಗವಾಗಿಸಿಕೊಂಡು ತಾನೂ ಅದರ ಭಾಗವಾಗಿ ಏಕೀಭವಿಸುವ ಮಾದರಿಗಿಂತ, ನೈತಿಕ ಅಹಂಕಾರದ ನೆಲೆಯಲ್ಲಿ ನಿಂತು ಉಳಿದವರನ್ನು ಅಪರಾಧಿಗಳು ಎಂಬಂತೆ ನೋಡುವ ಅವಸರದ ದೃಷ್ಟಿ ಅವರದಾಗಿತ್ತೇ? ಸ್ಪಷ್ಟವಿಲ್ಲ. ಆದರೆ ತಮ್ಮ ಕೊನೆಯ ದಿನಗಳಲ್ಲಿ ಸಂತೋಷ, ನಗು, ಕಳೆದುಹೋದ ವಿಷಾದ, ಆಕ್ರೋಶ, ಸೋಲುಗಳ ಭಾವದ ಚಳವಳಿಗಾರ ಆಗಿದ್ದರು ಎಂದು ಅನಿಸುತ್ತಿತ್ತು.

ನಾನು ಮೈಸೂರಲ್ಲಿ ಈಗ ಏಕಾಂಗಿಯಾಗಿಗ್ದೇನೆ ಎಂದು ಹೇಳುತ್ತಿದ್ದರು. ಲೋಹಿಯಾ ಅವರಿಗೂ ಈ ಬಗೆಯ ಏಕಾಂಗಿತನ ಕೊನೆಯ ದಿನಗಳಲ್ಲಿ ಆವರಿಸಿತ್ತು. ಅವರ ನೆಹರೂ ವಿರೋಧವು ಅವರಿಗೆ ಅಬ್ಸೆಸನ್ ತರಹ ಕೂಡ ಆದಂತೆ ತೋರುತ್ತಿತ್ತು. ಕೆಲವೊಮ್ಮೆ ಪ್ರತಿರೋಧವು ಎದುರಾಳಿಗಿಂತ ಹೆಚ್ಚಾಗಿ ಯೋಧನನ್ನೇ ಹೆಚ್ಚು ಬಳಲಿಸುತ್ತದೆ.

ಕಡಿದಾಳು ಶಾಮಣ್ಣ, ಲಂಕೇಶ್, ಚಂಪಾ, ನಂಜುಂಡಸ್ವಾಮಿ, ತೇಜಸ್ವಿ, ರಾಮದಾಸ್, ದೇವನೂರ ಮಹಾದೇವ– ಲೋಹಿಯಾ, ಅಂಬೇಡ್ಕರ್, ಕುವೆಂಪು, ಪೆರಿಯಾರ್ ಚಿಂತನೆಗಳಿಂದ ಪ್ರೇರಿತರಾಗಿದ್ದ, ಸಮಾಜವಾದಿ ಯುವಜನ ಸಭೆಯ ಈ ಗುಂಪು, ಕರ್ನಾಟಕದ ಐವತ್ತು ವರ್ಷಗಳಲ್ಲಿ ತನ್ನ ಬರಹ, ಚಳವಳಿ, ಭಾಷಣಗಳ ಮೂಲಕ ಬೀರಿದ ಪ್ರಭಾವ, ಹುಟ್ಟಿಸಿದ ವಾಗ್ವಾದ, ನಿರ್ಮಿಸಿದ ಪ್ರತಿಭಟನೆಯ ಸಂಸ್ಕೃತಿ ಚಾರಿತ್ರಿಕವಾಗಿ ಮಹತ್ವದ್ದಾಗಿದೆ; ಜಾತಿವಿನಾಶ ಸಮ್ಮೇಳನ, ಲೇಖಕರ ಕಲಾವಿದರ ಒಕ್ಕೂಟ, ರೈತಚಳವಳಿ, ಭಾಷಾಚಳವಳಿ, ಬಂಡಾಯ ಸಾಹಿತ್ಯ ಚಳವಳಿ, ದಲಿತ ಚಳವಳಿ, ಪ್ರಗತಿರಂಗ, ಕೋಮುವಾದ ವಿರೋಧಿ ಚಳವಳಿ, ಸಾಮ್ರಾಜ್ಯಶಾಹಿ ಚಳವಳಿ–ಇವುಗಳಲ್ಲಿ ಈ ಗುಂಪಿನವರ ಪಾತ್ರವಿದ್ದುದು ಎಲ್ಲರಿಗೂ ಗೊತ್ತಿದೆ. ಚಳವಳಿ ಸಂಘಟನೆ ಭಿನ್ನಮತ ಪ್ರತಿಭಟನೆಗಳಲ್ಲಿ ತೊಡಗಿದ್ದ ಇವರು ನಮ್ಮ ಕಳೆದ ೩೦–೪೦ ವರ್ಷಗಳ ಬಹುಮುಖ್ಯ ಸಾರ್ವಜನಿಕ ವ್ಯಕ್ತಿಗಳು. ಇವರಲ್ಲಿ ರಾಮದಾಸ್ ಸಾರ್ವಜನಿಕ ಬದುಕಿಗಾಗಿ ತಮ್ಮನ್ನು ಹೆಚ್ಚು ತೇದುಕೊಂಡವರು. ಇದಕ್ಕೆ ಕಾರಣ, ಅವರ ಹಠಮಾರಿ ಎಂದು ತೋರುವ ಭಿನ್ನಮತೀಯನಾಗಿಯೆ ನಿಲ್ಲಲು ಬಯಸುವ ವ್ಯಕ್ತಿತ್ವ.

ಭಿನ್ನಮತ, ಹಠ, ನೈತಿಕತೆ, ಆಕ್ರೋಶ, ವ್ಯಕ್ತಿವಿಶಿಷ್ಟ ಸ್ವಾಭಿಮಾನ– ಇವು ಅಧಿಕಾರಸ್ಥ ಶಕ್ತಿಗಳ ವಿಷಯದಲ್ಲಿ, ಅದರಲ್ಲೂ ಪ್ರಭುತ್ವದ ಜತೆಗಿನ ಬುದ್ಧಿಜೀವಿಯ ಸಂಬಂಧದ ವಿಷಯದಲ್ಲಿ ಬಹಳ ಅಮೂಲ್ಯ ಅಸ್ತ್ರಗಳು. ಆದರೆ ಅಸ್ತ್ರಗಳು ತಮ್ಮ ಅತಿರೇಕದಲ್ಲಿ ಸಮಾನ ಶತ್ರುವಿನ ವಿರುದ್ಧ ಸಮಾನ ಮನಸ್ಕ ಸಂಗಾತಿಗಳ ಜತೆ ಕೂಡಿ, ಸಂಘಟನೆ ಮಾಡುವ, ಪ್ರತಿರೋಧ ಒಡ್ಡುವ ಹಾಗೂ ಪರ್ಯಾಯ ಹುಡುಕುವ ಕೆಲಸದಲ್ಲಿ ತೊಡಕೂ ಆಗಬಲ್ಲವು. ಸಂಗಾತಿಗಳ ಜತೆ ರಾಜಕೀಯ ಸೈದ್ಧಾಂತಿಕ ಭಿನ್ನಾಭಿಪ್ರಾಯ ಬಂದಾಗ ಸಹನೆಯಿಂದ ಆಲಿಸುವ, ಸಹಿಸುವ ಮತ್ತು ಸಂವಾದ ಮಾಡುವ ಕ್ರಿಯೆಗಿಂತ, ಸಿಡಿದು ದೂರ ಹೋಗಲು ಏಕಾಂಗಿಯಾಗಿ ನಿಲ್ಲಲು ಇವು ಪ್ರೇರಿಸುತ್ತವೆ.

ವೈಚಾರಿಕತೆಯ ಬಿರುಸು ತಾನೇ ಸರಿತನದ ಭಾವವನ್ನು ಹುಟ್ಟಿಸುತ್ತದೆ; ನಂಜುಂಡಸ್ವಾಮಿ, ಲಂಕೇಶ್, ಚಂಪಾ, ತೇಜಸ್ವಿ, ರಾಮದಾಸ್ ಮುಂತಾದವರಲ್ಲಿ ಈ ಬಿರುಸುತನ, ವಿಕ್ಷಿಪ್ತತೆ, ಕೆಲವೊಮ್ಮೆ ಉಡಾಫೆಯ ಅಂಶಗಳು ಹೀಗೆ ನೇತ್ಯಾತ್ಮಕ ಸಂಗತಿಗಳಾಗಿವೆ. ಸೈದ್ಧಾಂತಿಕ ಭಿನ್ನಮತವನ್ನು ವ್ಯಕ್ತಿಪ್ರತಿಷ್ಠೆಯನ್ನಾಗಿ ಮಾಡಿಕೊಂಡು ಅಗತ್ಯಕ್ಕಿಂತ ಹೆಚ್ಚು ಇವರು ಜಗಳ ಮಾಡಿಕೊಂಡವರು. ಇದು ಇವರ ವೈಯಕ್ತಿಕ ಮಿತಿಯೊ ಲೋಹಿಯಾವಾದಿಗಳಲ್ಲೇ ಇದ್ದ ಸಮಸ್ಯೆಯೊ ಸ್ಪಷ್ಟವಾಗುವುದಿಲ್ಲ. ಲೋಹಿಯಾ ಕೂಡ ಕೆಲವೊಮ್ಮೆ ಮಹಾಹಠಮಾರಿ (ತಮ್ಮ ಪಕ್ಷದ ಸಮಾಜವಾದಿ ಸರ್ಕಾರ ರಾಜೀನಾಮೆ ಕೊಡಬೇಕು ಎಂದು ನಿಂತಕಾಲಲ್ಲಿ ಮಾಡಿದ ಹಠದ ಪ್ರಸಂಗವನ್ನು ಇಲ್ಲಿ ನೆನೆಯಹುದು.) ಮೈಸೂರಿನ ಬಳಿ ಗುಡಿಯೊಂದರಲ್ಲಿ ಕುರಿಬಲಿ ಪ್ರಕರಣದಲ್ಲಿ ರಾಮದಾಸ್ ಮೈಸೂರಿನ ಎಚ್. ವಿಶ್ವನಾಥರ ಜತೆ ಮಾಡಿದ ಜಗಳ ನೆನಪಾಗುತ್ತದೆ; ಅದು ಅಷ್ಟೊಂದು ಆಕ್ರೋಶಗೊಳ್ಳಬೇಕಾದ ಸಂಗತಿಯಾಗಿತ್ತೇ?

ಈ ಜಗಳದಲ್ಲಿ ರಾಮದಾಸ್ ಅವರು, ದಲಿತ ಹಾಗೂ ಕೆಳಜಾತಿಯ ದೈವಪದ್ಧತಿ ಮತ್ತು ಆಹಾರ ಸಂಸ್ಕೃತಿಯ ವಿರುದ್ಧವೂ ಹೋಗುವುದನ್ನು ಗಮನಿಸುವ ಸೂಕ್ಷ್ಮವನ್ನು ತೋರುತ್ತಿಲ್ಲ ಎಂದು ನನಗೆ ಅನಿಸಿತು. ಪ್ರಾಣಿಹಿಂಸೆಯ ಪರಿಕಲ್ಪನೆಯನ್ನು ರಿಲೇಟಿವಾಗಿ ತೆಗೆದುಕೊಳ್ಳಲಾಗದ ಕಾರಣದಿಂದ ಅವರ ವಾದ ಏಕಪಕ್ಷೀಯ ಅನಿಸುತ್ತಿತ್ತು. ನಕ್ಸಲ್ ಹಿಂಸೆಯನ್ನೂ ಕೋಮುವಾದದ ಹಿಂಸೆಯನ್ನೂ ಒಂದೇ ತಕ್ಕಡಿಯಲ್ಲಿ ಇಟ್ಟು ನೋಡುವಾಗಲೂ ಈ ಸರಳೀಕರಣವನ್ನು ರಾಮದಾಸ್ ಮಾಡುತ್ತಿದ್ದರು. ಆದರೆ ತಾವು ನಂಬಿದ್ದನ್ನು ನೇರವಾಗಿ ಹೇಳುವ, ಹಾಗೆ ಬದುಕುವ ಅವರ ಪ್ರಾಮಾಣಿಕತೆ ಮಾತ್ರ ಯಾರೂ ಪ್ರಶ್ನೆ ಮಾಡುವಂತಿಲ್ಲ.

ಒಂದು ವಿಶಾಲ ಸಮುದಾಯ ಸಾಮೂಹಿಕ ಚಳವಳಿಯ ಮೂಲಕ ಪ್ರಜ್ಞಾಶೀಲ ಆಗುವುದಕ್ಕಿಂತ, ಧೀಮಂತವಾಗಿ ನೈತಿಕವಾಗಿ ಸ್ವತಂತ್ರವಾಗಿ ಚಿಂತಿಸುವ ವ್ಯಕ್ತಿವಿಶಿಷ್ಟವಾದಿ ನಾಯಕರು ಇರುವುದು ಮುಖ್ಯ ಎಂದು ರಾಮದಾಸ್ ಭಾವಿಸಿದ್ದರು. ನಾನು ಭೇಟಿಮಾಡಿರುವ ಲೋಹಿಯಾವಾದಿಗಳಲ್ಲಿ ಈಗಲೂ ವ್ಯಕ್ತಿಯಾಗಿ ಲೋಹಿಯಾ ಅವರ ಆದರ್ಶ ವ್ಯಕ್ತಿತ್ವದ ಬಗ್ಗೆ ಇರುವ ಆದರವು ಲೋಹಿಯಾ ಚಿಂತನೆಗೆ ತೋರುವ ನಿಷ್ಠೆಗಿಂತ ಮಿಗಿಲಾಗಿ ಇರುವುದನ್ನು ಗಮನಿಸಬಹುದು. ತಮ್ಮ ಹೀರೋಗಳಾಗಿ ತೇಜಸ್ವಿ, ಲಂಕೇಶ್, ನಂಜುಂಡಸ್ವಾಮಿ ಎಂದು ರಾಮದಾಸ್ ಕರೆದುಕೊಳ್ಳುತ್ತಿದ್ದರು.

ಈ ಹೀರೋಯಿಸಂನ ಒಂದಂಶ ರಾಮದಾಸರಲ್ಲೂ ಇತ್ತು; ತೇಜಸ್ವಿ ಸಾಹಿತ್ಯವು ಮುಖ್ಯವಾಗಿ ವ್ಯಕ್ತಿವಿಶಿಷ್ಟತೆಯುಳ್ಳ ಹೀರೋಗಳ ಕಥನ ಎಂಬುದನ್ನು ಗಮನಿಸಬೇಕು. ಇದು ವಿಶಿಷ್ಟವ್ಯಕ್ತಿಗಳು ಸಮಾಜದಲ್ಲಿ ಚಲನಶೀಲತೆ ಉಂಟುಮಾಡಬಲ್ಲರು ಎಂಬ ನವ್ಯದ ವ್ಯಕ್ತಿವಿಶಿಷ್ಟ ಸಿದ್ಧಾಂತ; 'ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ' ಎನ್ನುವ ಕುವೆಂಪು ಚಿಂತನೆ; ಹಾಗೂ ನೈತಿಕ ವ್ಯಕ್ತಿತ್ವವುಳ್ಳ ಕೆಲವು ವ್ಯಕ್ತಿಗಳು ತಮ್ಮ ಎಚ್ಚರ ಪ್ರಜ್ಞೆಯಿಂದ ಡೆಮಾಕ್ರಸಿಯನ್ನು ಜೀವಂತವಾಗಿ ಇಡಬಲ್ಲರು ಎಂಬ ಲೋಹಿಯಾ ನಿಲುವು –ಹೀಗೆ ಮೂರೂ ಧಾರೆಗಳು ಕೂಡಿ ಹುಟ್ಟಿಸಿದ ಹೀರೋಗಳು ಇವರು. ಎಂತಲೇ ಜತೆಯಲ್ಲಿ ಯಾರು ಇದ್ದಾರೆ ಎಂಬುದಕ್ಕಿಂತ ತನಗೆ ಇದು ಅನಿಸುತ್ತಿದೆ, ಅದನ್ನು ಏಕಾಂಗಿಯಾದರೂ ಮಾಡಬೇಕು ಎಂಬ ಸ್ವಭಾವವು ಇವರಲ್ಲಿ ಹೆಚ್ಚಾಗಿತ್ತು.

ಕರ್ನಾಟಕದ ರಂಗಸ್ಥಳ ಈಗ ವಿಚಿತ್ರ ರಂಗಿನಲ್ಲಿದೆ. ಬಲಪಂಥೀಯ ಲೇಖಕರು ದೊಡ್ಡಸೈಜಿನಲ್ಲಿ ಕಾಣಿಸುತ್ತಿದ್ದಾರೆ; ಸಂಘ ಪರಿವಾರದ ಸರ್ಕಾರವು ಕರ್ನಾಟಕದಲ್ಲಿ ಪೂರ್ಣಪ್ರಮಾಣದಲ್ಲಿ ತನ್ನ ಯಜಮಾನಿಕೆ ಸ್ಥಾಪಿಸಲು ಹವಣಿಸುತ್ತಿದೆ; ಪ್ರಭುತ್ವ ಜನಪರ ಹೋರಾಟಗಾರರನ್ನು ಕಳ್ಳರಂತೆ ಪಟ್ಟಿಮಾಡಿ ಪಟ್ಟಿಬಿಡುಗಡೆ ಮಾಡುತ್ತಿದೆ. ಇಂತಹ ಹೊತ್ತಲ್ಲಿ ಪ್ರಭುತ್ವ ವಿರೋಧಿ ದನಿಯ ನೈತಿಕ ವ್ಯಕ್ತಿತ್ವದ ಸಾರ್ವಜನಿಕ ವ್ಯಕ್ತಿಗಳು ಒಬ್ಬೊಬ್ಬರೇ ಕಾಣೆಯಾಗುತ್ತಿದ್ದಾರೆ. ಇವರ ಸಾವಿನಿಂದ ಸಂಘ ಪರಿವಾರ ಸಂತೋಷ ಪಟ್ಟಿರಬಹುದು; ಕಾರಣ, ಐದಾರು ವರ್ಷಗಳ ಅವಧಿಯಲ್ಲಿ ತೀರಿಕೊಂಡ ಈ ಸಮಾಜವಾದಿಗಳ ಗುಂಪು ಕೊನೆಯವರೆಗೂ ತೀವ್ರವಾಗಿ ತಿರಸ್ಕರಿಸಿದ ವಿಚಾರಗಳಲ್ಲಿ ಕೋಮುವಾದವೂ ಒಂದಾಗಿತ್ತು. ರಾಮದಾಸ್ ಅವರ ಜೀವನದ ಕೊನೆಯ ಸಂದರ್ಶನವು 'ವಾರ್ತಾಭಾರತಿ'ಯಲ್ಲಿ ಪ್ರಕಟವಾಯಿತು.

ರಾಮದಾಸರ ಬಹುತೇಕ ಫೋಟೋಗಳಲ್ಲಿ ಕೈಯಲ್ಲಿ ಸಿಗರೇಟಿದೆ. ಲೋಹಿಯಾ ಕೂಡ ಬಹಳ ಸಿಗರೇಟು ಸೇದುತ್ತಿದ್ದರಂತೆ. ತೇಜಸ್ವಿ, ಶಾಮಣ್ಣ ಬಿಟ್ಟರೆ, ರಾಮದಾಸ್, ಲಂಕೇಶ್, ನಂಜುಂಡಸ್ವಾಮಿ–ಇವರು ಸಹಸರಣಿ ಸಿಗರೇಟ್ ಸೇದುಗರು. ಸಿಗರೇಟಿನ ತುದಿಯಲ್ಲಿ ಉರಿಯುವ ಕೆಂಡದಂತೆ ಸ್ವತಃ ಸಿಟ್ಟಿನಿಂದ ಉರಿಯುತ್ತಿದ್ದವರು; ವೈಚಾರಿಕ ಕಿಚ್ಚಿನಿಂದ ಕೆಟ್ಟ ವ್ಯವಸ್ಥೆಯನ್ನು ಸುಟ್ಟುಹಾಕಬೇಕು ಎಂಬ ಅವರ ತಹತಹಕ್ಕೆ ಈ ಸಿಗರೇಟು ಸುಡುವಿಕೆ ಒಂದು ನಾಟಕೀಯ ಸಂಕೇತದಂತೆ ಕಾಣುತ್ತದೆ.

ಸಿಗರೇಟು ಹವ್ಯಾಸವಿರದ ತೇಜಸ್ವಿ 'ಚಿದಂಬರ ರಹಸ್ಯ'ದಲ್ಲಿ ಕೊಳೆತ ಊರೊಂದು ಬೆಂಕಿಬಿದ್ದು ಸುಟ್ಟು ಹೋಗುವುದನ್ನು ಚಿತ್ರಿಸುತ್ತಾರೆ. ವ್ಯವಸ್ಥೆಯ ವಿರುದ್ಧದ ಬಂಡುಕೋರ ಮನಸ್ಸಿನ ಪಂಜಾಬಿ ಲೇಖಕಿ ಅಮೃತಾ ಪ್ರೀತಂ ಸದಾ ಸಿಗರೇಟು ಸೇದುತ್ತಿದ್ದರು. ಒಂದು ಕವನದಲ್ಲಿ ಅವರು ಸುಟ್ಟುಬೂದಿಯಾಗುವ ಸಿಗರೇಟಿಗೆ ತಮ್ಮ ಬದುಕನ್ನು ಹೋಲಿಸಿಕೊಳ್ಳುತ್ತಾರೆ. ಕನ್ನಡದ ಈ ಸಿಗರೇಟು ಸೇದುಗರು ತಮ್ಮ ಆರೋಗ್ಯವನ್ನೂ ಲೆಕ್ಕಿಸದೆ ತಮ್ಮನ್ನೂ ಸುಟ್ಟುಕೊಂಡರು. ಇವರು ಸಿಗರೇಟು ಸೇದಿ ಆರೋಗ್ಯ ಕೆಡಿಸಿಕೊಳ್ಳದಿದ್ದರೆ ನಮ್ಮ ಜತೆ ಇನ್ನಷ್ಟು ದಿನ ಇರುತ್ತಿದ್ದರು ಎಂದು ಮರುಗುವುದರಲ್ಲಿ ಅರ್ಥವಿಲ್ಲ.

ಕರ್ನಾಟಕದ ರಂಗಸ್ಥಳ ಈಗ ವಿಚಿತ್ರ ರಂಗಿನಲ್ಲಿದೆ. ಬಲಪಂಥೀಯ ಲೇಖಕರು ದೊಡ್ಡಸೈಜಿನಲ್ಲಿ ಕಾಣಿಸುತ್ತಿದ್ದಾರೆ; ಸಂಘಪರಿವಾರದ ಸರ್ಕಾರವು ಕರ್ನಾಟಕದಲ್ಲಿ ಪೂರ್ಣಪ್ರಮಾಣದಲ್ಲಿ ತನ್ನ ಯಜಮಾನಿಕೆ ಸ್ಥಾಪಿಸಲು ಹವಣಿಸುತ್ತಿದೆ; ಪ್ರಭುತ್ವ ಜನಪರ ಹೋರಾಟಗಾರರನ್ನು ಕಳ್ಳರಂತೆ ಪಟ್ಟಿಮಾಡಿ ಪಟ್ಟಿಬಿಡುಗಡೆ ಮಾಡುತ್ತಿದೆ. ಇಂತಹ ಹೊತ್ತಲ್ಲಿ ಪ್ರಭುತ್ವ ವಿರೋಧಿ ದನಿಯ ನೈತಿಕ ವ್ಯಕ್ತಿತ್ವದ ಸಾರ್ವಜನಿಕ ವ್ಯಕ್ತಿಗಳು ಒಬ್ಬೊಬ್ಬರೇ ಕಾಣೆಯಾಗುತ್ತಿದ್ದಾರೆ. ಇವರ ಸಾವಿನಿಂದ ಸಂಘ ಪರಿವಾರ ಸಂತೋಷ ಪಟ್ಟಿರಬಹುದು; ಕಾರಣ, ಐದಾರು ವರ್ಷಗಳ ಅವಧಿಯಲ್ಲಿ ತೀರಿಕೊಂಡ ಈ ಸಮಾಜವಾದಿಗಳ ಗುಂಪು ಕೊನೆಯವರೆಗೂ ತೀವ್ರವಾಗಿ ತಿರಸ್ಕರಿಸಿದ ವಿಚಾರಗಳಲ್ಲಿ ಕೋಮುವಾದವೂ ಒಂದಾಗಿತ್ತು. ರಾಮದಾಸ್ ಅವರ ಜೀವನದ ಕೊನೆಯ ಸಂದರ್ಶನವು 'ವಾರ್ತಾಭಾರತಿ'ಯಲ್ಲಿ ಪ್ರಕಟವಾಯಿತು. ಅದು ಎಸ್.ಎಲ್. ಭೈರಪ್ಪನವರ 'ಆವರಣ' ಕಾದಂಬರಿಯನ್ನು ಕುರಿತಾಗಿತ್ತು. ಲಂಕೇಶ್ ಸಾಯುವ ತನಕವೂ ಓದುವಿಕೆ ಮಾಡಿದ್ದರು; ರಾಮದಾಸ್ ಸಾಯುವ ತನಕ ಪ್ರತಿರೋಧ ಮಾಡಿದರು. ಗುಂಡೂರಾವ್ ವಿರುದ್ಧದ್ದು ಕನ್ನಡದ ಪರವಾದ ಪ್ರತಿರೋಧವಾಗಿದ್ದರೆ, ಭೈರಪ್ಪನವರ ವಿರುದ್ಧದ್ದು ಮನುಷ್ಯತ್ವದ ಪರವಾಗಿತ್ತು. □

ಸರಿವ ಮರಕ್ಕ ಕಣಾಕ್ಷ ನಡುವೆ

ನಡೆಯುತ್ತಿದೆ ಯುದ್ಧದ ಹಾಗೆ
ಶತಶತಮಾನದಿಂದಲೂ
ಈ ಕ್ಷಣದವಗೆಗೂ
ನಿರಂತರವಾಗಿ
ನಮ್ಮಲ್ಲೆ ನಾವು
ಗತಿಹೀನರಾಗಿ ದಿಕ್ಕೆಡಲು
ಸ್ಥಿತಿಹೀನರಾಗಿ ದುಡಿಯಲು
ಮುಖವಿದ್ದೂ ಮುಖೇಡಿಯಾಗಲು

ಮೊದಲು ಸಿಂಧೂ ದಾಟಿದ ಯೋಗ
ಪರಮ ಪದದಲ್ಲಿ ಒರಗಿರುತ್ತ
ನಮ್ಮ ಮನೆಯಲ್ಲೆ ಸೇವಕತನಕಟ್ಟಿದೆ
ಮಂತ್ರ ದಂಡ ಹಿಡಿದು
ಬಾಗಿಲಲ್ಲೆ ಇರಿಸಿ, ನಡು ಬಗ್ಗಿಸಿದೆ
ನೆಲ ತಗ್ಗಿಸಿ, ತಳ ಊರಿಸಿದೆ
ಸನಾತನವಾಗಿ



ನಂತರ ಪೃಥ್ವಿಯನ್ನೆ ಗೆದ್ದು
ಮುಂದಡಿಯಿಟ್ಟು
ಅಲ್ಪಪಡೆ ಬಹುತರ ಹಿಗ್ಗಿಸುವ
ಹುಚ್ಚು ದರಬಾರಿನಲ್ಲಿ
ನಮ್ಮೊಳಗಿದ್ದೂ ನಮ್ಮಂತಾಗದೆ
ಭಯಂಕರ ಹತಾರ ಹಿಡಿದು
ಬೆನ್ನಲ್ಲೆ ನಿಂತಿದೆ ಸದಾಕಾಲ

ಕೊನೆಗೆ ಹಡಗನ್ನೇರಿ ಬಂದು
ವ್ಯಾಪಾರ ಮಾಡಿ ನಮ್ಮನ್ನು
ನಷ್ಟಕ್ಕೆ ಗುರಿಪಡಿಸಿದೆ, ಮೇಲಾಳಿಕೆ ನಡೆಸಿದೆ
ಕರುಣೆಯ ಹಣ ಹರಿಸಿದೆ
ಹಸಿದೊಡಲ ಖರೀದಿ ಮಾಡಿದೆ
ಸಂಪತ್ತಿನ ಮೂಲ ಜಗದ ಒಡೆತನಕ್ಕಾಗಿ
ಮಾನವನ ನೇಣಿಗೇರಿಸಿದೆ
ಬೆಳವಣಿಗೆಯ ಹರಿತ ಅಲುಗು ಹಿರಿದು
ಯಾವಾಗಲೂ ತಣ್ಣಗೆ

ಈ ಬಣ್ಣ ಬಣಗಳ
ಬಲಾಬಲ
ತುರುಸಿನ ತಿಕ್ಕಾಟದಲ್ಲಿ–
ಹಂಚಿ ಹೋಗಿ

ಹಲವು ದಿರಿಸುಗಳಲ್ಲಿ–
ನಮ್ಮ ವಿರುದ್ಧ ನಿಂತ ಹಗೆ ನಾವೇ
ಕೈ ಎತ್ತಿದ್ದೇವೆ
ಪರರಿಗೆ ಮೈ ಮರೆತು

ನಮ್ಮತನ
ರಾಶಿ ಬಿದ್ದಿದೆ ಬರಿದು

ಜೀವಂತ ದೇಶಿ
ಸತತ ಮಸಣವಾಸಿ

○ ಶ್ರೀಧರ ಪಿಸ್ಸೆ

ಭಗತ್‌ಸಿಂಗ್ ಮತ್ತು ಯುವಜನತೆ

ಮ. ಶ್ರೀ. ಮುರಳಿ ಕೃಷ್ಣ

ಆಗ ಆ ಬಾಲಕನಿಗೆ ೫ ವರ್ಷ ವಯಸ್ಸು. ಒಮ್ಮೆ ಅವನ ತಂದೆಯ ಸ್ನೇಹಿತರು "ನಿನ್ನದು ಯಾವ ಧರ್ಮ ಪಂಥ?" ಎಂದು ಪ್ರಶ್ನಿಸುತ್ತಾರೆ. ಆ ಬಾಲಕ ರೆಪ್ಪೆ ಮಿಟುಕಿಸದೆ–"ನನ್ನದು ದೇಶಭಕ್ತಿ ಪಂಥ" ಎಂದು ತಕ್ಷಣ ಉತ್ತರಿಸುತ್ತಾನೆ. ಅಷ್ಟು ಚಿಕ್ಕವಯಸ್ಸಿನಲ್ಲಿ ಎಂಥಾ ಉದಾತ್ತ ಭಾವನೆ! ಇದೇ ಬಾಲಕ ಹನ್ನೆರಡು ವರ್ಷದವನಾಗಿದ್ದಾಗ ಒಂದು ಅವಿಸ್ಮರಣೀಯ ಘಟನೆ ಜರುಗುತ್ತದೆ...

ಅಂದು ಏಪ್ರಿಲ್ ೧೯೧೯ರ ೨೦ನೇ ತಾರೀಖು, ಸಮಯ ಮಟ ಮಟ ಮಧ್ಯಾಹ್ನ. ಆ ಬಾಲಕ ಜಲಿಯನ್ ವಾಲಾಬಾಗ್‌ನಲ್ಲಿ ಶತಪಥ ತಿರುಗಾಡುತ್ತಿರುತ್ತಾನೆ. ಶಾಲೆಗೆ ಚಕ್ಕರ್ ಹೊಡೆದು ಅವನು ಅಮೃತಸರಕ್ಕೆ ಬಂದಿರುತ್ತಾನೆ. ಅವನ ಮನೆಯಲ್ಲಿ ಯಾರಿಗೂ ಈ ಪಯಣದ ಬಗೆಗೆ ಅರಿವಿರುವುದಿಲ್ಲ. ಅವನ ಕೈ ಚೀಲದಲ್ಲಿ ಕೆಲವು ಪುಸ್ತಕಗಳು ಹಾಗೂ ಒಂದು ಸಣ್ಣ ಡಬ್ಬಿ ಇರುತ್ತವೆ. ತರುವಾಯ, ಆ ಹುಡುಗ ಸ್ವಲ್ಪ ಮಣ್ಣನ್ನು ಕೈಗೆತ್ತಿಕೊಂಡು ಹಣೆಯಲ್ಲಿಟ್ಟುಕೊಳ್ಳುತ್ತಾನೆ ರಾತ್ರಿಯಾಗುತ್ತದೆ. ಎಂದಿನಂತೆ ಅವನ ಸಹೋದರಿ ಊಟಕ್ಕೆ ಎಬ್ಬಿಸುತ್ತಾಳೆ. ಅವನು 'ಒಲ್ಲೆ' ಎನ್ನುತ್ತಾನೆ. ಆಶ್ಚರ್ಯಚಕಿತಳಾದ ಅವಳು ಅವನಿಗೆ ಪ್ರಿಯವಾದ ಮಾವಿನ ಹಣ್ಣನ್ನು ನೀಡುತ್ತಾಳೆ. ಅವನು ಅದನ್ನೂ ನಿರಾಕರಿಸುತ್ತಾನೆ ಅವಳನ್ನು ಮನೆಯ ಹಿಂದೆ ಕರೆದುಕೊಂಡು ಹೋಗಿ, ಡಬ್ಬಿಯಲ್ಲಿದ್ದ ಮಣ್ಣನ್ನು ತೋರಿಸುತ್ತಾನೆ. ಕೆಂಪು ಬಣ್ಣದ ಆ ಮಣ್ಣು ಜಲಿಯನ್‌ವಾಲಾಬಾಗ್‌ದೆಂದು ತಿಳಿದಾಗ, ಅವಳಿಗೆ ತನ್ನ ತಮ್ಮ ಊಟ ನಿರಾಕರಿಸಿದ್ದರ ಹಿನ್ನೆಲೆ ಗೊತ್ತಾಗುತ್ತದೆ. ಆ ಬಾಲಕನೇ ಭಗತ್‌ಸಿಂಗ್!

ನಂತರ, ಭಗತ್‌ಸಿಂಗ್ ಲಾಹೋರಿನ ಡಿ.ಎ.ವಿ. ಶಾಲೆಯ ವಿದ್ಯಾರ್ಥಿಯಾಗಿದ್ದಾಗ, ಗಾಂಧೀಜಿಯ ಕರೆಯ ಮೇರೆಗೆ ರಾಷ್ಟ್ರವ್ಯಂತ ಅಸಹಕಾರ ಚಳವಳಿ ಶುರುವಾಗುತ್ತದೆ. ಇದಾದ ಅಲ್ಪ ಸಮಯದಲ್ಲಿ ಅನೇಕ ರಾಷ್ಟ್ರೀಯ ಶಾಲೆಗಳೂ ಪ್ರಾರಂಭವಾಗುತ್ತವೆ. ಸರ್ಕಾರದಿಂದ ಅನುದಾನ ಪಡೆಯುತ್ತಿದ್ದ ಶಾಲೆಗಳನ್ನು ವಿದ್ಯಾರ್ಥಿಗಳು ಬಹಿಷ್ಕರಿಸಬೇಕೆಂದು ಗಾಂಧೀಜಿ ಕರೆ ನೀಡಿದಾಗ ಅವನು ಲಾಹೋರಿನ ನ್ಯಾಷನಲ್ ಕಾಲೇಜನ್ನು ಸೇರುತ್ತಾನೆ.

ಭಗತ್‌ಸಿಂಗ್ ೧೩-೧೪ ವಯಸ್ಸಿನವನಾಗಿದ್ದಾಗಲೇ ಪುಸ್ತಕಗಳ ನಂಟು ಬೆಳೆಯುತ್ತದೆ. ಪುಸ್ತಕಗಳನ್ನು ಓದಿ ತನ್ನ ಮಿತ್ರರೊಡನೆ ಗಂಟೆಗಟ್ಟಲೆ ಚರ್ಚೆ ಮಾಡಲು ಶುರುಮಾಡುತ್ತಾನೆ. ಅಕ್ಷರಗಳ ಜತೆಗಿನ ಅಕ್ಕರೆಯ ಆಟ ಅವನ ಜ್ಞಾನದ ಪರಿಧಿಯನ್ನು ವಿಸ್ತರಿಸುತ್ತದೆ. ನಾನಾ ಗಹನ ವಿಷಯಗಳ ಅರಿವಾಗುತ್ತದೆ. ಈ ಕಾಲದಲ್ಲೇ ಅವನು ಅಸಹಕಾರ ಚಳವಳಿಯಲ್ಲಿ ಭಾಗವಹಿಸುತ್ತಾನೆ. ಅವನ ಮನೆಯವರು ತಕರಾರು ಎತ್ತುವುದಿಲ್ಲ. ಅವನು ಬಿ.ಎ ಓದುತ್ತಿರು ವಾಗ, ಅವನ ಪ್ರೀತಿಯ ಅಜ್ಜಿ ಮೊಮ್ಮಗ ಮದುವೆ ಯಾಗಬೇಕೆಂಬ ಬೇಡಿಕೆ ಮುಂದಿಡುತ್ತಾಳೆ. ಭಗತ್‌ಸಿಂಗ್ ಮದುವೆಯ ಪ್ರಸ್ತಾಪ ತಿಳಿದು ತನ್ನ ತಂದೆ ಕಿಶನ್‌ಸಿಂಗ್‌ಗೆ ಪತ್ರ ಬರೆಯುತ್ತಾನೆ. ತಾನು ದೇಶಕ್ಕಾಗಿ ಎಲ್ಲವನ್ನು ತ್ಯಾಗ ಮಾಡಲು ಸಿದ್ಧವಿರುವುದಾಗಿ ತಿಳಿಸಿ, ಕುಟುಂಬಕ್ಕೆ ಗಂಟು ಹಾಕಬಾರದೆಂದು ವಿನಂತಿಸುತ್ತಾನೆ. ಆದರೆ ಆತನ ತಂದೆ ತನ್ನ ತಾಯಿಯ ಒತ್ತಡಕ್ಕೆ ಮಣಿದು ಭಗತ್‌ಸಿಂಗ್ ಅಜ್ಜಿಯ ಮಾತನ್ನು ನೆರವೇರಿಸಬೇಕೆಂದು ಪತ್ರಿಸುತ್ತಾನೆ. ಭಗತ್‌ಸಿಂಗ್ ಮಾರುತ್ತರ ನೀಡುತ್ತ –"ನೀನೂ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡುತ್ತಿದ್ದೀಯಾ.... ಹೀಗಿರಬೇಕಾದರೆ, ನೀನೇ ಈ ಬಗೆಯ ಸಾಮಾನ್ಯ ವಿಷಯದ ಪ್ರಭಾವಕ್ಕೆ ಒಳಪಟ್ಟರೆ ಬೇರೆಯವರ ಪಾಡೇನು? ೩೩ ಕೋಟಿ ಜನರಿರುವ ಭಾರತ ಮಾತೆಯ ಚಿಂತೆ ನಿನಗೆ ಗೊತ್ತಿಲ್ಲವೆ? ಅವಳ ಮುಕ್ತಿಗಾಗಿ ನಾವು ಎಲ್ಲವನ್ನೂ ತ್ಯಾಗ ಮಾಡಬೇಕಲ್ಲವೆ? ನನಗೆ ನೀವು ಬಲವಂತದಿಂದ ಮದುವೆ ಮಾಡಿಸುತ್ತೀರಿ ಎಂದು ಗೊತ್ತು. ಆದುದರಿಂದ ನಾನು ಈ ಊರನ್ನೇ ತೊರೆಯುತ್ತೇನೆ" ಎಂದು ಬರೆಯುತ್ತಾನೆ.

ತರುವಾಯ ಭಗತ್‌ಸಿಂಗ್ ಕಾನ್ಪುರಕ್ಕೆ ತೆರಳಿ ನೌಜವಾನ್ ಭಾರತ್ ಸಭಾ, ಹಿಂದೂಸ್ತಾನ್ ಸಮಾಜವಾದೀ ಗಣತಂತ್ರ ಸಂಘಟನೆಯನ್ನು ಕಟ್ಟುವುದರಲ್ಲಿ ವಿಶೇಷ ಪಾತ್ರವನ್ನು ವಹಿಸುತ್ತಾನೆ. ವಿದ್ಯಾರ್ಥಿಗಳು ಹಾಗೂ ಯುವಜನರನ್ನು ಸಂಘಟಿಸುತ್ತಾನೆ. ನಾಸ್ತಿಕನಾಗಿ ಸಮಾಜವಾದಿ ಸಿದ್ಧಾಂತದ ಆಧಾರದ ಮೇಲೆ ತನ್ನ ಕನಸಿನ ಭಾರತದ ಸಮಾಜವನ್ನು ನಿರ್ಮಿಸಲು ಬ್ರಿಟಿಷರನ್ನು ಹೊಡೆದೋಡಿಸಲು ಅಹರ್ನಿಶಿ ಹೋರಾಡುತ್ತಾನೆ. ಕೊನೆಗೆ ಲಾಹೋರ್ ಪಿತೂರಿ ಮೊಕದ್ದಮೆಯಲ್ಲಿ ಆಪಾದಿತನಾಗಿ ರಾಜಗುರು ಮತ್ತು ಸುಖದೇವರೊಡನೆ ಗಲ್ಲಿಗೇರುತ್ತಾನೆ.

ಭಗತ್‌ಸಿಂಗ್ ಬದುಕಿದ್ದು ಕೇವಲ ೨೪ ವರ್ಷ. ಅಷ್ಟು ಅಲ್ಪ ಅವಧಿಯಲ್ಲೇ ಅವನ ವ್ಯಕ್ತಿತ್ವದಲ್ಲಾದ ಪಲ್ಲಟವನ್ನು ಗಮನಿಸಿದರೆ, ಯಾರಾದರೂ ಸ್ತಂಭೀಭೂತರಾಗುವುದರಲ್ಲಿ ಅಚ್ಚರಿಯಿಲ್ಲ. ಶುರುವಿನಲ್ಲಿ ಅವನು ಒಬ್ಬ ಭಯೋತ್ಪಾದಕ ಎಸಗುವ ಆಚರಣೆಗಳ ಮಾದರಿಯಲ್ಲಿ ಸಾಗಿದರೂ, ಸಾಯುವ ೨-೩ ವರ್ಷಗಳ ಮುನ್ನ ಆತ

ಭಗತ್‌ಸಿಂಗ್ ಲಾಹೋರಿನ ಡಿ.ಎ.ವಿ. ಶಾಲೆಯ ವಿದ್ಯಾರ್ಥಿಯಾಗಿದ್ದಾಗ, ಗಾಂಧೀಜಿಯ ಕರೆಯ ಮೇರೆಗೆ ರಾಷ್ಟ್ರವ್ಯಂತ ಅಸಹಕಾರ ಚಳವಳಿ ಶುರುವಾಗುತ್ತದೆ. ಇದಾದ ಅಲ್ಪ ಸಮಯದಲ್ಲಿ ಅನೇಕ ರಾಷ್ಟ್ರೀಯ ಶಾಲೆಗಳೂ ಪ್ರಾರಂಭವಾಗುತ್ತವೆ. ಸರ್ಕಾರದಿಂದ ಅನುದಾನ ಪಡೆಯುತ್ತಿದ್ದ ಶಾಲೆಗಳನ್ನು ವಿದ್ಯಾರ್ಥಿಗಳು ಬಹಿಷ್ಕರಿಸಬೇಕೆಂದು ಗಾಂಧೀಜಿ ಕರೆ ನೀಡಿದಾಗ ಅವನು ಲಾಹೋರಿನ ನ್ಯಾಷನಲ್ ಕಾಲೇಜನ್ನು ಸೇರುತ್ತಾನೆ. ಭಗತ್‌ಸಿಂಗ್ ೧೩-೧೪ ವಯಸ್ಸಿನವನಾಗಿದ್ದಾಗಲೇ ಪುಸ್ತಕಗಳ ನಂಟು ಬೆಳೆಯುತ್ತದೆ. ಪ್ರಸ್ತಕಗಳನ್ನು ಓದಿ ತನ್ನ ಮಿತ್ರರೊಡನೆ ಗಂಟೆಗಟ್ಟಲೆ ಚರ್ಚೆ ಮಾಡಲು ಶುರು ಮಾಡುತ್ತಾನೆ. ಅಕ್ಷರಗಳ ಜತೆಗಿನ ಅಕ್ಕರೆಯ ಆಟ ಅವನ ಜ್ಞಾನದ ಪರಿಧಿಯನ್ನು ವಿಸ್ತರಿಸುತ್ತದೆ. ನಾನಾ ಗಹನ ವಿಷಯಗಳ ಅರಿವಾಗುತ್ತದೆ.

ವೈಯಕ್ತಿಕ ನಿರ್ಮೂಲನದ ಸೀಮಿತತೆಯನ್ನು ಅರಿಯುತ್ತಾನೆ. ಅವನಿಗೆ ಕ್ರಾಂತಿಯಲ್ಲಿ ಯುವಕರು ವಹಿಸಬಹುದಾದ ಮಹತ್ವದ ಪಾತ್ರದ ಬಗೆಗೆ ನಿಖರವಾದ ನಿಲುವುಗಳಿದ್ದವು; ಭರವಸೆಯೂ ಇತ್ತು. ನೌಜವಾನ್ ಭಾರತ್ ಸಭಾದ ಘೋಷಣಾ ಪತ್ರವೊಂದರಲ್ಲಿ ಕ್ರಾಂತಿಯ ಬಗೆಗೆ ಬರೆಯುತ್ತ– "ಯುವಕರು ನಸುನಗುತ್ತ ಅತ್ಯಂತ ಭೀಕರವಾದ ಅಮಾನವೀಯ ಯಾತನೆಯನ್ನು ಸಹಿಸಬಲ್ಲರು; ಮೃತ್ಯುವನ್ನು ಯಾವ ಅಂಜಿಕೆಯೂ ಇಲ್ಲದೆ ಅಪ್ಪಬಲ್ಲರು ಕೂಡ. ಮಾನವನ ಪ್ರಗತಿಯ ಇತಿಹಾಸದ ಪುಟಪುಟವೂ ಯುವಕ ಯುವತಿಯರ ರಕ್ತದಿಂದಲೇ ಬರೆದಿದ್ದಾಗಿದೆ. ಟರ್ಕಿಯ ಜನ ಸಾಧಿಸಿದ ಅದ್ಭುತಗಳು ನಿಮಗೆ ತಿಳಿದಿಲ್ಲವೆ? ಚೀನಾದ ಯುವಕರು ಮಾಡುತ್ತಿರುವ ಅಮೋಘ ಕೃತ್ಯಗಳ ಬಗೆಗೆ ದಿನನಿತ್ಯ ಪತ್ರಿಕೆಗಳಲ್ಲಿ ನೀವು ಓದುತ್ತಿಲ್ಲವೆ? ರಷ್ಯಾದ ವಿಮೋಚನೆಗಾಗಿ ತಮ್ಮ ಪ್ರಾಣಗಳನ್ನರ್ಪಿಸಿದವರು ರಷ್ಯಾದ ಯುವಕರಲ್ಲವೆ? ಕಳೆದ ಶತಮಾನದಲ್ಲಿ (೧೯ನೇ) ಅಂತಹ ಸಾವಿರಾರು ಯುವಕರನ್ನು ಸೈಬೀರಿಯಾಕ್ಕೆ ಅಟ್ಟಲಾಗಿತ್ತು. ಏಕೆ? ಸಮಾಜವಾದಿ ಕರಪತ್ರಗಳನ್ನು ನಂಬಿದ್ದಕ್ಕಾಗಿ; ಅಥವಾ, ದೋಸ್ತೋಯೆವ್‌ಸ್ಕಿಯಂತೆ ಕೇವಲ ಸಮಾಜವಾದಿ ಚರ್ಚಾ ಕೂಟಕ್ಕೆ ಸೇರಿದ್ದಕ್ಕಾಗಿ. ಪದೇಪದೆ ಅವರ ಮೇಲೆ ಕ್ರೂರ ಪ್ರಹಾರಗಳಾದವು. ಆದರೆ ಅವರು ಧೃತಿಗೆಡಲಿಲ್ಲ. ರಾಷ್ಟ್ರವನ್ನು ಭವಿಷ್ಯಕ್ಕೆ ಅಣಿಗೊಳಿಸುವ ಕಾರ್ಯಕ್ರಮ ಆರಂಭವಾಗಬೇಕಾದ್ದು 'ಜನತೆಯಿಂದ ಮತ್ತು ಜನತೆಗಾಗಿ ಕ್ರಾಂತಿ' ಎಂಬ ಆದರ್ಶ ಸೂತ್ರದ ಮೇಲೆ. ಅದನ್ನೇ ಬೇರೆ ಪದಗಳಲ್ಲಿ ಹೇಳುವುದಾದರೆ, ಜನಸಂಖ್ಯೆಯ ಶೇಕಡಾ ೯೮ ಭಾಗಕ್ಕೆ ಸ್ವರಾಜ್ಯ; ಜನತೆಯೇ ಜನತೆಗಾಗಿ ಗಳಿಸಿಕೊಂಡ ಸ್ವರಾಜ್ಯ ವಿಸ್ತಾರವಾಗಿ ಚರ್ಚೆಗೆ ತೊಡಗದೆ ಇವಿಷ್ಟನ್ನು ಖಂಡಿತವಾಗಿ ಹೇಳಬಹುದು. ನಮ್ಮ ಗುರಿಯನ್ನು ಮುಟ್ಟಲು ನಮಗೆ ಸಾವಿರಾರು ಮಂದಿ ಧೀಮಂತ ಯುವಕರ ಅವಶ್ಯಕತೆಯಿದೆ; ರಷ್ಯಾದ ಯುವಕರಂತೆ ಅವರು ತಮ್ಮ ಪ್ರಶಸ್ತ ಜೀವನವನ್ನು ಹಳ್ಳಿಗಳಲ್ಲಿ ಕಳೆಯಬೇಕು, ಜನರಿಗೆ ಭಾರತ ಕ್ರಾಂತಿಯ ನಿಜಾರ್ಥದ ತಿಳಿವಳಿಕೆ ನೀಡಬೇಕು... ಕ್ರಾಂತಿಯೆಂದರೆ ಅವಶ್ಯಕವಾಗಿ ಬಾಂಬುಗಳು ಮತ್ತು ಪಿಸ್ತೂಲುಗಳ ವ್ಯಕ್ತಿಯೇ ಆಗಿರಬೇಕಾಗಿಲ್ಲ" ಎಂದು ಪ್ರಸ್ತಾಪಿಸಿದ್ದಾನೆ. (ಆಕರ–ಡಾ॥ ಜಿ ರಾಮಕೃಷ್ಣರ 'ಭಗತ್‌ಸಿಂಗ್' ಪುಸ್ತಕ) ಕ್ರಾಂತಿಯನ್ನು ಈ ರೀತಿ ಸರಿಯಾಗಿ ಅರ್ಥೈಸಿದ್ದರಿಂದ ಭಗತ್‌ಸಿಂಗ್ ಶಾಸನಸಭೆಯಲ್ಲಿ ಬಾಂಬು ಎಸೆಯುವಾಗ ಯಾರಿಗೂ ಪ್ರಾಣಹಾನಿಯಾಗದಂತೆ ಎಚ್ಚರವಹಿಸುತ್ತಾನೆ. ಇದು ಅವನ ತಿಳಿವಳಿಕೆ ವಿಸ್ತಾರವಾದದ್ದರ ಸಂಕೇತ ಎನ್ನಬಹುದು.

ಭಗತ್‌ಸಿಂಗ್ ತಾನು ಹೊಂದಿದ್ದ ಉದಾತ್ತ ಗುರಿಗಳ ಸಾಕಾರಕ್ಕಾಗಿ ಸರ್ವಸ್ವವನ್ನೂ ತ್ಯಾಗ ಮಾಡಿದ. ಕೊನೆಗೆ ತನ್ನ ಪ್ರಾಣವನ್ನೇ ಸಮರ್ಪಿಸಿದ ಅವನು ಈ ಪರಿಯ ಸ್ವಾರ್ಥರಹಿತ ತೀರ್ಮಾನ ತೆಗೆದುಕೊಳ್ಳುವುದರ ಹಿಂದೆ ಎಂಥ ಪ್ರೇರಕ ಶಕ್ತಿ ಕೆಲಸ ಮಾಡಿರಬಹುದು? ನಿಜ, ೧೯೧೦–೩೦ರ ದಶಕಗಳಲ್ಲಿ ಭಾರತದಾದ್ಯಂತ ಸ್ವಾತಂತ್ರ್ಯ ಆಂದೋಲನ ಉಚ್ಛ್ರಾಯ ಸ್ಥಿತಿಯನ್ನು ತಲುಪಿತ್ತು. ಬ್ರಿಟಿಷರ ದಬ್ಬಾಳಿಕೆ, ದೌರ್ಜನ್ಯಗಳು ಎಲ್ಲೆ ಮೀರಿದ್ದವು. ಗಾಂಧೀಜಿಯವರ ಮಧ್ಯ ಪ್ರವೇಶದಿಂದ ಇಡೀ ಸ್ವಾತಂತ್ರ್ಯ ಚಳವಳಿಗೆ ಒಂದು ಹೊಸ ತಿರುವು ಸಿಕ್ಕಿತ್ತು. ಆದರೆ ಕಾಂಗ್ರೆಸ್ ಮತ್ತು ಗಾಂಧೀಜಿಯವರ ನಿಲುವುಗಳನ್ನು ವಿರೋಧಿಸುತ್ತಿದ್ದ ಅನೇಕ ಬಣಗಳು, ಹೋರಾಟಗಾರರೂ ಇದ್ದರು. ಅವರಿಗೆ ಸ್ವಾತಂತ್ರ್ಯ ಹೋರಾಟದ ಮಾರ್ಗದ ಬಗೆಗೆ ಭಿನ್ನಾಭಿಪ್ರಾಯಗಳಿದ್ದವು. ಆ ಕಾಲದಲ್ಲಿ ವಿದ್ಯಾರ್ಥಿಗಳು ಹಾಗೂ ಯವಜನರು ಹೆಚ್ಚಿನ ಸಂಖ್ಯೆಯಲ್ಲಿ ಸ್ವಾತಂತ್ರ್ಯ ಆಂದೋಲನದಲ್ಲಿ ಭಾಗವಹಿಸಲು ಕಾರಣಗಳೇನು? ಒಂದು ಬಗೆಯ ಸಮೂಹ ಸನ್ನಿ ಇರಬಹುದೆ? ಅಥವಾ ದೇಶಭಕ್ತಿಯ ಅಭಿವ್ಯಕ್ತಿಯೆ? ಅವರಿಗೆ ಮಾದರಿ ಎನಿಸುವ ವ್ಯಕ್ತಿಗಳು, ನಾಯಕರು ಸಾಕಷ್ಟು ಸಂಖ್ಯೆಯಲ್ಲಿ ಇದ್ದರೆನ್ನುವುದೆ?

ಸ್ವಾತಂತ್ರ್ಯ ಹೋರಾಟ–ಸಾಮಾಜಿಕ ಪಲ್ಲಟಗಳು–ಕ್ರಾಂತಿ–ಯುವಜನರ ಪಾತ್ರ ಮುಂತಾದುವುಗಳ ಬಗೆಗೆ ಚೆನ್ನೈನ ಖ್ಯಾತ ಶಿಕ್ಷಣ ತಜ್ಞ ಪ್ರೊ॥ ವಿಕ್ಟರ್ ಲೂಯಿಸ್ ಆಂಟುವನ್ ತಮ್ಮ ಅನಿಸಿಕೆಗಳನ್ನು ಮಂಡಿಸುತ್ತ –"ಸ್ವಾತಂತ್ರ್ಯ ಆಂದೋಲನದ ಕಾಲದಲ್ಲಿದ್ದ ವಸಾಹತುಶಾಹಿ ಹಾಗೂ ಸಾಮ್ರಾಜ್ಯಶಾಹಿ ಶಕ್ತಿಗಳ ಬಲಾಬಲಕ್ಕೂ ಇಂದಿನ ನವರೂಪ ಹೊಂದಿದ ಆ ಶಕ್ತಿಗಳ ಪ್ರಾಬಲ್ಯಕ್ಕೂ ಅನೇಕ ವ್ಯತ್ಯಾಸಗಳಿವೆ. ಪ್ರಸ್ತುತ ಈ ಶಕ್ತಿಗಳು ಅಧಿಕ ಮಿಲಿಟರಿ ಬಲವನ್ನು ಮಾತ್ರ ಹೊಂದಿಲ್ಲ. ಅವುಗಳು ಆರ್ಥಿಕವಾಗಿಯೂ ಬಲಾಢ್ಯವಾಗಿವೆ.

ಭಗತ್‌ಸಿಂಗ್ ಹುತಾತ್ಮನಾಗಿ ಎಪ್ಪತ್ತಾರು ವರ್ಷಗಳ ನಂತರ ನಮ್ಮ ವಿದ್ಯಾರ್ಥಿಗಳು ಹಾಗೂ ಯುವಜನರ ನಡವಳಿಕೆಗಳನ್ನು ವಿಶ್ಲೇಷಿಸಿದಾಗ, ನಾವು ನಿಬ್ಬೆರಗಾಗುವುದರಲ್ಲಿ ಸಂದೇಹವಿಲ್ಲ. ಅಷ್ಟೊಂದು ಅಜಗಜಾಂತರ ವ್ಯತ್ಯಾಸಗಳಿವೆ!! ಅಂದು ಭವಿಷ್ಯದ ಬಗೆಗೆ ಯಾವುದೇ ಬಗೆಯ ಚಿಂತೆಯಿಲ್ಲದೆ ಅನೇಕ ವಿದ್ಯಾರ್ಥಿಗಳು ಹಾಗೂ ಯುವಜನರು ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸುತ್ತಿದ್ದರು; ನಾನಾ ರೀತಿಯ ಕಷ್ಟ ಕೋಟಲೆಗಳನ್ನು ಎದುರಿಸುತ್ತಿದ್ದರು.

ಈಗಿನ ಯವಕರ ಮನೋಭಾವವೇ ಬದಲಾವಣೆಯಾಗಿದೆಯೆ? ಬ್ರಿಟಿಷರ ಕಾಲದಲ್ಲಿದ್ದ ನೇರವಾದ ಶೋಷಣೆ ಈಗ ಇಲ್ಲವೆ? ರಾಷ್ಟ್ರೀಯ ಆಗು–ಹೋಗುಗಳ ಬಗೆಗೆ ಸರಿಯಾಗಿ ಸ್ಪಂದಿಸದೇ ಇರುವುದರ ಹಿಂದೆ ನಮ್ಮ ಶಿಕ್ಷಣ ಕ್ಷೇತ್ರದ ವೈಫಲ್ಯಗಳು ಕಾರಣವೇ? ಅಥವಾ ಮಕ್ಕಳನ್ನು ಬೆಳೆಸುವ ರೀತಿಯಲ್ಲಿ ತಪ್ಪುಗಳಾಗುತ್ತಿವೆಯೆ? ಅವರಿಗೆ ಇಂದಿನ ಸಾರ್ವಜನಿಕ ಜೀವನದಲ್ಲಿ ಉತ್ತಮ ಮಾದರಿ ವ್ಯಕ್ತಿಗಳು ಸಿಗುತ್ತಿಲ್ಲವೆ/ಕಾಣಿಸುತ್ತಿಲ್ಲವೆ? ಎಂಬಿತ್ಯಾದಿ ಜಟಿಲ ಪ್ರಶ್ನೆಗಳಿಗೆ ಸುಲಭ ಉತ್ತರಗಳಿಲ್ಲ. ಏಕೆಂದರೆ ಈ ಅವಧಿಯಲ್ಲಿ ಎಲ್ಲ ಕ್ಷೇತ್ರಗಳಲ್ಲಿ ಜರುಗಿರುವ ಬದಲಾವಣೆಗಳ ಆಳ ಮತ್ತು ವಿಸ್ತಾರ ಅಪಾರ. ಆದುದರಿಂದ ಅವುಗಳ ವಿಶ್ಲೇಷಣೆಯೂ ಸಂಕೀರ್ಣವಾದದ್ದು ಹಾಗೂ ಬಹು ಮುಖಿ ಆಯಾಮಗಳನ್ನು ಹೊಂದಿರುತ್ತದೆ ಎಂಬುದನ್ನು ಗಣನೆಗೆ ತೆಗೆದುಕೊಳ್ಳಬೇಕು.

ಆದರೆ ಇಂದಿನ ವಸ್ತುಸ್ಥಿತಿಯನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಎಲ್ಲ ಕ್ಷೇತ್ರಗಳಲ್ಲಿ ಮೌಲ್ಯಗಳು ಕುಸಿದಿರುವುದನ್ನು ಕಾಣಬಹುದು. ಆದುದರಿಂದ ವಿದ್ಯಾರ್ಥಿಗಳು ಹಾಗೂ ಯುವಜನರನ್ನು ಮಾತ್ರ ದೂಷಿಸುವುದು ಸರಿಯಲ್ಲ ಎಂಬುದು ವಿಶೇಷಜ್ಞರ ಅಭಿಮತ. ಅವರು ಒಂದು ಅಂಶದ ಬಗೆಗೆ ನಮ್ಮ ಗಮನ ಸೆಳೆಯುತ್ತಾರೆ. ಅದೆಂದರೆ, ಈಗಿನ ಯುವಕರಿಗೆ ಲಭ್ಯವಿರುವ ವಿಪುಲ ಮಾಹಿತಿ ಸಂಗ್ರಹಣೆಯ ಮೂಲಗಳು. ಆದುದರಿಂದ ಅವರಿಗೆ ಮಾಹಿತಿಗಳು ಕೊರತೆಯಿಲ್ಲ. ಅವರಿಗೆ ಬೇಕಿರುವುದು ಸ್ಪಷ್ಟ ಹಾಗೂ ಸರಿಯಾದ ಮಾರ್ಗದರ್ಶನ ಎಂಬುದು ಅವರ ಅಭಿಪ್ರಾಯ.

ಸ್ವಾತಂತ್ರ್ಯ ಹೋರಾಟ–ಸಾಮಾಜಿಕ ಪಲ್ಲಟಗಳು–ಕ್ರಾಂತಿ–ಯುವಜನರ ಪಾತ್ರ ಮುಂತಾದುವುಗಳ ಬಗೆಗೆ ಚೆನ್ನೈನ ಖ್ಯಾತ ಶಿಕ್ಷಣ ತಜ್ಞ ಪ್ರೊ॥ ವಿಕ್ಟರ್ ಲೂಯಿಸ್ ಆಂಟುವನ್ ತಮ್ಮ ಅನಿಸಿಕೆಗಳನ್ನು ಮಂಡಿಸುತ್ತ – "ಸ್ವಾತಂತ್ರ್ಯ ಆಂದೋಲನದ ಕಾಲದಲ್ಲಿದ್ದ ವಸಾಹತುಶಾಹಿ ಹಾಗೂ ಸಾಮ್ರಾಜ್ಯಶಾಹಿ ಶಕ್ತಿಗಳ ಬಲಾಬಲಕ್ಕೂ ಇಂದಿನ ನವರೂಪ ಹೊಂದಿದ ಆ ಶಕ್ತಿಗಳ ಪ್ರಾಬಲ್ಯಕ್ಕೂ ಅನೇಕ ವ್ಯತ್ಯಾಸಗಳಿವೆ. ಪ್ರಸ್ತುತ ಈ ಶಕ್ತಿಗಳು ಅಧಿಕ ಮಿಲಿಟರಿ ಬಲವನ್ನು ಮಾತ್ರ ಹೊಂದಿಲ್ಲ. ಅವುಗಳು ಆರ್ಥಿಕವಾಗಿಯೂ ಬಲಾಢ್ಯವಾಗಿವೆ. ಯಾವುದೇ ದೇಶದ ಆಂತರಿಕ ವಿಷಯಗಳಲ್ಲಿ ಮೂಗು ತೂರಿಸಿ ವ್ಯಾಪಾರದ ಮೇಲೆ ದಿಗ್ಬಂಧನ ಹಾಕಿ ಅಥವಾ ಮಾರುಕಟ್ಟೆ ಶಕ್ತಿಗಳನ್ನು ನಿಯಂತ್ರಿಸಿ ತಮ್ಮ ಅಣತಿಯನ್ನು ಜಾರಿ ಮಾಡುವಂತೆ ಆ ದೇಶವನ್ನು ಮಣಿಸುವಲ್ಲಿ ಈ ಶಕ್ತಿಗಳು ಸಫಲಗೊಂಡಿವೆ. ಇದಕ್ಕೆ ಹಲವು ನಿದರ್ಶಗಳನ್ನು ನೀಡಬಹುದು... ಕ್ಯೂಬಾ, ಲ್ಯಾಟಿನ್ ಅಮೆರಿಕದ ದೇಶಗಳು, ಇರಾಕ್, ಆಫ್ಘಾನಿಸ್ತಾನ ಮುಂತಾದ ದೇಶಗಳಲ್ಲಿ ಅಮೆರಿಕ ನೇತೃತ್ವದ ಈ ಕರಾಳ ಶಕ್ತಿಗಳು ನಡೆಸಿದ ಕುಟಿಲ ಕಾರ್ಯಾಚರಣೆಗಳು ಸಮೀಪ ಇತಿಹಾಸವೇ ಆಗಿದೆ. ಇಂತಹ ಶಕ್ತಿಗಳ ವಿರುದ್ಧ ಅಲ್ಲಲ್ಲಿ ಹಿಂಸಾ ಕಾರ್ಯಾಚರಣೆಗಳ ಮೂಲಕ ಜಯ ಸಾಧಿಸಬಹುದೆಂದು ಕೆಲವು ಸಂಘಟನೆಗಳು ನಂಬಿವೆ. ಆದರೆ ಇದು ಬೆಂಕಿಯ ವಿರುದ್ಧ ಪತಂಗ ಹೋರಾಡಿದಂತೆ ಆಗುವುದು... ಹಾಗೆಯೇ ಪ್ರಭುತ್ವದ ವಿರುದ್ಧದ ಮಾವೋವಾದಿಗಳ ಹೋರಾಟವೂ ಸರಿಯಾದ ದಿಕ್ಕಿನಲ್ಲಿಲ್ಲ... ವೈಯಕ್ತಿಕ ನಿರ್ಮೂಲನದಿಂದ ಕ್ರಾಂತಿಯಾಗುವುದಿಲ್ಲ... ಸಾಮಾಜಿಕ ವಿಸ್ತೃತ ನೆಲೆಯಲ್ಲಿ ಜನರನ್ನು ಸಂಘಟಿಸಿ, ಅವರು ಪ್ರಜ್ಞಾಪೂರ್ವಕವಾಗಿ ಸಾಮಾಜಿಕ ಬದಲಾವಣೆಗಳನ್ನು ತರುವಂಥ ಹೋರಾಟಗಳಲ್ಲಿ ಭಾಗಿಯಾಗುವಂತೆ ಮಾಡುವುದರಿಂದ ನವ ಸಮಾಜವನ್ನು ನಿರ್ಮಿಸಬಹುದು. ಇಂಥ ಹೋರಾಟಗಳು ದೀರ್ಘಕಾಲಿಕವಾಗಿರುತ್ತವೆ" ಎಂದು ನುಡಿಯುತ್ತಾರೆ.

ಒಟ್ಟಿನಲ್ಲಿ ಇಂದಿಗೂ ಭಗತ್‌ಸಿಂಗ್ ಧ್ಯೇಯೋದ್ದೇಶಗಳು ಪ್ರಸ್ತುತವಾಗಿಯೇ ಇವೆ. ಅವನ ಕನಸಿನ ಭಾರತ ಇನ್ನೂ ಸಾಕಾರಗೊಂಡಿಲ್ಲ. ನಾವು ೧೯೪೭ರಲ್ಲಿ ಗಳಿಸಿದ್ದು ರಾಜಕೀಯ ಸ್ವಾತಂತ್ರ್ಯ ಮಾತ್ರ. ಅಂದಿನಿಂದ ಇಂದಿನವರೆಗೂ ನಾವು ಹಲವು ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಿದ್ದೇವೆ. ಆದರೆ ನಮ್ಮ ರಾಷ್ಟ್ರದಲ್ಲಿ ಸಿಲಿಕಾನ್ ವ್ಯಾಲಿಗಳಿಗಿಂತ ಕಾಳಹಂದಿಗಳು ಜಾಸ್ತಿಯಿವೆ ಎಂಬುದನ್ನು ಮರೆಯಬಾರದು. (ಕಾಳಹಂದಿ ಒರಿಸ್ಸಾ ರಾಜ್ಯದಲ್ಲಿರುವ ಅತಿ ಹಿಂದುಳಿದ, ದಟ್ಟ ದಾರಿದ್ರ್ಯದ ಪ್ರದೇಶ) □

ತಮಿಳಿನ ಈ ಕಥೆಯನ್ನು ಆಯ್ಕೆ ಮಾಡಿದವರು ಪ್ರೊ|| ಕಾರ್ಲೋಸ್. ತಮಿಳಿನ ಅತ್ಯಂತ ಸಂವೇದನಾಶೀಲ ಚಿಂತಕರಾದ ಇವರು ಕನ್ನಡ ಸಾಂಸ್ಕೃತಿಕ ವಲಯಕ್ಕೂ ಪರಿಚಿತರು. ಈಗ, ಇವರು ಕುಪ್ಪಂನ ದ್ರಾವಿಡ ವಿ.ವಿ.ಯ ಪ್ರಾಧ್ಯಾಪಕರಾಗಿದ್ದಾರೆ.

೮೦ ದಶಕದಿಂದ ಬರೆಯಲಾರಂಭಿಸಿದ ತಮಿಳು ದಲಿತ ಬರಹಗಾರ್ತಿ ದೇವಿಭಾರತಿಯ ಈ ಕಥೆಗೆ ಒಂದು ವಿಶಿಷ್ಟತೆ ಇದೆ. ಕನ್ನಡದ ದಲಿತ ಬರಹಗಳಲ್ಲಿರುವ ಸಾಮಾಜಿಕ ಕ್ರೋಧ, ಬಲಿಪಶುತ್ವ, ದಲಿತ ಸಮುದಾಯದ ಅನನ್ಯತೆಯ ಮೂಲಕ ಪರ್ಯಾಯ ವಾಗ್ವಾದವನ್ನು ಸೃಷ್ಟಿಸುವ ಮೂರು ಮಾದರಿಗಳಿಗಿಂತ ಇದು ಭಿನ್ನವಾಗಿದೆ.

ಕಾರ್ಲೋಸ್ ಪ್ರಕಾರ "ಈ ಕಥೆ ತಮಿಳು ಓದುಗರಲ್ಲಿ ಸಂಚಲನವನ್ನು ಉಂಟುಮಾಡಿತು. ಪಾಶ್ಚಾತ್ಯ ನವ್ಯೋತ್ತರ ತಂತ್ರವಾದ Reflexivity ಓದುಗರನ್ನು ಆಕರ್ಷಿಸಿತು. ಈ ಕಥೆಯ ಪರಿಪ್ರೇಕ್ಷ್ಯ ಮೂರನೆ ವ್ಯಕ್ತಿಯೊಬ್ಬರಿಂದ ನಿರೂಪಿತವಾಗುತ್ತದೆ. ಆ ಮೂಲಕ, ಇದು ಕೇವಲ ಬ್ರಾಹ್ಮಣ ಮತ್ತು ದಲಿತರ ನಡುವಿನ ಘರ್ಷಣೆಯನ್ನು ಚಿತ್ರಿಸದೆ, ಅದರಾಚೆಗಿನ ಸಾಂಸ್ಕೃತಿಕ ಸುಪ್ತಪ್ರಜ್ಞೆಯಲ್ಲಿರುವ ತಲ್ಲಣಗಳ ಆಯಾಮಗಳತ್ತಲೂ ಕೈ ಚಾಚುತ್ತದೆ. ಆದ್ದರಿಂದ, ಈ ಕಥೆಯ ಅಂತ್ಯವನ್ನು ಓದುಗರ ಇಚ್ಛೆಗೆ ಬಿಡಲಾಗಿದೆ". ಪೋಲ್ಯಾಂಡಿನ ವಾರ್ಸಾ ವಿಶ್ವವಿದ್ಯಾಲಯದಲ್ಲಿ ೨೦೦೨ ರಿಂದ ೨೦೦೫ರವರೆಗೆ ಪ್ರಾಧ್ಯಾಪಕರಾಗಿದ್ದ ಕಾರ್ಲೋಸ್ ಅಲ್ಲಿಯೂ ಈ ಕಥೆಯನ್ನು ಪಾಠ ಮಾಡಿದ್ದಾರೆ.

ಆದರೆ, ಈ ಕಥೆಯ ವಸ್ತುವನ್ನು ಓದಿ ಬೆಚ್ಚಿದ ಅಲ್ಲಿನ ವಿದ್ಯಾರ್ಥಿಗಳು, ಇದನ್ನು ಮುಂದುವರಿಸುವುದರ ಬಗ್ಗೆ ಭಿನ್ನಾಭಿಪ್ರಾಯ ತಳದರಂತೆ. ಪ್ರೀತಿಯ 'ಸಂವಾದ'ದ ಓದುಗರೇ, ಈ ಕಥೆ ನಿಮಗಾಗಿ, ನಿಮ್ಮ ಅಭಿಪ್ರಾಯಕ್ಕಾಗಿ.

ಅಂದಹಾಗೆ, ಕಾರ್ಲೋಸ್ ಅವರ ವಿದ್ಯಾರ್ಥಿ ಶ್ರೀಮತಿ ಜಯಲಲಿತಾ ಇದರ ಅನುವಾದಕರು.

ಕಥೆ



ಬಲಿ

ತಮಿಳು ಮೂಲ: ದೇವಿ ಭಾರತಿ
ಅನು: ಶ್ರೀಮತಿ ಜಯಲಲಿತಾ

ಆಕೆ ತುಂಬಾ ಭಯಭೀತಳಾಗಿದ್ದಳು. ಮುಖವು ವಿವರ್ಣವಾಗಿತ್ತು. ಹೆದರಿದ ಪುಟ್ಟ ಬೆಕ್ಕಿನಂತೆ ಗೋಡೆಗೆ ಅಂಟಿಕೊಂಡು ಕುಳಿತಿದ್ದ ಅವಳು ಬೆವರಿನ ವಾಸನೆ ತುಂಬಿದ್ದ ಆ ಕೋಣೆಯನ್ನು ಆತಂಕಭರಿತ ನೋಟದಿಂದ ನೋಡುತ್ತಿದ್ದಳು.

ಅವನು ಬಾಗಿಲನ್ನು ಮುಚ್ಚಿ ಬಂದು, ಅವಳನ್ನು ತನ್ನ ಬಳಿ ಸೆಳೆದು ಒರಟನಂತೆ ತುಟಿಯನ್ನು ಕಚ್ಚಿ ದುಂಡನೆಯ ಸ್ತನಗಳನ್ನು ಹಿಸುಕಿದ.

ಅವಳು ನಿಟ್ಟುಸಿರಿಟ್ಟಳು! ಅವನ ಕ್ರಿಯೆ ತನಗೆ ಇಷ್ಟವಿಲ್ಲವೆಂಬುದನ್ನು ತಿಳಿಸುವಂತೆ ಮೆಲ್ಲನೆ ನಡುಗಿದಳು. ತನ್ನ ನಿರೀಕ್ಷೆಗೆ ತಕ್ಕಂತೆ ಅವಳ ಪ್ರತಿಕ್ರಿಯೆ ಇಲ್ಲದ ಕಾರಣವೋ ಏನೋ ಅವನು ಅವಳನ್ನು ದೂರ ತಳ್ಳಿದ. ಪ್ಯಾಂಟ್ ಮತ್ತು ಶರ್ಟನ್ನು ಕಳಚಿ ಪಂಚೆಯನ್ನು ಸುತ್ತಿಕೊಂಡ. ಇಂತಹ ಸಂದರ್ಭಗಳಲ್ಲಿ ಸಹಜವಾಗಿಯೇ ಏರ್ಪಡುವ ಕಿರಿಕಿರಿ, ಕೋಪ ಅವನ ಮುಖದಲ್ಲಿ ಸ್ಪಷ್ಟವಾಗಿ ಕಾಣಿಸಿಕೊಂಡವು.

ಮಂಚದ ಮೇಲೆ ಕುಳಿತು ಒಂದು ಮಗ್ಗುಲಿಗೆ ಒರಗಿ, ಅವಳನ್ನು ಕ್ರೂರವಾಗಿ ದಿಟ್ಟಿಸುತ್ತಲೇ ಸಿಗರೇಟ್ ಹೊತ್ತಿಸಿದ. ಅವಳು ಅಲುಗಾಡದೆ ನಿರ್ಲಿಪ್ತಳಂತೆ ಅದೇ ಸ್ಥಳದಲ್ಲಿಯೇ ನಿಂತು ಅವನ ನೆಟ್ಟ ನೋಟವನ್ನು ಎದುರಿಸಲಾರದೆ ತಲೆ ತಗ್ಗಿಸಿದಳು.

ಅವಳು ತಾನಾಗಿಯೇ ಹತ್ತಿರ ಬರುವುದಕ್ಕೆ ಏನು ಮಾಡಬೇಕೆಂದು ಅವನಿಗೆ ಚೆನ್ನಾಗಿ ಗೊತ್ತು. ಇಂತಹ ಸಂದರ್ಭಗಳಲ್ಲಿ ಅವಳನ್ನು ಉಪಯೋಗಿಸಿಕೊಳ್ಳಲು ಬಳಸಬೇಕಾದ ಮಾತುಗಳು, ಒಂದು ವೇಳೆ ಮಾತುಗಳು ಕೆಲಸಕ್ಕೆ ಬಾರದೆ ಹೋದರೆ ಅದಕ್ಕೆ ಬದಲಾಗಿ ಬೇರೇನು ಮಾಡಬೇಕು. ಇದೆಲ್ಲ ಅವನಿಗೆ ಕರತಲಾಮಲಕವಾಗಿತ್ತು.

ಆಲೋಚನೆಗೂ, ಕ್ರಿಯೆಗೂ ಮಧ್ಯೆ ಇರುವ ಕ್ರಮಿಸಲಾಗದ ಅಂತರವನ್ನು ದಾಟಲು ಬೇಕಾದ ಅವಕಾಶವನ್ನು ನಿರೀಕ್ಷಿಸುವವನಂತೆ ಹೊಗೆಬಿಡುತ್ತಾ, ಒಂದರ ಮೇಲೊಂದರಂತೆ ಸಿಗರೇಟುಗಳನ್ನು ಸೇದಿ ಮುಗಿಸಿದ. ಇದು ನನ್ನ ಊಹೆ ಎನ್ನುತ್ತಾರೆ ಈ ಕಥೆಯ ನಿರೂಪಕರು.

ಅವನ ನೋಟ ಅವಳ ಮೇಲೆ ಹರಿಯಿತು. ಆ ಕೋಣೆಯಾಚೆಗಿನ ನಗರದ ಬೀದಿ, ಬೀದಿಗಳು ನಿದ್ರೆಯಲ್ಲಿ ಮುಳುಗಿದ್ದವು. ಅಲ್ಲಿ ನೆಲೆಸಿದ ಭೀಕರ ಮೌನವನ್ನು

ನೆನಪಿಸುವಂತೆ ಟ್ಯೂಬ್ಲೈಟ್ ಗುಂಯ್‌ಗುಡುತ್ತಿತ್ತು.

ಆ ಮೌನವನ್ನು ಭೇದಿಸುವಂತಹ ಭಯಂಕರ ಕ್ಷಣಗಳನ್ನು ಆತಂಕದಿಂದ ಎದುರು ನೋಡುತ್ತಿದ್ದಳು. ಅವನು ಇದನ್ನು ತನಗಾದ ಅಪಮಾನ ಎಂದು ಕೂಡಾ ಭಾವಿಸಿರಬಹುದು. ಈ ಸಂದರ್ಭವನ್ನು ನಿರೂಪಕರು 'ಇದೊಂದು ಭಯಂಕರವಾದ ಮೂಕನಾಟಕದಲ್ಲಿನ ಅಸಹಾಯಕ ಪಾತ್ರಗಳಂತೆ' ಎಂದು ವರ್ಣಿಸುತ್ತಾರೆ.

ಇವಳನ್ನು ಕಳುಹಿಸಿದ ಆ ಮೇಲ್ವಿಚಾರಕ ಹೆಂಗಸು ಇವಳ ಬಗ್ಗೆ ಮಾತಾಡುತ್ತಾ 'ಈ ಕಸುಬಿಗೆ ಇವಳು ಹೊಸಬಳೆಂದು ಇಲ್ಲಿಗೆ ಬಂದು ಒಂದೆರಡು ದಿನಗಳು ಮಾತ್ರ ಆಗಿದೆ' ಎಂದು ಹೇಳಿದ ಮಾತು ಸುಳ್ಳಾಗಲಿಲ್ಲ. ತಾನು ಮೋಸ ಹೋಗಲಿಲ್ಲ ಎಂಬುದು ತಿಳಿದು ಅವನಿಗೆ ಬಹಳ ಸಂತೋಷವಾಯಿತು.

ಅನುಭವಸ್ಥ ಹುಡುಗಿಯರಾಗಿದ್ದರೆ ಇಂತಹ ಸಂದರ್ಭಗಳಲ್ಲಿ ಹೇಗೆ ನಡೆದುಕೊಳ್ಳಬೇಕೆಂಬುದನ್ನು ಚೆನ್ನಾಗಿ ಅರಿತಿರುತ್ತಾರೆ. ಗಿರಾಕಿಗಳನ್ನು ಆಕರ್ಷಿಸಲು ಹಾಗೂ ಮಾತನಾಡಿದ್ದಕ್ಕಿಂತ ಹೆಚ್ಚು ಟಿಪ್ಸ್ ತೆಗೆದುಕೊಳ್ಳಲು ಕೆಲವೊಮ್ಮೆ ಬಹಳ ಅಸಹ್ಯಕರವಾಗಿಯೂ ವರ್ತಿಸುತ್ತಾರೆ. ಕೋಣೆಯೊಳಗೆ ಹೋದೊಡನೆ ಬಟ್ಟೆಗಳನ್ನೆಲ್ಲ ಕಳಚಿಬಿಡುತ್ತಾರೆ. ಅಲ್ಲಿಂದ ಹೊರಬರುವ ತನಕ ನಗ್ನ ಸ್ಥಿತಿಯಲ್ಲಿಯೇ ಇರುತ್ತಾರೆ. ಕೆಲವರು ಅವನೊಂದಿಗೆ ಕುಳಿತು ಕುಡಿಯುತ್ತಾರೆ. ನಾನು ಹೇಳುತ್ತಿರುವುದು ಸುಳ್ಳಲ್ಲವೆಂಬುದು ಅನುಭಸ್ಥರಾದ ವಾಚಕರಿಗೆ ಮಾತ್ರ ತಿಳಿಯುತ್ತದೆ ಎನ್ನುತ್ತಾನೆ ಕಥಾ ನಿರೂಪಕ.

ಆ ಹೆಣ್ಣುಗಳ ಪೈಕಿ ಯಾರು ಇದನ್ನು ಆಸಕ್ತಿಯಿಂದ ಮಾಡುವುದಿಲ್ಲವೆಂಬುದು ಅನುಭಸ್ಥನಾದ ಅವನಿಗೂ ತಿಳಿದಿತ್ತು. ಆದರೂ ತನ್ನ ಈ ನಡವಳಿಕೆಯನ್ನು ಬಿಟ್ಟುಬಿಡಲು ಸೂಕ್ತ ಕಾರಣ ಯಾವುದೂ ಅವನಿಗೆ ಸಿಗಲಿಲ್ಲ.

ಅವನಿಗೆ ಅವಳ ಮೇಲೆ ಅನುಕಂಪ ಮೂಡಲಿಲ್ಲ. ಬಲವಂತ ಮಾಡದೆ ಅವಳನ್ನು ಒಲಿಸಿಕೊಳ್ಳುವ ದಾರಿ ಯಾವುದೆಂದು ಆಲೋಚಿಸತೊಡಗಿದ. ಬಹುಶಃ ಇದು ನಿರೂಪಕರ ಆಲೋಚನಾ ಲಹರಿ ಇರಬಹುದು.

ಗೌರವ ವರ್ಣದ ಆಕೆ ತುಂಬ ಸುಂದರವಾಗಿದ್ದಳು. ಈ ವ್ಯಾಪಾರಕ್ಕೆ ಹೊಂದದ ಮುಗ್ಧ ಮುಖ; ಕನ್ಯತ್ವದ ಛಾಯೆ ಇನ್ನೂ ಮಾಸಿರಲಿಲ್ಲ. ಪರ್ಮನೆಂಟ್ ಗಿರಾಕಿಯಾದ ತನಗೆ ಆ ಹೆಂಗಸು ಇವಳನ್ನು ಬೋನಸ್ ಆಗಿ ಕೊಟ್ಟಿದ್ದಾಳೆ ಎಂದುಕೊಂಡ.

ಹೊಸಬಳಾದ್ದರಿಂದ ಅವನು ಅವಳ ಜತೆ ತುಂಬಾ ಸೆಣಸಾಡಬೇಕಾಗುತ್ತದೆ. ಬಲಪ್ರಯೋಗಿಸಬೇಕಾಗುತ್ತದೆ. ಇದೆಲ್ಲಾ ಅವನಿಗೆ ರೂಢಿ ಇಲ್ಲದ ಕೆಲಸಗಳು. ಒಂದು ವೇಳೆ ಆ ಕೃತ್ಯಕ್ಕೆ ಸಿದ್ಧನಾದರೂ, ಅವಳು ಕೂಗಿ ರಂಪಾಟ ಮಾಡಬಹುದು, ಅಳಬಹುದು, ಏನು ಬೇಕಾದರೂ ಆಗಬಹುದು.

ಅವಳು ನಿಂತ ರೀತಿ ನೋಡಿದರೆ, ಯಾವುದೇ ಕ್ಷಣದಲ್ಲೂ ದುಃಖದ ಕಟ್ಟೆ ಒಡೆದು ಅಳಲು ಸಿದ್ಧಳಾಗಿದ್ದಾಳೆಂಬುದು ತಿಳಿಯುತ್ತದೆ. ಹಾಗೆ ಅತ್ತರೆ ಆ ಅಳು ಒಂದು ನಿಸ್ಸಹಾಯಕವಾದ ಮಗುವಿನ ಅಳುವಿನಂತೆ ತೋರುತ್ತದೆ. ದೇವರೆ ಅವನು ಇದನ್ನು ಹೇಗೆ ಸಹಿಸಬಲ್ಲ?

ಆತ ತಾನೊಂದು ಇಕ್ಕಟ್ಟಿನ ಸ್ಥಿತಿಯಲ್ಲಿ ಸಿಕ್ಕಿಕೊಂಡಂತೆ ಭಾವಿಸಿದ. ಇದೆಲ್ಲಾ ಅವನಿಗೆ ರೂಢಿ ಇರಲಿಲ್ಲ. ಮೊದಲೇ ಮಾತನಾಡಿದಂತೆ ಅವಳನ್ನು ಮತ್ತೆ ಕರೆದೊಯ್ದು ಆ ಹೆಂಗಸಿನ ಬಳಿಯೇ ಬಿಟ್ಟು ಈ ಇಕ್ಕಟ್ಟಿನಿಂದ ಹೊರಬರುವುದೆಂದು ತೀರ್ಮಾನಿಸಿದ.

ಆದರೆ ಅದೊಂದು ತಪ್ಪು ತೀರ್ಮಾನವೆಂಬುದು ತಕ್ಷಣವೇ ಅವನಿಗೆ ಹೊಳೆಯಿತು. ಒಂದು ವೇಳೆ ನಾನು ಹಾಗೇ ಕಳುಹಿಸಿದರೆ ಬೇರೊಬ್ಬ ಗಿರಾಕಿ ಅವಳೊಂದಿಗೆ ಇನ್ನೂ ಕ್ರೂರವಾಗಿ ನಡೆದುಕೊಳ್ಳಬಹುದು. ಅನುಮಾನವೇ ಇಲ್ಲ... ಹಾಗೇ ನಡೆಯುತ್ತದೆ. ಇದ್ದಕ್ಕಿದ್ದಂತೆ ಇಂತಹ ಕರಾಳ ರಾತ್ರಿಯಲ್ಲಿ...

ಈ ರೀತಿಯ ಸಂದರ್ಭದಲ್ಲಿ, ಇವನಂತಹ ಒಬ್ಬ ವ್ಯಕ್ತಿ ಹೀಗೆಲ್ಲಾ ಯೋಚಿಸಲು ಸಾಧ್ಯವೇ? ಎಂದು ಓದುಗರು ಕೇಳಬಹುದೆಂದು ನಿರೂಪಕರು ಊಹಿಸುತ್ತಾರೆ. ಆದರೆ ಇದಕ್ಕೆ ಸ್ಪಷ್ಟವಾದ ವಿವರಣೆ ನೀಡಲಾಗದು. ಮನುಷ್ಯನ ಮನಸ್ಸಿನಲ್ಲಿರುವ ನಿಗೂಢವಾದ ಅಂತರಂಗದೊಳಗೆ ಇದರ ಉತ್ತರ ಅಡಗಿರಬಹುದು ಎನ್ನುತ್ತಾರೆ ನಿರೂಪಕರು.

ತಾನು ಒಪ್ಪಿ ಸಹಾಯ ಮಾಡಿದರೆ ಅವಳು ಇಲ್ಲಿಂದ ಓಡಿಹೋಗಲು ಸಿದ್ಧಳಾಗಿದ್ದಾಳೆ. ಆದರೆ ಇದು ಹಲವಾರು ಬಿಕ್ಕಟ್ಟುಗಳನ್ನು ಸೃಷ್ಟಿಸುತ್ತದೆ. ಇವಳನ್ನು ಕಳುಹಿಸಿಕೊಟ್ಟ ಆ ಹೆಂಗಸು ಕೋಪಗೊಂಡು ಅದಕ್ಕೆ ಪರಿಹಾರವೆಂಬಂತೆ ಸಾಕಷ್ಟು ಹಣವನ್ನು ಕೇಳಬಹುದು. ಹಿಂದೂ ಮುಂದೂ ಅರಿಯದ ಒಬ್ಬ ಹೆಣ್ಣಿಗಾಗಿ ತಾನು ಸಂಕಷ್ಟಕ್ಕೆ ಸಿಕ್ಕಿಕೊಳ್ಳುವುದು ಅಗತ್ಯವೇ ಎಂಬ ಆಲೋಚನೆಗಳೂ ಅವನಲ್ಲಿ ಮೂಡಿದವು.

ತೀವ್ರವಾದ ದುಃಖದಲ್ಲಿದ್ದ ಆಕೆ ಭಗ್ನ ಶಿಲೆಯಂತೆ ನಿಂತಿದ್ದಳು. ಅವಳನ್ನು ಕಂಡ ಆತ ಏನೇ ತೊಂದರೆಗಳು ಎದುರಾದರೂ ಸರಿ ಅವಳಿಗೆ ಸಹಾಯ ಮಾಡಲೇಬೇಕೆಂದು ತೀರ್ಮಾನಿಸಿದ. ಆದರೆ ಇದನ್ನು ಆಕೆಗೆ ಹೇಗೆ ತಿಳಿಸಬೇಕೆಂದು ಹೊಳೆಯಲಿಲ್ಲ ಅಲ್ಲದೆ ಅದಕ್ಕೆ ಸೂಕ್ತ ಪದಗಳು ದೊರೆಯದೇ ನಾಚಿಕೆ ಎನಿಸಿತು.

ಅವಳಿಗೆ ಸ್ವಲ್ಪ ಹಣವನ್ನು ಕೊಟ್ಟು 'ನೋಡಮ್ಮ ನೀನು ಒಬ್ಬ ವೇಶ್ಯೆಯಂತೆ ಬದುಕುವುದು ನನ್ನಿಂದ ಸಹಿಸಲಾಗದು, ಇಲ್ಲಿಂದ ತಪ್ಪಿಸಿಕೊಂಡು ಎಲ್ಲಾದರೂ ಹೋಗಿಬಿಡು' ಎಂದು ಹೇಳಲೇ? ಒಂದು ಒಳ್ಳೆ ಬಾಳನ್ನು ರೂಪಿಸಿಕೊಳ್ಳುವ ಬಗ್ಗೆ ಅರಿವು ಮೂಡಿಸಲೇ? ಅದಕ್ಕೆ ಅವಳ ಪ್ರತಿಕ್ರಿಯೆ ಹೇಗಿರಬಹುದು? ಸರಿ ಎಂದು ಕೃತಜ್ಞತೆ ಅರ್ಪಿಸಿ ಹೋಗಿಬಿಡುವಳೇ? ಅನಿರೀಕ್ಷಿತವಾದ ಈ ಸಹಾಯಕ್ಕೆ ಕಕ್ಕಾಬಿಕ್ಕಿಯಾಗಿ ಭಾವನೆಗಳು ಉಕ್ಕಿ ಬಂದು ಅತ್ತುಬಿಡುವಳೇ? ಅಥವಾ ಜೋರಾಗಿ ನಕ್ಕುಬಿಟ್ಟರೇ?

ದೇವರೇ... ಇದ್ಯಾವುದೂ ಆಗಲ್ಲ ಎನ್ನಲು ಸಾಧ್ಯವೇ ಇಲ್ಲ. ಅವಳ ಬಳಿ ಒಂದು ಕತೆಯಂತೂ ಇದ್ದೇ ಇರುತ್ತದೆ. ಪ್ರೀತಿಸಿದವನನ್ನು ನಂಬಿ ಮೋಸ ಹೋಗಿರಬಹುದು, ಅಥವಾ ಸಿನಿಮಾದಲ್ಲಿ ನಟಿಸಬೇಕೆಂದು ಮನೆ ಬಿಟ್ಟು ಓಡಿ ಬಂದಿರಬಹುದು– ಹೀಗೆ ಯಾವುದೋ ಒಂದು ಕತೆ ಅಡಗಿರುತ್ತದೆ.

ಅವನು ಅವಳನ್ನು ಹತ್ತಿರ ಕರೆದ.

ಅವನ ಧ್ವನಿಯಲ್ಲಿದ್ದ ಅನುಕಂಪ ಅವಳಲ್ಲಿ ಅತ್ಯಾಶ್ಚರ್ಯ ಮೂಡಿಸಿತು. ತನ್ನ ಕಲ್ಪನೆ ಇರಬಹುದೆಂದು ಸಂದೇಹದಿಂದ ನೋಡಿದಳು. ಆದರೆ ಆತ ಮತ್ತೆ ಕೂಗಿದ. ಹತ್ತಿರದಲ್ಲಿದ್ದ ಕುರ್ಚಿಯ ಕಡೆಗೆ ಬೆರಳು ಮಾಡಿ ಅಲ್ಲಿ ಕೂರುವಂತೆ ಹೇಳಿ, ಅತಿಥಿಯಂತೆ ಉಪಚರಿಸಿದ. ಆಕೆ ಮಗುವಿನಂತೆ ಆಶ್ಚರ್ಯದಿಂದ ಮುಗುಳ್ನಕ್ಕಳು. ಅವನ ಒಂದೇ ಒಂದು ಕರೆಯಿಂದ ಸಂಪೂರ್ಣ ಮನಸ್ಸನ್ನು ಅರಿತವಳಂತೆ ಸಂತೋಷದಿಂದ ಕುರ್ಚಿ ಬಳಿ ಬಂದು ನಿಂತಳು.

ಉನ್ನತವಾದ ಗುಣಗಳುಳ್ಳ ಕಥಾ ಪಾತ್ರವನ್ನು ಸೃಷ್ಟಿಸಲು ಬಯಸುತ್ತಿದ್ದೀರಾ? ಎಂಬ ಪ್ರಶ್ನೆಗೆ ನಿರೂಪಕ ನಿರಾಕರಿಸುತ್ತಾ, ಬಹುಶಃ ಆ ಕಥಾ ಪಾತ್ರಗಳ ಸ್ಥಳದಲ್ಲಿ ನೀವು ಅಥವಾ ನಾನಿದ್ದರೂ ಹೀಗೆ ವರ್ತಿಸುತ್ತಿದ್ದೆವು ಎನ್ನುತ್ತಾರೆ.

'ಕುತ್ಕೋ'

ಅವಳು ಸಂಕೋಚದಿಂದ ನೋಡಿದಳು.

ಮತ್ತೆ ಧೈನ್ಯ ಸ್ವರದಲ್ಲಿ 'ಕೂತ್ಕೋ' ಎಂದ. ಅವಳಿಗೆ ತಿನ್ನಲು ಏನಾದರೂ ಕೊಡೋಣವೆಂದು ಯೋಚಿಸಿದಾಗ, ತನ್ನ ಬಳಿ ಇದ್ದ ಬಿಸ್ಕೆಟ್, ಚಿಪ್ಸ್ ಪ್ಯಾಕೇಟ್, ಫ್ಲಾಸ್ಕಿನಲ್ಲಿದ್ದ ಸ್ವಲ್ಪ ಕಾಫಿಯ ನೆನಪಾಯಿತು. ಮೇಲೆದ್ದು ಹೋಗಿ ಅಲಮಾರಿನಿಂದ ಅದನ್ನು ತೆಗೆದು ಅವಳಿಗೆ ನೀಡಿದ.

'ತಿನ್ನು...'

ಅವಳು ಆಶ್ಚರ್ಯದಿಂದ ಅವನನ್ನು ನೋಡಿದಳು

'ಪರವಾಗಿಲ್ಲ... ತಿನ್ನು'

ಇನ್ನೊಂದು ಕುರ್ಚಿಯನ್ನು ಹಾಕಿಕೊಂಡು ಗೆಳೆಯನಂತೆ ಎದುರು ಕುಳಿತು ಅವಳ ಸಂಕೋಚವನ್ನು ಹೋಗಲಾಡಿಸಲು ತಾನು ಒಂದು ಬಿಸ್ಕೆಟ್ ಎತ್ತಿಕೊಂಡು ತಿನ್ನತೊಡಗಿದ.

ಅವಳಿಗೀಗ ಭಯದ ಬದಲಾಗಿ ಸಂಕೋಚವಿತ್ತು. ಬಿಸ್ಕೆಟ್ ತೆಗೆದುಕೊಂಡು ತಿನ್ನಲಾರಂಭಿಸಿದಳು.

ತಾನು ಇಷ್ಟು ಒಳ್ಳೆಯವನಂತೆ ನಡೆದುಕೊಳ್ಳಲು ಸಾಧ್ಯವೇ? ಎಂದು ಆಶ್ಚರ್ಯಗೊಂಡ. ಅವನಿಗೆ ಸಂತೋಷವಾಯಿತು. ಇನ್ನು ಅವಳು ತನ್ನ ಸಹಾಯವನ್ನು ನಿರಾಕರಿಸಲಾರಳು. ಆಕೆ ಬಿಸ್ಕೆಟ್‌ನ್ನು ಗಬಗಬನೆ ತಿನ್ನುತ್ತಿದ್ದಳು. ತುಂಬಾ ಹಸಿದಿದ್ದಾಳೆಂಬುದು ತಿಳಿಯಿತು. ಅವನು ಅವಳ ಹೆಸರನ್ನು ಕೇಳಿದ.

ಅವಳು ತಿನ್ನುತ್ತಲೇ, ತನ್ನ ಹೆಸರು ಹೇಳಿದಳು.

'..................'

ಸಾಮಾನ್ಯವಾಗಿ ಇಂತಹ ಸಂದರ್ಭದಲ್ಲಿ ಎಲ್ಲರೂ ಹೇಗೆ ಹೇಳುತ್ತಾರೋ ಹಾಗೆಯೇ ಅವನು ಸಹಾ 'ಒಳ್ಳೆಯ ಹೆಸರು' ಎಂದ. ನಂತರ ಅವಳ ಊರು ಯಾವುದೆಂದು ಕೇಳಿದಾಗ ಆಕೆ ತಿನ್ನುವುದನ್ನು ನಿಲ್ಲಿಸಿ ಗಲಿಬಿಲಿಯಿಂದ ಅವನನ್ನೇ ನೋಡಿದಳು. ಅವನೂ ಆತಂಕಗೊಂಡ ತಮ್ಮ ಸಂವಾದ ಇಲ್ಲಿಗೆ ನಿಂತು ಹೋಗುವುದೇನೋ ಎಂದು ಹೆದರಿದ. ತಾನು ಸುಮ್ಮನೆ ಕೇಳಿದ್ದೆಂದು ಇಷ್ಟವಿಲ್ಲದಿದ್ದರೆ ಹೇಳಬೇಡವೆಂದು ದೀನ ಸ್ವರದಲ್ಲಿ ನುಡಿದ. ಆಕೆ ಸ್ವಲ್ಪ ನೀರನ್ನು ಕುಡಿದು ಹೇಳಲಾರಂಭಿಸಿದಳು. ಅವಳ ಕಣ್ಣಿನಲ್ಲಿ ಅವನ ಮೇಲಿನ ನಂಬಿಕೆ ಗುರು ಕಾಣುತ್ತಿತ್ತು. ಹಣ್ಣಾಗಿ ಉದುರುವ ಎಲೆಯಂತೆ ಮಾತುಗಳು ಆತಂಕದ ಪರಿಧಿಯನ್ನು ದಾಟಿ ಬಂದವು.

'..................'

ಅವನು ದಿಗ್ಭ್ರಮೆಗೊಂಡ. ನಂಬಲಾಸಾಧ್ಯ. ಸುಳ್ಳು ಹೇಳುತ್ತಿದ್ದಾಳೇನೋ ಎಂದು

ಇನ್ನೊಮ್ಮೆ ನೋಡಿದ ಉಹುಂ... ಮುಖದಲ್ಲಿ ಸುಳ್ಳಿನ ಲವಲೇಶವೂ ಗೋಚರವಾಗಲಿಲ್ಲ. ಅದು ಅವನ ಪೂರ್ವಜರು ವಾಸಿಸುತ್ತಿದ್ದ ಗ್ರಾಮ. ಅವನ ಕೆಲ ಸಂಬಂಧಿಕರು ಇನ್ನೂ ಅಲ್ಲಿಯೇ ಇದ್ದಾರೆ. ಆ ಊರಿನ ಜತೆಗೆ ತಳುಕು ಹಾಕಿಕೊಂಡಿರುವ ಕೀಳಾದ ತನ್ನ ಗತಕಾಲವನ್ನು ಆತ ಮರೆಯಲು ಯತ್ನಿಸುತ್ತಿದ್ದ. ಆದರೆ ಅದೊಂದು ಭಯಂಕರ ಕನಸಿನಂತೆ ಇವಳ ರೂಪದಲ್ಲಿ ಧುತ್ತೆಂದು ಎದುರಾಗಿದೆ. ನಿರೀಕ್ಷಿಸಿಯೇ ಇರದ ಒಂದು ಕೆಟ್ಟ ಆಕಸ್ಮಿಕವಿದು. ಬುಡಕಡಿದ ಮರದಂತೆ ಅಲುಗಾಡಿದ. ಅವಳಿಗೆ ಬೇಕಾದಷ್ಟು ದುಡ್ಡು ಕೊಟ್ಟು ಕಳುಹಿಸೋಣವೇ ಎಂದು ಯೋಚಿಸಿದ.

'ಅಲ್ಲಿ...' ತಡವರಿಸಿದನು. ಉಸಿರು ಹಿಡಿದಂತಾಯಿತು.

'ಅಲ್ಲಿ... ಯಾರ ಮನೆಯ ಹುಡುಗಿ ನೀನು?'

ಅವಳು ಗೊಂದಲದಿಂದ ಅವನನ್ನು ನೋಡಿದಳು,

ಅವನು ಒತ್ತಾಯಪೂರ್ವಕವಾಗಿಯೂ, ಹೆದರಿಸುವಂತೆಯೂ ಕೇಳಿದ 'ಹುಂ, ಹೇಳು... ಯಾರ ಮಗಳು ನೀನು?' ಒಂದು ದೀರ್ಘ ಮೌನದ ನಂತರ ಕಹಿಯಾದ ನಿಟ್ಟುಸಿರೊಂದನ್ನು ಹೊರಹಾಕಿ ಅವಳು ಹೇಳಿದಳು.

'... ಎಂಬುವರು ನನ್ನ ತಾತಾ'

'ಏನು ಅವರಾ!' ಎಂದು, ಜೋರಾಗಿ ಕಿರುಚಿದ. ಅವನು ಮರೆಯಬೇಕೆಂದಿದ್ದ ಆ ಗತಕಾಲದ ಹೀನ ನೆನೆಪುಗಳ ಸಮಾಧಿಯನ್ನು ಛಿದ್ರಗೊಳಿಸಿತ್ತು ಆ ಹೆಸರು.

'ಅವರಾ?... ಅವರಾ?...' ಎಂದು ಹುಚ್ಚನಂತೆ ಬಡಬಡಿಸಿದ. ಇದು ನಂಬಲಾಗದ ವಿಷಯ ಜೀವನದ ಕೆಟ್ಟ ಆಟ' ಎನ್ನುತ್ತಾರೆ ಕಥಾ ನಿರೂಪಕರು.

ಒಂದು ಕಾಲದಲ್ಲಿ ಆಡಂಬರದಿಂದ ಬಾಳಿ ಬದುಕಿದ ಸಂಪ್ರದಾಯಸ್ಥ ಬ್ರಾಹ್ಮಣ ಕುಟುಂಬವದು. ಇವಳ ತಾತ ದೇವದೂತನಂತೆ ಗ್ರಾಮದ ಕತ್ತಲ ಬೀದಿಗಳಲ್ಲಿ ಅಹಂನಿಂದ ಓಡಾಡುತ್ತಿದ್ದ. ಇವನ ತಂದೆ ಮತ್ತು ತಾತಂದಿರು ಆ ಮನೆಯ ಕಕ್ಕಸುಗುಂಡಿಯನ್ನು ಶುದ್ಧಗೊಳಿಸುತ್ತಿದ್ದವರು. ಇವನು ತನ್ನ ತಾಯಿಯ ಗರ್ಭದಲ್ಲಿದ್ದಾಗಲೇ ಮಲದ ವಾಸನೆ ಘ್ರಾಣಿಸಿದ್ದ. ಇವರ ಹುಟ್ಟಿಗಿಂತ ಮೊದಲೇ ನೆಲೆಸಿದ್ದ ಈ ವಾಸನೆ ಅವರ ಗುಡಿಸಲುಗಳಲ್ಲಿ ಸದಾ ಸುತ್ತುತ್ತಾ ಓಕರಿಕೆ ತರಿಸುತ್ತಾ, ಇವರ ಕನಸುಗಳಲ್ಲೂ ವ್ಯಾಪಿಸಿತ್ತು. ಇವರು ಭ್ರೂಣಾವಸ್ಥೆಯಲ್ಲಿರುವಾಗಲೇ ಆ ಮಲದ ವಾಸನೆಯು ಗತ್ತಿನಿಂದ ಬಂದು ಇವರ ಮನೆಗಳಲ್ಲಿ ಕುಳಿತಿತ್ತು. ಆ ಎಲ್ಲಾ ಹಳೆಯ ಕಹಿ ನೆನಪಿನ ಗೋರಿಯಿಂದ ಎದ್ದು ಬಂದ ಶವದಂತೆ ಆಕೆ ಅವನೆದುರು ಕುಳಿತಿದ್ದಳು.

'........ ಕುಟುಂಬದವರ ಬಗ್ಗೆ ಗೊತ್ತಿದೆಯಾ?

ಎಂದು ತನ್ನ ತಾತನ ಹೆಸರನ್ನು ಹೇಳಿದ ಅವನ ಧ್ವನಿಯಲ್ಲಿ ಪ್ರತೀಕಾರದ ಭಾವ ತಾಂಡವವಾಡುತ್ತಿತ್ತು. ಕೈಗಳು ನಡುಗಿದವು. ಹಣೆ ಮತ್ತು ಕುತ್ತಿಗೆಯಲ್ಲಿ ಬೆವರಿನ ಹನಿಗಳು ಕಾಣಿಸಿದವು.

'ಇಲ್ಲ' ಮೆಲುಧ್ವನಿಯಲ್ಲಿ ಹೇಳಿದಳು. ಮಗುವಿನಂತಿದ್ದ ಅವಳ ಮುಖದಲ್ಲಿ ಆಸಕ್ತಿ ನೆರಳಾಡಿತು. ಅವನ ತಂದೆ ತಾಯಿಯ ರೂಪವನ್ನು ನೆನಪಿಸಿಕೊಳ್ಳುವವಳಂತೆ ಅವನ ಮುಖವನ್ನು ತದೇಕ ಚಿತ್ತವಾಗಿ ನೋಡುತ್ತಿದ್ದಳು.

'ನಿಮ್ಮ ಪೂರ್ವಜರ ಕಕ್ಕಸು ಗುಂಡಿಯನ್ನು ಶುಚಿಗೊಳಿಸುತ್ತಿದ್ದವರು ನಮ್ಮ ತಾತ' ಎಂದು ಉದ್ವೇಗದಿಂದ ನುಡಿದ.

ಅವಳ ಸ್ಮೃತಿಪಟಲದಲ್ಲಿ ಕಾಲದ ಹೊಗೆಯಿಂದ ಮಸುಕಾಗಿದ್ದ ಒಂದು ಮುಖ ಗೋಚರಿಸಿತು.

'ನನಗೆ ನೆನಪಾಗ್ತಾ ಇದೆ' ಎಂದು ಭಯದಿಂದ ನುಡಿದಳು.

'ಅವರೇ ನನ್ನ ತಾತಾ...' ಎಂದು ಆತ ಸಂತೋಷದಿಂದ ಕಿರುಚುತ್ತಾ, 'ಅವರು ನಿಮ್ಮ ಕಕ್ಕಸುಗುಂಡಿಯನ್ನು ಶುಚಿಮಾಡುತ್ತಿದ್ದರು. ಅವರಷ್ಟೇ ಅಲ್ಲ ನನ್ನ ತಂದೆ, ಮತ್ತು ನನ್ನ ಎಲ್ಲಾ ಪೂರ್ವಜರು ಅದೇ ಕೆಲಸ ಮಾಡುತ್ತಿದ್ದರು. ಎಂದ.

ಶವದಂತೆ ಬಿಳುಚಿಕೊಂಡ ಆಕೆ ಮಾತಾಡುವ ಶಕ್ತಿ ಇಲ್ಲದಂತೆ, ಮಾತನಾಡಲು ಏನೂ ಇಲ್ಲದಂತೆ ನಿಶ್ಚಲ ದೃಷ್ಟಿಯಿಂದ ಅವನನ್ನೇ ನೋಡಿದಳು. ಆತ ಕೋಪದಿಂದ ಸಿಗರೇಟಿನ ಬಿಳಿ ಹೊಗೆಯನ್ನು ಅವಳ ಮುಖಕ್ಕೆ ಊದಿದ. ವಿಶ್ವಾಸಾರ್ಹವಾದ ಬೇಟೆಯ ನಾಯಿಯಂತೆ ಆ ಹೊಗೆ ಅವಳನ್ನು ಸುತ್ತಿಕೊಂಡಿತು. ಹಿಂದಿನವರ ವರ್ತನೆಗಳೆಲ್ಲಾ ಕಣ್ಣೆದುರಿಗೆ ಬಂದಂತೆ ಅವರಿಬ್ಬರ ಮಧ್ಯೆ ಮೌನವು ನೆಲೆಸಿತು.



ಆದರೆ ಆ ಮೌನ ಯಾವ ಕ್ಷಣದಲ್ಲಿ ಸ್ಫೋಟಿಸುವುದೋ ಆ ಕ್ಷಣವನ್ನು ವಿವರಿಸುವುದೇ ಅಸಾಧ್ಯ. ಆ ಭೀಕರ ಮೌನವನ್ನು ಒಡೆದವರು ಯಾರು ಎಂಬುದನ್ನು ಈ ಕಥೆಯ ನಿರೂಪಕರು ಸಹಾ ಹೇಳಲಾರರು. ಮುಂದಿನ ಕಥೆಯನ್ನು ಹೇಳಲು ನಿರೂಪಕರು ವ್ಯಥೆಪಡುತ್ತಾರೆ. ಪ್ರತಿಯೊಂದನ್ನು ಸವಿಸ್ತಾರವಾಗಿ ಹೇಳಲಾಗದ ತಮ್ಮ ಅಸಹಾಯಕತೆಗೆ ಕ್ಷಮೆ ಕೇಳುತ್ತಾರಲ್ಲದೆ ಎಲ್ಲಾ ಕತೆಗಳಂತೆ ಇದನ್ನು ಹೇಳಲಾಗದ್ದಕ್ಕೆ ತಾನು ಹೊಣೆಯಲ್ಲ ಎಂದೂ ತಿಳಿಸುತ್ತಾರೆ. ಅವರು ಕೋಪದ ಭಾವನೆಯಿಂದ, ನಡುಗುವ ಧ್ವನಿಯಿಂದ ಈ ಕಥೆಯನ್ನು ನಿರೂಪಿಸುವಾಗ ಅವರ ಮೇಲೆ ದಯೆ, ದ್ವೇಷ ಎರಡೂ ಉಂಟಾಗುತ್ತದೆ. ಆದರೆ ಹೇಳಬೇಕಾದ ಎಲ್ಲಾ ವಿಷಯವನ್ನು ಅವರು ಖಂಡಿತವಾಗಿಯೂ ಹೇಳಿಯೇ ತೀರುತ್ತಾರೆ.

'ವೇಶ್ಯೆ ಯಾಕಿನ್ನು ಬಟ್ಟೆ ಬಿಚ್ಚಿ ನಗ್ನವಾಗಿಲ್ಲ' ಎಂದು ಅವನು ಕೋಪದಿಂದ ಕಿರುಚಿದ. ಅವಳು ಅವನ ಕೋಪಕ್ಕೆ ಮಣಿದೋ ಅಥವಾ ಗಿರಾಕಿಯ ಬಯಕೆ ಏನೇ ಇದ್ದರೂ ಅದನ್ನು ತೀರಿಸಬೇಕಾದ್ದು ವೇಶ್ಯೆಯ ಕರ್ತವ್ಯವೆಂದು ಭಾವಿಸಿಯೋ, ಅಥವಾ ಇನ್ನಿತರ ಬೇರೆ ಕಾರಣಗಳಿಗಾಗಿಯೇ, ತನ್ನೆಲ್ಲ ಬಟ್ಟೆಗಳನ್ನು ಕಳಚಿ ನಗ್ನವಾಗಿ ನಿಂತಳು ಎಂಬುದನ್ನು ವಾಚಕರಿಗೆ ತಿಳಿಸಲು ಕಥಾ ನಿರೂಪಕ ಮರೆಯಲಿಲ್ಲ.

'ನಾನು ನಿನ್ನನ್ನು ಸಂಭೋಗಿಸುತ್ತೇನೆ...' ಅವನು ನಡುಗುವ ಧ್ವನಿಯಲ್ಲಿ ನುಡಿದ.

'ನಾನು ವೇಶ್ಯೆ' ಎಂದು ಸ್ಪಷ್ಟವಾಗಿ ನುಡಿದು ನಿರ್ಲಜ್ಜೆಯಿಂದ ಹೋಗಿ ಮಂಚದ ಮೇಲೆ ಅಂಗಾತವಾಗಿ ಮಲಗಿದಳು. ಅವನು ಹೆಣದಂತೆ ಅವಳ ಮೇಲೆ ಬಿದ್ದ. ಅವನು ಉಸಿರಲ್ಲಿ ಕಾಮವಿರಲಿಲ್ಲ. ಅವಳನ್ನು ಎರೆ ಹುಳುವಿನ ಹಾಗೆ ಎಳೆದು ಒರಟಾಗಿ ತಬ್ಬಿಕೊಂಡ.

'ನಾನು ಅಸ್ಪೃಶ್ಯ' ಪ್ರತೀಕಾರದ ಧ್ವನಿಯಲ್ಲಿ ಅವಳ ಕಿವಿಗಳಲ್ಲಿ ಉಸುರಿದ.

'ನಾನು ವೇಶ್ಯೆ'

'ನನ್ನ ತಂದೆ ನಿನ್ನ ಮಲವನ್ನು ಎತ್ತಿದ್ದ'

'ನಾನು ವೇಶ್ಯೆ...'

ಅವನು ಅವಳ ಬಾಯಿಯಲ್ಲಿ ಎಂಜಲನ್ನು ಉಗಿದು ಹೇಳಿದ 'ನಾವು ಸತ್ತ ಎತ್ತಿನ ಮಾಂಸವನ್ನು ತಿನ್ನುವವರು'.

'ನಾನು ವೇಶ್ಯೆ' ಎನ್ನುತ್ತಾ ಎಂಜಲನ್ನು ನುಂಗಿದಳು.

ಆತ ಅವಳನ್ನು ಪಕ್ಕಕ್ಕೆ ತಳ್ಳಿ ಕೋಪದಿಂದ ಎದ್ದು ನಿಂತು 'ನೀನು ಬ್ರಹ್ಮನ ತಲೆಯಲ್ಲಿ ಹುಟ್ಟಿದವಳು' ಎಂದು ಕಿರುಚಿದ.

'ನಾನು ವೇಶ್ಯೆ'... ಆಯಾಸ ಭರಿತ ಕೊರಳಿನಿಂದ ನುಡಿದಳು.

ಆಕೆ 'ವೇಶ್ಯೆ' ಎಂಬ ಆ ಪದವನ್ನು ತನ್ನನ್ನು ರಕ್ಷಿಸಿಕೊಳ್ಳುವ ಗುರಾಣಿಯಾಗಿಯೂ ಅವನ ಮೇಲೆ ಆಕ್ರಮಣ ಮಾಡುವ ಆಯುಧವಾಗಿಯೂ ಬಳಸಿಕೊಂಡಳೆಂದು ನಿ ರ ೂ ಪ ಕ ರ ು ಭಾವಿಸುತ್ತಾರೆ.

'ನೀನು ವೇಶ್ಯೆ' ಎಂದು ಅವನು ದ್ವೇಷದಿಂದ ನೆಲದ ಮೇಲೆ ಕ್ಯಾಕರಿಸಿ ಉಗಿದ. ಈ ಬಾರಿ ಅವಳು ಉತ್ತರಿಸಲಿಲ್ಲ. ಅವನು ಇದುವರೆಗೂ ಕೇಳಿದ ಹಾಗೂ ಇನ್ನು ಮುಂದೆ ಕೇಳುವ ಎಲ್ಲಾ ಪ್ರಶ್ನೆಗಳಿಗೂ ಒಂದೇ ಉತ್ತರ–ನಾನು ವೇಶ್ಯೆ–ಇದನ್ನು ಈಗಾಗಲೇ ಹೇಳಿದ್ದೇನೆ. ಮುಂದೆಯೂ ಹೇಳುತ್ತೇನೆ ಎನ್ನುವಂತೆ ಅವನನ್ನು ಕ್ರೂರವಾಗಿ ನೋಡಿದಳು.

'ಮಾತನಾಡಿದ್ದಕ್ಕಿಂತ ಹತ್ತು ಪಟ್ಟು ದುಡ್ಡು ಕೊಡುತ್ತೇನೆ'.

ಅವಳ ಕಣ್ಣುಗಳು ಅಚ್ಚರಿಯಿಂದ ಅರಳಿದವು.

'ಬೇಕಾದರೆ ನೂರು ಪಟ್ಟು... ಹೌದು ನೂರು ಪಟ್ಟು ಕೊಡುತ್ತೇನೆ'.

ಖಚಿತವಾಗಿ ನುಡಿದ ಆತ ಬೀರು ತೆಗೆದು ಅದರಲ್ಲಿದ್ದ ಹಣವನ್ನೆಲ್ಲಾ ಬಾಚಿ ಎತ್ತಿಕೊಂಡು ಬಂದು ಅವಳ ಮೇಲೆ ಬಿಸಾಡಿದ. ಹುಚ್ಚನಂತೆ ಕೋಣೆಯ ಮೂಲೆ, ಪುಸ್ತಕದ ಅಲಮಾರಿನಲ್ಲೆಲ್ಲ ಹುಡುಕಿ, ಕೊನೆಗೆ ಶರ್ಟ್, ಪ್ಯಾಂಟ್‌ನಲ್ಲಿದ್ದ ಚಿಲ್ಲರ ಕಾಸುಗಳನ್ನು ಬಿಡಲಿಲ್ಲ... ... ...

ನಿಜವಾಗಿಯೂ ಇಲ್ಲಿಗೆ ಕತೆಯನ್ನು ನಿಲ್ಲಿಸಲು ಬಯಸುತ್ತೇನೆ. ಇದ್ದಕಿದ್ದಂತೆ ದಿಢೀರೆಂದು ಕಥೆಯನ್ನು ನಿಲ್ಲಿಸಿಬಿಟ್ಟರೆ ಓದುಗರ ಟೀಕೆ ಎದುರಾಗಬಹುದು. ಆದರೆ ಆ

ಅನುಭವಸ್ಥ ಹುಡುಗಿಯರಾಗಿದ್ದರೆ ಇಂತಹ ಸಂದರ್ಭಗಳಲ್ಲಿ ಹೇಗೆ ನಡೆದುಕೊಳ್ಳಬೇಕೆಂಬುದನ್ನು ಚೆನ್ನಾಗಿ ಅರಿತಿರುತ್ತಾರೆ. ಗಿರಾಕಿಗಳನ್ನು ಆಕರ್ಷಿಸಲು ಹಾಗೂ ಮಾತನಾಡಿದ್ದಕ್ಕಿಂತ ಹೆಚ್ಚು ಟಿಪ್ಸ್ ತೆಗೆದುಕೊಳ್ಳಲು ಕೆಲವೊಮ್ಮೆ ಬಹಳ ಅಸಹ್ಯಕರವಾಗಿಯೂ ವರ್ತಿಸುತ್ತಾರೆ. ಕೋಣೆಯೊಳಗೆ ಹೋದೊಡನೆ ಬಟ್ಟೆಗಳನ್ನೆಲ್ಲ ಕಳಚಿಬಿಡುತ್ತಾರೆ. ಅಲ್ಲಿಂದ ಹೊರಬರುವ ತನಕ ನಗ್ನ ಸ್ಥಿತಿಯಲ್ಲಿಯೇ ಇರುತ್ತಾರೆ. ಕೆಲವರು ಅವನೊಂದಿಗೆ ಕುಳಿತು ಕುಡಿಯುತ್ತಾರೆ. ನಾನು ಹೇಳುತ್ತಿರುವುದು ಸುಳ್ಳಲ್ಲವೆಂಬುದು ಅನುಭವಸ್ಥರಾದ ವಾಚಕರಿಗೆ ಮಾತ್ರ ತಿಳಿಯುತ್ತದೆ...

ಕತೆಯನ್ನು ಮುಂದುವರಿಸುವುದರಿಂದ ತನಗಾಗುವ ಆತಂಕದಿಂದ ತಪ್ಪಿಸಿಕೊಳ್ಳಬಹುದಲ್ಲ' ಎನ್ನುತ್ತಾರೆ ನಿರೂಪಕರು. ಹೀಗೆ ಕತೆ ನಿಲ್ಲಿಸುವುದಕ್ಕೆ ನಾನಾ ಕಾರಣಗಳಿರಬಹುದು. ಅವರಿಗೆ ಮನೋಧೈರ್ಯದ ಕೊರತೆ ಇರಬಹುದು ಅಥವಾ ಅಮಾನುಷವಾದ ಮೃಗದ ರೀತಿಯ ಕ್ರೂರ ಕಲ್ಪನೆ ಎಂದೋ, ನಮ್ಮ ಪುರಾತನ ಸಂಪ್ರದಾಯ ಮತ್ತು ಮನುಷ್ಯ ಚಿಂತನೆಗಳಿಗೆ ವಿರುದ್ಧವಾದುದೆಂದೋ ಭಾವಿಸಿ ವಿಮರ್ಶಕರು ನಿಷ್ಕಾರುಣ್ಯವಾಗಿ ದಾಳಿ ಮಾಡಬಹುದೆಂಬ ಭಯ ನಿರೂಪಕರಲ್ಲಿರಬಹುದು. ಅಲ್ಲದೆ ಅವರಿಗೂ ಕತೆಯ ಉಳಿದ ಭಾಗ ಇಷ್ಟವಾಗದೆ ಇರಬಹುದು. ಹಾಗಾಗಿ ಅವರು ಆಪಾದನೆಗೆ ಈಡಾದ ಖೈದಿಯು ವರದಿ ಒಪ್ಪಿಸುವಂತೆ ಮೆಲುದನಿಯಲ್ಲಿ ಹೇಳಲೆತ್ನಿಸಿದರು. ವಾಸ್ತವದಲ್ಲೋ, ಕತೆಯಲ್ಲೋ, ಪ್ರಪಂಚದ ಯಾವುದೋ ಮೂಲೆಯಲ್ಲೋ ಈ ರೀತಿಯ ಅಥವಾ ಇದಕ್ಕಿಂತ ಹೀನವಾದ ಘಟನೆಗಳು, ಕಲ್ಪನೆಗಳೂ ನಡೆದೇ ಇರುತ್ತವೆ ಎಂಬುದನ್ನು ವಾಚಕರಿಗೆ ತಿಳಿಸಲು ಇಚ್ಛಿಸಿದ ನಿರೂಪಕ, ಅದಕ್ಕಾಗಿ ಕೆಲವು ಪತ್ರಿಕೆಯ ಸುದ್ದಿಗಳನ್ನು, ಯುದ್ಧಕ್ಕೆ ಹಿಂದಿನ ಜರ್ಮನಿ ಮತ್ತು ಫ್ರೆಂಚ್ ಕಾದಂಬರಿಗಳನ್ನು, ಲ್ಯಾಟಿನ್ ಅಮೆರಿಕಾದ ಕಿರುಕತೆಗಳನ್ನು, ಆಫ್ರಿಕಾದ ಕವಿತೆಗಳನ್ನು, ಸೋವಿಯತ್ ಯೂನಿಯನ್‌ನ ಹೆಸರಾಂತ ನಿರ್ದೇಶಕರ ಕೆಲವು ಚಿತ್ರಗಳನ್ನು, ರುಮೇನಿಯಾದ ನಾಟಕಗಳನ್ನು, ಜೊತೆಗೆ ಹಿಂದು ಪುರಾಣಗಳನ್ನೂ ಕೂಡಾ ಉದಾಹರಿಸುತ್ತಾ, ಇವುಗಳ ಹಾಗೇ ಈ ಕತೆಯ ಉಳಿದ ಭಾಗವನ್ನು ನಿರೂಪಿಸುತ್ತಾರೆ.

ನಿಜವಾಗಿಯೂ ಇವೆಲ್ಲಾ ಸಂದರ್ಭೋಚಿತವಾದ ಉದಾಹರಣೆಗಳು. ಇದರಿಂದ ನಿರೂಪಕರು ಮಾತ್ರವಲ್ಲ ಓದುಗರೂ ಸಹಾ ಮಾನಸಿಕ ಆತಂಕದಿಂದ ಮುಕ್ತರಾಗುತ್ತಾರೆ.

ಕತೆಗಳಲ್ಲೂ, ಚಲನಚಿತ್ರಗಳಲ್ಲೂ ಚಿತ್ರಿಸಿದಂತೆ ಇಲ್ಲಿಯೂ ಸಹಾ ಎಲ್ಲವೂ ತ್ವರಿತವಾಗಿ ನಡೆಯಿತು. ಅವಳ ಕೈಕಾಲುಗಳನ್ನು ಮಂಚಕ್ಕೆ ಕಟ್ಟಿಹಾಕಿ, ಬಾಯಿಗೆ ಬಟ್ಟೆ ತುರುಕಿ, ಅವಳ ಎದುರಿದ್ದ ಕುರ್ಚಿಯಲ್ಲಿ ನಗ್ನವಾಗಿ ಕುಳಿತು ಸಿಗರೇಟ್ ಹಚ್ಚಿಕೊಂಡ. ಸೇಡುತೀರಿಸಿಕೊಳ್ಳುವ ಕ್ರೂರಮೃಗದಂತೆ ನೋಡುತ್ತಾ ಹೊಗೆಯನ್ನು ಆಳವಾಗಿ ಎಳೆದು ನಿಧಾನವಾಗಿ ಅವಳ ನಗ್ನ ದೇಹದೆಲ್ಲೆಡೆ ಊದಿದನು. ಅವನ ಈ ನಡವಳಿಕೆ ಸಹಿಸದ ಆಕೆ ಚಿತ್ರಹಿಂಸೆಯಿಂದ ನರಳಿದಳು. ಅವಳ ಕೂಗಾಟಗಳು ಎದೆಯ ಗೂಡಿನೊಳಗೆ ಹಿಂಡಿ ಹಿಪ್ಪೆಯಾಗಿ ಸತ್ತು ಹೋದವು. ನಿರೂಪಕರು ಮೇಲೆ ಹೇಳಿದ ಘಟನೆ ನಿಜವಾಗಿಯೂ ಚಲನಚಿತ್ರಗಳ ದೃಶ್ಯಗಳನ್ನು ನೆನಪಿಸುವಂತಿತ್ತು.

ನಿರೂಪಕ ಬಯಸಿದರೆ ಈ ಘಟ್ಟದಲ್ಲಿಯೇ ಕಥೆಯನ್ನು ಮುಕ್ತಯಗೊಳಿಸಬಹುದಿತ್ತು. ಆದರೆ ಹೇಳಬೇಕಾದುದು ಸಾಕಷ್ಟಿದೆ ಎಂಬುದು ಅವರ ಅಭಿಪ್ರಾಯ. ಇದು ತಮಗೆ ಹೊಳೆದ ವಿಷಯವಲ್ಲ. ಕಥೆ ತಾನಾಗಿಯೇ ಆರಿಸಿಕೊಂಡ ಸ್ವಚ್ಛಂದ ಮುಕ್ತಾಯವಿದು.

ಹಾಗಾಗಿ ಕಥೆಯ ಈ ನಿರರ್ಗಳ ಓಟಕ್ಕೆ ತಡೆ ಹಾಕಬಾರದೆಂದು ನಿರೂಪಕರು ವಾಚಕರಲ್ಲಿ ವಿನಂತಿಸಿಕೊಳ್ಳುತ್ತಾರೆ.

'ನರಕದ ಮುಂಬಾಗಿಲಿನಂತಿರುವ ಊರ ಹೊರಗಿನ ಆ ಕಕ್ಕಸು ಗುಂಡಿ ಬಹುಶಃ ಅದರ ಬಗ್ಗೆ ನಿನಗೆ ತಿಳಿದಿರಲಾರದು.' ಭಯಂಕರವಾದ ಕನಸೊಂದನ್ನು ನೆನಪಿಸಿಕೊಳ್ಳುವವನಂತೆ ಆತಂಕಭರಿತ ಧ್ವನಿಯಲ್ಲಿ ಹೇಳಿ ಕೋಪದಿಂದ ಸಿಗರೇಟು ಹೊಗೆಯನ್ನು ಊದಿದ. ಅವಳ ಕಣ್ಣುಗಳು ಏನನ್ನೋ ಹೇಳಲಪೇಕ್ಷಿಸುತ್ತಿತ್ತು. ಆದರೆ ಅವನೇ ಮುಂದುವರಿಸಿದ:

'ಅಲ್ಲಿಯೇ ನಾವು ಜೀವಿಸುತ್ತಿದ್ದೆವು. ಹಂದಿಗಳಂತೆ... ನಮ್ಮ ಉಸಿರು ಸಹಾ ಸೋಕಬಾರದೆಂದು ನೀವು ಭಾವಿಸಿದ್ದಿರಿ. ಸತ್ತ ಎತ್ತಿನ ಮಾಂಸವನ್ನು ತಿನ್ನುವ ನಮ್ಮ ಎಂಜಲು ಭೂಮಿಗೆ ತಾಕಿದರೆ ಮೈಲಿಗೆಯಾಗುತ್ತದೆಂದು ನಿಮ್ಮ ಶಾಸ್ತ್ರಗಳಲ್ಲಿ ಹೇಳಿರುವುದರಿಂದ ನಾವು ಕುತ್ತಿಗೆಗೆ ಮಣ್ಣಿನ ಮಡಿಕೆಗಳನ್ನು ತೂಗುಹಾಕಿಕೊಂಡು ನಡೆದದ್ದು, ಆ ಗುಲಾಮತನದ ಸಂಕೇತವನ್ನು ಭಿಕ್ಷಾ ಪಾತ್ರೆಯ ಹಾಗೆ ಹೊತ್ತು ತಿರುಗಿದ್ದು, ವನ್ಯ ಪಶುಗಳಂತೆ ಬದುಕಿದ ಆ ದಿನಗಳ ಬಗ್ಗೆ ನನ್ನ ತಾತಾ ಸಾಕಷ್ಟು ಹೇಳಿದ್ದಾರೆ. ಆ ಶಾಸ್ತ್ರಗಳೆಲ್ಲಾ ನಿಮ್ಮ ಪೂರ್ವಜರಿಂದ ಬರೆಯಲ್ಪಟ್ಟದ್ದು' ಎಂದು ಪ್ರತೀಕಾರದ ಭಾವದೊಂದಿಗೆ ಅವಳ ಕಿವಿಯಲ್ಲಿ ಉಸುರಿದ. ಅವಳ ಕಣ್ಣೆದುರಿನಲ್ಲಿ ಕ್ರೂರವಾದ, ಚಿತ್ರಹಿಂಸೆಯನ್ನು ಮೀರುವ ಗತ ಚಿತ್ರವೊಂದು ಗೋಚರಿಸಿತು. ಆತ ಮುಂದುವರಿಸುತ್ತಾ:

'ನಾವು ನಿಮ್ಮ ಹೊಲಗಳಲ್ಲಿ ಎತ್ತುಗಳಂತೆ ಕಷ್ಟಪಡುಲು ಹಾಗೂ ನಿಮ್ಮ ಕಕ್ಕಸು ಗುಂಡಿಗಳನ್ನು ಸ್ವಚ್ಛಗೊಳಿಸಲು ಹುಟ್ಟಿದವರು. ಹಾಂ... ನೀವು ತಿಂದುಬಿಟ್ಟ ಎಂಜಲನ್ನು ತಿಂದು ನಮ್ಮ ಹಸಿವನ್ನು ನೀಗಿಸಿಕೊಳ್ಳಬೇಕಿತ್ತು. ನಿಮ್ಮ ಹಳೆಯ ಬಟ್ಟೆಗಳಿಂದ ನಮ್ಮ ನಗ್ನತೆಯನ್ನು ಮರೆಸಿಕೊಳ್ಳಬೇಕಾಗಿತ್ತು. ಈಗಲೂ ನಮ್ಮ ಹೆಣ್ಣು ಮಕ್ಕಳು ಅರೆ ನಗ್ನರಾಗಿಯೇ ಅಲೆಯುತ್ತಿದ್ದಾರೆ...'

ಅವನ ಮನದಾಳದಿಂದ ಬಂದ ಆ ನುಡಿಗಳು ಕಣ್ಣೀರಿನಲ್ಲಿ ತೋಯ್ದು ಹೋಗಿದ್ದವು. ಅದನ್ನು ಕೇಳಿ ಆಕೆ ದುಃಖಿತಳಾದಳು. ಅವನ ಮೈ ನಡುಗುತ್ತಿತ್ತು.

'ನಮ್ಮನ್ನು ವೇಶ್ಯಯ ಮಕ್ಕಳೆಂದರು'.

ಅವಳು ದಿಗ್ಭ್ರಮೆಯಿಂದ... .... ಕಿರುಚಬೇಕೆಂದುಕೊಂಡಳು. ಸ್ವರ ಹೊರಡಲಿಲ್ಲ. ಆದರೆ ಕಣ್ಣೀರು ಮಾತ್ರ ಧಾರೆಯಾಗಿ ಹರಿದು ಕೆನ್ನೆಯನ್ನು ಒದ್ದೆಯಾಗಿಸಿತ್ತು.

'ಇದನ್ನು ವಿರೋಧಿಸಲು ಹೋಗಿ ಪ್ರತಿಬಾರಿಯು ಹೊಡೆತಗಳನ್ನೆ ತಿಂದೆವು'

ಆ ಕೋಣೆಯ ಗೋಡೆಗಳು ಅವನ ಮಾತಿಗೆ ಸಮ್ಮತಿ ಸೂಚಿಸುವಂತೆ ಅವನೊಡನೆ ಸೇರಿ ಕೂಗುವಂತೆ ಪ್ರತಿಧ್ವನಿಸಿದವು.

'ನಿಮ್ಮನ್ನು ನೀವು ಪವಿತ್ರಾತ್ಮಗಳು ಎಂದು ಕರೆದುಕೊಳ್ಳುತ್ತೀರಲ್ಲ, ಹಸುವಿಗೂ, ಪಾರಿವಾಳಕ್ಕೂ ನ್ಯಾಯ ಒದಗಿಸಿದ್ದೇವೆಂದು ಡಂಗೂರ ಹೊಡೆದುಕೊಳ್ಳುತ್ತೀರಲ್ಲ. ಆದರೆ ನಮ್ಮ ಮಕ್ಕಳು ಬಾವಿಗೆ ಬಿದ್ದಾಗ ವಿದ್ಯುತ್ ಹರಿಸಿ ಕೊಂದದ್ದು.... ಅರೆಪಾವು ಭತ್ತ ಹೆಚ್ಚಾಗಿ ಕೇಳಿದರೆಂದು ನಮ್ಮ ಹೆಣ್ಣು ಮಕ್ಕಳನ್ನು, ಹಸುಗೂಸಗಳನ್ನು ಯುವಕರನ್ನು ಬೆಂಕಿಹಚ್ಚಿ ದಹಿಸಿದ್ದು, ನಮ್ಮ ಹೆಣ್ಣು ಮಕ್ಕಳನ್ನು ಬೆತ್ತಲೆ ಮಾಡಿ ಬೀದಿಗಳಲ್ಲಿ ಓಡಿಸಿದ್ದು, ನಮ್ಮ ಮಕ್ಕಳನ್ನು ಕುರುಡಾಗಿಸಿದ್ದು, ಇದಕ್ಕೆಲ್ಲ ಪ್ರಾಯಶ್ಚಿತವೇನು? ಎಲ್ಲಿದೆ ನ್ಯಾಯ?'

ಅವನ ಪೂರ್ವಜರು ಮತ್ತು ಅವನ ಮೇಲೆ ತನ. ತಾತ, ಮುತ್ತಾತಂದಿರು ಮಾಡಿದ ದೌರ್ಜನ್ಯಗಳಿಗಾಗಿ ಪ್ರಾಯಶ್ಚಿತ್ತ ಅನುಭವಿಸುವಂತೆ ಆಕೆ ಅತ್ತಳು. ಅವಳ ದೇಹವಿಡೀ ಕುಗ್ಗಿ ಹೋಗಿತ್ತು. ಅವನಿಗಾಗಿ ತನ್ನನ್ನು ತಾನು ಬಲಿ ಕೊಟ್ಟಂತೆ ಪ್ರತಿಕ್ರಿಯಿಸದೇ ಇದ್ದಳು.

ನಿರೂಪಕ ಕತೆಯನ್ನು ಮುಂದುವರಿಸಲು ಇಚ್ಛಿಸದೆ ಹಾಸ್ಯಕತೆಯೊಂದನ್ನು ಹೇಳಿ ಮುಗಿಸಿದಂತೆ ಮುಗುಳ್ನಕ್ಕರು. ಕತೆಯನ್ನು ಹೇಳಿದ ನಂತರ ಮಕ್ಕಳಿಗೆ ಒಗಟನ್ನು ಕೇಳುವಂತೆ ತನ್ನ ವಾಚಕರ ಮುಂದೆ ಕೆಲವು ಪ್ರಶ್ನೆಗಳನ್ನು ಇಡುತ್ತಾರೆ. ಕತೆಯ ಅಂತ್ಯ ಹೇಗಾಗಬಹುದೆಂದು ಊಹಿಸಲು ಹೇಳುತ್ತಾರೆ. ಕೆಲವು ಉದಾಹರಣೆ ನೀಡಿ, ನೀವು ಯಾವ ರೀತಿಯ ಅಂತ್ಯ ಬಯಸುವಿರೆಂದು ಓದುಗರನ್ನೇ ಪ್ರಶ್ನಿಸುತ್ತಾರೆ.

ಅವನು ಕೊನೆಯಲ್ಲಿ ಅವಳನ್ನು ಸಾಯಿಸಿಬಿಡುವಂತೆ ಅಥವಾ ಅತೀವ ಹಿಂಸೆಯಿಂದ ಮನನೊಂದ ಆಕೆ ಆತ್ಮಹತ್ಯೆ ಮಾಡಿಕೊಂಡಂತೆ ಚಿತ್ರಿಸಬಹುದು. ಒಂದು ವೇಳೆ ಇದು ಇಷ್ಟವಾಗದಿದ್ದರೆ ಅವನು ಅವಳ ಕಣ್ಣೀರಿಗೆ ಕರಗಿ, ತನ್ನ ತಪ್ಪ [illegible] ಅರಿತು ಅವಳನ್ನು ಬಿಟ್ಟುಬಿಡುವಂತೆ ಮಾಡಬಹುದು. ಅಥವಾ ಚಲನಚಿತ್ರಗಳಲ್ಲಿ, ಕಾದಂಬರಿಗಳಲ್ಲಿ ಕಂಡುಬರುವಂತೆ ತನ್ನ ಕಾರ್ಯಕ್ಕೆ ಪ್ರಾಯಶ್ಚಿತ್ತವಾಗಿ ಅವಳನ್ನು ತಾನೆ ಮದುವೆಯಾಗುತ್ತೇನೆಂದು ಹೇಳಿ ಓದುಗರ ಅನುಕಂಪ ಗಿಟ್ಟಿಸಬಹುದು. ಇಲ್ಲವೆ, ಪತ್ತೇದಾರಿ ಕಾದಂಬರಿಗಳಲ್ಲಿ ಬರುವಂತೆ ಪೊಲೀಸ್ ಅಥವಾ ಯಾರಾದರೂ ಸಮಾಜ ಸೇವಕರು ಬಾಗಿಲು ಒಡೆದು ಒಳನುಗ್ಗಿ, ಆಪ್ಪತ್ತಿನಲ್ಲಿದ್ದ ಅವಳನ್ನು ಗುರುತಿಸಿ...

ಇದ್ಯಾಕೆ ನಗ್ತೀರಲ್ಲಾ...!

ನಿರೂಪಕರಿಗೂ ಇದೆಲ್ಲಾ ಹಾಸ್ಯಾಸ್ಪದವಾದ, ಚಿಕ್ಕಮಕ್ಕಳ ಮೊಂಡುವಾದದಂತೆ ಅನಿಸಬಹುದು. ಆದರೂ ಇಂತಹ ಸಂದರ್ಭಗಳಲ್ಲಿ ಈ ರೀತಿಯ ಯಾವುದಾದರೊಂದು ಘಟನೆ ನಡೆಯುವುದಂತೂ ಖಚಿತ.

ಹಾಗಾಗಿ, ನಿರೂಪಕರ ಪಾಲಿಗೆ ಎಲ್ಲಾ ಕತೆಗಳಂತೆ ಇದೂ ಒಂದು ಕತೆ, ಅಷ್ಟೇ ಅಲ್ಲವೇ? □

ದಲಿತರ ಚಾರಿತ್ರಿಕ ನಿರ್ಧಾರ

ಬುದ್ಧನೆಡೆಗೆ ಮರಳಿ ಮನೆಗೆ...

ಕರ್ನಾಟಕದಲ್ಲಿ ಇದೇ ಮೊದಲ ಬಾರಿಗೆ ದಲಿತ ಸಂಘರ್ಷ ಸಮಿತಿ ಬೌದ್ಧ ಧರ್ಮ ಸ್ವೀಕಾರ ಕಾರ್ಯಕ್ರಮವನ್ನು ಕಳೆದ ತಿಂಗಳು ಜೂನ್-೯ರ ಶನಿವಾರ ಬೆಂಗಳೂರಿನ ಡಾ॥ ಅಂಬೇಡ್ಕರ್ ಭವನದಲ್ಲಿ ಸಂಘಟಿಸಿತ್ತು. ಹಿಂದೂಧರ್ಮ ತೊರೆದು 'ಬುದ್ಧನೆಡೆಗೆ ಮರಳಿ ಮನೆಗೆ' ಹೋಗುವ ಧ್ಯೇಯ ವಾಕ್ಯದ ಘೋಷಣೆಯೊಂದಿಗೆ ಮೂರು ಸಾವಿರಕ್ಕೂ ಅಧಿಕ ಜನ ಬೌದ್ಧ ಧರ್ಮ ಸ್ವೀಕರಿಸಿದರು. ಕರ್ನಾ ಟಕದ ಮಟ್ಟಿಗಷ್ಟೇ ಅಲ್ಲದೆ ಇಡೀ ರಾಷ್ಟ್ರದಲ್ಲೇ ಒಂದು ಐತಿಹಾಸಿಕ ಘಟನೆ ಇದು. ಬಾಬಾ ಸಾಹೇಬ್ ಡಾ॥ ಅಂಬೇಡ್ಕರ್‌ರವರು ಅಕ್ಟೋಬರ್ ೧೪, ೧೯೫೬ರಂದು ತಮ್ಮ ಲಕ್ಷಾಂತರ ಅನುಯಾಯಿಗಳೊಂದಿಗೆ ಧಮ್ಮದೀಕ್ಷೆ ಸ್ವೀಕರಿಸಿದ ನಂತರ ಇಡೀ ವಿಶ್ವದಾದ್ಯಂತ ಧಮ್ಮ ತತ್ವಗಳಿಂದ ಆಕರ್ಷಿತರಾದ ಜನ ಬೌದ್ಧ ಧರ್ಮಸ್ವೀಕರಿಸುತ್ತಿದ್ದಾರೆ.

ವಡ್ಡಗೆರೆ ನಾಗರಾಜಯ್ಯ

ಕಳೆದ ತಿಂಗಳು ಜೂನ್ ೯ರ ಶನಿವಾರ ನಾಡಿನ ಮೂಲೆ ಮೂಲೆಗಳಿಂದ ಎಳೆ ಮಕ್ಕಳಿಂದ ಹಿಡಿದು, ಪುರುಷರು-ಮಹಿಳೆಯರು, ಹಣ್ಣಣ್ಣು ಮುದುಕ-ಮುದುಕಿಯರಾದಿಯಾಗಿ ಸಾವಿರಾರು ಜನ ಶುಭ್ರ ಬಿಳಿ ಬಟ್ಟೆ ತೊಟ್ಟು ಬೆಂಗಳೂರಿನ ಕಂಟೋನ್ಮೆಂಟ್ ಹತ್ತಿರದ ಅಂಬೇಡ್ಕರ್ ಭವನಕ್ಕೆ ಸಾಗರದೋಪಾದಿಯಾಗಿ ಹರಿದು ಬಂದೆವು.

ಎರಡೂವರೆ ಸಾವಿರ ವರ್ಷಗಳ ಹಿಂದೆ ಲೋಕದ ದುಃಖ ನಿವಾರಣೆಗಾಗಿ ಆರ್ಯ ಸತ್ಯಗಳನ್ನು ಬೋಧಿಸಿ, ಆರ್ಯ ಅಷ್ಟಾಂಗ ಮಾರ್ಗವನ್ನು ನಿಬ್ಬಾಣದ ದಾರಿಯನ್ನು ತೋರಿಸಿ ಕೊಟ್ಟ ಬುದ್ಧಗುರುವಿನ ಚಿಂತನೆಗಳಿಂದ ಆಕರ್ಷಿತರಾದ ಬುದ್ಧಿಜೀವಿಗಳು, ಕವಿ, ಸಾಹಿತಿಗಳು, ಕಲಾವಿದರು, ಹೋರಾಟಗಾರರು, ಜನ ಸಾಮಾನ್ಯರು, ದುಃಖಿತರು, ಆಧ್ಯಾತ್ಮದಲ್ಲಿ ಆಸಕ್ತಿ ಉಳ್ಳವರು ಹೀಗೆ ಬಗೆಬಗೆ ಹಿನ್ನೆಲೆಗಳ ಮೂರು ಸಾವಿರಕ್ಕೂ ಅಧಿಕ ಜನ ಅಲ್ಲಿದ್ದೆವು. ಹಿಂದೂ ಧರ್ಮವನ್ನು ತೊರೆದು 'ಬುದ್ಧನೆಡೆಗೆ ಮರಳಿ ಮನೆಗೆ' ಹೋಗುವ ಧ್ಯೇಯ ವಾಕ್ಯದ ಘೋಷಣೆಯೊಂದಿಗೆ ಧಮ್ಮ ದೀಕ್ಷೆ ಸ್ವೀಕರಿಸಿದೆವು. ಕರ್ನಾಟಕದ ಮಟ್ಟಿಗಷ್ಟೇ ಅಲ್ಲದೆ ಇಡೀ ರಾಷ್ಟ್ರದಲ್ಲೇ ಒಂದು ಐತಿಹಾಸಿಕ ಘಟನೆ ಇದು.

ಬಾಬಾ ಸಾಹೇಬ್ ಡಾ॥ ಅಂಬೇಡ್ಕರ್‌ರವರು ಅಕ್ಟೋಬರ್ ೧೪, ೧೯೫೬ರಂದು ನಾಗಪುರುದ ಶ್ರದ್ಧಾನಂದಪೇಟೆಯಲ್ಲಿರುವ ವ್ಯಾಕ್ಸಿನ್ ಇನ್ಸ್‌ಟಿಟ್ಯೂಟ್ ಮೈದಾನದಲ್ಲಿ ತಮ್ಮ ಲಕ್ಷಾಂತರ ಅನುಯಾಯಿಗಳೊಂದಿಗೆ ಬೌದ್ಧಧರ್ಮಕ್ಕೆ 'ತಿರುಧಮ್ಮಾಂತರ' (Return to Dhamma) ಹೊಂದಿ ಧಮ್ಮ ದೀಕ್ಷೆ ಸ್ವೀಕರಿಸಿದ ನಂತರ ಭಾರತ ದೇಶದಲ್ಲಿ ಮಾತ್ರವಲ್ಲದೆ ಇಡೀ ವಿಶ್ವದಾದ್ಯಂತ ಧಮ್ಮ ತತ್ವಗಳಿಂದ ಆಕರ್ಷಿತರಾದ ಜನ ಅಪಾರ ಸಂಖ್ಯೆಯಲ್ಲಿ ಬೌದ್ಧಧರ್ಮಕ್ಕೆ ಧಮ್ಮಾಂತರಗೊಳ್ಳುತ್ತಿದ್ದಾರೆ. ಇಂತಹ ಧಮ್ಮಾಂತರ ಕಾರ್ಯಕ್ರಮಗಳು ಆಗಾಗ್ಗೆ ನಡೆಯುತ್ತಲೇ ಇವೆ.

ಕಳೆದ ಜೂನ್ ೯ರ ಶನಿವಾರ ಡಾ॥ ಅಂಬೇಡ್ಕರ್ ಭವನದಲ್ಲಿ ಸೇರಿದ್ದಾಗ ನಮ್ಮ ಕಣ್ಣುಗಳಲ್ಲಿ ಸಾಮಾಜಿಕ ಸಮಾನತೆಯನ್ನು ಸಾಧಿಸುತ್ತೇವೆಂಬ ಗೆಲುವಿನ ಮಿಂಚು ಹೊಳೆಯುತ್ತಿತ್ತು. ಶತಶತಮಾನಗಳಿಂದ ಧಾರ್ಮಿಕ ಶೋಷಣೆಗೀಡಾಗಿ ಜೈಲು ಪಕ್ಷಿಗಳಾಗಿದ್ದವರನ್ನು ಸ್ವತಂತ್ರವಾಗಿ ಹಾರಲು ಬಿಟ್ಟ ಮೈಪುಳಕ ನಮ್ಮ ಪ್ರತಿಯೊಂದು ಚಲನೆಯಲ್ಲಿ ಎದ್ದು ಕಾಣುತ್ತಿತ್ತು. ದಲಿತ ಸಂಘರ್ಷ ಸಮಿತಿಯು ಹಮ್ಮಿಕೊಂಡಿದ್ದ ಈ ಧಮ್ಮದೀಕ್ಷಾ ಸಮಾವೇಶವು ಡಾ॥ ಅಂಬೇಡ್ಕರ್ ಎಳೆತಂದ ಹೋರಾಟದ ರಥವನ್ನು ಅವರ ಅನುಯಾಯಿಗಳು ಮುಂದಕ್ಕೆಳೆಯುತ್ತಿರುವುದಕ್ಕೆ ಸಾಕ್ಷಿಯಾಗಿದೆ.

ಇಂತಹ ಐತಿಹಾಸಿಕ ಧಮ್ಮ ದೀಕ್ಷಾ ಸಮಾವೇಶವನ್ನು ಆಯೋಜಿಸಿದ್ದ ದಲಿತ ಸಂಘರ್ಷ ಸಮಿತಿಯ ಚಾಲಕಶಕ್ತಿಗಳಾದ ಇಂದೂಧರ ಹೊನ್ನಾಪುರ, ಎನ್. ವೆಂಕಟೇಶ್, ಹೆಬ್ಬಾಲೆ ಲಿಂಗರಾಜು ಮುಂತಾದವರು ದ.ಸಂ.ಸದ ಕಾರ್ಯಕರ್ತರೊಂದಿಗೆ ಬೌದ್ಧ ಭಿಕ್ಕುಗಳನ್ನು, ಧಮ್ಮೋಪಾಸಕರನ್ನು ಬುದ್ಧಾನುಯಾಯಿಗಳನ್ನು, ಜನಪ್ರತಿನಿಧಿಗಳನ್ನು ಹಾಗೂ ಸುದ್ದಿ ಮಾಧ್ಯಮದವರನ್ನು ಆತ್ಮೀಯವಾಗಿ ಬರಮಾಡಿಕೊಳ್ಳುತ್ತಾ ಇಡೀ ಕಾರ್ಯಕ್ರಮಕ್ಕೆ ಹಬ್ಬದ ಸಡಗರ ತುಂಬಿದ್ದರು.

ಯಾವುದೇ ಧರ್ಮವನ್ನು ಅಂಗೀಕರಿಸಿ ಅನುಸರಿಸಲು ಅಥವಾ ನಿರಾಕರಿಸಿ ಬದುಕಲು ನಮ್ಮ ದೇಶದ ಎಲ್ಲ ಪ್ರಜೆಗಳಿಗೂ ಹಕ್ಕಿದೆ. ಹುಟ್ಟಿನಿಂದಲೇ ಶ್ರೇಷ್ಠ-ಕನಿಷ್ಠ, ಮೇಲು-ಕೀಳೆಂದು ಬಗೆದು ಸಹಮಾನವರನ್ನು ಹೀನಾಯಿಸುವ, ಹಿಂಸೆಗೆ ಗುರಿಪಡಿಸುವ ಸನಾತನ ಹಿಂದೂ ಧರ್ಮದ ಶೋಷಣೆಯಿಂದ ನಮ್ಮನ್ನು ವಿಮೋಚಿಸುವ ಧಮ್ಮ ದೀಕ್ಷಾ ಪ್ರತಿಜ್ಞೆ ಸ್ವೀಕರಿಸುವ ಗಳಿಗೆಗಾಗಿ ಎದುರು ನೋಡುತ್ತಿದ್ದ ನಮ್ಮ ಮುಂದೆ ದಲಿತ ಚಳವಳಿಯ ಸಾಕ್ಷಿಪ್ರಜ್ಞೆಗಳಾದ ಹಿರಿಯ ಸಾಹಿತಿ, ಸರ್ವೋದಯ ಕರ್ನಾಟಕ ಪಕ್ಷದ ಅಧ್ಯಕ್ಷ ದೇವನೂರ ಮಹಾದೇವ, ಮಾಜಿ ಕೇಂದ್ರ ಸಚಿವ ವಿ. ಶ್ರೀನಿವಾಸ ಪ್ರಸಾದ್, ಕವಿ ಶಾಸಕ ಡಾ॥ ಎಲ್ ಹನುಮಂತಯ್ಯ, ನಿವೃತ್ತ ಪೊಲೀಸ್ ಅಧಿಕಾರಿ ಎಸ್. ಮರಿಸ್ವಾಮಿ ಮುಂತಾದವರು ಕಾಣಿಸಿಕೊಂಡ ಕೂಡಲೆ ಇಡೀ ಅಂಬೇಡ್ಕರ್ ಭವನ ರೋಮಾಂಚಕ ಶಿಸ್ತು, ತಾಳ್ಮೆ ಭಾವತನ್ಮಯತೆಯ ಚೆಲುವು ಧರಿಸಿ ಕೊಂಡದ್ದು ಎದ್ದು ಕಾಣಿಸುತ್ತಿತ್ತು.

ಧಮ್ಮ ದೀಕ್ಷಾ ಸಮಾವೇಶದ ಅತ್ಯಂತ ಮುಖ್ಯರಾದ ಭಂತೇಜಿಗಳಾದ ವೀರ್ಯಶೀಲ, ಮನೋರಕ್ಖಿತ, ಧಮ್ಮಾನಂದ ಬೋಧಿದತ್ತ, ಸಂಘಾನಂದ ಮುಂತಾದವರು ವೇದಿಕೆಯ ಮೇಲೆ ಕಾಷಾಯ ವಸ್ತ್ರ ಧರಿಸಿ ಧ್ಯಾನಮುದ್ರೆಯಲ್ಲಿ, ಕಾರುಣ್ಯ ಮೂರ್ತಿ ಬುದ್ಧದೇವನ ವಿಗ್ರಹದೆದುರು ಕುಳಿತಿದ್ದರು. ಇದಕ್ಕೂ ಮೊದಲಿಗೆ ಪೂಜ್ಯ ಭಂತೇಜಿಗಳು ತಿಸರಣ ಮಂತ್ರ ಪಠಿಸುತ್ತಾ ಬುದ್ಧ ಮೂರ್ತಿಯೊಂದಿಗೆ ವೇದಿಕೆ ಏರಿದಾಗ ಅಂಬೇಡ್ಕರ್ ಭವನ ಸೀಳಿಕೊಂಡು ತಿಸರಣ ಮಂತ್ರಗಳು ಆಕಾಶದಲ್ಲಿ ಘಲಿರೆಂದು ಮೊಳಗು

ವಾಗಲೇ ಒಂದು ರೀತಿಯ ವಿಶಿಷ್ಟ ಆಧ್ಯಾತ್ಮಿಕ ಧ್ವನಿ ತರಂಗಗಳು ನಮ್ಮೊಳಗೆ ಹರಡಿಕೊಂಡು ಇಡೀ ಜನಸ್ತೋಮದಲ್ಲಿ ನೀರವ ನಿರಾಳ ಶಾಂತಿ ನೆಲೆಸಿತ್ತು. ಧ್ಯಾನಮುದ್ರೆಯ ಬುದ್ಧದೇವನ ವಿಗ್ರಹವನ್ನು ಹಾಗೂ ಧ್ಯಾನಮುದ್ರೆಯಲ್ಲಿ ವೇದಿಕೆಯ ಮೇಲೆ ಕುಳಿತಿದ್ದ ಭಂತೇಜಿಗಳನ್ನು ತದೇಕ ಚಿತ್ತರಾಗಿಯೂ, ನಿರುದ್ವಿಗ್ನ ರಾಗಿಯೂ ಕುಳಿತು ನೋಡುತ್ತಿದ್ದ ಧಮ್ಮೋಪಾಸಕರು ಅಪೂಟ ಮೌನವಾಗಿದ್ದದ್ದು 'ಬುದ್ಧನ ಮಹಾ ಮೌನ'ಕ್ಕೆ ಅನ್ವರ್ಥಕವಾಗಿತ್ತು.

ನಾಡಿನ ಜನಮಾನಸದಲ್ಲಿ ಇದೊಂದು ಮರೆಯಲಾಗದ ಸಮಾವೇಶ. ಬಾಬಾ ಸಾಹೇಬ್ ಡಾ॥ ಅಂಬೇಡ್ಕರ್ ಅವರು 'ದಲಿತರೆಂದೂ ಹಿಂದೂಗಳಾಗಿರಲಿಲ್ಲ; ಈಗಲೂ ಅಲ್ಲ. ಅವರು ಧರ್ಮಾತೀತರು ಅವರಿಗೀಗ ಧರ್ಮದ ಅಗತ್ಯ ಬಂದೊದಗಿದೆ' ಎಂದು ಹೇಳಿದ ಐತಿಹಾಸಿಕ ಸತ್ಯವನ್ನು ಮನಗಂಡ ಅಂಬೇಡ್ಕರ್ ಅನುಯಾಯಿಗಳಾದ ನಾವು ಅಂಬೇಡ್ಕರ್ ಕಂಡ 'ಬುದ್ಧ ಭಾರತದ'ದ ಕನಸನ್ನು ನನಸು ಮಾಡುವ 'ಬೌದ್ಧಧಮ್ಮ ಸ್ವೀಕಾರ' ಮಾಡಿ ನಾಡಿನ ದಲಿತ ಚಳವಳಿಯ ಹೊಸ ಅಧ್ಯಾಯಕ್ಕೆ ಮುನ್ನುಡಿ ಬರೆದೆವು. ಇಲ್ಲಿ ತನಕ ಖಾಸಗಿಯಾಗಿ ತಮ್ಮ ಕುಟುಂಬ ಸದಸ್ಯರೊಂದಿಗೆ, ಗೆಳೆಯರೊಂದಿಗೆ ಬುದ್ಧನ ಚಿಂತನೆಗಳನ್ನು ಹಂಚಿಕೊಂಡು ಧಮ್ಮದೀಕ್ಷೆ ಸ್ವೀಕರಿಸುವ ಇಂಗಿತವನ್ನು ವ್ಯಕ್ತಪಡಿಸುತ್ತಿದ್ದ ದೇವನೂರ ಮಹಾದೇವ, ಡಾ॥ ಎಲ್. ಹನುಮಂತಯ್ಯ, ಎಸ್. ಮರಿಸ್ವಾಮಿ, ವಿ. ಶ್ರೀನಿವಾಸ ಪ್ರಸಾದ್ ಮುಂತಾದ ನೇತಾರರು ಇಂದಿನ ಧಮ್ಮಾಂತರ ಕಾರ್ಯಕ್ರಮದಲ್ಲಿ ನಮ್ಮೊಡನೆ ದೀಕ್ಷೆ ಪಡೆದು ಬುದ್ಧಭಾರತ ನಿರ್ಮಾಣ ಕಾರ್ಯಕ್ಕೆ ಕೈ ಜೋಡಿಸಿದರು. ನಮ್ಮೊಂದಿಗೆ ಕನ್ನಡದ ಯುವ ಕವಿ ಕೆ.ಪಿ. ನಟರಾಜ್, ಸಂಶೋಧಕ ಡಾ॥ ವೈ. ಕೃಷ್ಣಪ್ಪ, ಗೊಲ್ಲಹಳ್ಳಿ ಶಿವಪ್ರಸಾದ್, ಗುರುಪ್ರಸಾದ್ ಕೆರಗೋಡು, ಮರಿಯಪ್ಪ ಹಳ್ಳಿ, ಶಾಂತ ಎನ್. ಮೂರ್ತಿ ಇದ್ದರು.

ಅಂದು ಇಡೀ ಅಂಬೇಡ್ಕರ್ ಭವನದ ವಾತಾವರಣ ಬೌದ್ಧಮಯವಾಗಿತ್ತು. ಬುದ್ಧಗುರುವಿನ ಮತ್ತು ಡಾ॥ ಅಂಬೇಡ್ಕರ್‌ರವರ ಸಂದೇಶಗಳುಳ್ಳ ಘೋಷಣಾ ಫಲಕಗಳು ಧಮ್ಮ ಚಕ್ರದ ಚಿತ್ರಗಳು ರಾರಾಜಿಸುತ್ತಿದ್ದವು. ಪಂಚಶೀಲ ಧ್ವಜಗಳು ಆಕಾಶದಲ್ಲಿ ಹಾರಾಡುತ್ತಿದ್ದವು. ಇಲ್ಲಿ ಅತ್ಯಂತ ಮುಖ್ಯವಾದುದೆಂದರೆ ಬೋಧಿವೃಕ್ಷದ ಸಣ್ಣ ಟೊಂಗೆಗಳಿಂದ, ಹಸಿರು ತೋರಣಗಳಿಂದ ಅಲಂಕಾರ ಮಾಡಿದ್ದುದು. ಈ ಬೋಧಿವೃಕ್ಷದ ಮರದಡಿಯಲ್ಲಿಯೇ ವೈಶಾಖ ಶುದ್ಧ ಹುಣ್ಣಿಮೆಯ ರಾತ್ರಿಯಂದು ಸಿದ್ಧಾರ್ಥ ಜ್ಞಾನೋದಯ ಹೊಂದಿ ಬುದ್ಧನಾದದ್ದು, ಕ್ರಿ.ಪೂ. ೫೬೩ರಲ್ಲಿ ವೈಶಾಖ ಹುಣ್ಣಿಮೆಯಂದು ಜನಿಸಿದ್ದ ಬುದ್ಧ ಅದೇ ವೈಶಾಖ ಮಾಸದ ಹುಣ್ಣಿಮೆಯಂದು ಮಹಾ ಪರಿನಿರ್ವಾಣ ಹೊಂದಿರುವುದು ವಿಶೇಷ.

ಅಂದಿನ ಧಮ್ಮದೀಕ್ಷೆಯ ದಿನ ಬಂಗಾರ ವರ್ಣದ ಬುದ್ಧನ ವಿಗ್ರಹ ವೇದಿಕೆಯ ಮೇಲೆ ಹಾಲುಬೆಳದಿಂಗಳಿನಂತೆ ಹೊಳೆಯುತ್ತಿತ್ತು. ಮುಂಡೇ ಕ್ಷೌರ ಮಾಡಿಕೊಂಡಿದ್ದ ಭಂತೇಜಿಗಳ ನುಣ್ಣನೆಯ ಬೋಳು ಮಂಡೆಗಳೂ ಫಳಫಳ ಹೊಳೆಯುತ್ತಿದ್ದವು. ಮಣ್ಣಿ-ನಿಂದ ಮತ್ತು ಪ್ಲಾಸ್ಟರ್ ಆಫ್ ಪ್ಯಾರಿಸ್‌ನಿಂದ ತಯಾರಿಸಲಾಗಿದ್ದ ಅತ್ಯಂತ ಕಲಾತ್ಮಕವಾದ ಧ್ಯಾನ ಮುದ್ರೆಯ ಬುದ್ಧ, ಮಂದಸ್ಮಿತ ಬುದ್ಧ, ಪ್ರಭಾವಳಿ ಹಿನ್ನೆಲೆಯುಳ್ಳ ಬುದ್ಧ, ಧಮ್ಮೋಪದೇಶ ನೀಡುತ್ತಿರುವ ಬುದ್ಧ, ಪವಡಿಸಿದ ಬುದ್ಧ ಮುಂತಾದ ಬಗೆಬಗೆಯ ಬುದ್ಧಮೂರ್ತಿಗಳನ್ನು ಮತ್ತು ಫೋಟೋಗಳನ್ನು ಮಾರಾಟದ ಕಟ್ಟೆಗಳ ಬಳಿ ಇಡಲಾಗಿತ್ತು. ಡಾ॥ ಅಂಬೇಡ್ಕರ್, ಪ್ರೊ॥ ಬಿ. ಕೃಷ್ಣಪ್ಪ, ಪೆರಿಯಾರ್, ಕಬೀರದಾಸ್ ಮುಂತಾದ ನಾಯಕರ ಚಿತ್ರಗಳಿರುವ ಫೋಟೋಗಳೂ, ಕೀಚೈನುಗಳು, ಪೆಂಡೆಂಟ್‌ಗಳು, ಕ್ಯಾಲೆಂಡರ್‌ಗಳು ಹಾಗೂ ಅವರ ಚಿಂತನೆಗಳ ಪುಸ್ತಕಗಳು ಮುಂತಾದವುಗಳನ್ನು ಮಾರಾಟಕ್ಕಿರಿಸಲಾಗಿತ್ತು.

ವೇದಿಕೆಯ ಮೇಲೆ ಬುದ್ಧಗುರುವಿನ ಪ್ರತಿಮೆಯನ್ನು ವಿಶೇಷವಾಗಿ ಆತನಿಗೆ ಜ್ಞಾನೋದಯದ ಕಾಲದಲ್ಲಿ ನೆರಳಾಗಿದ್ದ ಬೋಧಿವೃಕ್ಷದ ಟೊಂಗೆಗಳನ್ನಿಟ್ಟು ಅಲಂಕರಿಸಲಾಗಿತ್ತು. ಪಾದ ಪೀಠದ ಬಳಿ ಹಣ್ಣು ಹೂವುಗಳನ್ನಿಟ್ಟು ಎರಡೂ ಬದಿಗಳಲ್ಲಿ ಸಾಲಾಗಿ ಮೇಣದ ಬತ್ತಿಗಳನ್ನು ಹಚ್ಚಿಡಲಾಗಿತ್ತು. ಭಂತೇಜಿಗಳು 'ಆದಿಟ್ಠಾಣದಲ್ಲಿ' (ದೇಹ ಮತ್ತು ಮನಸ್ಸುಗಳನ್ನು ಕದಲಿಸದೆ ಭದ್ರವಾಗಿ ಸ್ಥಿರವಾದ ಭಂಗಿಯಲ್ಲಿರಿಸಿ) ಪದ್ಮಾಸೀನರಾಗಿ ಕುಳಿತಿದ್ದರು. ಗಂಧದ ಕಡ್ಡಿ, ಲೋಬಾನ, ಧೂಪದ ಸುಗಂಧ, ಪರಿಮಳದ ಹೂಗಳು ಅಲ್ಲಿನ ಪರಿಸರವನ್ನು ನಿರ್ಮಲಗೊಳಿಸಿತ್ತು.

ಕಾವಿ ಚೀವರಗಳನ್ನು ತೊಟ್ಟ ಭಂತೇಜಿಗಳು ಕೆಲವು ಧಮ್ಮ ಮಂತ್ರಗಳನ್ನು ಹೇಳಿದ ಬಳಿಕ ಧಮ್ಮ ದೀಕ್ಷಾ ಕಾರ್ಯಕ್ರಮ ಶುರು ಮಾಡಿದರು.

'ನಮೋ ತಸ್ಸ ಭಗವತೋ ಅರಹತೋ ಸಮ್ಮಾ ಸಂಬುದ್ಧಸ್ಸ (ಭಗವಂತನೂ, ಅರಹಂತನು ಆದ ಸಮ್ಯಕ್ ಸಂಬುದ್ಧನಿಗೆ ನಮಸ್ಕಾರವು.) ಎಂದು ಬೋಧಿವಂದನೆಯ ಮೂಲಕ ಆರಂಭಿಸಿ ಖಮಾಪನಾ (ಕ್ಷಮಾಪಣೆ) ಸೀಲ ಯಾಚನಾ (ಶೀಲಯಾಚನೆ) ಮಾಡಿ ತಿಸರಣ ಮಂತ್ರಗಳನ್ನು ಬೋಧಿಸಿದರು. ಹಿಂದೂ ದೇವತೆಗಳ ವಿಗ್ರಹಗಳಿಗೆ ಪೂಜಾರಿಗಳನ್ನು ನೇಮಿಸಿ ಪೂಜಿಸುವ ರೀತಿಯಂತೆ, ಕಾಯೊಡೆದು ಹಣ್ಣು ಮುರಿದಿಟ್ಟು ಅಭಿಷೇಕ ಮಾಡಿ ಮಹಾ ಮಂಗಳಾರತಿ ಎತ್ತಿ ಪೂಜಿಸುವ ಪದ್ಧತಿಯನ್ನು ಬುದ್ಧದೇವನ ವಿಗ್ರಹಕ್ಕೆ ಅನುಸರಿಸುವಂತಿಲ್ಲ. ಬುದ್ಧಗುರು ದೇವರು ಅಲ್ಲ. ದೇವ ಮಾನವನೂ ಅಲ್ಲವಾದರು ಆತನಿಗೆ ಬುದ್ಧವಂದನೆಯ ಮಂತ್ರಗಳ ಮೂಲಕ ಗೌರವ ಭಾವಗಳಿಂದ ನಮಿಸಿದೆವು. ಮಂದಸ್ಮಿತ ಬುದ್ಧ ಮೂರ್ತಿಯನ್ನು ತುಂಬಿಕೊಂಡ ಕಣ್ಣುಗಳು ಬುದ್ಧನ ಸಾಕ್ಷಾತ್ಕಾರವಾದಂತೆ ಹೊಸ ತೇಜಸ್ಸಿನಿಂದ ಹೊಳೆಯುತ್ತಿದ್ದವು. ಶ್ವೇತವಸ್ತ್ರದಲ್ಲಿದ್ದ ಎಲ್ಲ ಉಪಾಸಕ, ಉಪಾಸಿಕೆಯರು ಮೂಲ ಪಾಲಿ ಮಂತ್ರಗಳನ್ನು ಭಂತೇಜಿಗಳು ಹೇಳಿಕೊಟ್ಟಂತೆ ಪುನರುಚ್ಚರಿಸಿದರು. ಬುದ್ಧನ ಕರುಣೆ ಪ್ರೀತಿಗಳ ಸೆಲೆಗೆ ಸಿಕ್ಕಿದ ನಾವೆಲ್ಲರೂ

ಬುದ್ಧಂ ಶರಣಂ ಗಚ್ಛಾಮಿ
ಧಮ್ಮ ಶರಣಂ ಗಚ್ಛಾಮಿ
ಸಂಘಂ ಶರಣಂ ಗಚ್ಛಾಮಿ

ಎಂದು ಮೂರು ಸಾರಿ ಹೇಳಿದ ಬಳಿಕ ಪಂಚಶೀಲ ತೆಗೆದುಕೊಂಡೆವು. ಮೂಲ ಪಾಲಿ ಭಾಷೆಯ ಪಂಚಶೀಲ ತತ್ವಗಳು ಹೀಗಿವೆ–

ಪಾಣಾತಿ ಪಾತಾ ವೇರಮಣಿ ಸಿಕ್ಖಾಪದಂ
ಸಮಾಧಿಯಾಮಿ,
ಆದಿನ್ನಾದಾನಾ ವೇರಮಣಿ ಸಿಕ್ಖಾಪದಂ
ಸಮಾಧಿಯಾಮಿ,
ಕಾಮೇಸು ಮಿಚ್ಛಾಚಾರಾ ವೇರಮಣಿ ಸಿಕ್ಖಾಪದಂ
ಸಮಾಧಿಯಾಮಿ,
ಮುಸಾವಾದಾ ವೇರಮಣಿ ಸಿಕ್ಖಾಪದಂ
ಸಮಾಧಿಯಾಮಿ,
ಸುರಾ–ಮೇರಯ–ಮಜ್ಜ ಪಮಾದಟ್ಠಾನ ವೇರಮಣಿ
ಸಿಕ್ಖಾಪದಂ ಸಮಾಧಿಯಾಮಿ,

ಇದರ ಕನ್ನಡಾನುವಾದ:

ನಾನು ಪ್ರಾಣಿಹತ್ಯೆ ಮಾಡುವುದರಿಂದ
ದೂರವಾಗುವ ಶಿಕ್ಷಾಪದ ಕೈಗೊಳ್ಳುತ್ತೇನೆ.
ನಾನು ಕಳವು ಮಾಡುವುದರಿಂದ ದೂರವಾಗುವ
ಶಿಕ್ಷಾಪದ ಕೈಗೊಳ್ಳುತ್ತೇನೆ.
ನಾನು ವ್ಯಭಿಚಾರ ಮಾಡುವುದರಿಂದ
ದೂರವಾಗುವ ಶಿಕ್ಷಾಪದ ಕೈಗೊಳ್ಳುತ್ತೇನೆ.
ನಾನು ಸುಳ್ಳು ಹೇಳುವುದರಿಂದ ದೂರವಾಗುವ
ಶಿಕ್ಷಾಪದ ಕೈಗೊಳ್ಳುತ್ತೇನೆ.
ನಾನು ಸದಾ ಹೆಂಡ, ಸಾರಾಯಿ ಮುಂತಾದ
ಮತ್ತನ್ನುಂಟು ಮಾಡಿ ಎಚ್ಚರ ತಪ್ಪಿಸುವ
ಪದಾರ್ಥಗಳನ್ನು ಸೇವನೆ ಮಾಡುವುದರಿಂದ
ದೂರವಾಗುವ ಶಿಕ್ಷಾಪದ ಕೈಗೊಳ್ಳುತ್ತೇನೆ.

ಹೀಗೆ ಶೀಲಾಯಾಚನೆ ಮಾಡಿ ಹೊಸ ಮನುಷ್ಯರಾಗಿ ಧಮ್ಮ ಮಾರ್ಗದಲ್ಲಿ ನಡೆಯುತ್ತೇವೆಂದು ದೀಕ್ಷೆ ಪಡೆದು ಹಳೆ ಬಟ್ಟೆ ಕಳೆದುಕೊಂಡು ಹೊಸ ಬಟ್ಟೆ ಧರಿಸಿದ ಉತ್ಸಾಹದಲ್ಲಿ ನಲಿಯುತ್ತಿದ್ದೆವು.

ಕಾರ್ಯಕ್ರಮ ಮುಗಿಯುವ ಹೊತ್ತಿಗೆ ಸೂರ್ಯ ಬೆಂಕುಂಡೆಯಾಗಿ ಕೆಂಪು ಬೆಳಕು ಚೆಲ್ಲುತ್ತಾ ಪಶ್ಚಿಮದ ಮೋಡಗಳಲ್ಲಿ ಕರಗತೊಡಗಿದನು. ಹೊಸ ಜನ್ಮ ಪಡೆದ ಮುಖ ಕಳೆ ಹೊತ್ತು ಹೊರಟ ಜನಸಾಗರ ಹೊಸ ಬದುಕಿನ ಭರವಸೆಯ ತೇಜಸ್ಸಿನಿಂದ ತಮ್ಮ ತಮ್ಮ ಊರು ಕೇರಿಗಳ ಕಡೆ ಹೆಜ್ಜೆ ಹಾಕತೊಡಗಿದರು. □

ಧರ್ಮಬದಲಾವಣೆ ಮಹತ್ತರವಾದ ಹೆಜ್ಜೆ

ಪೂಜ್ಯ ಭಂತೇಜಿಗಳವರೇ, ಹಿರಿಯ ನಾಯಕರಾದ ಶ್ರೀನಿವಾಸ್ ಪ್ರಸಾದ್‌ರವರೇ, ಸ್ನೇಹಿತರಾದ ಹುನುಮಂತಯ್ಯನವರೇ, ಮಹಾದೇವ ಅವರೇ, ಇತರ ದಲಿತ ಸಂಘರ್ಷ ಸಮಿತಿಯ ಸ್ನೇಹಿತರೇ, ಬಂಧುಗಳೇ–

ಬಹಳ ಪ್ರಮುಖವಾದ ಹೆಜ್ಜೆಯನ್ನು ತಾವೆಲ್ಲರೂ ಇಂದು ಇಡುತ್ತಿದ್ದೀರಿ. ಅದು ಧರ್ಮ ಬದಲಾವಣೆ. ಧರ್ಮಬದಲಾವಣೆ ಅಂತಾ ಹೇಳಿದ್ರೆ, ನಮಗೆ ಅನ್ಸುತ್ತೆ ಅನೇಕ ಸಾರಿ ಇದು ಬಹಳ ಕಷ್ಟಕರವಾದ ಮತ್ತು ಜೀವನದಲ್ಲಿ ಅತಿ ಮಹತ್ತರವಾದ ಹೆಜ್ಜೆ.

ನಾವು ದೀಕ್ಷೆ ಅಂತಾ ತಕೊಂಡು ಬೌದ್ಧರಾದೆವು ಅಂದುಕೊಂಡು ಮನೆಗೆ ಹೋದ ಬಳಿಕ ಮಾಡುತ್ತಾ ಬಂದಿದ್ದನ್ನೇ ಪುನಃ ಮುಂದುವರೆಸಿಕೊಂಡು ಹೋಗುವ ಒಂದು ಪರಂಪರೆ ಉಳಿದುಕೊಳ್ಳಲು ಸಾಧ್ಯ. ಆದುದರಿಂದಲೇ ಇವೊತ್ತು ಬೌದ್ಧರಾಗಿರುವ ನಾವು ಬುದ್ಧನ ಧರ್ಮದ ಬಗ್ಗೆ ಹೆಚ್ಚು ತಿಳುವಳಿಕೆ ಪಡೆದುಕೊಳ್ಳಬೇಕು; ಶೀಲಗಳನ್ನು ಆಚರಿಸಬೇಕು ಮತ್ತು ಬೌದ್ಧಿಕ ಆಚರಣೆಗಳನ್ನೂ ಕೈಗೊಳ್ಳಬೇಕು. ನಮ್ಮ ಭಿಕ್ಕುಗಳಿಗೆ ನಮ್ಮ ಗೌರವ ಸಲ್ಲಿಸಬೇಕು. ಅವರ ಬದುಕಿಗೆ ದಾರಿ ಮಾಡಿಕೊಡಬೇಕು. ಹಾಗೆಯೇ ಅವರಿಂದ ಒಳ್ಳೆಯ ಮಾರ್ಗವನ್ನು ನಾವು ಕಂಡುಕೊಳ್ಳಬೇಕು ನಮ್ಮ ಸಮಾಜವನ್ನು ರಚಿಸಿಕೊಳ್ಳಬೇಕು. ಅಂದರೆ ಬುದ್ಧರ ಸಮಾಜವನ್ನು ಕಟ್ಟಬೇಕು.

ಒಂದು ಕಡೆ ನಾನೊಂದು ಪ್ರಶ್ನೆ ಕೇಳಿದೆ. ಕೋಮು ಸೌಹಾರ್ದಕ್ಕಾಗಿ ಸೇರಿದ್ದ ಸಭೆ ಅದು. ಆ ಸಭೆಯಲ್ಲಿ ಎಲ್ಲಾ ಜನಾಂಗಗಳ ಜನ ಸೇರಿದ್ದರು. ನಾನು ಅವರನ್ನು ಕೇಳಿದೆ ಇಲ್ಲಿರೋ ಯಾರಾದ್ರೂನು ಒರಿಜಿನಲ್ಲಾಗಿ ಬದಲಾವಣೆ ಇಲ್ಲದಿದ್ದ ಧರ್ಮದಿಂದ ಬಂದೋರು ಇದ್ದೀರಾ?' ಅಂತಾ ಕೇಳಿದೆ. ಅವಾರ್‍ಯಾರೂ ತಾನು ಒರಿಜಿನಲ್ ಆದ ಧರ್ಮದಿಂದ ಬಂದವನೆಂದು ಹೇಳುವ ಸ್ಥಿತಿಯಲ್ಲಿರಲಿಲ್ಲ. ನಾನಿದ್ದನ್ನು ಯಾಕೆ ಹೇಳುತ್ತಿದ್ದೇನೆಂದರೆ ಎಲ್ಲ ಧರ್ಮಗಳೂ ಹುಟ್ಟಿದ ಇಸವಿ ದಿನಾಂಕಗಳಿವೆ. ಬೌದ್ಧಧರ್ಮ ೨೫೦೦ ವರ್ಷಗಳ ಇತಿಹಾಸ ಹೊಂದಿದ್ದರೆ, ಕ್ರಿಶ್ಚಿಯನ್ ಧರ್ಮ ಸುಮಾರು ೨೦೦೦ ಹೀಗೆ ಎಲ್ಲ ಧರ್ಮಗಳಿಗೂ ತಾವು ಹುಟ್ಟಿದ ಇಸವಿಗಳಿವೆ ಚಾರಿತ್ರಿಕ ಕಾಲಘಟ್ಟ ಈ ಧರ್ಮಗಳಿಗಿದೆ.

ಯೋಚನೆ ಮಾಡುವಂತಹ ಮನುಷ್ಯ ಯಾವಾಗಲೂ ತನ್ನ ಧರ್ಮದ ಸರಿ ತಪ್ಪುಗಳ ನೆಲೆಯ ಮೇಲೆ ಬದಲಾಯಿಸುತ್ತಲೇ ಬಂದಿದ್ದಾನೆ. ಯಾರು ಪಾರ್ಸಿಗಳು ಅಂತಾ ಇದ್ದರೂ ಅವರು ಕ್ರಿಶ್ಚಿಯನ್ನರಾದರು. ಅರಬ್‌ನ ದೇವತೆಗಳನ್ನು ಪೂಜೆ ಮಾಡುತ್ತಾ ಒಬ್ಬರನ್ನೊಬ್ಬರು ಬಡಿದಾಡುತ್ತಿದ್ದು ನಂತರದಲ್ಲಿ ಇಸ್ಲಾಂ ಧರ್ಮವನ್ನು ಒಪ್ಪಿ

ಎಸ್. ಮರಿಸ್ವಾಮಿ

ಕೊಂಡರು. ಹೀಗೆ ಧರ್ಮವನ್ನು ಆ ಕಾಲಘಟ್ಟದ ಆ ಸಮಾಜದ ಸಾಮಾಜಿಕ ಪರಿಸ್ಥಿತಿ, ಆರ್ಥಿಕ–ರಾಜಕೀಯ ಪರಿಸ್ಥಿತಿ ಮುಂತಾದ ಒಟ್ಟು ಪರಿಣಾಮಗಳ ದೃಷ್ಟಿಯಲ್ಲಿ ಬದಲಾವಣೆ ಮಾಡುತ್ತಾ ಹೋದರು. ತಮಗೆ ಸರಿಯಾದುದನ್ನು ಒಪ್ಪಿಕೊಳ್ಳುತ್ತಾ ಹೋದರು. ಆದುದರಿಂದಲೇ ಒಂದು ಧರ್ಮವನ್ನು ಬಿಡಬಾರದು, ಅದರಲ್ಲಿ ಏನಾದರೂ ಇರಲಿ. ಅದನ್ನು ನಮ್ಮ ತಂದೆ ಒಪ್ಪಿಕೊಂಡಿದ್ದರು ತಾತ ಒಪ್ಪಿಕೊಂಡಿದ್ದರು ಎಂದು ಹೇಳುವುದು ಮಹಾ ತಪ್ಪಿನ ಕೆಲಸ ಎನ್ನುವುದು ನನ್ನ ಭಾವನೆ.

ಬುದ್ಧ ಹೇಳಿದ ಬಹಳ ಪ್ರಮುಖವಾದ ಮಾತೆಂದರೆ "ನಿನ್ನ Destiny ನಿನ್ನ ಪ್ರತಿಯೊಂದು ಉನ್ನತಿ ಕೆಡುಕುಗಳು ನಿನ್ನ ಕೈಗಳಲ್ಲೇ ಇದೆ" ಎಂಬುದು ತಮಗೆಲ್ಲರಿಗೂ ತಿಳಿದಿರುವಂತೆ ಬುದ್ಧ ಮನುಷ್ಯ ಮತ್ತು ಮನುಷ್ಯ ಜೀವನ ಕುರಿತು ಇತರೆಲ್ಲ ಜೀವರಾಶಿಗಳನ್ನು ಸೇರಿದಂತೆ ಎಲ್ಲರ ಒಳಿತಿಗಾಗಿ ಸತತವಾಗಿ ಯೋಚಿಸಿದವನು.

ಬುದ್ಧನಷ್ಟು ತನ್ನ ದೇಹ ಮತ್ತು ಮನಸ್ಸುಗಳನ್ನು ದಂಡಿಸಿದ ವ್ಯಕ್ತಿ ಮತ್ತೊಬ್ಬನಿಲ್ಲ. ಪ್ರತಿಯೊಂದು ಹಂತವನ್ನು ನೋಡಿ, ಅನುಭವಿಸಿ, ಅದು ಸರಿಯಿಲ್ಲವೆಂದು ಬಿಟ್ಟು ಬಂದು ಮಧ್ಯಮ ಮಾರ್ಗವನ್ನು ಅಪ್ಪಿಕೊಂಡನು ಅದನ್ನು ಬಹುಜನರ ಹಿತಕ್ಕಾಗಿ ಮತ್ತು ಬಹು ಜನರ ಸುಖಕ್ಕಾಗಿ ಹಾಗೂ ಲೋಕಾನುಕಂಪದ ದೃಷ್ಟಿಯಿಂದ ಸುಮಾರು ೩೫–೪೫ ವರ್ಷ ಕಾಲ ಊರೂರು ಅಲೆಯುತ್ತಾ ಬೋಧಿಸಿದ ಮಹಾಪುರುಷ, ಆದುದರಿಂದಲೇ ಬಹುಜನ ಹಿತ ಬಹುಜನ ಸುಖ–ಲೋಕಾನುಕಂಪಗಳು ಬಹು ಮುಖ್ಯವಾದವು. ಯಾವುದೇ ಧರ್ಮ ಈ ಮೂರು ವಿಷಯಗಳನ್ನು ಬಿಟ್ಟು ಯಾವುದೇ ಒಂದು ಆಚರಣೆಯನ್ನು ಅವಲಂಬಿಸಿ, ಯಾವುದೋ ದೇವರನ್ನು ಸಂಪ್ರೀತಗೊಳಿಸುವ ಸಲುವಾಗಿ ಕೋಳಿ ಕುರಿಗಳನ್ನು ಕುಯ್ದು, ತುಪ್ಪ ಸುರಿದು ಹೋಮ ಮಾಡುವುದು ಮುಂತಾದದನ್ನು ನೀವೆಲ್ಲರೂ ಯೋಚಿಸಬೇಕಾಗಿದೆ.

ಬಾಬಾ ಸಾಹೇಬ್ ಅಂಬೇಡ್ಕರ್ ಪಂಚಶೀಲಗಳ ಜತೆಗೆ "ನಾನು ತ್ರಿಮೂರ್ತಿಗಳನ್ನು ನಂಬುವುದಿಲ್ಲ"ವೆಂಬ ಮುಂತಾದ ಹಲವಾರು ಕಟ್ಟಳೆಗಳನ್ನು ಕೂಡ ಪಟ್ಟಿ ಮಾಡಿದ್ದಾರೆ. ಯಾಕೆ ಪಟ್ಟಿ ಮಾಡಿದ್ದಾರೆಂದರೆ ಇಲ್ಲಿ ನಾವು ದೀಕ್ಷೆ ಅಂತಾ ತಕೊಂಡು, ನಾವು ಬೌದ್ಧರಾದೆವು ಅಂದುಕೊಂಡು ಮನೆಗೆ ಹೋದ ಬಳಿಕ ಮಾಡುತ್ತಾ ಬಂದಿದ್ದನ್ನೇ ಪುನಃ ಮುಂದುವರೆಸಿಕೊಂಡು ಹೋಗುವ ಒಂದು ಪರಂಪರೆ ಉಳಿದುಕೊಳ್ಳಲು ಸಾಧ್ಯ. ಆದುದರಿಂದಲೇ ಇವೊತ್ತು ಬೌದ್ಧರಾಗಿರುವ ನಾವು ಬುದ್ಧನ ಧರ್ಮದ ಬಗ್ಗೆ ಹೆಚ್ಚು ತಿಳವಳಿಕೆ ಪಡೆದುಕೊಳ್ಳಬೇಕು; ಶೀಲಗಳನ್ನು ಆಚರಿಸಬೇಕು ಮತ್ತು ಬೌದ್ಧಿಕ ಆಚರಣೆಗಳನ್ನೂ ಕೈಗೊಳ್ಳಬೇಕು. ನಮ್ಮ ಭಿಕ್ಕುಗಳಿಗೆ ನಮ್ಮ ಗೌರವ ಸಲ್ಲಿಸಬೇಕು. ಅವರ ಬದುಕಿಗೆ ದಾರಿ ಮಾಡಿಕೊಡಬೇಕು. ಹಾಗೆಯೇ ಅವರಿಂದ ಒಳ್ಳೆಯ ಮಾರ್ಗವನ್ನು ನಾವು ಕಂಡುಕೊಳ್ಳಬೇಕು ನಮ್ಮ ಸಮಾಜವನ್ನು ರಚಿಸಿಕೊಳ್ಳಬೇಕು. ಅಂದರೆ ಬುದ್ಧರ ಸಮಾಜವನ್ನು ನಾವು ಕಟ್ಟಬೇಕು. ನಾವು ಸಾಮಾಜಿಕ ಆರ್ಥಿಕ ಮತ್ತಿತರ ಎಲ್ಲ ಉನ್ನತಿಗಳನ್ನು ಪಡೆದುಕೊಳ್ಳಬೇಕು ಎಂಬ ಪ್ರಜ್ಞೆ ನಮ್ಮಲ್ಲಿ ಮೂಡಬೇಕಾಗಿದೆ. ಅದಕ್ಕಾಗಿ ಸತತವಾಗಿ ಶ್ರಮಿಸಬೇಕಾದ ಜವಾಬ್ದಾರಿ ನಿಮ್ಮ ಮೇಲಿದೆ ಎಂದು ನಾನು ತಿಳಿದುಕೊಂಡಿದ್ದೇನೆ.

ನಾವು ಕೀಳು ಮತ್ತು ಮೇಲು ಎಂದುಕೊಳ್ಳುವುದರಲ್ಲಿ ಎರಡು ರೀತಿ ಇದೆ. ಒಂದು, ಬೇರೆಯವರು ನಮ್ಮನ್ನು ಕೀಳು ಅಂತಾ ಹೇಳ್ತಾರೆ. ಕೀಳು ಎಂಬುದನ್ನು ನಾವು ಒಪ್ಪಿಕೊಂಡಾಗ ಮಾತ್ರವೇ ನಾವು ನಿಜವಾಗಿ ಕೀಳಾ

ಬುದ್ಧನೆಡೆಗೆ ಮರಳಿ ಮನೆಗೆ

ವೇದಿಕೆಯ ಮೇಲಿರುವ ಪೂಜ್ಯ ಭಂತೇಜಿಗಳೇ, ಗಣ್ಯರೇ ಹಾಗೂ ಗೆಳೆಯರೆ ಮತ್ತು ಬಂಧುಗಳೇ, ಇವೊತ್ತು ಬೌದ್ಧ ಧರ್ಮಕ್ಕೆ ಸೇರಬೇಕೆ? ಬೇಡವೆ ಎಂಬ ಚರ್ಚೆ ಅನಗತ್ಯವಾಗಿದೆ. ಅಂಬೇಡ್ಕರ್‌ರ ವಿವೇಕ, ಬುದ್ಧನ ಬೆಳಕನ್ನು ನಮ್ಮ ಮುಂದೆ ಇಟ್ಟಿದೆ. ಈ ದಿಕ್ಕಿನಲ್ಲಿ ನಡೆಯಲು ಅನೇಕರು ಶ್ರಮಿಸಿರುವುದನ್ನು ನಾವಿಲ್ಲಿ ನೆನಪು ಮಾಡಿಕೊಳ್ಳಬೇಕಿದೆ. ಈ ದಿಕ್ಕಿನಲ್ಲಿ ಕರ್ನಾಟಕದಲ್ಲಿ ದಿ. ಬಸವಲಿಂಗಪ್ಪ ಅವರ ಪ್ರಯತ್ನಗಳು, 'ಬುದ್ಧ ಬರಲಿ ನಮ್ಮೂರಿಗೆ' ಎಂಬ ಕಿರುಪುಸ್ತಕದೊಂದಿಗೆ ದಲಿತ ಸಂಘರ್ಷ ಸಮಿತಿ ನಡೆಸಿದ ಜಾಥಾ, ಹಾಗೆಯೇ ಮೈಸೂರಿನಲ್ಲಿ ಶ್ರೀನಿವಾಸ್‌ಪ್ರಸಾದ್ ಅವರ ನೇತೃತ್ವದ 'ಬುದ್ಧನೆಡೆಗೆ ಮರಳಿ ಮನೆಗೆ' ಸಮಾವೇಶಗಳನ್ನು ನೆನಪಿಸಿಕೊಳ್ಳಬೇಕಾಗಿದೆ. ಯಾಕೆಂದರೆ ಇಂದಿನ ಬೌದ್ಧಧಮ್ಮ ಸ್ವೀಕಾರ ಕ್ರಿಯೆಗೆ ಅವೆಲ್ಲವೂ ಕಾರಣವಾಗಿವೆ. ಜತೆಗೆ ಈ ಸಮಾವೇಶ ರೂಪಿಸುವುದರಿಂದಾಗಿ ದಲಿತ ಸಂಘರ್ಷ ಸಮಿತಿ ಹೊಸ ಹುಟ್ಟು ಪಡೆದುಕೊಂಡಂತಾಗಿದೆ.

ಮುಖ್ಯವಾಗಿ ದಲಿತರು ಬೌದ್ಧಧರ್ಮ ಸೇರುವುದರಿಂದಾಗಿ ಕಳೆದುಕೊಳ್ಳುವುದಾದರೂ ಏನು? ಬಹುಶಃ ಏನೂ ಇಲ್ಲ. ಈ ಪ್ರಶ್ನೆ ಬಂದಾಗಲೆಲ್ಲಾ 'ಅಸ್ಪೃಶ್ಯತೆ ಹೋಗುತ್ತದಾ, ಬೌದ್ಧರಾದರೆ?' ಎಂಬ ಪುರಾತನ ಪ್ರಶ್ನೆಯೂ ಎದ್ದೇಳುತ್ತದೆ. ಇದರ ಬಗ್ಗೆ ಸಂಶೋಧನೆ ಮಾಡುವುದು ಸಂಶೋಧಕರಿಗೆ ಬಿಟ್ಟಿದ್ದು. ಬೌದ್ಧಧರ್ಮ ಸ್ವೀಕರಿಸಿದ ಅಸ್ಪೃಶ್ಯರನ್ನು ಮೇಲುಕೀಳುಗಳ ವಿಷ ವರ್ತುಲದ ಸಮಾಜ ಹೇಗೆ ನೋಡುತ್ತದೆ ಎಂಬುದನ್ನು ಊಹಿಸಲಾರೆ. ಆದರೆ ತನಗೆ ತಾನೇ ಕೀಳು ಎಂದು ಒಪ್ಪಿಕೊಂಡಿರುವ ಅಸ್ಪೃಶ್ಯರಾದಿಯಾಗಿ ತಳ ಸಮುದಾಯಗಳು ಬೌದ್ಧಧಮ್ಮ ಸ್ವೀಕರಿಸಿ ತಾನು ಮೇಲೂ ಅಲ್ಲ ತಾನು ಕೀಳೂ ಅಲ್ಲ ಅಂದುಕೊಂಡರೆ ಇದೂ ಕೂಡ ದೊಡ್ಡ ಬಿಡುಗಡೆಯೇ. ಸದ್ಯಕ್ಕೆ ಇಷ್ಟು ಸಾಕು. ಮುದುಡಿಕೊಂಡಿರುವ ದಲಿತ ಶಕ್ತಿ ಅರಳಲೂಬಹುದು ಚಿಗುರಲೂಬಹುದು.

ಇತ್ತೀಚೆಗೆ ಬೌದ್ಧಧರ್ಮ ಪ್ರಚಾರ ಕಾರ್ಯಗಳು ನಡೆಯುತ್ತಿವೆ. ಈ ಸಂದರ್ಭದಲ್ಲಿ ಭಂತೇಜಿಗಳಿಗೆ ವಿನಂತಿಸುವೆ. ಏನೆಂದರೆ ಬುದ್ಧ ಮತ್ತು ವಚನಕಾರರು ಜನರಾಡುವ ಮಾತಲ್ಲಿ ನುಡಿದವರು. ಇದೇ ಕಾರಣವಾಗಿ ಅವರು ನೇರವಾಗಿ ಹೃದಯ ಮುಟ್ಟುವವರಾಗಿದ್ದಾರೆ. ಹಾಗಾಗಿ ಆಯಾಯ ಜನರ ಭಾಷೆಯಲ್ಲಿ ಬುದ್ಧನ ದರ್ಶನದ ನುಡಿಗಟ್ಟನ್ನು ರೂಪಿಸಿ ಜೀವಂತಗೊಳಿಸಿ ಎಂದು ವಿನಂತಿಸುವೆ. ಹಾಗೇನೆ ದುಡಿಯುವ ವರ್ಗವು ಕೇವಲ ಭಕ್ತರಾಗಿ ಮಾತ್ರವಲ್ಲದೆ ತಾತ್ವಿಕ ಚಿಂತಕರಾಗಿ ಘನತೆಯಿಂದ ಸಮಸಮವಾಗಿ ಕೂಡಿ ಬಾಳಿದ್ದು ಹನ್ನೆರಡನೆ ಶತಮಾನದಲ್ಲಿ. ವಚನಕಾರರ ಕಾಲಮಾನದಲ್ಲಿ ಇದು ಸಂಭವಿಸಿತ್ತು. ಇದನ್ನು ಕಸಿ ಮಾಡುವುದು ಹೇಗೆ? ಈ ಪ್ರಯೋಗಶೀಲತೆಯ ಕಡೆಗೂ ತಾವು ಯೋಚಿಸಬೇಕೆಂದು ವಿನಂತಿಸುವೆ.

ಯಾವುದೇ ವ್ಯಕ್ತಿಯಲ್ಲಿ ಅಥವಾ ಸಮುದಾಯ ಧರ್ಮಗಳಲ್ಲಿ ಆಂಶಿಕವಾಗಿಯಾದರೂ ಸಮತ್ವ, ಕಾರುಣ್ಯ ಕಂಡು ಬಂದಲ್ಲಿ ಅದನ್ನು ಬುದ್ಧನ ಬೆಳಕೆಂದೇ ಕಾಣುವ ಮುಕ್ತ ಕಣ್ಣು ಬೇಕಾಗಿದೆ. ಈಗ ಕಟ್ಟುತ್ತಿರುವ ಸಂದರ್ಭದಲ್ಲಿ ಈ ಎಚ್ಚರಗಳಿದ್ದರೆ ಒಳಿತೆಂದು ಭಾವಿಸಿ ಪ್ರಸ್ತಾಪಿಸುತ್ತಿರುವೆ. ಈ ಸಂದರ್ಭದಲ್ಲಿ ಒಂದು ಎಚ್ಚರಿಕೆ: ಬೌದ್ಧಧಮ್ಮ ಸ್ವೀಕರಿಸಿ

ಬೌದ್ಧಧಮ್ಮ ಸ್ವೀಕರಿಸಿ ತಾನು ಮೇಲೂ ಅಲ್ಲ ತಾನು ಕೀಳೂ ಅಲ್ಲ ಅಂದುಕೊಂಡರೆ...

ದಲಿತ ಸಂಘರ್ಷ ಸಮಿತಿ ಹೊಸ ಹುಟ್ಟು ಪಡೆದಿದೆ. ಅದು ಈ ಕೆಲಸವನ್ನು ಇಲ್ಲಿಗೇ ನಿಲ್ಲಿಸಿದರೆ ಅದು ಇಲ್ಲಿಗೆ ನಿಲ್ಲುತ್ತದೆ. ಈಗ ದ.ಸಂ.ಸ ಮಾಡಬೇಕಾದ ಕೆಲಸವೆಂದರೆ, ತನ್ನೊಡನೆ ಎಲ್ಲಾ ಬಣಗಳನ್ನು ಸೇರಿಸಿಕೊಂಡು ತಾಲ್ಲೂಕು, ಹೋಬಳಿ, ಗ್ರಾಮ ಮಟ್ಟದಲ್ಲಿ ಭಂತೇಜಿಗಳ ಮಾರ್ಗದರ್ಶನ, ಆ ತಾಲೂಕಿನ ದಲಿತ ನೌಕರರ ಸಹಕಾರದೊಡನೆ 'ಬುದ್ಧ ವಿಹಾರ' ಸ್ಥಾಪಿಸುವುದಾಗಿದೆ. ಅಲ್ಲಿ ಧಮ್ಮ ವಾಚನಾಲಯ ಧ್ಯಾನಕೇಂದ್ರ, ಗ್ರಂಥಾಲಯ, ಉದ್ಯೋಗ ಮಾಹಿತಿ ಕೇಂದ್ರ ಮಕ್ಕಳ ಪಾಲನಾ ಕೇಂದ್ರ ಇತ್ಯಾದಿ ಚಟುವಟಿಕೆ ಆರಂಭಿಸಬೇಕಾಗಿದೆ. ಇದಾಗದಿದ್ದರೆ ವ್ಯಾಪಕತೆ ಬರಲಾರದು. ಈ ಸಂದರ್ಭದಲ್ಲಿ ಎಲ್ಲಾ ಪ್ರಗತಿಶೀಲರು, ಲೇಖಕರು, ಕಲಾವಿದರು, ಬುದ್ಧಿಜೀವಿಗಳು ಜತೆಗೂಡಿ ಎಂದು ವಿನಂತಿಸುವೆ.

ದೇವನೂರ ಮಹಾದೇವ

ಗೋಮು. ಆದುದರಿಂದಲೇ ಬೌದ್ಧಧರ್ಮದ ಮಹತ್ವದ ಸಂದೇಶ ಪ್ರತಿಯೊಂದು ನಿನ್ನಲ್ಲೇ ಇದೆ. ಎಂಬುದು ಬುದ್ಧ ಏನಾದನೋ, ಸಾಮಾನ್ಯ ಮನುಷ್ಯನೂ ಕೂಡ ಆ ಮಟ್ಟವನ್ನು ತಲುಪಬಹುದು. ಆ ನಿಬ್ಬಾಣವನ್ನು ಪಡೆದುಕೊಳ್ಳಬಹುದು. ಇದು ಒಬ್ಬ ಭಿಕ್ಕುಗೂ ಸಾಧ್ಯ. ಒಬ್ಬ ಉಪಾಸಕನಿಗೂ ಸಾಧ್ಯ. ಒಬ್ಬ ಗೃಹಸ್ಥನಿಗೂ ಸಾಧ್ಯ. ಆದರೆ ದೈನಂದಿನ ನಡವಳಿಕೆ ಇನಿದೆ ಆ ನಡವಳಿಕೆ ಬಹಳ ಶುದ್ಧವಾಗಿರಬೇಕು. ನಮ್ಮ ದಿನ ನಿತ್ಯದ ಕರ್ತವ್ಯದಲ್ಲಿ ಸ್ವಚ್ಛತೆಯನ್ನೂ ಶೀಲವನ್ನೂ ಅಳವಡಿಸಿಕೊಳ್ಳಬೇಕು. ಬುದ್ಧಗುರು ಎಷ್ಟೊಂದು practicle ಆಗಿದ್ದರೆಂದರೆ ಬರೀ ಧರ್ಮವನ್ನು ಬೋಧಿಸದೆ ಸಂಘವನ್ನು ಕಟ್ಟಿದರು. ಅದರ ಆಶ್ರಯದಲ್ಲಿ ಪರಸ್ಪರ ಸಹಕಾರವಾದ ಮತ್ತು ಪೂರಕವಾದ ಸಮಾಜವನ್ನು ಕಟ್ಟಿದರು.

ಉಪಾಸಕ ಉಪಾಸಕಿಯರಿಂದ ಸಂಘವೂ, ಸಂಘದಿಂದ ಸಮಾಜವೂ ಒಂದನ್ನೊಂದು ಪೂರಕವಾಗಿ ಅವಲಂಬಿಸಿ ಬೆಳೆಯುವ ವ್ಯವಸ್ಥೆಯನ್ನು ಬುದ್ಧ ರೂಪಿಸಿದರು. ಈ ವ್ಯವಸ್ಥೆಯನ್ನು ನಾವು ಮಾಡಿಕೊಳ್ಳದೇ ಹೋದರೆ, ಈ ಮೊದಲೇ ಮಾತನಾಡಿದ ಭಾಷಣಕಾರರು ಹೇಳಿದಂತೆ ವಿಹಾರಗಳ ನಿರ್ಮಾಣ, ಭಿಕ್ಕುಗಳ ಸಂಘ ರಚನೆ, ಹುಟ್ಟು ಸಾವು ಮುಂತಾದ ದಿನ ನಿತ್ಯದ ಆಚರಣೆಗೆ ಭಿಕ್ಕುಗಳು ಸಾಧಾರಣವಾಗಿ ಸಿಕ್ಕದೇ ಇದ್ದ ಪಕ್ಷದಲ್ಲಿ ನಮ್ಮಲ್ಲಿ ಧಮ್ಮವನ್ನು ಕುರಿತ ಆಸಕ್ತಿ ಕಡಿಮೆಯಾಗಿ ಬಿಡುತ್ತದೆ. ಆದುದರಿಂದಲೇ ಕೂಡಲೇ ವಿಹಾರಗಳನ್ನು ನಿರ್ಮಿಸುವ, ಭಿಕ್ಕುಗಳನ್ನು ಹುಡುಕಿಕೊಳ್ಳುವುದು ಹಾಗೂ ಆಚರಣೆಗಳನ್ನು ಕೈಗೊಳ್ಳುವುದು ಮುಂತಾದವುಗಳನ್ನು ನಾವು ಮಾಡದೇ ಹೋದ ಪಕ್ಷದಲ್ಲಿ ನಾವೀಗ ಏನು ಮತಾಂತರ ಆಗಿದ್ದೇವೆಯೋ ಅದು ಶಿಥಿಲವಾಗುತ್ತದೆ. ಆದುದರಿಂದ ಬಂಧುಗಳೇ ಬಹಳ ಉತ್ತಮವಾದ ಒಳ್ಳೆಯ ಹೆಜ್ಜೆಗಳನ್ನು ನೀವು ಈ ದಿನ ಹಾಕಿದ್ದೀರಿ. ಈ ಹೆಜ್ಜೆಯಲ್ಲಿ ನೀವು ಬಹಳ ಗಟ್ಟಿತನದಿಂದ, ಹೊಸ ಮನುಷ್ಯರಾಗಿ. ಬಾಬಾ ಸಾಹೇಬರು ಹೇಳುತ್ತಾರೆ ನಾನು ಹೊಸ ಜೀವ ಪಡೆದುಕೊಂಡೆ ಎಂದು. ನೀವೂ ಕೂಡ ಹೊಸ ಜೀವ ಪಡೆದು ಹೊಸ ಮನುಷ್ಯರಾಗಿ ತಮ್ಮ ಬದುಕನ್ನು ಪ್ರಾರಂಭಿಸುತ್ತಿದ್ದೀರಿ, ತಮಗೆಲ್ಲರಿಗೂ ಈ ಮಾರ್ಗದಲ್ಲಿ ಒಳ್ಳೆಯದಾಗುತ್ತದೆ ನಮಸ್ಕಾರ. □

ದಲಿತ ಸಂಸ್ಕೃತಿ ಸಾಮಾಜಿಕ ಪರಿಭಾಷೆಗಳು

ಜಗತ್ತಿನ ಜನಸಂಖ್ಯೆಯಲ್ಲಿ ಬಹುಪಾಲು ಅವಕಾಶ ವಂಚಿತ ಸಮುದಾಯಗಳೇ ಆಗಿರುವುದರಿಂದ ಜಗತ್ತಿನ ನಾಗರಿಕತೆ ಮತ್ತು ಸಂಸ್ಕೃತಿಗಳ ಸಿಂಹಪಾಲಿನ ಸೃಷ್ಟಿ ಈ ಸಮುದಾಯಗಳಿಂದಲೇ ಸಂಭವಿಸಿರುವುದರಿಂದ ದಲಿತ ಚಿಂತನೆ ಎಂಬುದು ಜಗತ್ತಿನ ಆರಂಭದ ಎಲ್ಲ ಸೃಜನಶೀಲ ಮತ್ತು ಸೃಜನೇತರ ಕೃತಿ ಮತ್ತು ಆಕೃತಿಗಳಿಂದಲೇ ಹೊಳೆದು ತೋರುತ್ತಿದೆ ಎಂಬುದು ನಿಸ್ಸಂದೇಹ. ಈ ಮೂಲಕ ನೋಡಿದರೆ ದಲಿತರು ಸಂಸ್ಕೃತಿಯ ಮೂಲ ಪುರುಷರೆನ್ನಬಹುದು, ಹೀಗೆಂದರೆ ದಲಿತರು ಭಾರತದ ಮೂಲ ಪುರುಷರು, ವ್ಯವಸಾಯವನ್ನು ಸೃಷ್ಟಿಸಿದವರು ಹೊಲೆ ಮಾದಿಗರು, 'ಹೊಲೆಯ' ಪದ ಫಲ, ಹೊಲ, ಹೊಲೆಯ ಎಂಬುದಾಗಿ ನಿಷ್ಪನ್ನಗೊಂಡಿದೆ ಎನಿಸುತ್ತದೆ. ಹೊಲತಿ ಪದವೂ ಇದಕ್ಕೆ ಸಂವಾದಿಯಾಗಿ ರೂಪುಗೊಂಡಿರಬೇಕು. ಇದೇ ನೆಲೆಯಲ್ಲಿ 'ಮಾತಂಗ' ಪದವು ಪುರಾಣ ನೆಲೆಯಲ್ಲಿ ಮೊದಲಿಗೆ 'ಮಾದಿಗ' ಪದಗಳು ರೂಪುಗೊಂಡಿವೆ.

ಲಕ್ಕೂರು ಸಿ. ಆನಂದ

ಎರಡು ಸಣ್ಣ ಕಥೆಗಳಿಂದ ಈ ಕಥನವನ್ನು ಪ್ರಾರಂಭಿಸುವುದು ಮೇಲು

ಚಕ್ರವರ್ತಿಯೊಬ್ಬನಿಗೆ ಇಡೀ ಭೂಮಂಡಲವನ್ನೆಲ್ಲಾ ಗೆದ್ದು ತನ್ನ ಚಕ್ರಾಧಿಪತ್ಯ ಸ್ಥಾಪಿಸಬೇಕೆಂಬ ಬಯಕೆ. ಅದರಂತೆ ತನ್ನ ಪಕ್ಕದ ರಾಜ್ಯದ ಮೇಲೆ ದಂಡೆತ್ತಿ ಹೋದ. ಘೋರ ಯುದ್ಧ ನಡೆದು ಲಕ್ಷಾಂತರ ಸೈನಿಕರು ಮಡಿದರು. ಚಕ್ರವರ್ತಿ ತಾನು ಗೆದ್ದ ಹಮ್ಮಿನಲ್ಲಿ ಯುದ್ಧ ಭೂಮಿಯಲ್ಲಿ ಮಡಿದುರುಳಿದ ಸೈನಿಕರ ಶವಗಳತ್ತ ನೋಟವನ್ನು ಬೀರಿದ. ಅವನಿಗೆ ದಿಗ್ಭ್ರಮೆಯಾಗುವ ದೃಶ್ಯವೊಂದು ಕಂಡಿತು. ಆ ನಾಡಿನ ಆದಿವಾಸಿಯೊಬ್ಬ ಹೆಣವೊಂದನ್ನು ಕಿತ್ತು ಗಬಗಬ ತಿನ್ನುತ್ತಿದ್ದ, ಚಕ್ರವರ್ತಿಯನ್ನು ಕಂಡು ಭಯಗೊಂಡ ಆ ಆದಿವಾಸಿ ಅವನನ್ನು ಕುರಿತು 'ಕ್ಷಮಿಸು ದೊರೆಯೇ, ಹಸಿವನ್ನು ತಾಳಲಾ ರದೆ ನೀನು ಹೊಡೆದುರುಳಿಸಿದ ಸೈನಿ ಕನ ಹೆಣವನ್ನು ತಿನ್ನುತ್ತಿದ್ದೇನೆ. ಇದು ನಿನ್ನ ಆಹಾರ, ನಿನ್ನ ಅಪ್ಪಣೆಯಿ ಲ್ಲದೆ ನಾನು ತಿನ್ನುತ್ತಿರುವುದಕ್ಕೆ ಕ್ಷಮಿಸು' ಎಂದ. ಅದಕ್ಕೆ ಚಕ್ರವರ್ತಿ, 'ಇಲ್ಲ ನಾನು ನರ ಮಾಂಸ ಭಕ್ಷಕನಲ್ಲ' ಎಂದ. ಆದಿವಾಸಿ ಹೇಳು ತ್ತಾನೆ 'ನೀನು ನರಮಾಂಸ ಭಕ್ಷ ಕನಲ್ಲದಿದ್ದರೆ ಇಷ್ಟೆಲ್ಲಾ ಸೈನಿಕರನ್ನು ಏಕೆ ಕೊಂದೆ, ನಾನಾದರೋ ಹಸಿವಾದಾಗ ಮಾತ್ರ ಅಗತ್ಯಕ್ಕೆ ತಕ್ಕಂತೆ ತಿನ್ನುತ್ತೇನೆಯೇ ಹೊರತು ಹೀಗೆ ಯಾರನ್ನೂ ಸಾಮೂಹಿಕವಾಗಿ ಕೊಲ್ಲುವುದಿಲ್ಲ' ಎಂದು ಹೇಳಿದ, ಚಕ್ರವರ್ತಿಗೆ ಮುಂದೇನು ಮಾತನಾಡಬೇಕೆಂದು ತೋಚದೆ ಬಾಯಿ ಕಟ್ಟಿತು.



ಮಣ್ಣೊಳಗಿರುವ ಎರಡು ಬೀಜಗಳು ಹೀಗೆ ಮಾತಾಡಿಕೊಳ್ಳುತ್ತವೆ.

ಮೊದಲನೆ ಬೀಜ: 'ನಾನು ಇಲ್ಲಿಂದ ಚಿಗುರೊಡೆದು ಹೆಮ್ಮರವಾಗಿ ಬೆಳೆದು ನಾಲ್ಕು ದಿಕ್ಕಿಗೂ ಚಾಚಿಕೊಂಡು ಬೆಳೆಯುತ್ತೇನೆ. ನನ್ನಿಂದ ಎದುರಿದ ಎಲೆಗಳನ್ನು ನಡೆದಾಡುವವರು ತುಳಿಯುತ್ತಾರೆ, ರಂಬೆ, ಕೊಂಬೆಗಳನ್ನೆಲ್ಲ ಕತ್ತರಿಸುತ್ತಾರೆ, ಹಣ್ಣುಗಳನ್ನೆಲ್ಲಾ ಕಿತ್ತು ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಾರೆ. ಕೊನೆಗೆ ಬುಡಸಮೇತ ನನ್ನನ್ನು ಕತ್ತರಿಸುತ್ತಾರೆ. ಅದಕ್ಕೆ ನಾನು ಚಿಗುರೊಡೆಯದೆ ಇಲ್ಲೇ ಕೂತಿರುತ್ತೇನೆ' ಎಂದಿತು.

ಎರಡನೆ ಬೀಜ: ನಾನು ಇಲ್ಲಿಂದ ಚಿಗುರೊಡೆಯದೆ ಮಣ್ಣ ಎದೆಯನ್ನು ಸೀಳಿ ಮೇಲೆ ಎದ್ದು ಬೃಹತ್ ಆಗಿ ಬೆಳೆದು ನಾಲ್ಕೂ ದಿಕ್ಕಿಗೆ ನನ್ನ ರಂಬೆಕೊಂಬೆಗಳನ್ನು ಹರಡಿ ನೆರಳು ಕೊಡುತ್ತೇನೆ. ನಡೆದಾಡುವಂತಹ ಆಗಂತುಕರಿಗೆ ಹಣ್ಣು ಕೊಡುತ್ತೇನೆ, ನೆರಳು, ಉರುವಲು ಕೊಡುತ್ತೇನೆ. ಅದಕ್ಕಾಗಿ ನಾನು ಮಣ್ಣೊಳಗೆ ಇರಲಾರೆ' ಎಂದು ಹೇಳಿತು.

ಮೇಲಿನ ಮೊದಲ ಕಥೆಯನ್ನು ದೇವನೂರ ಮಹಾದೇವರವರು ಕೋಲಾರದಲ್ಲಿ ನಡೆದ ಕುವೆಂಪು ಪರಿಸರ ಸಾಹಿತ್ಯೋತ್ಸವವದಲ್ಲಿ ಹೇಳಿದ ಕಥೆ ಯಾದರೆ ಎರಡನೆಯದ್ದನ್ನು ಜೋಗನ್ ಶಂಕರ್‌ರವರು ಬಳ್ಳಾರಿಯ ನಂದಿಹಳ್ಳಿಯಲ್ಲಿ ನಡೆದ ದಲಿತ ಕಮ್ಮಟದಲ್ಲಿ ಹೇಳಿದ ಕಥೆ. ಇಲ್ಲಿ ನಾನು ಈ ಎರಡು ಕಥೆಗಳನ್ನು ೦ು' ುಾ ಕಿ ಉದಾಹರಣೆಯಾಗಿ ತೆಗೆದುಕೊಂಡೆ ಎಂದರೆ, ಮೊದಲ ಕಥೆಯಲ್ಲಿ ದಲಿತತ್ವವನ್ನು ಮತ್ತದರ ಸಂಸ್ಕೃತಿಯನ್ನು ಆದಿವಾಸಿಯ ಮೂಲಕ , ಎರಡನೆಯದರಲ್ಲಿ ಬೀಜದ ಮೂಲಕ ಗ್ರಹಿಸಿದರೆ ಚಕ್ರವರ್ತಿಯು ಮತ್ತು ಮತ್ತೊಂದು ಬೀಜ ಬ್ರಾಹ್ಮಣ ಸಂಸ್ಕೃತಿ ಮತ್ತು ಅಧಿಕಾರಸ್ಥ ಆಳುವ ಸಂಸ್ಕೃತಿಯನ್ನು ಪ್ರತಿನಿಧಿಸುತ್ತದೆ. ಈ ಎರಡು ವೈರುಧ್ಯಗಳು ಮರು ಮೌಲ್ಯಮಾಪನವನ್ನು ಮುಂದೆ ವಿಸ್ತೃತವಾಗಿ ಅರಿಯುವ ಪ್ರಯತ್ನವನ್ನು ಮಾಡೋಣ.

ಕರ್ನಾಟಕ ಚರಿತ್ರೆಯ ಪ್ರಧಾನವಾದ ಭೂಮಿಕೆ ಚರಿತ್ರೆಯನ್ನು ಗತವೆಂದೂ, ಹಿಂದಿನದೆಂದೂ ಭಾವಿಸುವುದೇ ಆಗಿದೆ. ಇಲ್ಲಿ 'ಸಂಸ್ಕೃತಿ'ಯೆಂಬುದು ಪ್ರಧಾನ ಭೂಮಿಕೆಯಾದರೆ ಆ ಚರಿತ್ರೆಯನ್ನು

ಸಂಸ್ಕೃತಿ ಕಥನವೆಂದು ತಿಳಿಯಬೇಕಾದ ಅಗತ್ಯ ಈಗ ಬಹಳ ಮುಖ್ಯವಾದದ್ದಾಗಿದೆ. ಏಕೆಂದರೆ ಸಂಸ್ಕೃತಿಯನ್ನು ಗತವೆಂದು ಭಾವಿಸಿದ ಪಾಶ್ಚಾತ್ಯ ಮಾದರಿಯ ಆಲೋಚನೆಯು ನಮ್ಮ ಮೇಲೆ ಮಾಡಿದ ಪ್ರಭಾವದಿಂದಾಗಿ ನಮಗೂ ಮತ್ತು ನಮ್ಮನ್ನು ಜೋಡಿಸಿದ ಗತಕ್ಕೂ ನಾವು ಎರವಾಗಿದ್ದೇವೆ. ಗತವು ವರ್ತಮಾನವನ್ನು ರೂಪಿಸಲು ಜವಾಬ್ದಾರಿಯೆನ್ನುವುದನ್ನು ಮರೆತಿದ್ದೇವೆ. ಸಂಸ್ಕೃತಿಯನ್ನು ಭೌತವಾದದ್ದು; ಆದ್ದರಿಂದ ಹಿಂದಿನದು, ಎನ್ನುವ ಹಾಗೆ ಭ್ರಮಿಸುವಂತೆ ಮಾಡುವ ಆಲೋಚನಾ ವಿಧಾನ ಇದು. ಇದರ ಪರಿಣಾಮಗಳೆಂದರೆ ಬದುಕೆನ್ನುವುದು ಚಿಂತೆಯಿಲ್ಲದ, ದೇಹಪ್ರಧಾನ ಭೂಮಿಕೆಯ ಜೀವನವೆಂಬಂತೆ ರಚನೆಯಾಗಿದೆ. ಈ ನಿಟ್ಟಿನಿಂದ ದಲಿತ ಸಂಸ್ಕೃತಿಯು ಸಹ ಹೊರತಾಗಿಲ್ಲ. ಈ ಮೂಲ ಪರಿಕಲ್ಪನೆಗಳಿಂದ ನೋಡಿದರೆ ಇಂದು ಖಂಡಿತವಾಗಿ ದಲಿತ ಸಂಸ್ಕೃತಿಯ ಆಳವಾದ ಅಧ್ಯಯನ ಬಹಳ ಮುಖ್ಯ ಅಂತ ಅನಿಸುತ್ತದೆ.

ಸಮುದಾಯದೊಳಗಿನ ಸಂಸ್ಕೃತಿಯ ಹುಡುಕಾಟದಲ್ಲಿ

...ಇಡೀ ಭೂಮಂಡಲವನ್ನೆಲ್ಲಾ ಗೆದ್ದು ತನ್ನ ಚಕ್ರಾಧಿಪತ್ಯ ಸ್ಥಾಪಿಸಬೇಕೆಂಬ ಚಕ್ರವರ್ತಿಯೊಬ್ಬನ ಹೆಬ್ಬಯಕೆ ಅಥವಾ ಮಣ್ಣೊಳಗೆನೆ ಹೂತುಕೊಂಡು ಚಿಗುರದೆ ಅಲ್ಲೇ ಕೊಳೆತುಬಿಡಬೇಕೆಂಬ ಸ್ವಾರ್ಥದ ಕೋರಿಕೆ ನಿರ್ಲಕ್ಷಿತ ಸಮುದಾಯದ ದಲಿತರಿಗೆ ಇರಲಿಲ್ಲ. ಅವರ ಸಂಸ್ಕೃತಿ ಏನಿದ್ದರೂ ಕಥೆಯೊಳಗಿನ 'ಆದಿವಾಸಿ'ಯಂತೆ. ಚಿಗುರಿ ಹೆಮ್ಮರವಾಗುವ ಬೀಜದೊಳಗಣ ವೃಕ್ಷದಂತೆ: ಹಸಿವಾದಾಗ ಮಾತ್ರ ಅಗತ್ಯಕ್ಕೆ ತಕ್ಕಂತೆ ತಿನ್ನುತ್ತದೆಯೇ ಹೊರತು ಅಗತ್ಯವಿಲ್ಲದಿದ್ದರು ಯುದ್ಧಭೂಮಿಯಲ್ಲಿ ಸೈನಿಕರನ್ನು ಹೊಡೆದುರುಳಿಸುವುದಿಲ್ಲ. ಕಡಿದುರುಳಿಸುತ್ತಾರೆಂಬ ಭೀತಿಯಿದ್ದರೂ ಸಹ ಚಿಗುರಿ ಹೆಮ್ಮರವಾಗದೆ ಸುಮ್ಮನೆ ಮಣ್ಣೊಳಗೆ ಕೂತಿರುವುದಿಲ್ಲ. ಅಂತಹ ಸಾವಿರಾರು ವರ್ಷಗಳ ಸಂವೇದನೆಯನ್ನು ದಲಿತ ಸಂಸ್ಕೃತಿ ತನ್ನೊಳಗೆ ಹುದುಗಿಸಿಕೊಂಡು ಈ ಇಪ್ಪತ್ತೊಂದನೆಯ ಶತಮಾನದಲ್ಲಿ ತನ್ನ ಸುಪ್ತ ಪ್ರಜ್ಞೆಯನ್ನು ವಿಶ್ವಪ್ರಜ್ಞೆಯಾಗಿಸುವ ಕಡೆ ಕಾಲು ಬೆಳೆಸಿದೆ.

ಇಂತಹ ದಲಿತ ಸಂಸ್ಕೃತಿಗೆ, ಚಿಂತನೆಗೆ ಸುದೀರ್ಘವಾದ ಚರಿತ್ರೆಯಿದೆ. ಮೇಲುನೋಟಕ್ಕೆ ಅದರ ವೈಚಾರಿಕ ಬೇರುಗಳು ಕಾಣುವುದಿಲ್ಲ. ಮೌಖಿಕ ಹಾಗೂ ಆಚರಣಾತ್ಮಕ ಸ್ವರೂಪದ ಅದರ ಶಕ್ತಿರೂಪಕ ಪ್ರತಿಭೆಯ ಸಮಷ್ಟಿ ಸಂವೇದನೆಯದು. ದೇಶೀ ಸಮುದಾಯಗಳ ಬದುಕಿನ ಅನುಭವಗಳು ಸಂಯೋಗಗೊಂಡು ಅಲಿಖಿತ ಮಾಧ್ಯಮಗಳಲ್ಲಿ ಬಹುರೂಪಿಯಾಗಿ ನಿರಂತರ ಪುನರ್ ಸೃಷ್ಟಿಯಾಗುತ್ತಲೇ ಬಂದಿವೆ. ದೇಶಿ ಸಂಸ್ಕೃತಿ ಮತ್ತು ಜಾನಪದ ಪರಂಪರೆಯಲ್ಲಿ ಒಳಗೊಳ್ಳುವ ಜ್ಞಾನ ಮಾರ್ಗಗಳೆಲ್ಲ ಇದು ಬಿಂಬಿತವಾಗಿದೆ. ಹಿರಿದಾದ ಅರ್ಥದಲ್ಲಿ ನಮ್ಮ ಪ್ರಾಚೀನ ಚಾರ್ವಾಕ, ಸಾಂಖ್ಯ ಯೋಗ, ನ್ಯಾಯ, ವೈಶೇಷಿಕ ಮತ್ತು ಪೂರ್ವ ಮೀಮಾಂಸೆ, ಉತ್ತರ ಮೀಮಾಂಸೆಗಳ ಆಳದಿಂದಲೆ ದಲಿತ ಚಿಂತನೆಯ, ಸಂಸ್ಕೃತಿ ಪರಿಭಾಷೆಯ ಬೇರುಗಳನ್ನು ಕಾಣಬಹುದು. ಇವು ತಟ್ಟನೆ ವೈದಿಕ ಮೂಲದ ಚಿಂತನೆಯಂತೆ ಕಂಡರೂ ಜ್ಞಾನದ ಹಸಿವಿನ ನೆಲೆಯಲ್ಲಿ ಮತ್ತು ಮನುಷ್ಯನ ಅಂತಿಮ ಅಸ್ತಿತ್ವದ ಹುಡುಕಾಟದ ದರ್ಶನ'ದ ಕರ್ಷಣೆಯಲ್ಲಿ ದಲಿತ ಸಂವೇದನೆಯದೇ ಆಗಿದೆ. ಅತ್ಯಂತ ಸೂಕ್ಷ್ಮವಾಗಿ ಆಳದ ಪುರಾಣಗಳ ಸಂಕೇತಗಳ ಬಿಂಬಗಳಿಂದ ನೋಡಿದರೆ ಈ ದಲಿತ ಮತ್ತು ಈ ವೈದಿಕ ಈ ಎರಡೂ ವೈಚಾರಿಕ ಆಕೃತಿಗಳು ಆರಂಭದಲ್ಲಿ ಹೆಚ್ಚು ಕಡಿಮೆ ಒಂದೇ ಮೂಲದವು. ಕಾಲಾನಂತರ ಸಾಂಸ್ಕೃತಿಕ ಅಂತರಗಳು ಉಂಟಾದರೂ ಕೂಡ ದಲಿತ ಚಿಂತನೆಯು ವೈದಿಕ ಪರಂಪರೆಯ ಮಿತಿಗಳನ್ನು ಮೀರಲು ಮತ್ತು ಅದರ ಸಾಂಸ್ಕೃತಿಕ 'ದರ್ಶನ'ದ ಅಹಂಕಾರವನ್ನು ಮುರಿಯಲು ನಿರಂತರವಾಗಿ ಸಾಂಸ್ಕೃತಿಕವಾದ ವೈಚಾರಿಕ ಸಂಘರ್ಷವನ್ನು ರಕ್ತ ಪಾತವಿಲ್ಲದೆ ಮನುಷ್ಯತ್ವದ ದಾಹದಲ್ಲಿ ನಡೆಸಿಕೊಂಡು ಬಂದಿದೆ. ಇದರ ಪರಿಣಾಮವೇ ಬೌದ್ಧ ಚಿಂತನೆಯ ಅಸ್ತಿತ್ವ ಅಷ್ಟೊಂದು ಪ್ರಮಾಣದಲ್ಲಿ ಘಟಿಸಲು ಸಾಧ್ಯವಾದದ್ದು. ಜಗತ್ತಿನ ನೊಂದವರ ಭಾರ ಬುದ್ಧನ ಚಿಂತನೆಯಲ್ಲಿ ನ್ಯಾಯದ ದರ್ಶನದ ತಕ್ಕಡಿಯಲ್ಲಿ ವೈಚಾರಿಕವಾಗಿ ಆಕೃತಿಗೊಂಡದ್ದು ಅವೈದಿಕ ಜ್ಞಾನ ಪರಂಪರೆಗಳ ಕಾರಣವಾಗಿಯೇ ಹೊರತು ಅರಮನೆಯ ಅಂಗಳದ ಸುಖದಿಂದಲ್ಲ. ಬುದ್ಧನಿಗೆ ಕಣ್ಣು ತೆರೆಸಿದ್ದು ಕೂಡ ಅವನ ಸೇವಕ. ಹಾದಿ ಬೀದಿಯಲ್ಲಿ ಆ ವೇಳೆಯಲ್ಲಿ ದುಃಖದ ಅಲೆಯಲ್ಲಿ ನೊಂದವರ ತೇಜದ ಹೊಳಪಿನಲ್ಲಿ ಅಂದರೆ ದೇಸೀ ಸಾರದ ವಿಸ್ತಾರವಾದ ದಲಿತ ರೂಪಕದ ಬಯಲು ಹೊಲಗಳಲ್ಲಿ ಬೆಳೆದ ಫಲ ಎಂದು ನಾವು ಇವತ್ತಿನ ಮೂಲಭೂತವಾದಿಗಳ ಮಧ್ಯೆ ನಿಂತು ಆಲೋಚಿಸಬೇಕಾಗಿದೆ. ಈ ಮೂಲಕವೇ ದಲಿತ ಸಂಸ್ಕೃತಿ ಚಿಂತನೆಯನ್ನು ಒಂದು ವಿಶಾಲ ತಾತ್ವಿಕ ಪರ್ಯಾಯವಾಗಿ ನಾವು ಕಟ್ಟಿಕೊಳ್ಳಬಹುದು.

ಇಂದು ಆಧುನಿಕತೆಯ ಭ್ರಮೆಯೊಳಗೆ ಸಿಕ್ಕಿ ಹಾಕಿಕೊಂಡಿರುವ ನಮಗೆ ಎಲ್ಲವೂ ಬೇಗ ಸಾಗುವ: ಉಪಯೋಗಿ ದಾಟಿಯ ಜೀವನ ಕ್ರಮವಾಗಿದೆ. ಈ ಜೀವನ ಕ್ರಮದ ಉಪಭುಕ್ತ ಸಾಮಗ್ರಿಗಳು: ಜ್ಞಾನರಾಶಿ: ಚಿಂತನಾ ವಿನ್ಯಾಸ ಎಲ್ಲವೂ ಪಶ್ಚಿಮದ ಕೊಡುಗೆಯೇ. ಬದುಕಿನ ಎಲ್ಲ ಕ್ರಮಗಳನ್ನು ಆವರಿಸುತ್ತಿರುವ ಇದು ಮತ್ತೊಮ್ಮೆ ನಮ್ಮನ್ನು ನಾವು ಮರೆಯುವಂತೆ. ನಮ್ಮ ಸಂಸ್ಕೃತಿಯನ್ನು ಕೈಬಿಡುವಂತೆ ಮಾಡುತ್ತಿದೆ. ಇಂತಹ ಏಕಘನಾಕೃತಿಯ ಜೀವನ ಕ್ರಮವನ್ನು ಮೋಹಿಸುವಂತೆ ಮಾಡುತ್ತಿರುವ ಈ ವಾತಾವರಣವು-ಗತಿಶೀಲ ಸಂಸ್ಕೃತಿಯ ಸತ್ವದ ಕಡೆಗೆ ಸಂವಾದವನ್ನು ನಡೆಸದಂತೆ ಮಾಡುತ್ತಿರುವುದು ಒಂದು ವಿಷಾದದ ಸಂಗತಿ. ಭಾರತೀಯ ಪರಂಪರೆಯ ಇಂಥ ಸಂದರ್ಭಗಳಲ್ಲಿ ದಲಿತ ಸಂಸ್ಕೃತಿಯನ್ನು ಹೇಗೆ ಪ್ರಸ್ತುತಗೊಳಿಸಿಕೊಳ್ಳಬೇಕು? ಇಂಥ ಪ್ರಶ್ನೆಗಳಿಗೆ ತಕ್ಕಮಟ್ಟಿನ ಉತ್ತರವನ್ನಾದರೂ ಸಂಸ್ಕೃತಿಯ ಗತ ಕಥನವು ಒದಗಿಸಿಕೊಟ್ಟಿತು. ಈ ದೃಷ್ಟಿಯಿಂದ ಚಾರಿತ್ರಿಕ ಪ್ರಜ್ಞೆಯನ್ನು ಗ್ರಹಿಸಲು ಚರಿತ್ರೆಯ ವ್ಯಾಖ್ಯಾನವನ್ನೇ ಬದಲಿಸಿ ನೋಡಬೇಕಾದ ಅವಶ್ಯಕತೆ ಬಂದಿದೆ. ಈ ನಿಟ್ಟಿನಲ್ಲಿ ದಲಿತ ಸಂಸ್ಕೃತಿಯನ್ನು ಹೀಗೆ ಗ್ರಹಿಸಲಾಗಿದೆ.

೧. ದಲಿತ ಸಂಸ್ಕೃತಿಯನ್ನು ಹೊಸ ಗ್ರಹಿಕೆಯೊಂದಿಗೆ ಅರ್ಥಮಾಡಿಕೊಳ್ಳುವುದು.

೨. ಸಂಸ್ಕೃತಿ ಹೆಸರಿನಲ್ಲಿ ದಲಿತರ ಮೇಲೆ ಹೇರಲ್ಪಟ್ಟ ಹೊರೆಯನ್ನು ಇಳಿಸುವುದು.

೩. ಇದುವರೆಗೆ ತಾತ್ಸಾರಕ್ಕೆ, ಅನಾದರಕ್ಕೆ ಗುರಿಯಾದ ಸಂಸ್ಕೃತಿಯನ್ನು ಪುನರ್ ರೂಪಿಸಿಕೊಳ್ಳುವುದು.

೪. ದಲಿತ ಸಂಸ್ಕೃತಿಯೊಳಗಿನ ಅನುಭಾವ ನೆಲೆಯ ಭಕ್ತಿ ಪರಂಪರೆಯನ್ನು ಗ್ರಹಿಸುವುದು.

ಈ ಮೇಲಿನ ಒಟ್ಟು ಗ್ರಹಿಕೆಗಳನ್ನು ನಾವಿಂದು ದಲಿತ ಸಂಸ್ಕೃತಿಯೊಳಗಿನ ಬೇರು, ಕಾಂಡ, ಚಿಗುರುಗಳೆಂಬಂತೆ ಕವಲೊಡೆದು ಚಿಂತಿಸಬೇಕಾಗಿದೆ.

ಇಂದು ದಲಿತ ಸಂಸ್ಕೃತಿಯನ್ನು ಹೊಸ ಗ್ರಹಿಕೆಯೊಂದಿಗೆ ಅರ್ಥ ಮಾಡಿಕೊಳ್ಳುವುದು ಎಂದರೆ ಹಳೆಯ ಬಾಟಲಿಯೊಳಗೆ ಹೊಸ ಮದ್ಯವನ್ನು ತುಂಬುವುದು ಎಂದಲ್ಲ. ದಲಿತ ಸಂಸ್ಕೃತಿಯೊಳಗೆ ಇಳಿದು ಅಲ್ಲಿಯ ಅನುಭವ ಪ್ರಪಂಚದೊಳಗಿನ ವಿಸ್ಮಯಗಳನ್ನು ಇಂದಿನ ಆಲೋಚನಾ ವಿಧಾನದಲ್ಲಿ ಗ್ರಹಿಸುವುದು ಎಂದರ್ಥ. ಆ ಮೂಲಕ ದಲಿತ ಚಿಂತನೆಗೆ, ಸಂಸ್ಕೃತಿಗೆ ಒಂದು ವಿಶಾಲ ತಾತ್ವಿಕ, ಸಾಮಾಜಿಕ ಪರಧಿಯನ್ನು ಕಟ್ಟಿಕೊಳ್ಳಬಹುದು. ಆದ್ದರಿಂದ ದಲಿತ ಸಂಸ್ಕೃತಿಯನ್ನು ಸಾಮಾಜಿಕ, ಸಾಂಸ್ಕೃತಿಕ ಮುಖಾಮುಖಿಯೊಂದಿಗೆ ಅರ್ಥೈಸಬೇಕಾದಂತಹ ಸಂದಿಗ್ಧ ಸ್ಥಿತಿ ಇಂದು ನಮಗೆ ಎದುರಾಗಿದೆ.

ಜಗತ್ತಿನ ಜನಸಂಖ್ಯೆಯಲ್ಲಿ ಬಹುಪಾಲು ಅವಕಾಶ ವಂಚಿತ ಸಮುದಾಯಗಳೇ ಆಗಿರುವುದರಿಂದ ಜಗತ್ತಿನ ನಾಗರಿಕತೆ ಮತ್ತು ಸಂಸ್ಕೃತಿಗಳ ಸಿಂಹಪಾಲಿನ ಸೃಷ್ಟಿ ಈ ಸಮುದಾಯಗಳಿಂದಲೇ ಸಂಭವಿಸಿರುವುದರಿಂದ ದಲಿತ ಚಿಂತನೆ ಎಂಬುದು ಜಗತ್ತಿನ ಆರಂಭದ ಎಲ್ಲ ಸೃಜನಶೀಲ ಮತ್ತು ಸೃಜನೇತರ ಕೃತಿ ಮತ್ತು ಆಕೃತಿಗಳಿಂದಲೇ ಹೊಳೆದು ತೋರುತ್ತಿದೆ ಎಂಬುದು ನಿಸ್ಸಂದೇಹ. ಈ ಮೂಲಕ ನೋಡಿದರೆ ದಲಿತರು ಸಂಸ್ಕೃತಿಯ ಮೂಲ ಪುರುಷರೆನ್ನಬಹುದು, ಹೀಗೆಂದರೆ ದಲಿತರು ಭಾರತದ ಮೂಲ ಪುರುಷರು, ವ್ಯವಸಾಯವನ್ನು ಸೃಷ್ಟಿಸಿದವರು ಹೊಲೆ ಮಾದಿಗರು, 'ಹೊಲೆಯ' ಪದ ಫಲ, ಹೊಲ, ಹೊಲೆಯ ಎಂಬುದಾಗಿ ನಿಷ್ಪನ್ನಗೊಂಡಿದೆ ಎನಿಸುತ್ತದೆ. ಹೊಲತಿ ಪದವೂ ಇದಕ್ಕೆ ಸಂವಾದಿಯಾಗಿ ರೂಪುಗೊಂಡಿರಬೇಕು. ಇದೇ ನೆಲೆಯಲ್ಲಿ 'ಮಾತಂಗ' ಪದವು ಪುರಾಣ ನೆಲೆಯಲ್ಲಿ ಮೊದಲಿಗೆ 'ಮಾದಿಗ' ಪದಗಳು ರೂಪುಗೊಂಡಿವೆ. 'ಮಾತಂಗ' ಮತ್ತು 'ಮಾತಂಗಿ' ಪದಗಳು ಪುರಾಣ ನೆಲೆಯಲ್ಲಿ ಬಳಕೆಗೊಂಡಿದ್ದರೂ ಈ ಪುರುಷರು ಸಂಸ್ಕೃತಿಯ ಮೂಲ ಪುರುಷರು ಎನ್ನಲು ದಾಖಲೆಗಳಿವೆ. ಇಂದಿಗೂ ಕೆಳವರ್ಗದ ಈ ಜನಗಳಲ್ಲಿ ಪಾರಂಪರಿಕ ಕಲೆ, ವ್ರತ, ಆಚರಣೆ, ಸಂಪ್ರದಾಯಗಳು

ಇಂದು ಆಧುನಿಕತೆಯ ಭ್ರಮೆಯೊಳಗೆ ಸಿಕ್ಕಿ ಹಾಕಿಕೊಂಡಿರುವ ನಮಗೆ ಎಲ್ಲವೂ ಬೇಗ ಸಾಗುವ: ಉಪಯೋಗಿ ದಾಟಿಯ ಜೀವನ ಕ್ರಮವಾಗಿದೆ. ಈ ಜೀವನ ಕ್ರಮದ ಉಪಭುಕ್ತ ಸಾಮಗ್ರಿಗಳು: ಜ್ಞಾನ ರಾಶಿ: ಚಿಂತನಾ ವಿನ್ಯಾಸ ಎಲ್ಲವೂ ಪಶ್ಚಿಮದ ಕೊಡುಗೆಯೇ. ಬದುಕಿನ ಎಲ್ಲ ಕ್ರಮಗಳನ್ನು ಆವರಿಸುತ್ತಿರುವ ಇದು ಮತ್ತೊಮ್ಮೆ ನಮ್ಮನ್ನು ನಾವು ಮರೆಯುವಂತೆ. ನಮ್ಮ ಸಂಸ್ಕೃತಿಯನ್ನು ಕೈಬಿಡುವಂತೆ ಮಾಡುತ್ತಿದೆ. ಇಂತಹ ಏಕಘನಾಕೃತಿಯ ಜೀವನ ಕ್ರಮವನ್ನು ಮೋಹಿಸುವಂತೆ ಮಾಡುತ್ತಿರುವ ಈ ವಾತಾವರಣವು-ಗತಿಶೀಲ ಸಂಸ್ಕೃತಿಯ ಸತ್ವದ ಕಡೆಗೆ ಸಂವಾದವನ್ನು ನಡೆಸದಂತೆ ಮಾಡುತ್ತಿರುವುದು ಒಂದು ವಿಷಾದದ ಸಂಗತಿ.

ಬಳಕೆಯಲ್ಲಿವೆ. ಪ್ರಧಾನ ಸಂಸ್ಕೃತಿಗಿಂತ ವಿಭಿನ್ನವಾದ ತನ್ನದೇ ಬೇರುಗಳುಳ್ಳ ಸಂಸ್ಕೃತಿ ಹೊಲೆ, ಮಾದಿಗರದು. ಇದರಿಂದ ದಲಿತರನ್ನು ಸಂಸ್ಕೃತಿಯ ಮೂಲ ಪುರುಷ ರೆಂದು ಗುರುತಿಸಲು ಸಾಧ್ಯ. ಅದಕ್ಕೆ ಸಂಬಂಧಿಸಿದಂತೆ ಶ್ರೇಣೀಕರಣಗೊಂಡ ಬೇರೆ ಸಮುದಾಯದವರು ಇವ ರಿಂದ ಅನೇಕ ಆಚರಣ ರೂಪಿಕೆಗಳನ್ನು ಸಾಮಾಜಿಕವಾಗಿ ಪಡೆದುಕೊಂಡು ತಮ್ಮ ಜೀವನ ವಿಧಾನದಲ್ಲಿ ಅಳವಡಿಸಿ ಕೊಂಡಿರುವುದನ್ನು ನಾವು ಈ ಇಪ್ಪತ್ತೊಂದನೆಯ ಶತ ಮಾನದಲ್ಲೂ ಕಾಣಬಹುದು. ಅವು.

೧. ಶ್ರೇಣೀಕರಣಗೊಂಡ ವೈದಿಕ ಜನ ಸಮುದಾಯ ದವರು ತನ್ನನ್ನು ಉಳಿದವರಿಗಿಂತ ಶ್ರೇಷ್ಠರೆಂದು ಸಾಬೀತು ಪಡಿಸಿಕೊಳ್ಳಲು (ಝುಂಝುವಾರ) ಜನಿವಾರವನ್ನು ಮಾದಿ ಗರಿಂದ ಪಡೆದದ್ದು: ಆ ಜನಿವಾರದ ಮೂಲ ರೂಪಿಕೆಯು ಹುಟ್ಟು, ಸಾವು, ಮದುವೆ, ಮುಂಜಿಯಲ್ಲಿ ಈಗಲೂ 'ಸಿಂಧ್' ಮಾದಿಗರಲ್ಲಿ ನಾವಿಂದು ಕಾಣಬಹುದು ಎಂದು ಕೋಟಿಗಾನಹಳ್ಳಿ ರಾಮಯ್ಯನವರು 'ಸಿಂಧ್ ಮಾದಿಗರ ಸಂಸ್ಕೃತಿ'ಯಲ್ಲಿ ಅಭಿಪ್ರಾಯ ಪಡುತ್ತಾರೆ.

೨. ಬ್ರಾಹ್ಮಣರು, ವೈಶ್ಯ (ಶೆಟ್ಟಿ, ನಗರ್ತರು), ಆಚಾರಿ (ವಿಶ್ವಕರ್ಮ) ಮೊದಲಾದವರ ಸಂಸ್ಕಾರದಲ್ಲಿಯೂ ಸಹ ಮಾದಿಗರ ಮನೆಯಿಂದ ಬೆಂಕಿಯನ್ನು ತಂದು ಅದರಿಂದ ಅವರ ಸಂಸ್ಕಾರ ಮಾಡುವುದು ಈಗಲೂ ಚಾಲ್ತಿಯಲ್ಲಿದೆ. ಈ ಬೆಂಕಿಯನ್ನು ಮಾದಿಗನೊಬ್ಬ ತಂದು ಅವರಿಗೆ ಕೊಡುವುದು ಒಂದು ವಿಶೇಷ.

೩) ಅಷ್ಟೇ ಅಲ್ಲದೆ ಅಸ್ಪೃಶ್ಯ ಸಮುದಾಯದ ಮೇಲಿರುವ ಎಲ್ಲಾ ಶ್ರೇಣೀಕೃತ ಸಮುದಾಯದವರ ಮರಣದಲ್ಲಿ ಹೊಲೆ ಮಾದಿಗರು ಗುಂಡಿ ತೋಡುವುದು, ತಿಥಿ ಕಾರ್ಯಕ್ರಮದಲ್ಲಿ ಅವರ ಸಮುದಾಯದ ಸದಸ್ಯರಂತೆ ಭಾಗವಹಿಸುವುದು ವಿಶೇಷ: ಈ ಮುಖಾಂತರ ಹೊಲೆ ಮಾದಿಗರ ಸಂಸ್ಕೃತಿ, ಆಚರಣೆಯು ಅವರಿಗೆ 'ಮುಕ್ತಿ'ಯ ಮಾರ್ಗವಾಗಿ ಈಗಲೂ ರೂಢಿಯಲ್ಲಿದೆ.

ಇಂತಹ ಈ ಮೂಲ ಸಂಸ್ಕೃತಿಯ ಮೇಲೆ ಇತಿ ಹಾಸದುದ್ದಕ್ಕೂ ಆಕ್ರಮಣ ನಡೆಸುತ್ತಲೇ ತಮ್ಮ ಸಂಸ್ಕೃತಿ ಮಾತ್ರ ಶ್ರೇಷ್ಠವೆಂದು ಬ್ರಾಹ್ಮಣಾರಾಧಿಯಾಗಿ ಮೇಲು ಜಾತಿಯ ಜನ ಭಾವಿಸಿದರು. ಬ್ರಾಹ್ಮಣರು ಯಜ್ಞ ಯಾಗಾ ದಿಗಳನ್ನು ಪವಿತ್ರ ಆಚರಣೆಯೆಂದು ಭಾವಿಸಿ (ಹಾಗೆ ನಂಬಿಸಿ) ಆಚರಿಸಿದರೆ 'ಶೂದ್ರರು' ಆ ಆಚರಣೆಗೆ ತೀವ್ರ ಪ್ರತಿರೋಧ ನಡೆಸಿದುದನ್ನು ಪುರಾಣಗಳು ಉಲ್ಲೇಖಿಸು ತ್ತವೆ. ಈ ಹಿನ್ನೆಲೆಯಲ್ಲಿ ದಲಿತರನ್ನು ಕೇಂದ್ರವಾಗಿರಿಸಿ ಕೊಂಡು, ಸಂಸ್ಕೃತಿಯನ್ನು ಪುನರ್ ರೂಪಿಸಿಕೊಳ್ಳುವ ಪ್ರಯತ್ನಗಳು ನಡೆಯುವುದು ಅನಿವಾರ್ಯವಾಗಿದೆ. ಮೂಲತಃ ಆದಿಮ ಸಮುದಾಯ ದೇವರ ಕಲ್ಪನೆಯನ್ನು ರೂಢಿಗೆ ತಂದರು. ನಂತರ ಬ್ರಾಹ್ಮಣರು ಅದನ್ನು ತಮ್ಮ ಸಂಸ್ಕೃತಿಗೆ ಬಂದದ್ದೆಂದು ವೈಭವೀಕರಿಸಿಕೊಂಡು ಅದನ್ನು ತಮ್ಮದೇ ಎಂದು ವಾದಿಸಿಕೊಂಡರು. ಅದಕ್ಕೂ ಹಿಂದೆ ಗಿಡ, ಮರ, ಪಕ್ಷಿ, ಪ್ರಾಣಿಗಳನ್ನು ಪೂಜಿಸುತ್ತಿದ್ದ ಇನ್ನಿತರ ಸಮುದಾಯದ ಸಂಸ್ಕೃತಿಗಳು ಮೊದಲಿಗೆ ಈ ದೇವತಾ ಆರಾಧನೆಯ ವಿಗ್ರಹ ಸಂಸ್ಕೃತಿಯನ್ನು ತನ್ನೊಳಗೆ ವಿಲೀನ ಮಾಡಿಕೊಳ್ಳುತ್ತ ಸಾಗಿತು. ಇದಕ್ಕೆ ಪುರಾವೆಯೆಂಬಂತೆ 'ರಾಮಾಯಣ ಮಹಾಕಾವ್ಯ'ವನ್ನು ತೆಗೆದುಕೊಳ್ಳಬಹುದು.

"ಭಾರತದ ಆದಿ ಕಾವ್ಯವೆನಿಸಿದ ರಾಮಾಯಣದ ಕರ್ತೃವೇ ಆದಿ ದಲಿತ ಮಹಾಕವಿಯಾಗಿದ್ದಾನೆ.

ತನ್ನ ವಿಶ್ವಮಾನ್ಯ ಕೃತಿಯ ಹಲವು ಪಾತ್ರಗಳ, ಸನ್ನಿ ವೇಶಗಳ ಮೂಲಕ ಈ ದಲಿತ ಜೀವನದ

ವೈವಿಧ್ಯಗಳನ್ನು, ವೈರುಧ್ಯಗಳನ್ನು, ಯಾತನೆ, ಶೋಷಣೆಗಳ ಮೂಲಕ ಪಾತ್ರಗಳ ಮೂಲಕ, ಈ ದಲಿತ ಸಂವೇದನೆಯನ್ನು ಪ್ರಕಟಿಸಿದ್ದಾನೆ.

ದೇವರುಗಳ ಕಲ್ಪನೆಯು ಈ ಮೂಲ ಅಡಿಯ ಲ್ಲಿಯೇ ಸೃಷ್ಟಿಯಾದದ್ದು ಮತ್ತು ಬೇರೂರಿ ನಂತರ ಧರ್ಮಗಳು ತಮ್ಮ ಸಮಾನದೃಷ್ಟಿಯ ನೆಲೆಯನ್ನು ಮೀರಿ ತಾರತಮ್ಯ ಮತಿಯನ್ನು ಪ್ರಕಟಿಸ ತೊಡಗಿದಾಗ ಧರ್ಮದ, ಭಕ್ತಿಯ, ಸಾಮಾಜಿಕ ಗೌರವದ ಯಜಮಾನ್ಯವನ್ನು ಕೆಲವೇ ವರ್ಗಗಳು ವಹಿಸಿಕೊಂಡು, ಉಳಿದವರೆಲ್ಲ ತಮ್ಮ ತೊತ್ತುಗೆಲಸಕ್ಕಾಗಿ ದುಡಿಯಲು,

ದೇವರು ಸೃಷ್ಟಿಸಿದ ಕ್ರಿಮಿಸದೃಶ ಜೀವಿಗಳೆಂಬ ದೃಷ್ಟಿ ಯಿಂದ ನಡೆಸಿಕೊಳ್ಳಲು ಆರಂಭಿಸಿದ ದಿನದಿಂದ ಶೋಷಣೆ, ಅಮಾನವೀಯತೆ, ಅಸಮಾನತೆಯ ಕಂದರ ಗಳು ಆಳವಾಗುತ್ತಾ ಹೋದವು" ಹೀಗೆ ಮುಖ್ಯವಾಗಿ ಬ್ರಾಹ್ಮಣರು 'ದೇವರು ಕಲ್ಪನೆ'ಯನ್ನು ಬೆಳಕಿಗೆ ತಂದದ್ದು ತಾವು ಎಂದು ವಾದಿಸಲು ಕಾರಣ ತಾನು ಎಲ್ಲರಿಗಿಂತ ಶ್ರೇಷ್ಠರೆಂದು ಸಾಬೀತು ಪಡಿಸಿಕೊಳ್ಳಲು ಮತ್ತು ಇನ್ನಿತರ ಅವರ ನಂತರದ ಸಮುದಾಯಗಳನ್ನು ಆಳಲು ನನ್ನ ಪ್ರಕಾರ 'ಈ ದೇವರು' ಎಂಬ ಕಲ್ಪನೆಯು ಬ್ರಾಹ್ಮಣರ ಅತಿ ದೊಡ್ಡ ರಾಜತಂತ್ರ, ಇಂತಹ ಇವರು ದೇವರ

ಇಪ್ಪತ್ತನೆಯ ಶತಮಾನವು ಅಲಕ್ಷಿತ ಸಮುದಾಯಗಳ ಮುಂದೆ ಬಹುರೂಪಿ ಯಾದಂತಹ ವೈಚಾರಿಕ ಆಕೃತಿಗಳನ್ನು ಇಟ್ಟು ಮುಂದೆ ಸಾಗಿದೆ. ದಲಿತ ಚಿಂತ ನೆಯು ಅವುಗಳ ಮೂಲಕವೆ ತಮ್ಮ ತಾತ್ವಿಕತೆಯನ್ನು ಪುನರ್ ನಿರ್ಮಿಸಿಕೊಳ್ಳು ವುದು ಅನಿವಾರ್ಯ. ಆಧುನಿಕೋತ್ತರ ಭಾರತದ ವೇಗದ ಮುಂದೆ ದಲಿತ ಸಮುದಾಯಗಳ ವಿಮುಕ್ತಿಯ ವಿರಾಟ್ ಕಥನವು ಈಗ ತಾನೆ ಬೇರೊಂದು ನೆಲೆಗೆ ಬಂದು ನಿಂತಿದೆ. ಅಂಬೇಡ್ಕರ್ ಹಾಕಿದ ತಳಹದಿಯ ಮೇಲೆ ಸಾಗಿದ ದಲಿತ ಸಾಗಿದ ದಲಿತ ಸಮಾಜವು ಈ ಹೊತ್ತಿನ ಜಗದ ಬೇರೆ ಬೇರೆ ಒತ್ತ ಡಗಳ ನಡುವೆ ಬೌದ್ಧಿಕವಾದ ಆಹಾರವನ್ನು ತನ್ನ ಸಂಸ್ಕೃತಿ ಮತ್ತು ದಲಿತ ಪರಂಪರೆಗಳ ಮೂಲಕವೆ ಸೃಷ್ಟಿಸಿಕೊಳ್ಳಬೇಕಾದ್ದಿದೆ. ಇಂತಹ ಅನಿವಾರ್ಯ ಸಂದರ್ಭದಲ್ಲಿ ದಲಿತ ಸಮುದಾಯದ ಒಡಲಲ್ಲಿರುವ ಕೆಲವು ಆಚರಣೆಗಳು, ರೂಢಿ ಸಂಪ್ರದಾಯಗಳು ಆಪ್ತವಾಗದ ವಿಷಾದ ಗೀತೆಗ ಳಂತೆ ಕೇಳುತ್ತಿವೆ.

ನಂತರ ಜಾತಿ ಸೃಷ್ಟಿಗೆ ಮೇಲಿನ ಅನುಕೂಲವನ್ನು ಅಮಲು ಮಾಡಲು 'ಜಾತಿ'ಯನ್ನು ತಂದದ್ದು, ಈ ಜಾತಿ ಯನ್ನು ಸೃಷ್ಟಿಸಲು ಮೂಲ ಕಾರಣ ಬ್ರಾಹ್ಮಣರು ಸಮಾಜ ದಲ್ಲಿ ತಾವು ಎಲ್ಲರಿಗಿಂತ ಮೇಲೆ ಎಂಬ ಪರಮಾಧಿ ಕಾರವನ್ನು ಸ್ಥಾಪಿಸಲು. ಇದರಿಂದ ಅಸ್ಪೃಶ್ಯರಿಗಷ್ಟೇ ಅಲ್ಲ ಉಳಿದೆಲ್ಲಾ ಜಾತಿಗಳಿಗೆ ಅನ್ಯಾಯವಾಗಿರುವುದೂ ನಿಜ. ಆದರೆ 'ಬ್ರಾಹ್ಮಣರ ಮೇಲೆ ಹಗೆತನ ಸಾಧಿಸುವುದಕ್ಕಿಂತ ಬೇರೆ ಮಾರ್ಗದ ಮೂಲಕ ದಲಿತರ ಬಿಡುಗಡೆಯನ್ನು ಕುರಿತು ಆಲೋಚಿಸುವುದು ಅಗತ್ಯ;

ಈ 'ಬಿಡುಗಡೆ'ಯನ್ನು ಅಕ್ಷರಗಳ ಮೂಲಕ ಪಡೆ ಯುವುದು ಕಷ್ಟ ಸಾಧ್ಯ, ಏಕೆಂದರೆ ಲಿಖಿತ ಪರಂಪರೆ ಮೇಲು ವರ್ಗದವರ ಸೊತ್ತಾಗಿದ್ದುದರಿಂದ (ಅಂದು–ಈಗ ಕಾಲಬದಲಾಗಿದೆ) ಮತ್ತು ಅದರಲ್ಲಿ ದಲಿತರು ಪ್ರವೇಶಿಸ ದಂತೆ ಬ್ರಾಹ್ಮಣರು ತಡೆಯೊಡ್ಡಿದ್ದರಿಂದ ದಲಿತರು ಮೌಖಿಕ ಪರಂಪರೆಯಲ್ಲಿ ತಮ್ಮನ್ನು ಸೃಷ್ಟಿಸಿಕೊಂಡರು. ಮೌಖಿಕ ಪರಂಪರೆಯಲ್ಲಿ ಉಳಿದು ಬಂದಿರುವ ಜೀವನ ವಿಧಾನ, ನಂಬಿಕೆ, ಆಚರಣೆಗಳನ್ನು ಅನ್ವಯಿಕ ದೃಷ್ಟಿಯಲ್ಲಿ ಅಧ್ಯಯನ ಮಾಡಬೇಕಿದೆ. ಆ ಮೂಲಕ ದಮನಕ್ಕೊಳ ಗಾದ ಪರ್ಯಾಯ ಸಂಸ್ಕೃತಿಯ ಆವಿಷ್ಕಾರ ಸಾಧ್ಯ. ಇದನ್ನು ವಿದ್ಯಾಭ್ಯಾಸ (ಅಕ್ಷರಗಳ)ದ ಮುಖಾಂತರ ಸಾಧಿ ಸಲು ಹೊರಟ್ಟಿದ್ದೇ ಆದರೆ ದಲಿತರೊಳಗೆ ವಿದ್ಯಾವಂತ ನವ ಬ್ರಾಹ್ಮಣರು ಅಥವಾ ಮಡಿವಂತ ಬ್ರಾಹ್ಮಣರು ಸೃಷ್ಟಿಯಾ ಗುತ್ತಾರೆ. ಅದಕ್ಕೆ ಅದನ್ನು ಮೌಖಿಕ ಪರಂಪರೆಯ ಮುಖಾಂತರವೇ ಸಾಧಿಸುವುದು ಒಳ್ಳೆಯದು.

ಆಪ್ತವಾಗದೆ ಹೋದ ದಲಿತ ಸಂಸ್ಕೃತಿಯ ವಿಷಾದ ಗೀತೆಯ ಸಾಲುಗಳು:

ಇಪ್ಪತ್ತನೆಯ ಶತಮಾನವು ಅಲಕ್ಷಿತ ಸಮುದಾ ಯಗಳ ಮುಂದೆ ಬಹುರೂಪಿಯಾದಂತಹ ವೈಚಾರಿಕ ಆಕೃತಿಗಳನ್ನು ಇಟ್ಟು ಮುಂದೆ ಸಾಗಿದೆ. ದಲಿತ ಚಿಂತ ನೆಯು ಅವುಗಳ ಮೂಲಕವೆ ತಮ್ಮ ತಾತ್ವಿಕತೆಯನ್ನು ಪುನರ್ ನಿರ್ಮಿಸಿಕೊಳ್ಳುವುದು ಅನಿವಾರ್ಯ. ಆಧುನಿ ಕೋತ್ತರ ಭಾರತದ ವೇಗದ ಮುಂದೆ ದಲಿತ ಸಮುದಾ ಯಗಳ ವಿಮುಕ್ತಿಯ ವಿರಾಟ್ ಕಥನವು ಈಗ ತಾನೆ ಬೇರೊಂದು ನೆಲೆಗೆ ಬಂದು ನಿಂತಿದೆ. ಅಂಬೇಡ್ಕರ್ ಹಾಕಿದ ತಳಹದಿಯ ಮೇಲೆ ಸಾಗಿದ ದಲಿತ ಸಮಾಜವು ಈ ಹೊತ್ತಿನ ಜಗದ ಬೇರೆ ಬೇರೆ ಒತ್ತ ಡಗಳ ನಡುವೆ ಬೌದ್ಧಿಕವಾದ ಆಹಾರವನ್ನು; ತನ್ನ ಸಂಸ್ಕೃತಿ ಮತ್ತು ದಲಿತ ಪರಂಪರೆಗಳ ಮೂಲಕವೆ ಸೃಷ್ಟಿಸಿಕೊಳ್ಳ ಬೇಕಾದ್ದಿದೆ. ಇಂತಹ ಅನಿವಾರ್ಯ ಸಂದರ್ಭದಲ್ಲಿ ದಲಿತ ಸಮುದಾಯದ ಒಡಲಲ್ಲಿರುವ ಕೆಲವು ಆಚರಣೆಗಳು, ರೂಢಿ ಸಂಪ್ರದಾಯಗಳು ಆಪ್ತವಾಗದ ವಿಷಾದ ಗೀತೆಗ ಳಂತೆ ಕೇಳುತ್ತಿವೆ. ಅವು:

೧. ವೈಜ್ಞಾನಿಕವಾಗಿ ಮುಂದುವರೆದಿರುವಂತಹ ಇಂತಹ ಹೊತ್ತಿನ ಆಧುನಿಕ ಭಾರತದಲ್ಲಿ ಸಂಸ್ಕೃತಿಗೆ ಮತ್ತು ಕುಲಾಚಾರಕ್ಕೆ ಕಟ್ಟುಬಿದ್ದು ತನ್ನ ಸಮುದಾಯಕ್ಕೆ ಬಂದಿರುವಂತಹ ಕಸುಬು ಎಂಬಂತೆ ನಿರ್ವಹಿಸಿಕೊಂಡು ಬರುತ್ತಿರುವ 'ದೇವದಾಸಿ' ಪದ್ಧತಿ.

೨. ಕೋಣವನ್ನು ಜಾತಿ ಸೂಚಕ ಪವಿತ್ರ ಆಚರಣೆ ಎಂದು ಬಿಂಬಿಸಿಕೊಂಡು ಬಂದಿರುವಂತಹ ಕೋಣ ಬಲಿ ಪ್ರಸಂಗ (ಉತ್ತರ ಕರ್ನಾಟಕದ ಬಹುಪಾಲು ಕಡೆ ಈಗಲೂ ಚಾಲ್ತಿಯಲ್ಲಿದೆ)

೩. ಸತ್ತವರಿಗೆ ಗುಂಡಿ ತೋಡುವುದು, ಮಲ

ಹೊರುವುದು, ಸತ್ತ ಪ್ರಾಣಿಗಳನ್ನು ತೊಲಗಿಸುವಂತಹ ಮತ್ತು ಇನ್ನಿತರ ಕೆಲವೊಂದು ಕುಲಕಸುಬುಗಳು.

ಇಂತಹ ಕೆಲವೊಂದು ಅಮಾನವೀಯ ಆಚರಣೆಗಳು ದಲಿತ ಸಂಸ್ಕೃತಿಯೊಳಗಿನ 'ಅಸ್ಪೃಶ್ಯ ಆಚರಣೆ'ಗಳಿವೆ. ಮೊದಲಿಗೆ ಇವು ಮೂಲ ಸಂಸ್ಕೃತಿಯೊಳಗಿನಿಂದ ಹೊರ ಹೋಗಬೇಕು. ಇಲ್ಲವಾದರೆ ಮೂಲ ಮೌಖಿಕ ಪರಂಪರೆಯೊಳಗಿನ ದಲಿತ ಸಂಸ್ಕೃತಿಯು ಬೆಳಕಾಗುತ್ತ (ಬ್ರಾಹ್ಮಣರ ದೃಷ್ಟಿಯಲ್ಲಿ) ಬೆಂಕಿಯಾಗು (ದಲಿತರಿಗೆ)ವುದರಲ್ಲಿ ಎರಡು ಮಾತಿಲ್ಲ.

ಇಂತಹ ಅಮಾನವೀಯ ಕೆಲವು ಸಂಸ್ಕೃತಿ ಆಚರಣೆಗಳಿಂದ ಮೂಲ ಸಂಸ್ಕೃತಿಗೆ ಧಕ್ಕೆಯಾಗುವುದು ಮಾತ್ರವಲ್ಲದೆ ಅದರ ಅರಿವು ಯಾತನೆಯುತವಾಗಿ ಕೂಡಿರುತ್ತದೆ. ಏಕೆಂದರೆ ಈ ನೆಲದ ಆಕ್ರಮಣಶೀಲ ಸಂಸ್ಕೃತಿಯ ಆತ್ಮರತಿ ಪ್ರಲಾಪಗಳ ಸುದೀರ್ಘ ಇತಿಹಾಸದಲ್ಲೂ ಹೆಚ್ಚು ಸದ್ದಿಲ್ಲದೆ ತರಗೆಲೆಗಳಂತೆ. ತಲೆಮಾರಿನಿಂದ ತಲೆಮಾರಿಗೆ ನೆತ್ತರ ಒಳ ಮಾರ್ಗಗಳ ಮೂಲಕ ತಮ್ಮ ಮೌಖಿಕ ಜಾನಪದ ಪುರಾಣ ಜಗತ್ತಿಗೆ ಜೀವ ತೆರೆಯುತ್ತ ಸಾಗಿಬಂದವರು ದಲಿತರು. ಆದರೆ ಸಾಂಸ್ಕೃತಿಕವಾಗಿ ಸಾಮಾಜಿಕವಾಗಿ ಕುತೂಹಲದ ಆಯಾಮಗಳನ್ನು ಪಡೆದುಕೊಳ್ಳುವ ಈ ತರಗೆಲೆಯ ಅಡಿಯಲ್ಲಿ ಜತನವಾಗಿ ಕಾಪಾಡಿಕೊಂಡು ಬಂದಿರುವ ಆದಿಮೂಲದ ಶಾಖೆವಿದೆ: ಆಕ್ರಮಣಶೀಲ ಸಂಸ್ಕೃತಿ ಸೃಷ್ಟಿಸಿರುವ (ಮೇಲಿನ ಅಮಾನವೀಯ ಪವಿತ್ರ ಆಚರಣೆಗಳು) ಶಿಷ್ಟಪುರಾಣಗಳನ್ನು ಈ ಜಾನಪದೀಯ ಮುಗ್ಧ ಪುರಾಣಗಳು ಅತ್ಯಂತ ಮಾನವೀಯ ಸ್ತರಗಳಲ್ಲಿ ಅಪಮೌಲ್ಯಗೊಳಿಸಿ ಬಿಡುತ್ತವೆ. ಇಂತಹ ಈ ಸಂದಿಗ್ಧತೆಗಳ ನಡುವೆ ಸಂಸ್ಕೃತಿಯ ಕೆಲವೊಂದು ಆಚರಣೆಗಳನ್ನು ಕೈಬಿಡಬೇಕಾಗುತ್ತದೆ.

ಈಗ ಮೂಲಕ್ಕೆ ಬರೋಣ ಮೊದಲೇ ತಿಳಿಸಿದಂತೆ ಸಂಸ್ಕೃತಿಯ ಮೂಲ ಪುರುಷರೆನಿಸಿಕೊಂಡ ದಲಿತರು ಒಂದು ಕಡೆ ದೌರ್ಜನ್ಯಕ್ಕೆ ಒಳಗಾಗುತ್ತ ಅಪಮಾನಕ್ಕೆ ಗುರಿಯಾಗುತ್ತ ಎದುರಾಗುತ್ತಾರೆ. ಈಗ ನಮ್ಮ ಮುಂದಿರುವ ಸವಾಲೆಂದರೆ, ದಲಿತರ ಬದುಕನ್ನು ಸುತ್ತುವರೆದಿರುವ ಸಂಕೋಲೆಗಳನ್ನು ಮುರಿದೊಗೆಯುವುದು, ತಾತ್ಸಾರಕ್ಕೆ ಒಳಗಾದ ಬಿರುಕನ್ನು ಮೇಲೆತ್ತಿ ಗೌರವಿಸುವುದು. ಅದಕ್ಕಾಗಿ ದಲಿತ ಸಂಸ್ಕೃತಿ ಪರಂಪರೆಯನ್ನು ಸ್ಥೂಲವಾಗಿ ೨ ಭಾಗಗಳನ್ನಾಗಿ ಮಾಡಿಕೊಳ್ಳಬಹುದು.

೧. ಸಾಮಾಜಿಕ ಪ್ರತಿಭಟನೆಯ ನೆಲೆಯದ್ದು, ಮತ್ತು

೨. ಇನ್ನೊಂದು ಅನುಭಾವದ ನೆಲೆಯದ್ದು.

ಈ ಎರಡೂ ನೆಲೆಗಳಲ್ಲಿ ದಲಿತ ಸಂಸ್ಕೃತಿಯ ಪರಾಮರ್ಶೆಯನ್ನು ಗಮನಿಸಬೇಕಾಗುತ್ತದೆ. ಇದರಲ್ಲಿ ಮೊದಲನೆಯದು ವಾಸ್ತವ ಮಾರ್ಗಕ್ಕೆ ಸೇರಿದ್ದಾದರೆ ಎರಡನೆಯದು ಸಾಂಕೇತಿಕ ಮಾರ್ಗಕ್ಕೆ ಸೇರಿದ್ದು. ಅದರಲ್ಲಿ ಮೊದಲನೆಯ ಮಾರ್ಗ ಅಂಬೇಡ್ಕರ್, ಬುದ್ಧ, ಗಾಂಧಿಯ ವಿಚಾರಧಾರೆಯನ್ನು ಅವಲಂಭಿಸುತ್ತದೆ. ಹೇಗೆಂದರೆ–

೧. ಇವತ್ತಿನ ದಲಿತ ಚಿಂತನೆಗೆ ಪ್ರಾಚೀನ ಪೂರ್ವಿಕರ ಸಂವೇದನೆಯ ಪ್ರತಿಬಿಂಬವಿದೆ. ಈ ಬಿಂಬವು ಬುದ್ಧನಲ್ಲಿ ಮರುಕಳಿಸಿ ಅದು ಗಾಂಧಿ, ಅಂಬೇಡ್ಕರ್‌ರಲ್ಲೂ ಲೀನವಾಗಿ ಆಧುನಿಕ ಭಾರತದ ಸಂವಿಧಾನದಲ್ಲಿ ಅಂಬೇಡ್ಕರ್ ಮೂಲಕ ಪ್ರತಿ ಸೃಷ್ಟಿಯಾಗಿರುತ್ತದೆ. ಆ ಅರ್ಥದಲ್ಲಿ ಅಂಬೇಡ್ಕರ್ ವೈಚಾರಿಕ ಪರಂಪರೆಯ ಅತ್ಯಂತ ಶ್ರೇಷ್ಠ ಚಿಂತಕ. ಬಹಿಷ್ಕೃತ ಭಾರತದ ಸಮಷ್ಟಿ ಆಕೃತಿಗಳು ಅಂಬೇಡ್ಕರ್ ಅವರ ಚಿಂತನೆಯಲ್ಲಿ ನಿಚ್ಚಳವಾಗಿ ಕಾಣಿಸಿಕೊಂಡದ್ದು.

ಬೌದ್ಧ ಧರ್ಮದಂತಹ ಸಂಸ್ಕೃತಿಯೊಳಗೆ ಬುದ್ಧನ ಒಂದು ವೈಚಾರಿಕ ತತ್ವ 'ಕ್ರಾಂತಿ'ಕಾರಿಯಾಗಿರಲಿಲ್ಲ ಅದೊಂದು ದೇಸೀಯ ಸಂವೇದನೆಯ ಆದರ್ಶವದಾಗಿತ್ತು. ಹೇಗೆಂದರೆ ಆಕ್ರಮಣಗಳು ಗೆಲ್ಲುತ್ತವೆಯೇ ಹೊರತು ಆದರ್ಶಗಳಲ್ಲ ಎಂಬುದನು ಚರಿತ್ರೆಯ ಅನುಭ'ವದಿಂದ ನಮಗೆಲ್ಲ ತಿಳಿದಿದೆ. ಈ ನಿಟ್ಟಿನಲ್ಲಿ ಅಶೋಕನ ಕಳಿಂಗ ಯುದ್ಧವನ್ನು ಬುದ್ಧನ ಆದರ್ಶ ಗೆದ್ದುಕೊಂಡಿ ತಾದರೂ ಅದು ಅಂತಿಮ ಗೆಲವಾಗಿರಲಿಲ್ಲ. ಆದ್ದರಿಂದ ಬೌದ್ಧ ಧರ್ಮದಲ್ಲಿದ್ದದ್ದು ನೊಂದವರ ತಬ್ಬಲಿಗಳ ಹತಾಶೆಯ ಕೊನೆ ಮೆಟ್ಟಲಿನವರ ದಿಕ್ಕಿಲ್ಲದ ಅಸಹಾಯಕ ಆತ್ಮ ದನಿಗಳ ಸಾಭಿಯಿಂದ ಹೊರದ ಆಶಯಗಳಿದ್ದವೇ ಹೊರಟ ಯಾವುದೇ ಸಾಂಸ್ಕೃತಿಕ ಯಜಮಾನ್ಯವನ್ನು ತನ್ನೊಡಲಲ್ಲಿ ಇಟ್ಟುಕೊಂಡ ಆಕ್ರಮಣ ಶೀಲ ಗುಣವಲ್ಲ.

ಉಳಿದ ಅವರ ಸಮಕಾಲೀನರ್ಯಾರಲ್ಲೂ ಕಾಣಲಾಗದು.

೨. ಅಂಬೇಡ್ಕರ್ ಆಲೋಚನೆಯಲ್ಲಿ ಮೂಲ ಮಾತೃಕೆಯ ಗುಣದ ಗ್ರಹಿಕೆಯ ಮರದ ಆಳದ ತಾಯಿ ಬೇರಿನ ಕಥನಗಳಿದ್ದರೆ ಗಾಂಧಿಯಲ್ಲಿ ಮತ್ತವರ ಚಿಂತನೆಗಳಲ್ಲಿ ಸುಂದರ ವೃಕ್ಷದ ರೆಂಬೆ ಕೊಂಬೆಗಳ ವಿವರವಿದೆ: ಅದಕ್ಕೆ ಗಾಂಧಿಯ ಗ್ರಹಿಕೆಗಳಲ್ಲಿ ಅನೇಕರು ಏರುಪೇರು ವೈರುಧ್ಯ ಕಂಡರೂ ಅಂತಿಮವಾಗಿ ಗಾಂಧಿ ಕೂಡ ಮಲ ಹೊರುವ ದಲಿತನ ಜತೆ ಮಲ ಬಳಿದು ಅವನೊಟ್ಟಿಗೆ ಬೆರೆತು ಅಂತಿಮ ವಾಗಿ ಅಗಾಧವಾದ ಮಾನವೀಯ ಹಸಿವನ್ನು ತೋರು ವಲ್ಲಿ ಗಾಂಧಿಯ ಒಟ್ಟು ಚಿಂತನೆಯ ಆಳದಲ್ಲಿ ಯಾವುದೋ ಕಾಲದ ನಮ್ಮ ಒಬ್ಬ 'ಭಂಗಿ' ಕುಳಿತು ಆಲೋಚಿಸುತ್ತಿರುವಂತೆ ಕಾಣುತ್ತದೆ.

೩. ಬೌದ್ಧ ಧರ್ಮದಂತಹ ಸಂಸ್ಕೃತಿಯೊಳಗೆ ಬುದ್ಧನ ಒಂದು ವೈಚಾರಿಕ ತತ್ವ 'ಕ್ರಾಂತಿ'ಕಾರಿಯಾಗಿರಲಿಲ್ಲ ಅದೊಂದು ದೇಸೀಯ ಸಂವೇದನೆಯ ಆದರ್ಶವದಾಗಿತ್ತು. ಹೇಗೆಂದರೆ ಆಕ್ರಮಣಗಳು ಗೆಲ್ಲುತ್ತವೆಯೇ ಹೊರತು ಆದರ್ಶಗಳಲ್ಲ ಎಂಬುದು ಚರಿತ್ರೆಯ ಅನುಭವದಿಂದ ನಮಗೆಲ್ಲ ತಿಳಿದಿದೆ. ಈ ನಿಟ್ಟಿನಲ್ಲಿ ಅಶೋಕನ ಕಳಿಂಗ ಯುದ್ಧವನ್ನು ಬುದ್ಧನ ಆದರ್ಶ ಗೆದ್ದುಕೊಂಡಿತಾದರೂ ಅದು ಅಂತಿಮ ಗೆಲುವಾಗಿರಲಿಲ್ಲ. ಆದ್ದರಿಂದ ಬೌದ್ಧಧರ್ಮದಲ್ಲಿದ್ದದ್ದು ನೊಂದವರ ತಬ್ಬಲಿಗಳ ಹತಾಶೆಯ ಕೊನೆ ಮೆಟ್ಟಲಿನವರ ದಿಕ್ಕಿಲ್ಲದ ಅಸಹಾಯಕ ಆತ್ಮ ದನಿಗಳ ಸಾಭಿಯಿಂದ ಹೊರಟ ಆಶಯಗಳಿದ್ದವೇ ಹೊರತ ಯಾವುದೇ ಸಾಂಸ್ಕೃತಿಕ ಯಜಮಾನ್ಯವನ್ನು ತನ್ನೊಡಲಲ್ಲಿ ಇಟ್ಟುಕೊಂಡ ಆಕ್ರಮಣ ಶೀಲ ಗುಣವಲ್ಲ. ಅದಕ್ಕೆ ಬುದ್ಧ ದಲಿತ ಚಿಂತನೆಯ ಮೊದಲ ಗುರು.

ಎರಡನೆಯದು ಈ ನೆಲದ ಸಂತರ ಪರಂಪರೆಯನ್ನು ಆಧರಿಸುವಂಥದ್ದು. ಮೊದಲನೆಯದು ಸಾಮಾಜಿಕ, ರಾಜಕೀಯ ಆಯಾಮಗಳಿಗೆ ಹೆಚ್ಚು ಒತ್ತು ಕೊಟ್ಟರೆ, ಎರಡನೆಯದು ಸಂಸ್ಕೃತಿಗೆ ಸಂಬಂಧಿಸಿದ್ದು, ಅಂದರೆ ಪುರಾಣ ಪರಂಪರೆಗೆ. ಅಲಿಖಿತ ಪರಂಪರೆಗೆ ಒತ್ತು ಕೊಡುತ್ತದೆ. ಇವರಲ್ಲಿ ಮುಖ್ಯವಾಗಿ ಬೇರಿಕೆ ಬುಟ್ಟಪ್ಪ ಚೌಡದೇನಹಳ್ಳಿ ದ್ಯಾವಣ್ಣ, ಲಕ್ಕೂರು ಕೃಷ್ಣಪ್ಪ (ಕೃಷ್ಣಸ್ವಾಮಿ). ಚೂಡಗೊಂಡನಹಳ್ಳಿ ರಾಮಲಿಂಗಪ್ಪ, ದೊಡ್ಡಿ ವೆಂಕಟಗಿರಿಯಪ್ಪ ಮತ್ತು ಗಟ್ಟಹಳ್ಳಿ ಆಂಜನಪ್ಪ (ಎಲ್ಲರೂ ಕೋಲಾರ ಜಿಲ್ಲೆಗೆ ಸಂಬಂಧಿಸಿದ ಅನುಭಾವಿ ಸಂತರು) ಮುಂತಾದವರು, ಇವರೆಲ್ಲಾ ಸಂಸ್ಕೃತಿಯೊಳಗಿನ ಸತ್ವದ ಶಾಖ ಮತ್ತು ವಿವೇಕಗಳ ನಮ್ಮ ಸಂಕೀರ್ಣ ಸಂದರ್ಭದ ಸಾಂಸ್ಕೃತಿಕ ಬಿಕ್ಕಟ್ಟುಗಳನೇಕವಕ್ಕೆ ಸಿದ್ದ ಉತ್ತರಗಳಾಗುವಂತಹವರು.

ದಲಿತ ಸಂಸ್ಕೃತಿ ಮತ್ತು ಅನುಭಾವದ ಕುರಿತಾದ ಪಾಶ್ಚಾತ್ಯ ಚಿಂತರಿಬ್ಬರ ಅಭಿಪ್ರಾಯವನ್ನು ಈ ನೆಲೆಯಲ್ಲಿ ಗ್ರಹಿಸುವುದು ಬಹಳ ಮುಖ್ಯವೆನಿಸುತ್ತದೆ.

'The orient, orientalism, and orientalia'ಗೆ ಸಂವಾದಿಯಾಗಿ ಮರು ವಿವರಣೆಯನ್ನು ಓಕಶೂಟ್‌ನ ಮಾತುಗಳಲ್ಲಿ ಗಮನಿಸಬಹುದು.

"The moment historical facts are regarded as instances of general laws, history is dismissed"

-Experience and its modes

(London cambridge university press-1933)

ಹಾಗೆ ಇನ್ನೊಬ್ಬ ಪಾಶ್ಚಾತ್ಯ ಸಂಸ್ಕೃತಿ ಚಿಂತಕನಾದ ವಿಲಿಯಂ ಎಚ್. ಗ್ರೆಯನದು – for history the object to bediscovered in not mere evernt but the thought expressed in it. To discover that thought is already to understand it -Willium H Gray: philosphy of History (Foundations of philosophy Series-1964)

ಸಂಸ್ಕೃತಿಯೊಳಗಿನ ಸಾಮಾಜಿಕ ಮುಖಾಮುಖಿ:

ಈಗ ದಲಿತ ಸಂವೇದನೆಯನ್ನು ಸಾಮಾಜಿಕ ನೆಲೆಯಲ್ಲಿ ನೆನಪಿಸಿಕೊಂಡರೆ ದಲಿತನಾದವನಿಗೆ ಈ ಅರಿವು ಸಂತೋಷದಾಯಕವಾದದ್ದೇನೂ ಅಲ್ಲ. ನನ್ನ ಪ್ರಕಾರ ಅತ್ಯಂತ ಯಾತನಾಮಯವಾದುದು. ದಲಿತರ ಪಾಲಿಗೆ ಈ ತಿಳವಳಿಕೆ 'ಉರಿಯುವ ಪಂಜು' ಆದರೆ ಇನ್ನಿತರರಿಗೆ:

೧. ಒಬ್ಬ ಬ್ರಾಹ್ಮಣನಿಗಾದರೆ ತನ್ನ ಚರಿತ್ರೆಯನ್ನು ನೆನಪಿಸಿಕೊಂಡರೆ ವೇದ, ಉಪನಿಷತ್, ಭಗವದ್ಗೀತೆ, ವಿದ್ವಾಂಸರು ಮತ್ತು ಅನೇಕ ರಾಜ, ಮಹಾರಾಜರುಗಳು ಅವರ ಕಾಲಿಗೆ ಬೀಳುತ್ತಿದ್ದರು ಮತ್ತು ಉದ್ದಕ್ಕೂ ಬಾಳೆಎಲೆ ಹಾಸಿಕೊಂಡು ಉಂಡದ್ದು ಇವೆಲ್ಲಾ ಸಂತೋಷದಾಯಕ ನೆನಪುಗಳಾಗುತ್ತವೆ.

೨. ಒಬ್ಬ ಲಿಂಗಾಯತನಿಗೆ ತನ್ನ ಚರಿತ್ರೆಯನ್ನು ನೆನಪಿಸಿಕೊಂಡರೆ ವಚನಕಾರರು, ಬಸವಣ್ಣ, ಮಠಗಳು ಇವೆಲ್ಲಾ ಸಂತೋಷ ಕೊಡುವಂಥವು

೩. ಒಬ್ಬ ಕ್ರಿಶ್ಚಿಯನ್‌ಗೆ ತನ್ನ ಚರಿತ್ರೆಯ ನೆನೆದು: ಕ್ರಿಸ್ತ, ತ್ಯಾಗ, ಪ್ರೀತಿ ಮುಂತಾದುವೆಲ್ಲಾ ಹೆಮ್ಮೆಯನ್ನುಂಟು ಮಾಡುವಂಥವೇ ಆಗಿವೆ.

೪. ದಲಿತನಿಗೆ: ಅವನಿಗೆ ತನ್ನ ಪರಂಪರೆಯ ಅರಿವಾಗುವುದು ಅಂದರೆ ಮತ್ತೊಮ್ಮೆ ಯಾತನಾಮಯ ಪುನರಾನುಭವವೇ ಹೊರತು ಬೇರೊಂದಿಲ್ಲ.

(ಮುಂದುವರೆಯುವುದು)

ದಲಿತ ವೀರನಾರಿಯರು ಮತ್ತು ೧೮೫೭ರ ಮರುಕಥನಗಳು

(ಕಳೆದ ಸಂಚಿಕೆಯಿಂದ)

ಲಕ್ನೋದ ಉಜ್ರಿಯಾವ್ ಗ್ರಾಮದಲ್ಲಿ ಉದಾದೇವಿ ಜನಿಸಿದಳು ಎನ್ನಲಾಗಿದೆ. ಜಗ್ರಾಣಿ ಎಂಬ ಇನ್ನೊಂದು ಹೆಸರನ್ನು ಹೊಂದಿದ್ದ ಈಕೆ ಮಕ್ಕ ಪಾಸಿ ಎಂಬಾತನನ್ನು ಮದುವೆಯಾಗಿದ್ದಳು. ಬೇಗಂ ಹಜ್ರತ್ ಮಹಲಳ ಜತೆಗೂಡಿದ ಈಕೆ ತನ್ನ ನಾಯಕತ್ವದಲ್ಲಿ ಮಹಿಳಾ ಸೈನ್ಯವನ್ನು ಕಟ್ಟಿದಳು. ಚಿನ್ನತ್ ಕಾಳಗದಲ್ಲಿ ಈಕೆಯ ಪತಿ ಹುತಾತ್ಮನಾದನು. ಪತಿಯ ಹತ್ಯೆಗೆ ಸೇಡು ತೀರಿಸಿಕೊಳ್ಳಲು ನಿರ್ಧರಿಸಿದ ಉದಾ, ಬ್ರಿಟಿಷರು ಕ್ಯಾಂಪ್‌ಬೆಲ್ ನೇತೃತ್ವದಲ್ಲಿ ಲಕ್ನೋ ಮೇಲೆ ದಾಳಿ ನಡೆಸಿದಾಗ ಪ್ರತಿರೋಧ ಒಡ್ಡಿದ ದಲಿತ ಮಹಿಳೆಯರ ಸೈನ್ಯದ ನಾಯಕತ್ವ ವಹಿಸಿದಳು.

ಕೋಯಿ ಉಸ್ಕೋ ಹಬ್ಸಿನ್ ಕೆಹ್ತಾ, ಕೋಯಿ ಕೆಹ್ತಾ ನೀಚ್ ಅಚೂತ್.
ಅಬ್ಲಾ ಕೋಯಿ ಬತ್ಲಾಯೆ, ಕೋಯಿ ಕಹೇ ಉಸ್ಸೆ ಮಜ್‌ಬೂತ್.

(ಕೆಲವರು ಅವರನ್ನು ಆಫ್ರಿಕದ ಕಪ್ಪು ಹೆಂಗಸರೆಂದು ಕರೆದರೆ,
ಕೆಲವರು ಅಸ್ಪೃಶ್ಯರೆಂದು ಕರೆದರು,
ಕೆಲವರು ಅಶಕ್ತರೆಂದರೆ, ಮತ್ತೆ ಕೆಲವರು
ಬಲಶಾಲಿಗಳೆಂದರು.)

ಸಿಕಂದರ್ ಬಾಗ್ ಮೇಲೆ ಬ್ರಿಟಿಷರ ದಾಳಿ ಕುರಿತು ಡಬ್ಲ್ಯೂ. ಗಾರ್ಡನ್ ಮತ್ತು ಅಲೆಕ್ಸಾಂಡರ್ ಬರೆದ ವರದಿ ಈ ರೀತಿ ಇದೆ:

ಜತೆಗೆ... ಕೊಲೆಗೀಡಾದವರಲ್ಲಿ ಕೆಲವು ಅಮೇಜ್ಞಾನ್ ನಿಗ್ರೆಸ್‌ಗಳು ಇದ್ದರು. ಮಹಮದೀಯರ ಧರ್ಮ ಪಾಲಿಸಿದರೂ ಈ ಅಮೇಜ್ಞಾನ್‌ಗಳಿಗೆ ಹಂದಿ ಅಥವಾ ಇತರ ಯಾವುದೇ ಪ್ರಾಣಿಯ ಮಾಂಸ ಲೇಪಿತ ಮದ್ದು ಗುಂಡುಗಳನ್ನು, ಕೋವಿಗಳನ್ನು ಬಳಸಲು ಯಾವುದೇ ಧಾರ್ಮಿಕ ಅಡೆತಡೆಗಳಿರಲಿಲ್ಲ. ಇವರ ಬಳಿ ರೈಫಲ್‌ಗಳಿದ್ದವು. ಹಿಂದೂಗಳು ಮತ್ತು ಪೂರ್ವ ಭಾರತದ ಮಹಮದೀಯರು ಮಸ್ಕೆಟ್‌ಗಳಿಂದ ಸುಸಜ್ಜಿತರಾಗಿದ್ದರು; ಅವರೆಲ್ಲರೂ ಹುಲಿಗಳಂತೆ ಹೋರಾಡಿದರು. ಅವರೆಲ್ಲರನ್ನು ಕೊಲ್ಲುವವರೆಗೂ ಅವರ್‍ಯಾರೂ ಹೆಂಗಸರೆಂದು ಗುರುತಿಸಲೂ ಆಗಿರಲಿಲ್ಲ.

ಇವರಲ್ಲಿ ಉದಾದೇವಿ ಕೂಡ ಒಬ್ಬಳು. ಅರಳಿ ಮರವನ್ನೇರಿದ ಈಕೆ ಕೆಲವು ಮೂಲಗಳ ಪ್ರಕಾರ ೩೨ ಮತ್ತು ಕೆಲವು ಮೂಲಗಳ ಪ್ರಕಾರ ೩೬ ಮಂದಿ ಬ್ರಿಟಿಷ್ ಸೈನಿಕರನ್ನು ಕೊಂದಳು ಎನ್ನಲಾಗಿದೆ. ಮರದ ಮೇಲಿಂದ ಹೋರಾಡುತ್ತಿದ್ದ ವ್ಯಕ್ತಿಯನ್ನು ಗುರುತಿಸಿದ ಓರ್ವ ಸೈನಿಕ ಆ ವ್ಯಕ್ತಿಯನ್ನು ಕೊಂದನು. ಆ ವ್ಯಕ್ತಿ ಹೆಂಗಸೆಂದು ನಂತರವಷ್ಟೇ ತಿಳಿದಿದ್ದು. ಆಕೆಯ ಶೌರ್ಯ ಸಾಹಸವನ್ನು ಮೆಚ್ಚಿ ಕ್ಯಾಂಪ್‌ಬೆಲ್‌ನಂತಹ ಬ್ರಿಟಿಷ್ ಅಧಿಕಾರಿಗಳು ಆಕೆಯ ಪಾರ್ಥಿವ ಶರೀರದ ಮುಂದೆ ತಲೆ ಬಾಗಿ ನಮಿಸಿದರು.

ಆಶಾದೇವಿ ಗುರ್ಜರಿಯನ್ನು ಬಹಳಷ್ಟು ಸಂಖ್ಯೆಯ ಯುವತಿಯರು ಮತ್ತು ಮಹಿಳೆಯರ ನಾಯಕಿಯೆಂದು ಬಿಂಬಿಸಲಾಗಿದೆ. ೧೮೫೭ರ ಮೇ ೮ರಂದು ವಾಲ್ಮೀಕಿ ಮಹಾಬಿರಿದೇವಿ, ರಹೀಮಿ ಗುರ್ಜರಿ, ಭಗವಾನಿದೇವಿ, ಭಗವತಿದೇವಿ, ಹಬೀಬಾ ಗುರ್ಜರಿ, ಸೆಹೆಜಾ ವಾಲ್ಮೀಕಿ ಮತ್ತು ಶೋಭಾದೇವಿ ಜತೆಗೆ ಆಶಾದೇವಿ ಗುರ್ಜರಿ ಬ್ರಿಟಿಷ್ ಸೈನ್ಯದ ಮೇಲೆ ದಾಳಿ ಮಾಡಿ, ಹೋರಾಡಿ ಮಡಿದರು. ಅವಂತಿಬಾಯಿ ಕುರಿತ ಕಥನಗಳು ಇತಿಹಾಸ ಮತ್ತು ಸಾಹಿತ್ಯವನ್ನು ಒಂದುಗೂಡಿಸುತ್ತವೆ ಎನ್ನಲಾಗಿದೆ. ಮಧ್ಯಪ್ರದೇಶದ ಮಾಂಡ್ಲಾ ಜಿಲ್ಲೆಯ ಲೋಧಿ ಸಮುದಾಯಕ್ಕೆ ಸೇರಿದ ಈಕೆ ರಾಮಗಡದ ರಾಣಿಯಾಗಿದ್ದಳು. ೧೮೫೭ರಲ್ಲಿ ಈಕೆಯ ಮೇಲೂ ಬ್ರಿಟಿಷರ ಕೆಂಗಣ್ಣು ಬಿತ್ತು. ಬ್ರಿಟಿಷರು ರಾಮಗಡದ ಮೇಲೆ ದಾಳಿ ಮಾಡಿದಾಗ ತೀವ್ರ ಪ್ರತಿರೋಧ ಒಡ್ಡಿ ಹೋರಾಟ ಮಾಡಿದಳು. ಬ್ರಿಟಿಷರು ಈಕೆಯನ್ನು ಸುತ್ತುವರೆದಾಗ ಅವರಿಗೆ ಶರಣಾಗುವ ಬದಲಿಗೆ ಆತ್ಮಹತ್ಯೆ ಮಾಡಿಕೊಂಡಳು. ಬ್ರಿಟಿಷರು ಭಾರತವನ್ನು ತೊರೆದು ತಮ್ಮ ತಾಯ್ನಾಡಿಗೆ ತೆರಳಬೇಕೆಂಬುದು ಆಕೆಯ ಕೊನೆಯ ಆಸೆಯಾಗಿತ್ತು.

ಮುಜ಼ಾಫರ್‌ನಗರ ಜಿಲ್ಲೆಯ ಮುಂದಭಾರ್ ಗ್ರಾಮದಲ್ಲಿ ನೆಲೆಸಿದ್ದ ಮಹಾಬಿರಿದೇವಿ ಭಂಗಿ ಜನಾಂಗಕ್ಕೆ ಸೇರಿದವಳಾಗಿದ್ದಾಳೆ. ಅನಕ್ಷರಸ್ಥಳಾಗಿದ್ದರೂ ಬುದ್ಧಿವಂತಳಾಗಿದ್ದ ಈಕೆ ಚಿಕ್ಕಂದಿನಿಂದಲೂ ಎಲ್ಲ ರೀತಿಯ ದೌರ್ಜನ್ಯಗಳನ್ನೂ ವಿರೋಧಿಸುತ್ತಿದ್ದಳು. ಆಕೆ ಬಡವರಿಗಾಗಿಯೇ ಜನಿಸಿದ್ದಳು ಮತ್ತು ಅವರಿಗಾಗಿ ಹೋರಾಡಿದಳು. ಕಾಲ ಕಳೆದಂತೆ ಆಕೆಯ ಜನಪ್ರಿಯತೆ ಹೆಚ್ಚಾಗತೊಡಗಿತು. ಮಹಿಳೆಯರ ಸಂಘಟನೆಯೊಂದನ್ನು ಕಟ್ಟಿದ ಮಹಾಬಿರಿದೇವಿ, ಅದರ ಮೂಲಕ ಮಹಿಳೆಯರು ಮತ್ತು ಮಕ್ಕಳು ತುಚ್ಛ ಕೆಲಸಗಳನ್ನು ಮಾಡದೆ ಗೌರವಯುತವಾಗಿ ಬದುಕುವಂತೆ ಮಾಡುವ ಗುರಿ ಹೊಂದಿದ್ದಳು. ೧೮೫೭ರಲ್ಲಿ ೨೨ ಜನರ ಗುಂಪೊಂದನ್ನು ಕಟ್ಟಿಕೊಂಡು ಆಕೆ ಬ್ರಿಟಿಷರ ಮೇಲೆ ದಾಳಿ ಮಾಡಿದಳು. ಶೌರ್ಯದಿಂದ ಹೋರಾಡಿ ಬಹಳಷ್ಟು

ಬಹುತೇಕ ಎಲ್ಲಾ ದಲಿತ ವೀರನಾರಿಯರ ಹೆಸರಿನ ಕೊನೆಯಲ್ಲಿ 'ದೇವಿ' ಅಥವಾ 'ಬಾಯಿ' ಎಂಬ ಗೌರವ ಸೂಚಕ ಪದಗಳಿವೆ. ಇವರೆಲ್ಲರನ್ನು ಸುಗುಣ, ಸುಶೀಲರಾಗಿ ಅಷ್ಟೇ ಅಲ್ಲದೆ ಮಹಾನ್ ಶೌರ್ಯ ಪರಾಕ್ರಮಿಗಳು ಹಾಗೂ ಮಹಾನ್ ರಾಷ್ಟ್ರೀಯವಾದಿ ದಲಿತ ಮಹಿಳೆಯರು ಎಂದು ಬಿಂಬಿಸಲಾಗಿದೆ. ಇವರು ಶಕ್ತಿ ಸ್ವರೂಪಿಗಳು. ದಲಿತ ವೀರನಾರಿಯರನ್ನು ಕುರಿತ ಕಥನಗಳ ಕರಪತ್ರಗಳು ಮತ್ತು ಅವುಗಳ ಮುಖಪುಟಗಳಲ್ಲಿ, 'ಪುರುಷ'ರ ವಸ್ತ್ರಗಳಿಂದ ಪೂರ್ತಿ ದೇಹವನ್ನು ಮುಚ್ಚಿರುವ ದಲಿತ ಮಹಿಳೆಯರ ಚಿತ್ರಗಳು ರಾರಾಜಿಸುತ್ತವೆ. ಕುದುರೆ ಸವಾರಿ ಮಾಡುವ, ಈಜುವ, ಬಿಲ್ವಿದ್ಯೆ, ಕತ್ತಿ ವರಸೆಯಲ್ಲಿ ನಿರತರಾಗಿರುವ ದಲಿತ ವೀರನಾರಿಯರ ಚಿತ್ರಗಳು ಕಾಣಸಿಗುತ್ತವೆ.

ಮೂಲ: ಚಾರುಗುಪ್ತ
ಅನು: ಸತ್ಯಪ್ರಕಾಶ್ ಎಂ ಆರ್

ಮಂದಿ ಬ್ರಿಟಿಷರನ್ನು ಕೊಂದಳು. ಅಂತಿಮವಾಗಿ ಬ್ರಿಟಿಷರು ಮಹಾಬಿರಿದೇವಿ ಮತ್ತು ಆಕೆಯ ೨೨ ಮಂದಿ ಜತೆಗಾತಿಯರನ್ನು ಕೊಂದರು. ಆಕೆ ಶೌರ್ಯದ ಸಂಕೇತವಾಗಿ ಚಿರಾಯುವಾಗಿದ್ದಾಳೆ.

ಈ ಎಲ್ಲ ಕಥನಗಳಲ್ಲಿ ಕೆಲವು ಅಂಶಗಳು ಎದ್ದು ಕಾಣುತ್ತವೆ. ಬಹಳಷ್ಟು ಕಥನಗಳು, ಮೂಲೆಗುಂಪಾಗಲು ನಿರಾಕರಿಸುವ ದಲಿತ ಮಹಿಳಾ ಯೋಧರ ಮೇಲೆ ಕೇಂದ್ರೀಕೃತವಾಗಿವೆ. ಈ ಎಲ್ಲಾ ಕಥನಗಳಲ್ಲೂ ದಲಿತ ಮಹಿಳೆಯರು ಚಿಕ್ಕಂದಿನಿಂದಲೂ ಧೈರ್ಯಶಾಲಿಗಳೆಂದು ಚಿತ್ರಿಸಲಾಗಿದೆ. ಅವರು ಎಲ್ಲಾ ಅಡ್ಡಿ ಆತಂಕಗಳ ನಡುವೆಯೂ ಮಹತ್ವದ ಸಾಧನೆ ಮಾಡುವಂತಹ ಕಿಡಿ ಹಚ್ಚಿದ್ದು ೧೮೫೭ರ ಮನ್ವಂತರ ಕಾಲಮಾನ. ಆದರೆ, ದಲಿತ ವೀರನಾರಿಯರ ಧ್ವನಿ ಕ್ಷೀಣವಾದ ಗ್ರಾಂಥಿಕ ಸೆಲೆಗಳನ್ನು ಹೊಂದಿದೆ. ಏಕೆಂದರೆ ದಲಿತ ವೀರನಾರಿಯರ ಶೌರ್ಯ ಸಾಹಸಗಳನ್ನು ಕುರಿತ ಕಥನಗಳು ಮೌಖಿಕ ಪರಂಪರೆಯ ಮೂಲಕ, ಸರ್ಕಾರಿ ದಾಖಳೆಗಳು ಮತ್ತು ದಲಿತ ಪುರುಷರ ಮೂಲಕ ಬಂದಿವೆ. ಈ ಲೇಖಕರು, ಕಥನಗಳಲ್ಲಿರುವ ಲೋಪಗಳನ್ನು ಸರಿಪಡಿಸುತ್ತಾ ಸ್ಪಷ್ಟತೆ ಒದಗಿಸುವುದಲ್ಲದೆ, ವರ್ತಮಾನ ಕಾಲಕ್ಕೆ ಧುಮುಕಿ ಕಥನಗಳಿಗೆ ನಾಟಕೀಯ ಆಯಾಮ ಮತ್ತು ವಿವರಣೆಗಳನ್ನು ನೀಡುತ್ತಾರೆ. ಇಲ್ಲಿ ಭೂತ ಮತ್ತು ವರ್ತಮಾನಗಳ ಅಂತರವಳಿದು ಸಂಯೋಗವಾಗಿ ದಲಿತರ ಶೋಷಣೆ ಮತ್ತು ಶೋಷಣೆಯನ್ನು ದಿಟ್ಟವಾಗಿ ಎದುರಿಸಿದ ಮಹಿಳೆಯರ ಶೌರ್ಯದ ಕಥನ ಪ್ರಸ್ತುತವಾಗುತ್ತದೆ.

ಇವರಲ್ಲಿ ಬಹಳಷ್ಟು ದಲಿತ ವೀರನಾರಿಯರು ಯಾವುದಾದರೂ ಒಂದು ದಲಿತ ಜಾತಿಯ ಪ್ರತಿಷ್ಠೆಯ ಸಂಕೇತವಾಗಿ ಬಿಂಬಿತವಾಗುತ್ತಾರೆ. ಉದಾಹರಣೆಗೆ ಒಂದೆಡೆ ಉದಾದೇವಿ ಪಾಸಿ ಸಮುದಾಯದ ಗೌರವ, ಪ್ರತಿಷ್ಠೆ ಮತ್ತು ಶೌರ್ಯ, ಸಂಘಟನೆ ಮತ್ತು ಹಕ್ಕುಗಳ ಸಂಕೇತವಾಗಿದ್ದಾಳೆ. ಹಾಗೂ ಮತ್ತೊಂದೆಡೆ ತಮ್ಮ ಆಂತರಿಕ ಭೇದವನ್ನು ಮರೆತು ಎಲ್ಲ ದಲಿತರೂ ಝಲ್ಕಾರಿ ಬಾಯಿಯನ್ನು ದಲಿತ ಐಕ್ಯತೆಯ ಸಂಕೇತವಾಗಿ ಗೌರವಿಸುತ್ತಾರೆ.

ಬಹುತೇಕ ಈ ಎಲ್ಲಾ ದಲಿತ ವೀರನಾರಿಯರ ಹೆಸರಿನ ಕೊನೆಯಲ್ಲಿ 'ದೇವಿ' ಅಥವಾ 'ಬಾಯಿ' ಎಂಬ ಗೌರವ ಸೂಚಕ ಪದಗಳಿವೆ. ಇವರೆಲ್ಲರನ್ನು ಸುಗುಣ, ಸುಶೀಲರಾಗಿ ಅಷ್ಟೇ ಅಲ್ಲದೆ ಮಹಾನ್ ಶೌರ್ಯ ಪರಾಕ್ರಮಿಗಳು ಹಾಗೂ ಮಹಾನ್ ರಾಷ್ಟ್ರೀಯವಾದಿ ದಲಿತ ಮಹಿಳೆಯರು ಎಂದು ಬಿಂಬಿಸಲಾಗಿದೆ. ಇವರು ಶಕ್ತಿ ಸ್ವರೂಪಿಗಳು. ದಲಿತ ವೀರನಾರಿಯರನ್ನು ಕುರಿತ ಕಥನಗಳ ಕರಪತ್ರಗಳು ಮತ್ತು ಅವುಗಳ ಮುಖಪುಟಗಳಲ್ಲಿ, 'ಪುರುಷ'ರ ವಸ್ತ್ರಗಳಿಂದ ಪೂರ್ತಿ ದೇಹವನ್ನು ಮುಚ್ಚಿರುವ ದಲಿತ ಮಹಿಳೆಯರ ಚಿತ್ರಗಳು ರಾರಾಜಿಸುತ್ತವೆ. ಕುದುರೆ ಸವಾರಿ ಮಾಡುವ, ಈಜುವ, ಬಿಲ್ವಿದ್ಯೆ, ಕತ್ತಿ ವರಸೆಯಲ್ಲಿ ನಿರತರಾಗಿರುವ ದಲಿತ ವೀರನಾರಿಯರ ಚಿತ್ರಗಳು ಕಾಣಸಿಗುತ್ತವೆ. ಇಂತಹ ಚಿತ್ರಗಳ ಮೂಲಕ ದಲಿತ ವೀರನಾರಿಯ ಬಗ್ಗೆ ಮತ್ತು ತನ್ಮೂಲಕ ದಲಿತರ ಬಗ್ಗೆ ಹೆಚ್ಚು ಗೌರವ, ಅವಕಾಶ ಮತ್ತು ಸ್ವಾಭಿಮಾನ ಮೂಡಿಸುವ ಪ್ರಯತ್ನ ದಲಿತ ಲೇಖಕರದು. ಜತೆಜತೆಗೆ ಇದು ಪೌರುಷತ್ವದ ಪರಿಕಲ್ಪನೆಗೆ ಸೂಕ್ತವಾಗಿ ಹೊಂದಿಕೆಯಾಗುತ್ತದೆ.

ಅನೈತಿಕ ಲೈಂಗಿಕ ಚಟುವಟಿಕೆಗಳಲ್ಲಿ ನಿರತ ದಲಿತ ಮಹಿಳೆಯರ ಚಿತ್ರಣಕ್ಕೆ ತದ್ವಿರುದ್ಧವಾದ, ಪೌರುಷತ್ವದ ಪ್ರತಿರೂಪವಾದ ದಲಿತ ಮಹಿಳೆಯರ ಚಿತ್ರಣವನ್ನು ಇಲ್ಲಿ ಸವಾಲಿನ ರೂಪದಲ್ಲಿ ನೀಡಲಾಗುತ್ತದೆ. ಬಹಿರಂಗವಾಗಿ ಲೈಂಗಿಕ ಭಾವನೆಗಳನ್ನು ವ್ಯಕ್ತಪಡಿಸದೆ ತಡೆಹಿಡಿಯುವ ಮೂಲಕ ದಲಿತ ಮಹಿಳೆಯರು ತಮ್ಮದೇ ಆದ ಒಂದು ನೈತಿಕ ಸ್ಥಾನ ಕಲ್ಪಿಸಿಕೊಂಡು, ಆ ಮೂಲಕ ತಮ್ಮ ದೇಹಗಳ ಮೇಲೆ ನಿಯಂತ್ರಣ ಸಾಧಿಸಿ ಬಲಿಷ್ಠ ಸಂಸ್ಕೃತಿಯ ಗೌರವಾದರ ಗಳಿಸಿಕೊಳ್ಳುವ ಆಶಯವಿದು.

ದಲಿತ ವೀರನಾರಿಯರನ್ನು ತಾರಕಕ್ಕೇರಿಸುವ ಈ ಕಥನಗಳಲ್ಲಿ, ಕವನಗಳು ಮತ್ತು ಹಾಡುಗಳು ಕೇಂದ್ರ ಸ್ಥಾನ ಪಡೆದುಕೊಳ್ಳುತ್ತದೆ. ಝಾನ್ಸಿ ರಾಣಿ ಲಕ್ಷ್ಮೀ ಬಾಯಿ ಕುರಿತು ಸುಭದ್ರಕುಮಾರಿ ಚೌಹಾನ್ ರಚಿಸಿರುವ ಜನಪ್ರಿಯ ಕವನವನ್ನು ಇಲ್ಲಿಯ ಬಹುತೇಕ 'ಕಥನ ಕಾವ್ಯ'ಗಳು ಅಳವಡಿಸಿಕೊಂಡಿರುವುದು ಗಮನಿಸಬೇಕಾದ ಅಂಶ. ಮೂಲ ಕವನದ ವಾಕ್ಯಗಳು ಮತ್ತು ಪದಗಳಿಗೆ ಹೊಸ ಅರ್ಥಗಳನ್ನು ಕೊಡಲಾಗಿದೆ ಹಾಗೂ ಸಂಪೂರ್ಣವಾಗಿ ಪುನರ್ವಿಮರ್ಶೆ ಮಾಡಲಾಗಿದೆ.

ದಲಿತ ವೀರನಾರಿಯರನ್ನು ತಾರಕಕ್ಕೇರಿಸುವ ಈ ಕಥನಗಳಲ್ಲಿ, ಕವನಗಳು ಮತ್ತು ಹಾಡುಗಳು ಕೇಂದ್ರ ಸ್ಥಾನ ಪಡೆದುಕೊಳ್ಳುತ್ತದೆ. ಝಾನ್ಸಿ ರಾಣಿ ಲಕ್ಷ್ಮೀ ಬಾಯಿ ಕುರಿತು ಸುಭದ್ರಕುಮಾರಿ ಚೌಹಾನ್ ರಚಿಸಿರುವ ಜನಪ್ರಿಯ ಕವನವನ್ನು ಇಲ್ಲಿಯ ಬಹುತೇಕ 'ಕಥನ ಕಾವ್ಯ'ಗಳು ಅಳವಡಿಸಿಕೊಂಡಿರುವುದು ಗಮನಿಸಬೇಕಾದ ಅಂಶ. ಮೂಲ ಕವನದ ವಾಕ್ಯಗಳು ಮತ್ತು ಪದಗಳಿಗೆ ಹೊಸ ಅರ್ಥಗಳನ್ನು ಕೊಡಲಾಗಿದೆ ಹಾಗೂ ಸಂಪೂರ್ಣವಾಗಿ ಪುನರ್ವಿಮರ್ಶೆ ಮಾಡಲಾಗಿದೆ. ಇವುಗಳನ್ನು ನೆನಪಿಲ್ಲಿಡುವುದೂ ಸುಲಭ. ಝಲ್ಕಾರಿ ಬಾಯಿ ಕುರಿತ ಒಂದು ಕವನ ಹೀಗಿದೆ:

ಖೂಬ್ ಲಾರಿ ಝಲ್ಕಾರಿ ತೂ ತಾವೋ, ತೇರಿ ಏಕ
ಜವಾನಿ ಥೀ.
ದೂರ್ ಫಿರಂಗಿ ಕೋ ಕರ್ನೆ ಮೇ, ವೀರೋಂ
ಮೇ ಮರ್ದಾನಿ ಥೀ.
ತೇರಿ ಯೇ ಕಹಾನಿ ಥೀ.
ರಾನಿ ಕಿ ತೂ ಸಾಥೀ ಬನ್ಕರ್, ಝಾನ್ಸಿ ಫತಾಹ್
ಕರಾನಿ ಥೀ...
ದಾತಿಯಾ ಫಟಕ್ ರೌಂದ್ ಫಿರಂಗಿ, ಆಗ್ಗೆ ಬಡ್
ಝಲ್ಕಾರಿ ಥೀ.
ಕರಕ್ ದಾಮಿನಿ ಥೀ.
ಕೌ ಫಿರಂಗಿ ಆಂಖ್ ಉಠಾಯೇ, ಡರ್ ಸೇ ಶೀಷ್
ಉಟೇರಿ ಥೀ.
ಹರ್ ಬೋಲೋಂ ಕೆ ಮೂಹ್ ಸೆ ಸುನ್ ಹಮ್,
ರೂಪ್ ಚಂಡಿಕಾ ಪಾನಿ ಥೀ.

(ಝಲ್ಕಾರಿ, ನಿನ್ನ ಯೌವನ, ಹೋರಾಟ ಅನನ್ಯ.
ಬ್ರಿಟಿಷರ ದಮನಕ್ಕೆ ಹೋರಾಡಿದ ಶೌರ್ಯವಂತರಲ್ಲಿ ಪುರುಷನಂತೆ ನೀನಿದ್ದೆ.
ಯೋಧರಿಂದ ನಿನ್ನ ಕಥೆಯನ್ನು ನಾವು ಆಲಿಸಿದೆವು.
ಝಾನ್ಸಿಯ ಜತೆಗಾತಿಯಾಗಿ ಅವಳ ಗೆಲುವಿಗಾಗಿ ಹೋರಾಡಿದೆ.
ಬ್ರಿಟಿಷರನ್ನು ಹತ್ತಿಕ್ಕಲು ದಾತಿಯಾ ದ್ವಾರದಿಂದ ಮುನ್ನಡೆದೆ.
ಕಾಳಿಯಂತಿದ್ದ ನಿನ್ನ ಹೊಡೆತ ಮಿಂಚಿನಂತಿತ್ತು.
ತಲೆಯೆತ್ತಿದ ಪ್ರತಿ ಫಿರಂಗಿಯನು ಮರುಕ್ಷಣ ಹೊಡೆದುರುಳಿಸಿದೆ ನೀನು.
ನಿನ್ನ ಶೌರ್ಯದ ಕಥೆಯನ್ನು ಯೋಧರಿಂದ ತಿಳಿದೆವು).

ದಲಿತ ಮೇಳಗಳು ಮತ್ತು ರ‍್ಯಾಲಿಗಳಲ್ಲಿ ಇಂತಹ ಹಾಡುಗಳು ಮತ್ತು ಕವನಗಳನ್ನು ನೃತ್ಯ ಮತ್ತು ಸಂಗೀತದೊಂದಿಗೆ ಹಾಡಲಾಗುತ್ತದೆ. ಇವುಗಳ ಸುತ್ತ ನಾಟಕಗಳನ್ನು ರಚಿಸಿ ಪ್ರಸ್ತುತಪಡಿಸಲಾಗುತ್ತವೆ.

ಕಾಲ ಕ್ರಮೇಣ ದಲಿತ ಅಸ್ಮಿತೆಯ ಉದ್ದೇಶಕ್ಕೆ ಪೂರಕವಾಗಿ ಹೊಸ ಕಥೆಗಳು ಸೇರ್ಪಡೆಗೊಂಡು, ಮುಖ್ಯವಾದ ಕಥನಗಳ ಹಂದರ ಸಂಕೀರ್ಣಗೊಳ್ಳುತ್ತಾ ಬಂದಿದೆ. ಉದಾಹರಣೆಗೆ, ಝಲ್ಕಾರಿ ಬಾಯಿ ಗೋವೊಂದನ್ನು ಕೊಂದಿರುವುದಾಗಿ ಆಪಾದಿಸಲಾಗಿ, ಆ ಗೋವನ್ನು ಬ್ರಾಹ್ಮಣನೋರ್ವ ಅಡಗಿಸಿಟ್ಟಿರುವುದು ಬಯಲಾಗುವ ಕಥೆ ಮತ್ತೆ ಮತ್ತೆ ಪುನರಾವರ್ತನೆಯಾಗುತ್ತದೆ. ಮುಸ್ಲಿಮರ ಜತೆಗೆ ದಲಿತರು ಕೂಡ 'ಗೋಹತ್ಯೆ' ಮಾಡುವವರು ಎಂದು ಮುಖ್ಯವಾಹಿನಿಯಲ್ಲಿ ಬಿಂಬಿತವಾಗಿರುವ ಕಥನಗಳಿಗೆ ಸವಾಲಾಗಿ ಈ ಕಥನವನ್ನು ನೋಡಬೇಕಾಗುತ್ತದೆ. ಈ ಬರಹಗಳು ಪ್ರವರ್ಧಮಾನಕ್ಕೆ ಬರುತ್ತಿರುವುದು, ಕಥನಗಳಲ್ಲಿ 'ನಿಖರತೆ' ಬರುತ್ತಿರುವುದು, ಇವುಗಳ ಮತ್ತೊಂದು ಪ್ರಮುಖ ಲಕ್ಷಣ. ಉದಾಹರಣೆಗೆ, ಈ ಹಿಂದಿನ ಕಥನಗಳಲ್ಲಿ ಝಲ್ಕಾರಿ ಬಾಯಿಯನ್ನು ರಾಣಿ ಲಕ್ಷ್ಮೀಬಾಯಿಯ ಸಹಾಯಕಳೆಂದು, ರಾಣಿಯ ಜೀವ ಉಳಿಸುವ ಸಲುವಾಗಿ ರಾಣಿಯಂತೆ ಮಾರುವೇಷದಲ್ಲಿದ್ದಳು ಎಂದಿದೆ.

ದಂಗೆಯಲ್ಲಿ ರಾಣಿ ಲಕ್ಷ್ಮೀಬಾಯಿಯ ಪಾತ್ರ ಕುರಿತು ಅಸ್ಪಷ್ಟತೆ ನಮಗೆ ಇಲ್ಲಿ ಕಾಣಿಸುತ್ತದೆ. ಈ ಕಥನದಲ್ಲಿ ಝಲ್ಕಾರಿ ಬಾಯಿಯನ್ನು, ರಾಣಿಯ ಸಹಾಯಕಳಾಗಿ ಅಥವಾ ಬಹುತೇಕ ರಾಣಿಯ ಸರಿಸಮಾನಳಾಗಿ ಚಿತ್ರಿಸಲಾಗಿದೆ. ನಿಧಾನವಾಗಿ 'ನಿಖರವಾದ' ಮತ್ತು ಅಧಿಕಾರಯುತವಾದ ದಲಿತ ಇತಿಹಾಸ, ಈ ಹಿಂದಿನ ಕಥನದ ಸ್ಥಳವನ್ನು ಆಕ್ರಮಿಸುತ್ತದೆ. ಈ ಹೊಸ ಕಥನದಲ್ಲಿ ರಾಣಿ ಲಕ್ಷ್ಮೀಬಾಯಿ ಬ್ರಿಟಿಷರ ವಿರುದ್ಧ ಶೌರ್ಯದಿಂದ ಹೋರಾಡಿದ ರಾಷ್ಟ್ರೀಯವಾದಿ ನಾಯಕಿಯಲ್ಲ, ಬದಲಿಗೆ ನಿಸ್ಸಹಾಯಕಳಾದ, ಬ್ರಿಟಿಷರ ವಿರುದ್ಧ ಹೋರಾಡಲು ಹಿಂದೇಟು ಹಾಕುವ, ಬ್ರಿಟಿಷರ ಬೆಂಬಲಿಗಳು ಮತ್ತು ಏಜೆಂಟಳಾಗಿಯೂ ಚಿತ್ರಿತಳಾಗುತ್ತಾಳೆ. ಯುದ್ಧದ ಭೀತಿಯಿಂದ ರಾಣಿ ಲಕ್ಷ್ಮೀಬಾಯಿ ಬ್ರಿಟಿಷರಿಗೆ ಶರಣಾಗಬಹುದು ಎಂದು ಝಲ್ಕಾರಿ ಬಾಯಿ ಚಿಂತಾಕ್ರಾಂತಳಾಗುತ್ತಾಳೆ ಎಂದು ಬರೆಯಲಾಗಿದೆ. ಲಕ್ಷ್ಮೀಬಾಯಿ ಕುರಿತ ಪುರಾಣ ಮತ್ತು ಇತಿಹಾಸಗಳಿಗೆ ಸವಾಲೆಸೆವ ದಲಿತ ಇತಿಹಾಸ, ವಾಸ್ತವವಾಗಿ ಲಕ್ಷ್ಮೀಬಾಯಿ, ಪ್ರತಾಪಗಡದ ರಾಜನ ಸಹಾಯದಿಂದ, ಬ್ರಿಟಿಷರಿಂದ ತಪ್ಪಿಸಿಕೊಂಡು ನೇಪಾಳದ ಕಾಡಿಗೆ ಹೋದಳು, ನಂತರ ಸುಮಾರು ೮೦ ವರ್ಷ ಪ್ರಾಯದಲ್ಲಿ ೧೯೧೫ರಲ್ಲಿ ಆಕೆ ಸಾವನ್ನಪ್ಪಿದಳು ಎಂದು ವಾದಿಸುತ್ತದೆ. ವಾಸ್ತವವಾಗಿ ಝಲ್ಕಾರಿ ಬಾಯಿ ನಿಜವಾದ ಹುತಾತ್ಮಳು ಮತ್ತು ವೀರನಾರಿ. ಆಕೆಯ ಹೆಸರನ್ನು ಸುವರ್ಣಾಕ್ಷರ

ಗಳಲ್ಲಿ ಬರೆಯಬೇಕಾಗಿದೆ. ಆಕೆ ಯಾವುದೇ ರಾಜ್ಯ, ಬೆಲೆ ಬಾಳುವ ಆಭರಣಗಳು, ರೇಷ್ಮೆ ವಸ್ತ್ರಗಳನ್ನು ಹೊಂದಿರದ ಓರ್ವ ದಲಿತ ಮಹಿಳೆಯಾಗಿದ್ದಳು. ಆಕೆ ರಾಣಿಯೂ ಆಗಿರಲಿಲ್ಲ. ಜಮೀನ್ದಾರನ ಮಗಳೂ ಆಗಿರಲಿಲ್ಲ. 'ಜಹಗೀರುದಾರ'ನ ಹೆಂಡತಿಯೂ ಆಗಿರಲಿಲ್ಲ. ಆಕೆ ಹೋರಾಡಿದ್ದು ದೇಶಕ್ಕಾಗಿ. ಆದ್ದರಿಂದ ಆಕೆಯ ತ್ಯಾಗ ಬಲಿದಾನಗಳು ಇತರರೆಲ್ಲರ ಬಲಿದಾನಗಳನ್ನು ಹಲವು ಗಾವುದ ದೂರ ಹಿಮ್ಮೆಟ್ಟಿಸುತ್ತದೆ.

೧೮೫೭ರ ದಲಿತ ವೀರನಾರಿಯರ ಬಗ್ಗೆ ಒಬ್ಬ ಇತಿಹಾಸಕಾರನಾಗಿ ಅಧ್ಯಯನ ಕೈಗೊಂಡ ನನಗೆ, ಈ ಕುರಿತು ಸಂಗ್ರಹಾಲಯಗಳಲ್ಲಿ "ಹಾರ್ಡ್‌ಕೋರ್", "ಲಿಖಿತ" ಐತಿಹಾಸಿಕ ದಾಖಲೆಗಳ ಕೊರತೆಯಿರುವುದು, ಆತಂಕ ಮೂಡಿಸಿತು. ಯಾವುದು ನಮ್ಮನ್ನು ಮಂತ್ರಮುಗ್ಧರನ್ನಾಗಿಸುವುದೋ ಅದನ್ನು ಆಸ್ವಾದಿಸಬೇಕು. ಅದರ "ನಿಖರತೆ"ಯನ್ನು ಪ್ರಶ್ನಿಸಿದಾಗ, ಅದರ ಮಾಂತ್ರಿಕತೆಯನ್ನು ನಾಶ ಮಾಡಿದಂತಾಗುತ್ತದೆ ಎಂದು ಒಂದು ಹಂತದಲ್ಲಿ ವಾದಿಸಲು ಮನಸ್ಸಾಗಿತ್ತು. ಬಡತನ ಮತ್ತು ಶೋಷಣೆಯಿಂದ ತತ್ತರಿಸಿದ ಬಹುಸಂಖ್ಯಾತ ಜನರ ಜೀವನವನ್ನು ಸುಧಾರಿಸುವ ನಿಟ್ಟಿನಲ್ಲಿ ಒಂದು ಸಾಂಕೇತಿಕ ವ್ಯಕ್ತಿತ್ವದ "ಕಾಲ್ಪನಿಕ ಆತ್ಮಕಥನ"ವನ್ನು ಸೃಷ್ಟಿಸುವ ಐತಿಹಾಸಿಕ ಪ್ರಣಾಳಿಕೆ "ಕೆಳಸ್ತರ"ದಿಂದ ಹೇಗೆ ಬರುತ್ತದೆ ಎಂಬುದನ್ನು ಕಾರ್ಲೋ ಗಿನ್ಸ್‌ಬರ್ಗ್ ಪರಿಣಾಮಕಾರಿಯಾಗಿ ತೋರಿಸಿಕೊಟ್ಟಿದ್ದಾರೆ.

ಸಾಕ್ಷ್ಯಾಧಾರಗಳ ಕೊರತೆ, ಸಾಮಾನ್ಯವಾಗಿ ಒಪ್ಪಿತವಾದ ಮಾನದಂಡಗಳ ಪ್ರಕಾರ ವಿಷಯ ಪ್ರಾಮುಖ್ಯತೆಯ ಕೊರತೆ, ಮತ್ತು ಸ್ಟೈಲಿಸ್ಟಿಕ್ ಮಾದರಿಗಳ ಕೊರತೆ; ಈ ಮೇಲೆ ಹೇಳಿದ ಮೂರು ತಡೆಗೋಡೆಗಳನ್ನು, ಕಾಲ್ಪನಿಕ ಆತ್ಮಕಥನ ಮತ್ತು ಐತಿಹಾಸಿಕ ದಾಖಲೆಗಳ ಮಿಶ್ರಣದ ಒಂದೇ ಮಾರ್ಗದಿಂದ ದಾಟಲು ದಲಿತ ಇತಿಹಾಸಗಳಿಗೆ ಸಾಧ್ಯವಿದೆ. ಯಾವುದೇ ಪ್ರಾಮುಖ್ಯತೆಯಿಲ್ಲದೆ ಶೂನ್ಯವಾಗಬಹುದಾಗಿದ್ದ ಬಹುಸಂಖ್ಯಾತ ಜನರ ಜೀವನಗಾಥೆ ಅನನ್ಯ ಪಾತ್ರಗಳ ಮೂಲಕ ಸಾಂಕೇತಿಕವಾಗಿ ಮರುಜನ್ಮ ಪಡೆದಿವೆ. ಆದರೆ ಇದಿಷ್ಟೇ ಸಾಲದು. ಸಾಹಿತ್ಯಕ ಕಥನಗಳು, ಬ್ರಿಟಿಷರ ವಿವರಣೆಗಳು, ಪ್ರಾಚ್ಯ ಮತ್ತು ಮೌಖಿಕ ಇತಿಹಾಸಗಳ ಮೂಲಗಳ ಸಹಾಯದಿಂದ ದಲಿತರು ವೀರನಾರಿಯರ ಐತಿಹಾಸಿಕ ವಿಶ್ವಾಸಾರ್ಹತೆಯನ್ನು ಸಾಬೀತುಪಡಿಸಲು ಉತ್ಸುಕರಾಗಿದ್ದಾರೆ. ತಮ್ಮ ಕೃತಿಗಳು "ವೈಜ್ಞಾನಿಕವಾದುದು", "ಸತ್ಯವಾದುದು" ಮತ್ತು "ವಿವರಣಾತ್ಮಕವಾದುದು" ಎಂದು ದಲಿತರು ಪ್ರತಿಪಾದಿಸುತ್ತಾರೆ. ಈ ಸಂಬಂಧ ಒಂದು ಕವನ ಈ ರೀತಿ ಇದೆ:

ಐತಿಹಾಸಿಕ್ ಸಂದರ್ಭೋಂ ಭೀತರ್, ಅಂಕಿತ್ ಸಾರಿ
ಹೇ ಘಟನಾ.
ನಹೀಂ ಕಲ್ಪನಾ ಸೆ ಕಲ್ಪಿತ್ ಹೇ- ಅಮರ್
ಹಮಾರಿ ಯೇ ರಚನಾ.

(ಐತಿಹಾಸಿಕ ಮೂಲಗಳ ಪರಿಧಿಯಲ್ಲಿ ಎಲ್ಲಾ ಘಟನೆಗಳು ಬರುತ್ತವೆ.

ನಮ್ಮದು ಕಾಲ್ಪನಿಕ ಕಥೆಯಲ್ಲ, ಅಮರವಾದ ಕಥೆ.)

ಹಂಚಿಹೋಗಿರುವ ಸಣ್ಣಪ್ರಮಾಣದ ಪುರಾವೆಗಳನ್ನು ದಲಿತರು ತಮ್ಮ ಪರವಾಗಿ ಯಾವಾಗಲೂ ನೀಡುತ್ತಾರೆ. ವೃಂದಾವನ್ ಲಾಲ್ ವರ್ಮಾ ಅವರ 'ಝಾನ್ಸಿ ಕಿ ರಾಣಿ ಲಕ್ಷ್ಮಿಬಾಯಿ' ಕೃತಿಯನ್ನು ದಲಿತರು ಅನೇಕ ಬಾರಿ ಬಳಸುತ್ತಾರೆ. ತೀವ್ರವಾದ ವೈಯಕ್ತಿಕ ಸಂಶೋಧನೆ ಮತ್ತು ಐತಿಹಾಸಿಕ ಹೊಳಹುಗಳ ಸಹಾಯದಿಂದ ೧೯೪೬ರಲ್ಲಿ ಪ್ರಕಟವಾದ ಈ ಕೃತಿಯಲ್ಲಿ, ಹೊಸದಾಗಿ ಮದುವೆಯಾದ, ಕೋರಿ ಜಾತಿಗೆ ಸೇರಿದ ಕಪ್ಪು ವರ್ಣದ ಝಲ್ಕಾರಿ ದುಲೈಯಾ ಬಗ್ಗೆ ವಿವರಣೆಯಿದೆ. ಈಕೆ ರಾಣಿ ಲಕ್ಷ್ಮೀಬಾಯಿಯಂತೆಯೇ ಇದ್ದಳು ಎಂದು ಕೃತಿಯಲ್ಲಿ ಹೇಳಲಾಗಿದೆ. ಜನರಲ್ ರೋಸ್ ವಿರುದ್ಧ ರಾಣಿ ಲಕ್ಷ್ಮೀಬಾಯಿ ಹೋರಾಡಿದಾಗ ಕೋಟೆಯಲ್ಲಿ ತಂಗಿದ್ದ ವಿಷ್ಣುರಾವ್ ಗೋಡ್ಸೆಯ 'ಮಾಜಾ ಪ್ರವಾಸ್' (ನನ್ನ ಪ್ರವಾಸ) ಎಂಬ ಮರಾಠಿ ಕೃತಿಯಲ್ಲಿ ಝಲ್ಕಾರಿ ಬಾಯಿ ಬಗ್ಗೆ ವಿವರಗಳಿವೆ. ಇದೇ ರೀತಿ ಅಮೃತ್‌ಲಾಲ್ ನಗರ್ ಅವರ 'ಗದರ್ ಕೆ ಫೂಲ್' ಮತ್ತು ವಿಲಿಯಂ ಫೋರ್ಬ್ಸ್-ಮಿಚೆಲ್ ಅವರ 'ರೆಮಿನಿಸೆನ್ಸಸ್ ಆಫ್ ದ ಗ್ರೇಟ್ ಮ್ಯೂಟಿನಿ' (ಮಹಾದಂಗೆಯ ನೆನಪುಗಳು) ಎಂಬ ಕೃತಿಯಲ್ಲಿ ಉದಾದೇವಿ ಬಗ್ಗೆ ವಿವರಣೆಗಳಿರುವುದನ್ನು ದಲಿತರು ಪುರಾವೆಯಾಗಿ ನೀಡುತ್ತಾರೆ.

ಪ್ರಸ್ತುತ ಸಂದರ್ಭದಲ್ಲಿ, ಈ ಕಥನಗಳನ್ನು ಸತ್ಯವೆಂದು ನಂಬಲಾಗಿದೆ. ದಲಿತ ವೀರನಾರಿಯರ ಹೆಸರಿನಲ್ಲಿ ಈಗ ಸ್ಟ್ಯಾಂಪ್‌ಗಳು ಹೊರಬರುತ್ತಿವೆ, ಪ್ರತಿಮೆಗಳು ನಿರ್ಮಾಣವಾಗುತ್ತಿವೆ, ಸಾರ್ವಜನಿಕ ರ್‍ಯಾಲಿಗಳು ಮತ್ತು ಸಭೆಗಳು ಸಂಘಟಿತವಾಗುತ್ತಿವೆ, ಉತ್ಸವಗಳು ಮತ್ತು ಹಬ್ಬಗಳನ್ನು ಆಚರಿಸಲಾಗುತ್ತಿವೆ, ದಲಿತ ವೀರನಾರಿಯರ ಹೆಸರಿನಲ್ಲಿ ಕಾಲೇಜುಗಳು ಮತ್ತು ವೈದ್ಯಕೀಯ ಸಂಸ್ಥೆಗಳು ಸ್ಥಾಪನೆಯಾಗುತ್ತಿವೆ. ಉದಾಹರಣೆಗೆ, ಉದಾದೇವಿ ಹುತಾತ್ಮಳಾದಳೆಂದು ಹೇಳಲಾದ, ನವೆಂಬರ್ ೧೬ರಂದು ಲಕ್ನೋದ ಸಿಕಂದರ್ ಬಾಗ್‌ನಲ್ಲಿರುವ ಉದಾದೇವಿಯ ಪ್ರತಿಮೆಯ ಎದುರು ಪ್ರತಿವರ್ಷ ಸಾರ್ವಜನಿಕರ ಬೃಹತ್ ರ್‍ಯಾಲಿ ಮತ್ತು ಮೇಳವನ್ನು ಸಂಘಟಿಸಲಾಗುತ್ತದೆ. ಈ ರೀತಿ ಪದೇ ಪದೇ ದಲಿತ ವೀರನಾರಿಯರ ಹೆಸರನ್ನು ಸಾರ್ವಜನಿಕ ಸ್ಥರದಲ್ಲಿ ಬಳಸಲಾಗುತ್ತಿರುವುದರಿಂದ ದಲಿತರ ಸ್ಮೃತಿಯಲ್ಲಿ ಈ ಹೆಸರುಗಳು ಅಚ್ಚಳಿಯದೆ ಹಾಸುಹೊಕ್ಕಾಗಿಬಿಟ್ಟಿವೆ. ಇವುಗಳ ಪ್ರಯೋಜನ ಪಡೆಯಲು ರಾಜಕೀಯ ಪಕ್ಷಗಳೂ ಹಿಂದೆ ಬಿದ್ದಿಲ್ಲ. ವಿವಿಧ ರಾಜಕೀಯ ಪಕ್ಷಗಳು ದಲಿತ ವೀರನಾರಿಯರ ಹೆಸರುಗಳನ್ನು ಚುನಾವಣಾ ಪ್ರಚಾರಗಳಿಗೆ ಮತ್ತು ಸಂಘಟನಾ ಕಾರ್ಯಗಳಿಗೆ ಬಳಸಿಕೊಳ್ಳುತ್ತಿವೆ. ಇವುಗಳಲ್ಲಿ ಬಹುಜನ ಸಮಾಜವಾದಿಪಕ್ಷ (ಬಿಎಸ್‌ಪಿ) ಮುಂಚೂಣಿಯಲ್ಲಿದೆ. ಮಾಯಾವತಿ ಅವರ ವ್ಯಕ್ತಿತ್ವಕ್ಕೆ ಇಂಬು ಕೊಡಲು ಬಿಎಸ್‌ಪಿ ವೀರನಾರಿಯರ ಹೆಸರುಗಳನ್ನು ಯಶಸ್ವಿಯಾಗಿ ಬಳಸಿಕೊಳ್ಳುತ್ತಿದೆ.

ಪ್ರಸ್ತುತ ಸಂದರ್ಭದಲ್ಲಿ, ಈ ಕಥನಗಳನ್ನು ಸತ್ಯವೆಂದು ನಂಬಲಾಗಿದೆ. ದಲಿತ ವೀರನಾರಿಯರ ಹೆಸರಿನಲ್ಲಿ ಈಗ ಸ್ಟ್ಯಾಂಪ್‌ಗಳು ಹೊರಬರುತ್ತಿವೆ, ಪ್ರತಿಮೆಗಳು ನಿರ್ಮಾಣವಾಗುತ್ತಿವೆ, ಸಾರ್ವಜನಿಕ ರ್‍ಯಾಲಿಗಳು ಮತ್ತು ಸಭೆಗಳು ಸಂಘಟಿತವಾಗುತ್ತಿವೆ, ಉತ್ಸವಗಳು ಮತ್ತು ಹಬ್ಬಗಳನ್ನು ಆಚರಿಸಲಾಗುತ್ತಿವೆ, ದಲಿತ ವೀರನಾರಿಯರ ಹೆಸರಿನಲ್ಲಿ ಕಾಲೇಜುಗಳು ಮತ್ತು ವೈದ್ಯಕೀಯ ಸಂಸ್ಥೆಗಳು ಸ್ಥಾಪನೆಯಾಗುತ್ತಿವೆ. ಉದಾಹರಣೆಗೆ, ಉದಾದೇವಿ ಹುತಾತ್ಮಳಾದಳೆಂದು ಹೇಳಲಾದ, ನವೆಂಬರ್ ೧೬ರಂದು ಲಕ್ನೋದ ಸಿಕಂದರ್ ಬಾಗ್‌ನಲ್ಲಿರುವ ಉದಾ ದೇವಿಯ ಪ್ರತಿಮೆಯ ಎದುರು ಪ್ರತಿವರ್ಷ ಸಾರ್ವಜನಿಕರ ಬೃಹತ್ ರ್‍ಯಾಲಿ ಮತ್ತು ಮೇಳವನ್ನು ಸಂಘಟಿಸಲಾಗುತ್ತದೆ. ಈ ರೀತಿ ಪದೇ ಪದೇ ದಲಿತ ವೀರನಾರಿಯರ ಹೆಸರನ್ನು ಸಾರ್ವಜನಿಕ ಸ್ಥರದಲ್ಲಿ ಬಳಸಲಾಗುತ್ತಿರುವುದರಿಂದ ದಲಿತರ ಸ್ಮೃತಿಯಲ್ಲಿ ಈ ಹೆಸರುಗಳು ಅಚ್ಚಳಿಯದೆ ಹಾಸುಹೊಕ್ಕಾಗಿಬಿಟ್ಟಿವೆ. ಇವುಗಳ ಪ್ರಯೋಜನ ಪಡೆಯಲು ರಾಜಕೀಯ ಪಕ್ಷಗಳೂ ಹಿಂದೆ ಬಿದ್ದಿಲ್ಲ.

ದಲಿತ ವೀರನಾರಿಯರ ಈ ಕಥನಗಳು, ಕೇವಲ ಐತಿಹಾಸಿಕ ಕಥೆಗಳೇ ಅಥವಾ ಕಾಲ್ಪನಿಕ ಇತಿಹಾಸವೇ ಅಥವಾ ಅದಕ್ಕಿಂತಲೂ ಹೆಚ್ಚಿನದೇ? ೧೮೫೭ರ 'ಸರ್ಕಾರಿ' ಮತ್ತು ಮುಖ್ಯವಾಹಿನಿಯ ಇತಿಹಾಸ ಎಷ್ಟರಮಟ್ಟಿಗೆ ವಾಸ್ತವವಾದುದು, ನಿಖರವಾದುದು ಮತ್ತು ಸತ್ಯವಾದುದು? ಈ ಹಿನ್ನೆಲೆಯಲ್ಲಿ ಒಂದೇ ಒಂದು ನಿಖರವಾದ ಇತಿಹಾಸ ಇರುವುದನ್ನು ವಿದ್ವಾಂಸರು ಪ್ರಶ್ನಿಸಿದ್ದಾರೆ. ಏಕಕಾಲದಲ್ಲಿ ದಲಿತರು ಮತ್ತು ಮಹಿಳೆಯರೂ ಆಗಿರುವ ದಲಿತ ವೀರನಾರಿಯರ ಇತಿಹಾಸವನ್ನು, ತಮ್ಮ 'ಸತ್ಯ'ವನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಕೆಳಸ್ತರದಿಂದ ಬಂದ ದಲಿತರ ಮನವೊಲಿಕೆಯ ಕಥನಗಳ ಇತಿಹಾಸ ಎನ್ನಬಹುದು. ದಾಖಲಾಗಿರುವ ಐತಿಹಾಸಿಕ ಘಟನೆಗಳನ್ನು ತೆಗೆದುಕೊಂಡು, ಮುಖ್ಯವಾಹಿನಿಯ ಇತಿಹಾಸಗಳಲ್ಲಿ ಕಣ್ಮರೆಯಾಗಿರುವ ಕಥನಗಳನ್ನು ಉಪಸಂಸ್ಕೃತಿಯ ಚೌಕಟ್ಟಿನಲ್ಲಿ ದಲಿತರು ನೋಡುತ್ತಾರೆ. ಇದನ್ನು ೧೮೫೭ರ ಪ್ರತಿ-ಇತಿಹಾಸ ಎನ್ನಬಹುದು.

ವೀರನಾರಿಯರನ್ನು ಕುರಿತ ದಲಿತ ಇತಿಹಾಸಗಳ ಓದು

ದಲಿತ ವೀರನಾರಿಯರನ್ನು ಕುರಿತ ಈ ಜನಪ್ರಿಯ ದಲಿತ ಇತಿಹಾಸಗಳನ್ನು ಏಕಕಾಲದಲ್ಲಿ ಮನವೊಲಿಕೆಯ, ಬಹುಸ್ತರದ ಮತ್ತು ವೈರುಧ್ಯದ ಓದಿಗೆ ಒಳಪಡಿಸಬಹುದು. ಐತಿಹಾಸಿಕ ಮೂಲಗಳಾಗಿ ಈ ಸಾಹಿತ್ಯ ನಿಲ್ಲದೆ ಹೋಗಬಹುದು. ಜತೆಗೆ ದಲಿತ ಮಹಿಳೆಯರ ಪ್ರಾತಿನಿಧಿತ್ವವನ್ನು ಕೂಡ ಇಲ್ಲಿ ಪ್ರಶ್ನಿಸಬೇಕಿದೆ. ಈ ಜನಪ್ರಿಯ ಕರಪತ್ರಗಳನ್ನು ಬರೆದವರಲ್ಲಿ ಹೆಚ್ಚಿನವರು ದಲಿತ ಮಹಿಳೆಯರಲ್ಲ. ಕಥನಗಳಲ್ಲಿ ದಲಿತ ಮಹಿಳೆಯರು ಯಾವ ರೀತಿ ಚಿತ್ರಿತವಾಗಬೇಕೆಂದು ನಿರ್ಧರಿಸುತ್ತಿರುವುದು ಪುರುಷರು.

ಕೆಲವು ದಲಿತ ವೀರನಾರಿಯರನ್ನು ಶೌರ್ಯ ಸಾಹಸ ಪ್ರವೃತ್ತಿ ಹೊಂದಿರುವ "ಸೂಪರ್ ಮಹಿಳೆ"ಯರಂತೆ, "ಅಸಾಧ್ಯ"ವಾದ ಕೆಲಸಗಳನ್ನು ಸರಾಗವಾಗಿ ಮಾಡುವ ಚಾಣಾಕ್ಷರಂತೆ ವೈಭವೀಕರಿಸುವುದು, ಎಲ್ಲ ದಲಿತ ಮಹಿಳೆಯರಿಗೂ ಅನ್ವಯಿಸುವುದಿಲ್ಲ ಎನ್ನುವು

ದನ್ನೂ ಗಮನಿಸಬೇಕು. ಈ ವ್ಯಕ್ತಿತ್ವಗಳನ್ನು ನಿರ್ಮಿಸಿದ ಕರ್ತೃಗಳ ದೃಷ್ಟಿಕೋನವನ್ನಷ್ಟೇ ಇವು ನೀಡುವುದು. ಶೋಷಿತ, ಅಸಹಾಯಕ ದಲಿತ ಮಹಿಳೆಯರ ಸ್ಥಳವನ್ನು, ಅದ್ಭುತ ಕೆಲಸಗಳನ್ನು ಮಾಡಬಲ್ಲ ದಲಿತ ಮಹಿಳೆಯರ ಹೀರೋಯಿಸಂನ ಪ್ರತಿಮಾ ರೂಪಕಗಳು ಆವರಿಸಿವೆ. ಝಲ್ಕಾರಿ ಬಾಯಿ ಏಕಾಂಗಿಯಾಗಿ ಹುಲಿಯನ್ನು ಕೊಂದ ಚಿತ್ರಣ ಕೂಡ ಕಥನಗಳಲ್ಲಿ ಲಭಿಸುತ್ತದೆ. ದಲಿತರ ಸಬಲೀಕರಣಕ್ಕೆ ಸಹಾಯಕವಾಗಿದ್ದೂ, ಈ ಚಿತ್ರಣಗಳು ದಲಿತ ಮಹಿಳೆಯರನ್ನು ನಿಜವಾದ ಅರ್ಥದಲ್ಲಿ ಪ್ರತಿನಿಧಿಸುವುದಿಲ್ಲ. ಇನ್ನೂ ಮುಂದುವರೆದು ಹೇಳುವುದಾದರೆ, ಈ ದಲಿತ ವೀರನಾರಿಯರು ದೈಹಿಕವಾಗಿ ಆಕರ್ಷಕವಾಗಿದ್ದು, 'ಅದ್ಭುತ' ಸೌಂದರ್ಯವತಿಯರೆಂದು ಚಿತ್ರಣಗೊಂಡಿರುವುದು, ಮಹಿಳೆಯರ ಸೌಂದರ್ಯ ಕುರಿತ ಸ್ಟಿರಿಯೋಟೈಪ್ ಅಲ್ಲದೆ ಮತ್ತೇನೂ ಅಲ್ಲ. ಇದರ ಜತೆಗೆ, ಸುಶೀಲ ದಲಿತ ಮಹಿಳೆಯರ ಚಿತ್ರಣ ಕೂಡ, ಪುರುಷರು ದಲಿತ ಮಹಿಳೆಯರ ವ್ಯಕ್ತಿತ್ವವನ್ನು, ನಡವಳಿಕೆಯನ್ನು ನಿಯಂತ್ರಣದಲ್ಲಿಡುವ ತಂತ್ರವಾಗಿದೆ. ಇವುಗಳಲ್ಲಿ ಅನೇಕ ಕಥನಗಳು ಕೆಲವು ಪಿತೃಪ್ರಧಾನ ಮೌಲ್ಯಗಳನ್ನು ಪ್ರತಿಪಾದಿಸುವ ಉಪದೇಶಗಳ ಮಾದರಿಯಲ್ಲಿವೆ. ನಿಷ್ಠ ಹೆಂಡತಿ ಮತ್ತು ಆದರ್ಶಮಯ ತಾಯಿಯ ಚಿತ್ರಣಗಳು ಈ ಕಥನಗಳಲ್ಲಿ ಅವ್ಯಾಹತವಾಗಿ ಕಂಡುಬರುತ್ತವೆ.

ದಲಿತ ಸ್ತ್ರೀವಾದಿ ದೃಷ್ಟಿಕೋನದಲ್ಲಿ ನೋಡುವುದಾದರೆ, ಪುರುಷರಿಂದ ರಚಿತವಾದ ಜನಪ್ರಿಯ ದಲಿತ ಇತಿಹಾಸದಿಂದ, ದಲಿತ ಮಹಿಳೆಯರ ಪ್ರಾತಿನಿಧಿತ್ವವನ್ನು ಅಷ್ಟೇನೂ ಬದಲಾಯಿಸಲು ಸಾಧ್ಯವಾಗಿಲ್ಲ. ಈ ಇತಿಹಾಸಗಳ ಬೀಸು, ವ್ಯಾಪ್ತಿ ಮತ್ತು ಪ್ರಾತಿನಿಧಿತ್ವಗಳಲ್ಲಿ ಅಪಾರವಾದ ವಿಭಿನ್ನತೆಯಿದ್ದರೂ, ಈ ಚಿತ್ರಣಗಳು ದಲಿತ ಮಹಿಳೆಯರನ್ನು ಕೆಲವು ಮಾದರಿಗಳಲ್ಲಿ ಮಾತ್ರ ನೋಡುತ್ತದೆ. ದಲಿತ ಮಹಿಳೆಯರ ಅರ್ಥಪೂರ್ಣ ಚಿತ್ರಣಗಳನ್ನು ನೀಡುವಲ್ಲಿ ಇವು ಎಡವುತ್ತವೆ. ದಲಿತ ಮಹಿಳೆಯರ ಜೀವನದ ಸಂಕೀರ್ಣತೆಯನ್ನು ಮತ್ತು ಆಯಾಮಗಳನ್ನು ಹಿಡಿದಿಡಲು ಸೋಲುವ ಈ ಕಥನಗಳು ಸರಳೀಕೃತಗೊಂಡ ಚಿತ್ರಣಗಳನ್ನಷ್ಟೇ ನೀಡುವುದು. ಕೆಲವರಾದರು ದಲಿತ ಮಹಿಳೆಯರೂ ಗುರುತಿಸಿಕೊಳ್ಳಲಾಗದ ಅಪೂರ್ಣವಾದ ಚಿತ್ರಣಗಳನ್ನು ಇವು ನೀಡುತ್ತವೆ. ಯಾರು ದಲಿತ ಮಹಿಳೆಯರ ಚಿತ್ರಣವನ್ನು ನೀಡುತ್ತಾರೆ ಎನ್ನುವುದನ್ನು ಬಿಟ್ಟು, ಇದರಿಂದ ದಲಿತ ಮಹಿಳೆಯರಿಗೇನಾದರೂ ಲಾಭವಾಗಿದೆಯೆ ಎಂದು ನೋಡಬೇಕಿದೆ. ಬೆಲ್ ಹುಕ್ಸ್ ಪ್ರತಿಪಾದಿಸಿರುವಂತೆ, ಈ ಚಿತ್ರಣಗಳು ವಿಭಿನ್ನತೆ ತಂದಿರಬಹುದು, ಆದರೆ ಸಂಪೂರ್ಣವಾದ ಬದಲಾವಣೆಯನ್ನಂತೂ ತಂದಿಲ್ಲ. ವಿವಿಧ ವ್ಯಕ್ತಿತ್ವಗಳು ಮತ್ತು ಕಥನಗಳ ಮೂಲಕ ದಲಿತ ಮಹಿಳೆಯರೇ ತಮ್ಮ ಇತಿಹಾಸವನ್ನು ಮತ್ತು ಚಿತ್ರಣಗಳನ್ನು ಕಟ್ಟಿ, ತಮ್ಮ ಹಾಡುಗಳನ್ನು ತಾವೇ ಹಾಡುವಂತಾದಾಗ ನಿಜವಾದ ಅರ್ಥದಲ್ಲಿ ದಲಿತ ಮಹಿಳೆಯರಿಗೆ ಬಿಡುಗಡೆ ಲಭಿಸಿದಂತಾಗುತ್ತದೆ.

ವಾದವನ್ನು ಇಲ್ಲಿಗೆ ನಿಲ್ಲಿಸಿಬಿಟ್ಟರೆ, ಒಂದು ಬದಿಯ ಚಿತ್ರಣ ಮಾತ್ರ ನೀಡಿದಂತಾಗುತ್ತದೆ. ಇನ್ನೊಂದು ಬದಿಯ ಚಿತ್ರಣವನ್ನು ಇಲ್ಲಿ ನೀಡುವುದು ಅವಶ್ಯ. ದಲಿತ ವೀರನಾರಿಯರ ಚಿತ್ರಣಗಳು, ೧೮೫೭ರ ದಂಗೆ ಹಾಗೂ ದಲಿತ ಮಹಿಳೆಯರನ್ನು ಕುರಿತು ಯಜಮಾನಿಕ ಧೋರಣೆಗೆ ವಿರುದ್ಧವಾದ ದೃಷ್ಟಿಕೋನಗಳನ್ನು ನೀಡುತ್ತವೆ. ನೈತಿಕವಾಗಿ ಉನ್ನತ ಸ್ಥಾನ ಕಲ್ಪಿಸಿ, ಸಾಹಸ ಪ್ರವೃತ್ತಿ ಹೊಂದಿರುವಂತೆ

ಎಲ್ಲೆಡೆ ಪ್ರಚಲಿತವಾಗಿರುವ, 'ಕುಟ್ನಿಸ್' ಗುಣ ಹೊಂದಿದವರು,ಹಾದರಗಿತ್ತಿಯರು, ಅಥವಾ ಪ್ರತಿರೋಧ ವ್ಯಕ್ತಪಡಿಸದ ಅಸಹಾಯಕರು, ಶೋಷಿತರು, ಎಂಬಂತಹ ದಲಿತ ಮಹಿಳೆಯರ ಕುರಿತ ನಕಾರಾತ್ಮಕ ಸ್ಟಿರಿಯೋಟೈಪ್ ಚಿತ್ರಣಗಳನ್ನು ಇವು ಪ್ರಶ್ನಿಸುತ್ತವೆ.

ದಲಿತ ವೀರನಾರಿಯರನ್ನು ಚಿತ್ರಿಸಿರುವುದನ್ನು, ದಲಿತರಿಗೆ ಗೌರವ ಮತ್ತು "ವಿಶ್ವಾಸಾರ್ಹತೆ"ಯನ್ನು ಒದಗಿಸಲು ಹಾಗೂ ಐತಿಹಾಸಿಕ ಘಟನೆಗಳಲ್ಲಿ ದಲಿತರ ಭಾಗವಹಿಸುವಿಕೆಗೆ ಹೊಸ ಅರ್ಥ ಕಲ್ಪಿಸುವ ಹಿನ್ನೆಲೆಯಲ್ಲಿ ಕೂಡ ನೋಡಬಹುದು. ಸ್ವಾತಂತ್ರ್ಯ ಸಂಗ್ರಾಮ ಮತ್ತು ಭಾರತೀಯ ರಾಷ್ಟ್ರೀಯವಾದದ ಕೈಂಕರ್ಯದಲ್ಲಿ ದಲಿತರು ಸಲ್ಲಿಸಿರುವ ಸೇವೆಯನ್ನು ರೂಪಕವಾಗಿ ದಲಿತ ವೀರನಾರಿಯಲ್ಲಿ ಕಾಣಬಹುದು. ಸ್ಪಿವಾಕ್‌ನ ಪ್ರಮೇಯವನ್ನು ತಲೆಕೆಳಗಾಗಿ ನೋಡುವುದಾದರೆ, ಇಲ್ಲಿ ಉಪಸಂಸ್ಕೃತಿಯ ಜನ ದಲಿತ ವೀರನಾರಿಯರ ಮೂಲಕ ಮಾತನಾಡುತ್ತಿದ್ದಾರೆ. ತಮ್ಮ ದನಿಯನ್ನು ತಾವೇ ಪ್ರತಿನಿಧಿಸುತ್ತಿದ್ದಾರೆ. ಈಗಾಗಲೇ ಗುರುತಿಸಿರುವಂತೆ, "ಮುಖ್ಯವಾಗಿ ಐತಿಹಾಸಿಕವಾಗಿ, ಉಪಸಂಸ್ಕೃತಿಯ 'ಇಟನೆರರಿ ಆಫ್ ಸೈಲೆನ್ಸಿಂಗ್' (ಮೌನದ ಪ್ರವೃತ್ತಿ) ಗುರುತಿಸುವುದರಲ್ಲಿ ಸ್ಪಿವಾಕ್ ಅದ್ಭುತ ಕೆಲಸ ಮಾಡಿದ್ದಾನೆ. ಆದರೆ ಉಪಸಂಸ್ಕೃತಿಯ 'ಕಮಿಂಗ್ ಆಫ್ ವಾಯ್ಸ್' (ಧ್ವನಿ ಪಡೆದುಕೊಳ್ಳುವ) ಪ್ರಕ್ರಿಯೆಯ ಬಗ್ಗೆ ಅಷ್ಟು ಗಮನಹರಿಸಿಲ್ಲ." ಕೆಲವು ಕಡೆ, ದಲಿತ ವೀರನಾರಿಯರ ಸಾಧನೆಗಳು, ವಾಸ್ತವವಾಗಿ ಕರಾಳ ಸ್ಥಿತಿಯಲ್ಲಿರುವ ದಲಿತ ಮಹಿಳೆಯರ ಜತೆಗೆ ತಾಳೆ ಹಾಕಿಕೊಂಡಿದೆ. ಶೌರ್ಯ ಸಾಧನೆಯ ಇತಿಹಾಸವಿದ್ದರೂ, ದಲಿತರ ಪ್ರತಿಷ್ಠೆಯನ್ನು ಕಾಪಾಡಿದ ಹೆಗ್ಗಳಿಕೆಯಿದ್ದರೂ, ಸಮಾಜ ಮತ್ತು ಪುರುಷರ ಕಾರಣದಿಂದ, ದಲಿತ ಮಹಿಳೆಯರು ಶಿಕ್ಷಣದಿಂದ ವಂಚಿತರಾಗಿದ್ದಾರೆ, ಜೀತದಾಳುಗಳಾಗಿದ್ದಾರೆ, ಪುರುಷರಿಂದ ಶೋಷಿತರಾಗುತ್ತಿದ್ದಾರೆ.

ದಲಿತ ಮಹಿಳೆಯರೂ ಕೂಡ ದಲಿತ ವೀರನಾರಿಯರ ಈ ಚಿತ್ರಣಗಳನ್ನು ವಿವಿಧ ರೀತಿಯಲ್ಲಿ ತಮ್ಮ ಒಳಿತಿಗಾಗಿ ಬಳಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಮಾಯಾವತಿ ಅವರ ವ್ಯಕ್ತಿತ್ವಕ್ಕೆ ಇಂಬು ಕೊಡಲು ಈ ಚಿತ್ರಣಗಳನ್ನು ಬಳಸಿಕೊಳ್ಳುವುದರ ಜತೆಗೆ, ದಲಿತ ಮಹಿಳೆಯರ ಸಾಮಾನ್ಯ ಚಿತ್ರಣಗಳನ್ನು ಪ್ರಶ್ನಿಸಲು ಹಾಗೂ ನಿಜಜೀವನದಲ್ಲಿ ಶೋಷಣೆ ಮತ್ತು ದಬ್ಬಾಳಿಕೆಯನ್ನು ಪ್ರಶ್ನಿಸಲು ಕೂಡ ಇವುಗಳನ್ನು ಬಳಸಿಕೊಳ್ಳಲಾಗುತ್ತಿವೆ. ಆದ್ದರಿಂದಲೇ, ಮೀನಾ ಪಾಸಿ ಎಂಬಾಕೆ ಈ ರೀತಿ ಹೇಳಲು ಸಾಧ್ಯವಾಗಿದ್ದು; "ಎಲ್ಲಾ ರೀತಿಯ ಅನ್ಯಾಯಗಳನ್ನು ವಿರೋಧಿಸುವುದನ್ನು ಉದಾ ದೇವಿ ಮತ್ತು ಝಲ್ಕಾರಿ ಬಾಯಿ ನನಗೆ ತೋರಿಸಿಕೊಟ್ಟಿದ್ದಾರೆ. ನಾನು ಶೋಷಣೆಯನ್ನು ಸಹಿಸಿಕೊಳ್ಳಬೇಕಾಗಿಲ್ಲ. ಭೂಮಾಲೀಕನಿಂದ ಯಾಕೆ ನನಗೆ ಕಡಿಮೆ ಕೂಲಿ ಸಿಗುತ್ತಿದೆ ಎಂದು ಪ್ರಶ್ನಿಸಲು, ನನ್ನ ಗಂಡನಿಗಿಂತ ಹೆಚ್ಚಲ್ಲದಿದ್ದರೂ ಅವನಿಗೆ ಸರಿಸಮನಾಗಿ ಕೆಲಸ ಮಾಡುವ ನನಗೆ ಯಾಕೆ ಆತ ಹೊಡೆಯುತ್ತಾನೆ ಎಂದು ಪ್ರಶ್ನಿಸಲು ಈ ವೀರನಾರಿಯರು ನನಗೆ ಸ್ಫೂರ್ತಿ. ಪ್ರತಿರೋಧಿಸುವ ಮತ್ತು ಹೋರಾಡುವ ಇಚ್ಛಾಶಕ್ತಿಯಿದ್ದರೆ ಯಾವುದೂ ಅಸಾಧ್ಯವಲ್ಲ ಎಂದು ಉದಾ ದೇವಿಯ ನಿದರ್ಶನದಿಂದ ನನಗೆ ಗೊತ್ತಾಗಿದೆ."

ದಲಿತ ವೀರನಾರಿಯರ ಚಿತ್ರಣಗಳನ್ನು ಈ ಹಿನ್ನೆಲೆಯಲ್ಲಿ "ಸಕಾರಾತ್ಮಕ ಸಬಲೀಕರಣ"ದ ರೂಪವಾಗಿ ನೋಡಬಹುದು. ಎಲ್ಲೆಡೆ ಪ್ರಚಲಿತವಾಗಿರುವ, 'ಕುಟ್ನಿಸ್' (ಕೆಡುಕಿನ) ಗುಣ ಹೊಂದಿದವರು, ಹಾದರಗಿತ್ತಿಯರು, ಅಥವಾ ಪ್ರತಿರೋಧ ವ್ಯಕ್ತಪಡಿಸದ ಅಸಹಾಯಕರು, ಶೋಷಿತರು, ಎಂಬಂತಹ ದಲಿತ ಮಹಿಳೆಯರ ಕುರಿತ ನಕಾರಾತ್ಮಕ ಸ್ಟಿರಿಯೋಟೈಪ್ ಚಿತ್ರಣಗಳನ್ನು ಇವು ಪ್ರಶ್ನಿಸುತ್ತವೆ. ೧೮೫೭ರ ದಂಗೆ ಕುರಿತ ಜನಪ್ರಿಯ ದಲಿತ ಇತಿಹಾಸಗಳಲ್ಲಿ ದಲಿತ ವೀರನಾರಿಯರು ಪ್ರಾಮುಖ್ಯತೆ ಹೊಂದಿರುವುದನ್ನು, ವಾಸ್ತವ ಜೀವನದಲ್ಲಿ ದಲಿತ ಸ್ತ್ರೀ ಶಕ್ತಿಯ ಸಾಧ್ಯತೆಯ ಪ್ರತಿಬಿಂಬವಾಗಿ ಕೂಡ ನೋಡಬಹುದು. ಬಹುತೇಕ ಪುರುಷರಿಂದಲೇ ರಚಿತವಾಗಿದ್ದರೂ ಈ ಚಿತ್ರಣಗಳು ಸ್ತ್ರೀವಾದಿ ಅಧ್ಯಯನಗಳಿಗೆ ಸೇರ್ಪಡೆಯಾಗುತ್ತದೆ. ಯಾಕೆಂದರೆ, ದಲಿತ ಮಹಿಳೆಯರ "ಶೋಷಣೆ"ಯ ಬಗ್ಗೆ ಇವುಗಳಲ್ಲಿ ಗಮನಹರಿಸದೆ, ಅವರ ಶಕ್ತಿ ಮತ್ತು ಪ್ರತಿರೋಧದ ಚಿತ್ರಣಗಳ ಕಡೆ ಹೆಚ್ಚು ಕಾಳಜಿ ವಹಿಸಲಾಗಿದೆ. ಇಲ್ಲಿ ದಲಿತ ಮಹಿಳೆಯರು ತಮ್ಮದೇ ಆದ ರೀತಿಯಲ್ಲಿ ಪಾತ್ರಧಾರಿಗಳು ಮತ್ತು ಸಬಲೀಕರಣ ಪ್ರಕ್ರಿಯೆಯಲ್ಲಿ ಮಧ್ಯವರ್ತಿಗಳೂ ಆಗಿದ್ದಾರೆ. ಕಥನಗಳ ಪರಿಧಿಯಲ್ಲಿ ದಲಿತ ಮಹಿಳೆಯರು "ಶೋಷಿತ"ರಿಂದ "ಜಯಶಾಲಿ"ಗಳಾಗಿ ಪರಿವರ್ತಿತರಾಗಿದ್ದಾರೆ. ಝಲ್ಕಾರಿ ಬಾಯಿ, ಉದಾದೇವಿ, ಮಹಾಬಿರಿ ದೇವಿ, ಮತ್ತು ಅವರ ಜತೆಗೆ ಬಹಳಷ್ಟು ದಲಿತ ಮಹಿಳೆಯರು, ದೈಹಿಕವಾಗಿ ಶಕ್ತಿಯುತರಾಗಿ ಮತ್ತು ಶಸ್ತ್ರಸಜ್ಜಿತರಾಗಿ, ಶಕ್ತಿ, ಸಾಹಸ, ಕ್ರಿಯಾಶೀಲತೆ ಮತ್ತು ತ್ಯಾಗಗಳ ಪ್ರತಿರೂಪವಾಗಿ, ಬ್ರಿಟಿಷರ ವಿರುದ್ಧ ಹೋರಾಡಿ ಮಡಿದ ವೀರನಾರಿಯರಾಗಿ ಹೊರಹೊಮ್ಮಿದ್ದಾರೆ.

ನಾವು ಇಲ್ಲಿ ಸಾಮಾನ್ಯವಾದ, ಅಕೆಡೆಮಿಕ್ ಇತಿಹಾಸದ ಬಗ್ಗೆ ಗಮನ ಹರಿಸುತ್ತಿಲ್ಲ ಎಂದು ಇಲ್ಲಿ ವಾದಿಸಬಹುದು. ಶೌರ್ಯ ಸಾಹಸಗಳ ವೈಭವೀಕರಣದ ಇತಿಹಾಸವನ್ನು ಸೃಷ್ಟಿಸುತ್ತಿರುವ ದಲಿತ ಲೇಖಕರು, ಆ ಮೂಲಕ ತಮ್ಮದೇ ಆದ ಒಂದು ಸೈಕಿಕ್ ಸ್ಥಳವನ್ನು ನಿರ್ಮಿಸಿಕೊಳ್ಳುತ್ತಿದ್ದಾರೆ ಹಾಗೂ ತಮ್ಮತನವನ್ನು ಕಾಪಾಡಿಕೊಳ್ಳಲು ಮೂಲಗಳನ್ನು ಕೆದಕುತ್ತಿದ್ದಾರೆ. ತನ್ನದೇ ಆದ ಸೀಮಿತ ಮಾದರಿಯಡಿ, ಈ ಇತಿಹಾಸ, ೧೮೫೭ರ ದಂಗೆ ಹಾಗೂ ದಲಿತ ಮಹಿಳೆಯರನ್ನು ಕುರಿತ ಸಾಂಪ್ರದಾಯಿಕ ಚಿಂತನೆಗಳಿಗೆ ಸವಾಲೆಸೆಯುತ್ತದೆ. ಆಂತರಿಕವಾಗಿ ಇದು ಕ್ರಾಂತಿಕಾರಿ ಬದಲಾವಣೆ ತರದೆ ಹೋದರೂ, ಒಂದು ವಿಭಿನ್ನವಾದ ಪ್ರಗತಿಪರ ಮಾದರಿಯನ್ನಂತೂ ನೀಡುತ್ತದೆ. ದಲಿತ ಮಹಿಳೆಯರು ೧೮೫೭ರ ದಂಗೆಯ ಸಂಕೇತಗಳಾಗಿ, ತನ್ಮೂಲಕ ದಲಿತ ಅಸ್ಮಿತೆಯ ಸಂಕೇತಗಳಾಗಿದ್ದಾರೆ. ಇವು ಕೇವಲ ಶೌರ್ಯವಂತ ದಲಿತ ಮಹಿಳೆಯರ ಕಥನಗಳಲ್ಲ. ಇವು ಎಲ್ಲ ದಲಿತ ಮಹಿಳೆಯರ ಕಥನಗಳು. ಅವರ ಶೌರ್ಯ, ಸ್ವಾಭಿಮಾನದ ಕಥನಗಳು, ಪರಂಪರೆಯ ಕಥನಗಳು, ದೇಶ ಸೇವೆಗಾಗಿ ತ್ಯಾಗ ಬಲಿದಾನಗಳನ್ನು ಮಾಡಿದ ದಲಿತ ಮಹಿಳೆಯರ ಕಥನಗಳು. (ಮುಗಿಯಿತು)

ಸೌಜನ್ಯ: ಇ.ಪಿ.ಡಬ್ಲ್ಯೂ

ರಾಜಕೀಯ ಅಂಶಗಳನ್ನು ಮೈಗೂಡಿಸಿಕೊಂಡಿರುವಿಕೆ ಕುರಿತು, ಬಸವಣ್ಣನವರ ವ್ಯಕ್ತಿತ್ವದ ಆಕರ್ಷಕತೆ, ಕರ್ಮಕ್ಕೆ ಕಾಯಕದ ಹಾಗೂ ಮೋಕ್ಷಕ್ಕೆ ಐಕ್ಯದ ಅರ್ಥ, ದಾಸೋಹ ಪರಿಕಲ್ಪನೆಗಳನ್ನು ಚರ್ಚಿಸುತ್ತಾರೆ. ಕಾಯಕದ ಪರಿಕಲ್ಪನೆಯಿಂದ ತಳವರ್ಗಕ್ಕೆ ಸ್ವಾಭಿಮಾನ ಆತ್ಮಗೌರವವನ್ನು ತಂದುಕೊಟ್ಟ ಧರ್ಮ ಕಾಲಾಂತರದಲ್ಲಿ ವೈದಿಕದ ಪಡಿನೆಳಲಾಗಿರುವ ಬಗ್ಗೆ ನಮ್ಮ ಗಮನ ಸೆಳೆಯುತ್ತಾರೆ. ಈ ಧರ್ಮ ಕೂಡ ಜಡಗಟ್ಟುತ್ತ ಪರಿವರ್ತನಾಶೀಲತೆಯನ್ನು ಕಳೆದುಕೊಂಡಿದ್ದನ್ನು ಲೇಖನ ಸೂಚಿಸುತ್ತದೆ. ಹೀಗಾಗಿ ಭಿನ್ನಮತ ಮತ್ತು ವಿಚಾರಗಳನ್ನು ಸಹಿಸಿಕೊಳ್ಳುವ ಗುಣ ಕಡಿಮೆಯಾದಂತೆನಿಸುತ್ತದೆ. 'ಶರಣಸಿದ್ಧಾಂತ ಹಾಗೂ ಪ್ರಾಟೆಸ್ಟಂಟ್ ನೈತಿಕತೆ' ಲೇಖನದ ಆರಂಭದಲ್ಲಿ 'ಶರಣ' ಶಬ್ಧವನ್ನು ವ್ಯಾಖ್ಯಾನಿಸಲಾಗಿದೆ. ಅನುಬಂಧದಲ್ಲಿ ಈ ಪದದ ವಿಸ್ತೃತ ವ್ಯಾಖ್ಯೆ ಶರಣರ ವಚನಗಳ ಮೂಲಕವೇ ಮಂಡಿತವಾಗಿದೆ.

ಮಲ್ಲಿಕಾರ್ಜುನ
ಹಿರೇಮಠ

ಸಮಾಜ ವಿಜ್ಞಾನಿಯ ಆಲೋಚನೆಗಳು

ಬಸವಣ್ಣ ಹೊಸ ಸಮಾಜ ರಚನೆಗೆ ನೀಲ ನಕ್ಷೆಯನ್ನು ತಯಾರಿಸಿಕೊಂಡು ಅದರ ನಿರ್ಮಾಣಕ್ಕೆ ಕ್ರಿಯಾಶೀಲನಾದ ವ್ಯಕ್ತಿ. ಆತ ಕನಸು ಕಂಡ ಕಲ್ಯಾಣ ರಾಜ್ಯ ಇವತ್ತಿಗೂ ರೂಪುಗೊಳ್ಳುತ್ತಲೇ ಇದೆ.

'ಸಾಮಾಜಿಕ ಆಲೋಚನೆ' 'ಅರಿವು-ಹರವು' ಕೃತಿಗಳ ಮೂಲಕ ಮಹೇಶ ತಿಪ್ಪಶೆಟ್ಟಿ ಒಬ್ಬ ಸಾಮಾಜಿಕ ಚಿಂತಕರಾಗಿ ಈಗಾಗಲ ಹೆಸರು ಮಾಡಿದ್ದಾರೆ. ಅವರ 'ಪರಂಪರೆ: ಪರಿವರ್ತನೆ' ಕೃತಿ ಸಮಾಜ ವಿಜ್ಞಾನಿಯ ಅನ್ವೇಷಣೆಯ ಮಾರ್ಗವನ್ನು ಮುಂದುವರಿಸಿದೆ ಮತ್ತು ಇನ್ನಷ್ಟು ಪ್ರಬುದ್ಧವಾಗಿಸಿದೆ. ಲೇಖಕರು ತಾವು ಬಹುವಾಗಿ ಇಷ್ಟಪಡುವ ಸಿದ್ಧಾಂತ ತತ್ವಗಳನ್ನೂ ಕೂಡ ನಿರ್ಮಮವಾಗಿ ವಿವೇಚಿಸಬಲ್ಲರು ಹಾಗೂ ಸತ್ಯದ ಒರೆಗಲ್ಲಿಗೆ ಹಚ್ಚಿ ನೋಡುವ ಜಿಜ್ಞಾಸೆಯನ್ನು ತಾಳಬಲ್ಲರೆಂಬುದು ಇಲ್ಲಿ ನಮಗೆ ಮಹತ್ವದ್ದಾಗುತ್ತದೆ. ಸುಮಾರಾಗಿ ಇಲ್ಲಿಯ ಎಲ್ಲ ಲೇಖನಗಳು ಶರಣ ತತ್ವ, ಸಿದ್ಧಾಂತ ಮತ್ತು ಇವುಗಳ ಕ್ರಿಯಾತ್ಮಕತೆ ಕುರಿತ ಚಿಂತನಗಳಾಗಿವೆ. ಈಗಾಗಲೆ ಸಾಹಿತ್ಯ, ಧರ್ಮ, ಅನುಭಾವಗಳ ನೆಲೆಗಟ್ಟಿನ ಮೇಲೆ ಶರಣ ಚಿಂತನಗಳೂ ವಿಪುಲವಾಗಿ ನಡೆದಿವೆ. ಆದರೆ ಮಾನವಿಕ ಅಧ್ಯಯನದ ನೆಲೆಯಲ್ಲಿ ಸಮಾಜವಿಜ್ಞಾನಿಯಾಗಿ ತಿಪ್ಪಶೆಟ್ಟಿ ಅವರು ನಡೆಸಿರುವ ವಿವೇಚನೆ ತುಂಬಾ ಅಪರೂಪದ್ದು.

ಲೇಖಕರು ಪ್ರಸ್ತಾವನೆಯಲ್ಲಿ ವಚನ ಸಾಹಿತ್ಯ ಧಾರ್ಮಿಕ, ತಾತ್ವಿಕ ಹಾಗೂ ಸಾಹಿತ್ಯಕ ಅಧ್ಯಯನಕ್ಕೆ ಹೆಚ್ಚು ಒಳಪಟ್ಟು ಅದು ಕೇವಲ ಕನ್ನಡ ಪಂಡಿತರ ಕೋಟೆಯಲ್ಲೇ ಬಂಧಿಯಾಗಿರುವುದರ ಬಗ್ಗೆ ತಮ್ಮ ಆತಂಕವನ್ನು ವ್ಯಕ್ತಪಡಿಸುತ್ತಾರೆ. ಮಾನವಿಕವಿಜ್ಞಾನದ ವಿದ್ಯಾರ್ಥಿಗಳ ಲಕ್ಷ್ಯ ಈ ಕಡೆಗೆ ಹೊರಳದಿರುವುದಕ್ಕೆ ಅದನ್ನು ಕೇವಲ ಸಾಹಿತ್ಯ ಎಂದು ಪರಿಗಣಿಸಿದ್ದೇ ಕಾರಣವಾಗಿರಬಹುದು ಎನ್ನುತ್ತಾರೆ. ಬಸವ ಚಳವಳಿಯ ಬಗ್ಗೆ ಅಂತರ್‌ಶಿಸ್ತೀಯ ಅಧ್ಯಯನ ನಡೆಯಬೇಕಾದ ಅವಶ್ಯಕತೆಯನ್ನು ಕುರಿತು ಅವರು ಪ್ರತಿಪಾದಿಸುತ್ತಾರೆ. ತಮ್ಮದೇ ರೀತಿಯಲ್ಲಿ ಅಂಥ ಒಂದು ಪ್ರಯತ್ನಕ್ಕೆ ಇಲ್ಲಿ ಮುಂದಾಗಿದ್ದಾರೆ.

'ಕಲ್ಯಾಣಕ್ರಾಂತಿ' ಲೇಖನ 'ಪೀಠಿಕೆ', 'ಕಲ್ಯಾಣದ ಹಿನ್ನೆಲೆ', 'ಕ್ರಾಂತಿಯ ಅರ್ಥ ಹಾಗೂ ಸ್ವರೂಪ' ಕಲ್ಯಾಣಕ್ರಾಂತಿಯ ಕಾರಣಗಳು, ವಿಶ್ಲೇಷಣೆ ಎಂಬ ಮುಖ್ಯಾಂಶಗಳಲ್ಲಿ ವಿವೇಚಿಸಲ್ಪಟ್ಟಿದೆ. ಇದು ತಿಪ್ಪಶೆಟ್ಟಿ ಅವರ ಶಾಸ್ತ್ರೀಯ ಅಧ್ಯಯನದ ಹಾದಿ. ಪೀಠಿಕೆಯಲ್ಲಿ ಬಸವಣ್ಣ ಅಥವಾ ಬಸವಣ್ಣ ನಡೆಯಿಸಿದ ಕ್ರಾಂತಿ ಯಾಕೆ ನಮಗೆ ಇವತ್ತಿಗೂ ಪ್ರಸ್ತುತ ಎಂಬುದರ ಚರ್ಚೆ ಮಾಡುತ್ತಾರೆ. ಬಸವಣ್ಣ ಹೊಸ ಸಮಾಜ ರಚನೆಗೆ ನೀಲ ನಕ್ಷೆಯನ್ನು ತಯಾರಿಸಿಕೊಂಡು ಅದರ ನಿರ್ಮಾಣಕ್ಕೆ ಕ್ರಿಯಾಶೀಲನಾದ ವ್ಯಕ್ತಿ. ...ನಸು ಕಂಡ ಕಲ್ಯಾಣ ರಾಜ್ಯ ಇವತ್ತಿಗೂ ರೂಪುಗೊಳ್ಳುತ್ತಲೇ ... ಶರಣರು ಕಂಡ ಪರಿಕಲ್ಪನೆ ಸ್ವತಂತ್ರ ಭಾರತದ ಸಂವಿಧಾನದಲ್ಲಿ ...ತಕವಾಗಿರುವುದನ್ನು ಗಮನಿಸಬಹುದು. ಕನ್ನಡ ಭಾಷೆಯಲ್ಲೇ ಶರಣರು ದೇವರನ್ನು ಮಾತಾಡಿಸಿದರು. ಉತ್ತರಭಾರತದಲ್ಲಿ ಬೌದ್ಧ, ಜೈನ, ಸಿಖ್ ಧರ್ಮಗಳು ಹಿಂದುತ್ವದ ವಿರುದ್ಧವಾಗಿ ಸಾಮಾಜಿಕ ಬದುಕಿನಲ್ಲಿ ಸ್ಥಿತ್ಯಂತರಗಳನ್ನು ತಂದರೆ ಹನ್ನೆರಡನೆ ಶತಮಾನದಲ್ಲಿ ಬಸವಚಿಂತನೆ ಕರ್ನಾಟಕದಲ್ಲಿ ವಿಭಿನ್ನ ಬದಲಾವಣೆಗಳನ್ನು ತಂದಿತು. ಆದರೆ ಅದಕ್ಕೆ ಸೂಕ್ತ ಚಾಲನೆ ದೊರಕಲಿಲ್ಲ ಎಂಬುದನ್ನು ಗಮನಿಸುತ್ತಾರೆ.

ಮಾರ್ಕ್ಸ್ ಮತ್ತು ಶರಣರ ಧೋರಣೆಯಲ್ಲಿಯ ಮೂಲಭೂತ ಭಿನ್ನತೆಯನ್ನು ಲೇಖಕರು ಹೀಗೆ ಗುರುತಿಸುತ್ತಾರೆ: "ಉತ್ಪಾದನೆ ಸಂಬಂಧಗಳ ಬದಲಾವಣೆಯಿಂದ ಮಾನವಸಂಬಂಧಗಳು ಬದಲಾವಣೆ ಆಗುತ್ತವೆ ಎಂದು ಕಾರ್ಲ್‌ಮಾರ್ಕ್ಸ್‌ನಂಥವರು ವಾದಿಸಿದರೆ, ಸಾಮಾಜಿಕ ಸಂಬಂಧಗಳ ಬದಲಾವಣೆಯಿಂದಲೆ ಉತ್ಪಾದನೆಯ ಸ್ವರೂಪ ರೂಪಗೊಳ್ಳುತ್ತದೆ ಎಂದು ಶರಣರು ಪರಿಭಾವಿಸಿದ್ದಾರೆ. ಹೋಲಿಕೆ ಮತ್ತು ವ್ಯತ್ಯಾಸಗಳನ್ನು ಗಮನಿಸುತ್ತ ಬಸವಣ್ಣನ ಸಾಮಾಜಿಕ ಪರಿವರ್ತನೆ ಕುರಿತು ಆಲೋಚನೆಗಳನ್ನು ಮಂಡಿಸುತ್ತಾರೆ. ಕಲ್ಯಾಣದ ಹಿನ್ನೆಲೆ ಚರ್ಚಿಸುವಾಗ ಭೌಗೋಳಿಕ ಕಲ್ಯಾಣ, ರಾಜಕೀಯದ ಕಲ್ಯಾಣ ಮತ್ತು ಶರಣರ ಕಲ್ಪನೆಯ ಕಲ್ಯಾಣದ ಬಗ್ಗೆ ವಿವರಣೆ ಇದೆ. ಕ್ರಾಂತಿಯ ಅರ್ಥ ಹಾಗೂ ಅದರ ಸ್ವರೂಪದ ವ್ಯಾಖ್ಯಾನದ ನಂತರ ಕಲ್ಯಾಣದ ಕ್ರಾಂತಿಯ ಸಂದರ್ಭ ಸನ್ನಿವೇಶಗಳನ್ನು ವಿವರಿಸುತ್ತ ಹಲವಾರು ಜಾಗತಿಕ ಕ್ರಾಂತಿಗಳಿಗೂ ಈ ಕ್ರಾಂತಿಗೂ ಇರುವ ಭಿನ್ನತೆಗಳನ್ನು ನೆನಪಿಸುತ್ತಾರೆ.





ನಾಟಕ, ಕಾವ್ಯ, ಕಾದಂಬರಿಗಳಲ್ಲಿ ಇತಿಹಾಸ ಹಾಗೂ ಊಹೆಗಳು ಬೆರೆತಿರುವುದರಿಂದ ಸತ್ಯಕ್ಕೆ ಸಮೀಪ ಇರುವಂತೆ ದಾಖಲಿಸುವ ಅಗತ್ಯವನ್ನರಿತು ಲೇಖಕರು ಇವುಗಳ ಶೋಧನೆಗೆ ತೊಡಗುತ್ತಾರೆ. ಬಸವಣ್ಣ ಬಾಗೇವಾಡಿ ಬಿಟ್ಟಿದ್ದು, ಬಾಗೇವಾಡಿಯಿಂದ ಕೂಡಲ ಸಂಗಮ, ಕೂಡಲಸಂಗಮದಿಂದ ಕಲ್ಯಾಣ, ಆಸ್ಥಾನದಲ್ಲಿ ನೌಕರಶಾಹಿ ಗೊಂದಲ, ಪ್ಯಾಶಿಸ್ಟ್ ಶಕ್ತಿ, ಶರಣರ ಹೆಸರಿನ ಸೈನ್ಯ, ಎತ್ತಿನ ಮಿತ್, ವಿಶ್ವದ ಮೊದಲ ಪಾರ್ಲಿಮೆಂಟ್, ಪ್ರತಿಲೋಮ ವಿವಾಹ, ಅಂತಃಪುರದ ಒಳಸಂಚು–ಈ ಅಂಶಗಳನ್ನು ಒಂದೊಂದಾಗಿ ಚರ್ಚಿಸುತ್ತಾರೆ. ಲೇಖನದ ಕೊನೆಯಲ್ಲಿ ಕೊಟ್ಟಿರುವ ಆಕರ ಗ್ರಂಥಗಳ ಯಾದಿಯನ್ನು ಲಕ್ಷಿಸಿದರೆ ಲೇಖಕರಿಗೆ ಸಾಕಷ್ಟು ಸಾಮಗ್ರಿ ಮತ್ತು ಆಲೋಚನೆಗಳಿರುವುದು ತಿಳಿಯುತ್ತದೆ. ಒಂದು ಭಾಷಣಕ್ಕೆ ಸಿದ್ಧಗೊಳಿಸಿದ ಲೇಖನವಾಗಿದ್ದರಿಂದ ಮುಖ್ಯಾಂಶಗಳಿಗೆ ಮಾತ್ರ ಸೀಮಿತಗೊಳಿಸಿಕೊಂಡಿದ್ದಾರೆ. ಕೂಲಂಕಷವಾಗಿ ಸುದೀರ್ಘವಾದ ಬರಹಕ್ಕೆ ಪ್ರಯತ್ನಿಸಬಹುದು.

ವಿಶ್ಲೇಷಣೆಯ ಭಾಗದಲ್ಲಿ ಕಲ್ಯಾಣ ಕ್ರಾಂತಿ ಸಾಮಾಜಿಕ, ಆರ್ಥಿಕ, ರಾಜಕೀಯ ಅಂಶಗಳನ್ನು ಮೈಗೂಡಿಸಿಕೊಂಡಿರುವಿಕೆ ಕುರಿತು, ಬಸವಣ್ಣನವರ ವ್ಯಕ್ತಿತ್ವದ ಆಕರ್ಷಕತೆ, ಕರ್ಮಕ್ಕೆ ಕಾಯಕದ ಹಾಗೂ ಮೋಕ್ಷಕ್ಕೆ ಐಕ್ಯದ ಅರ್ಥ, ದಾಸೋಹ ಪರಿಕಲ್ಪನೆಗಳನ್ನು ಚರ್ಚಿಸುತ್ತಾರೆ. ಕಾಯಕದ ಪರಿಕಲ್ಪನೆಯಿಂದ ತಳವರ್ಗಕ್ಕೆ ಸ್ವಾಭಿಮಾನ ಆತ್ಮಗೌರವವನ್ನು ತಂದುಕೊಟ್ಟ ಧರ್ಮ ಕಾಲಾಂತರದಲ್ಲಿ ವೈದಿಕದ ಪಡಿನೆಳಲಾಗಿರುವ ಬಗ್ಗೆ ನಮ್ಮ ಗಮನ ಸೆಳೆಯುತ್ತಾರೆ. ಈ ಧರ್ಮ ಕೂಡ ಜಡಗಟ್ಟುತ್ತ ಪರಿವರ್ತನಾಶೀಲತೆಯನ್ನು ಕಳೆದುಕೊಂಡಿದ್ದನ್ನು ಲೇಖನ ಸೂಚಿಸುತ್ತದೆ. ಹೀಗಾಗಿ ಭಿನ್ನಮತ ಮತ್ತು ವಿಚಾರಗಳನ್ನು ಸಹಿಸಿಕೊಳ್ಳುವ ಗುಣ ಕಡಿಮೆಯಾದಂತೆನಿಸುತ್ತದೆ.

'ಶರಣಸಿದ್ಧಾಂತ ಹಾಗೂ ಪ್ರಾಟೆಸ್ಟಂಟ್ ನೈತಿಕತೆ' ಲೇಖನದ ಆರಂಭದಲ್ಲಿ 'ಶರಣ' ಶಬ್ದವನ್ನು ವ್ಯಾಖ್ಯಾನಿಸಲಾಗಿದೆ. ಅನುಬಂಧದಲ್ಲಿ ಈ ಪದದ ವಿಸ್ತೃತ ವ್ಯಾಖ್ಯೆ ಶರಣರ ವಚನಗಳ ಮೂಲಕವೇ ಮಂಡಿತವಾಗಿದೆ. ಅಭಿವೃದ್ಧಿ ಎಂದರೆ ಕೇವಲ ಆದಾಯದ ಹೆಚ್ಚಳ ಮಾತ್ರವಲ್ಲ ಒಂದು ಸಮೂಹದ ಭೌತಿಕ, ಬೌದ್ಧಿಕ ಹಾಗೂ ಆಧ್ಯಾತ್ಮಿಕ ಬೆಳವಣಿಗೆಯಾದಾಗ ಸಾಂಸ್ಕೃತಿಕ ಅಭಿವೃದ್ಧಿ ಎನ್ನಬಹುದು. ಇಂಥ ಒಂದು ಅಭಿವೃದ್ಧಿಯ ಕನಸನ್ನು ಶರಣರು ಹೊಂದಿ ಅದನ್ನು ಕ್ರಿಯಾತ್ಮಕಗೊಳಿಸಿದರು. "ಹನ್ನೆರಡನೆ ಶತಮಾನದ ಕ್ರಾಂತಿ ಕೇವಲ ಆಧ್ಯಾತ್ಮ, ತಪಸ್ಸು, ಮೋಕ್ಷ ನೆಲಕ್ಕೆ ಹತ್ತಲಾರದ ಚಿಂತನಗಳಿಂದ ಕೂಡಿರಲಿಲ್ಲ. ಸರ್ವಸಂಗ ಪರಿತ್ಯಾಗಕ್ಕೆ ಪ್ರತಿಯಾಗಿ ಶ್ರಮದ ಘನತೆ ಹಾಗೂ ಅದು ಹೇಗೆ ತಾತ್ವಿಕ ನೆಲೆಯಿಂದ ಕೂಡಿರಬೇಕು ಎಂಬ ಚಿಂತನೆ ಪ್ರಾರಂಭವಾಯಿತು." ಶರಣ ಸಿದ್ಧಾಂತ ಎಂದರೆ ಕಾಯಕ ಸಿದ್ಧಾಂತವೇ ಎಂಬುದನ್ನು ಲೇಖಕರು ಸರಿಯಾಗಿ ಗ್ರಹಿಸುತ್ತ ವಿವೇಚಿಸುತ್ತಾರೆ. "ದುಡಿಮೆಯಲ್ಲಿ ದೇವರನ್ನು ಕಾಣಬೇಕೆಂಬುದು ಶರಣ ಸಿದ್ಧಾಂತ. ಕಾಯಕಹೀನನಿಗೆ ಮುಕ್ತಿ ದೊರೆಯಲಾರದೆಂಬುದು ಶರಣಸಿದ್ಧಾಂತವಾಗಿದೆ." ಶರಣರ ಕಾಯಕ ಸಿದ್ಧಾಂತ ಹೆಚ್ಚು ಮಾನವೀಯ ಹಾಗೂ ಸಮಾಜವಾದಿ ನೆಲೆಯಲ್ಲಿ ರೂಪುಗೊಂಡಿದೆ ಎಂಬ ನಿಲುಗಡೆಗೆ ಬರಲಾಗಿದೆ.

ಶರಣಸಿದ್ಧಾಂತವನ್ನು ಹಿಂದೂ ಚಿಂತನಾಧಾರೆಯ ಸಂದರ್ಭದಲ್ಲಿಟ್ಟು ಚರ್ಚಿಸಲಾಗಿದೆ. ಹಿಂದೂ ಚಿಂತನೆಯ ಪಾರಮಾರ್ಥ, ಇಹಪರ, ಸ್ವರ್ಗ ನರಕ, ಮಡಿ ಮೈಲಿಗೆ, ಪಾಪಪುಣ್ಯ ಮುಂತಾದವುಗಳ ಪ್ರಭಾವದಿಂದಾಗಿ ನೆಲದ ಮೇಲಿನ ಬದುಕು ಮಾಯೆ ಎಂಬ ಗ್ರಹಿಕೆಗಳು ಭಾರತೀಯ ಚಿಂತನವನ್ನು ಆದ್ದರಿಂದಾದ ದುಷ್ಪರಿಣಾಮಗಳನ್ನು ವಿವೇಚಿಸುತ್ತ ಗುನರ್ ಮಿರಾಲ್ಡ್‌ರಂಥವರನ್ನು ಉದಾಹರಿಸುತ್ತಾರೆ. ಭಾರತ ಏಕೆ ಬಡರಾಷ್ಟ್ರ ಎಂದರೆ ಹಿಂದೂಧರ್ಮವೇ ಅವರನ್ನು ಬಡವರನ್ನಾಗಿಸಿದೆ ಎಂದು

ಶರಣಸಿದ್ಧಾಂತವನ್ನು ಹಿಂದೂ ಚಿಂತನಾ ಧಾರೆಯ ಸಂದರ್ಭದಲ್ಲಿಟ್ಟು ಚರ್ಚಿಸಲಾಗಿದೆ. ಹಿಂದೂ ಚಿಂತನೆಯ ಪಾರಮಾರ್ಥ, ಇಹಪರ, ಸ್ವರ್ಗ ನರಕ, ಮಡಿ ಮೈಲಿಗೆ, ಪಾಪ ಪುಣ್ಯ ಮುಂತಾದವುಗಳ ಪ್ರಭಾವದಿಂದಾಗಿ ನೆಲದ ಮೇಲಿನ ಬದುಕು ಮಾಯೆ ಎಂಬ ಗ್ರಹಿಕೆಗಳು ಭಾರತೀಯ ಚಿಂತನವನ್ನು ಆಳಿದ್ದರಿಂದಾದ ದುಷ್ಪರಿಣಾಮಗಳನ್ನು ವಿವೇಚಿಸುತ್ತ ಗುನರ್ ಮಿರಾಲ್ಡ್‌ರಂಥವರನ್ನು ಉದಾಹರಿಸುತ್ತಾರೆ. ಭಾರತೀಯರು ಸಾಲದಲ್ಲಿ ಹುಟ್ಟಿ ಸಾಲದಲ್ಲಿ ಬೆಳೆದು ಸಾಲದಲ್ಲಿ ಸಾಯುವ ಸ್ಥಿತಿ ಉಂಟಾಯಿತು.

ಪುಸ್ತಕ ಅವಲೋಕನ



ಪರಂಪರೆ ಪರಿವರ್ತನೆ
ಲೇ: ಮಹೇಶ ತಿಪ್ಪಶೆಟ್ಟಿ
ಬೆಲೆ: ರೂ. ೧೦೦/-
ಪ್ರಕಾಶಕರು: ದಾಳಿಂಬ ಪ್ರಕಾಶನ
ಹುನಗುಂದ-೫೮೭೧೧೮.

ಗುನರ್ ಮಿರಾಲ್ಡ್‌ರಂತಹವರು ವ್ಯಂಗ್ಯವಾಗಿ ಹೇಳುವಂತಾಯಿತು. ಭಾರತೀಯರು ಸಾಲದಲ್ಲಿ ಹುಟ್ಟಿ ಸಾಲದಲ್ಲಿ ಬೆಳೆದು ಸಾಲದಲ್ಲಿ ಸಾಯುವ ಸ್ಥಿತಿ ಉಂಟಾಯಿತು. ಹೀಗೆ ಧರ್ಮ ಹಾಗೂ ಊಳಿಗ ಮಾನ್ಯ ಪದ್ಧತಿ ಭಾರತೀಯರನ್ನು ತೃತೀಯ ರಾಷ್ಟ್ರದ ಜನರನ್ನಾಗಿಸಿತು.

ಶರಣ ಸಿದ್ಧಾಂತ ಹಾಗೂ ಪ್ರಾಟೆಸ್ಟಂಟ್ ನೈತಿಕತೆ ಇವುಗಳಲ್ಲಿ ಕೆಲವು ಸಾಮ್ಯತೆಗಳು ಹಾಗೂ ಭಿನ್ನತೆಗಳನ್ನು ವಿವರಿಸಲಾಗಿದೆ. ರೋಮನ್ ಚರ್ಚ್ ವೈದಿಕಶಾಹಿಯ ಪ್ರತಿರೂಪವಾದರೆ ಬಂಡಾಯದ ಪ್ರಾಟೆಸ್ಟೆಂಟ್‌ಗೆ ಶರಣರ ಬಂಡಾಯ ಹತ್ತಿರವಾಗುತ್ತದೆ. "ಚರ್ಚ್ ಹಾಗೂ ಪೋಪ್ ವ್ಯವಸ್ಥೆಯನ್ನು ಲೂಥರ್ ವಿರೋಧಿಸಿದಂತೆ ಬಸವಣ್ಣನು ಗುಡಿ ಸಂಸ್ಕೃತಿ ಹಾಗೂ ಪುರೋಹಿತ ಶಾಹಿಯನ್ನು ವಿರೋಧಿಸಿದನು." ಕ್ಯಾಲ್ವಿನ್‌ನ ಸಿದ್ಧಾಂತ ದುಡಿಮೆಯನ್ನೊಳಗೊಂಡು ಆರ್ಥಿಕಾಭಿವೃದ್ಧಿಯತ್ತ ಗಮನವಿಟ್ಟರೂ ಶರಣಸಿದ್ಧಾಂತ ಕಾಯಕದ ಜತೆಗಿನ ದಾಸೋಹದ ಪರಿಕಲ್ಪನೆಯಿಂದಾಗಿ ಹೆಚ್ಚು ಸಮಾಜಮುಖಿಯಾಯಿತು. ದಾಸೋಹದ ಪರಿಕಲ್ಪನೆಯಿಂದಾಗಿ ವಿರಕ್ತಮಠಗಳ ಸಮಾಜ ಸೇವೆ ಗಮನಾರ್ಹ ಎನಿಸಿದರೂ ದಾಸೋಹದ ದುಷ್ಪರಿಣಾಮ ಎಂದರೆ ಜಂಗಮರ ಭಿಕ್ಷಾಟನೆ ಮತ್ತು ಮಠಗಳ ಭೂ ಒಡೆತನಕ್ಕೆ ಅನುಕೂಲವಾದದ್ದು. ಕೈಗಾರಿಕಾಕ್ರಾಂತಿ, ಬಂಡವಾಳಶಾಹಿತ್ವ–ಎಲ್ಲ ಆಧುನಿಕ ವಿದ್ಯಮಾನಗಳ ಹಿನ್ನೆಲೆಯಲ್ಲಿ ಪ್ರಸ್ತಕ ವಿಷಯಗಳನ್ನು, ಸಮಸ್ಯೆಗಳನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡು ಒಂದು ವಿಶಾಲ ಭಿತ್ತಿಯಲ್ಲಿ ಲೇಖಕರು ಚರ್ಚಿಸುವುದು ಮಹತ್ವದ್ದಾಗುತ್ತದೆ.

'ವಚನಪರಂಪರೆ ತಂದ ಪರಿವರ್ತನೆ' ಲೇಖನ 'ಬಸವತತ್ವ: ಸಾಮಾಜಿಕ ಬದಲಾವಣೆ' ಎಂಬ ಲೇಖನಗಳ ಸಂಕಲನಕ್ಕೆ ತಿಪ್ಪಶೆಟ್ಟಿ ಅವರು ಸಂಪಾದಕರಾಗಿ ಬರೆದ ಪ್ರಸ್ತಾವನೆ. ಹನ್ನೆರಡನೆಯ ಶತಮಾನ ಕರ್ನಾಟಕದಲ್ಲಿ ಸಂಕ್ರಮಣಕಾಲವಾದದ್ದು, ಸ್ಥಾವರವಾಗಿದ್ದ ಸಮಾಜ ಪಲ್ಲಟಗೊಂಡು ಜಂಗಮವಾದ ಬಗ್ಗೆ ಪ್ರಸ್ತಾಪಿಸಲಾಗಿದೆ. ವಚನ ಪರಂಪರೆ ತಂದ ಸಾಮಾಜಿಕ ಬದಲಾವಣೆ ಗ್ರಹಿಸಲು ಸಮಾಜಶಾಸ್ತ್ರದ ವಿದ್ಯಾರ್ಥಿಗಳಿಗೆ ಸಾಹಿತ್ಯದ ಒಳನೋಟ ಹಾಗೂ ಸಾಹಿತ್ಯದ ವಿದ್ಯಾರ್ಥಿಗಳಿಗೆ ಇತರ ಮಾನವಿಕ ವಿಜ್ಞಾನಗಳ ಪ್ರಾಥಮಿಕ ಪರಿಚಯ ಅಗತ್ಯವಾಗಿರಬೇಕು' ಎಂಬ ಲೇಖಕರ ಅಭಿಪ್ರಾಯ ಅವಶ್ಯಕವಾಗಿ ಗಮನಿಸಬೇಕಾದದ್ದು.

'ಲಿಂಗಾಯತ ಸಂಸ್ಕೃತಿ ಕುರಿತು' ಎಂಬ ಲೇಖನ ಎ.ಕೆ. ರಾಮಾನುಜನ್ ಅವರು ಇಂಗ್ಲಿಷ್‌ಗೆ ತಂದಿರುವ ವಚನಗಳ ಸಂಕಲನ 'ದಿ ಸ್ಪೀಕಿಂಗ್ ಆಫ್ ಶಿವ' ದ ಹಿನ್ನುಡಿಯ ಅನುವಾದ. ಮೆಕಾರ್ಮ್ಯಾಕ್ ಎಂಬ ಅಮೆರಿಕನ್ ಸಮಾಜಶಾಸ್ತ್ರಜ್ಞ ಬರೆದಿರುವ ಈ ಲೇಖನ ನಮಗೇ ಕಾಣದ ಕೆಲವು ಹೊಸನೋಟಗಳನ್ನು ಒದಗಿಸುತ್ತದೆ. ಹಾಗೆಯೇ ಈ ನೋಟಗಳ ಮಿತಿಗಳೂ ಇವೆ. ಅನುವಾದ ಮೂಲ ಲೇಖನವೇ ಅನ್ನುವಷ್ಟು ಸಹಜವಾಗಿದೆ.

'ಲಿಂಗಾಯತ–ವೀರಶೈವ ಸಮಾಜಸೇವಕರು' ಲೇಖನವುದ್ದಕ್ಕೂ ಲೇಖಕರ ಚಿಂತನದ ಎಳೆಗಳಿಂದಾಗಿ ಹಲವಾರು ಸಮಾಜ ಸೇವಕರ ಸೇವೆಯನ್ನು ಒಟ್ಟಿಗೇ ನಿರೂಪಿಸುವಾಗ ಒಂದು ಸೂತ್ರ ಹಾಗೂ ಸುಸಂಬದ್ಧತೆ ಕಂಡುಬರುತ್ತದೆ. ಗದುಗಿನ ಲಿಂಗಾಯತ ಅಧ್ಯಯನ ಸಂಸ್ಥೆ ಇಂಥ ಸಮಾಜಸೇವಕರ ಜೀವನ ಚರಿತ್ರೆಗಳನ್ನು ಪುಸ್ತಕಗಳಲ್ಲಿ ಪ್ರಕಟಿಸುವ ಮೂಲಕ ಸ್ಮರಣಾರ್ಹ ದಾಖಲೆ ಒದಗಿಸಿದೆ ಹಾಗೂ ಇಂಥ ತ್ಯಾಗಿಗಳನ್ನು ಕೃತಜ್ಞತೆಯಿಂದ ನೆನೆಯುವ ಪರಿಪಾಠವನ್ನು ಹಾಕಿದೆ. ಲೇಖಕರಿಗೆ ಈ ಪುಸ್ತಕಗಳೇ ಆಕರಗಳಾಗಿವೆ.

'ದಲಿತ ಹಾಗೂ ವೀರಶೈವ–ಒಂದು ಸಾಮಾಜಿಕ ವಿಶ್ಲೇಷಣೆ' ಲೇಖನದಲ್ಲಿ ಇಳಕಲ್ಲು ಮಹಾಂತಸ್ವಾಮಿಗಳು ದಲಿತ ಉತ್ತರಾಧಿಕಾರಿಯನ್ನಾಗಿ ಮಾಡಿಕೊಳ್ಳುವ ಘೋಷಣೆ ಮಾಡಿದಾಗ

(೩೭ನೇ ಪುಟಕ್ಕೆ)

ಈ ಕೋರ್ಟ್ ಕೇಸಿನಲ್ಲಿ ನೊವಾರ್ಟಿಸ್ ಗೆದ್ದಿತೆಂದರೆ ತಮ್ಮ ಹಳೆ ಔಷಧಗಳಿಗೆ ಮತ್ತೆ ಪೇಟೆಂಟ್ ಪಡೆಯಲು ಸಾಲುಗಟ್ಟಿ ನಿಂತಿವೆ ಔಷಧ ಕಂಪನಿಗಳು. ಪರಿಣಾಮ–ನಮ್ಮ ಬಡ ರೋಗಿಗಳ ಮೇಲೇನಾದೀತು?

ಕ್ರೋನಿಕ್ ಮಯೋಲೈಡ್ ಲ್ಯುಕೇಮಿಯಾ ಎಂಬ ಒಂದು ವಿಧದ ರಕ್ತ ಕ್ಯಾನ್ಸರಿದೆ. ಈ ರೋಗಕ್ಕೆ ಇಮಾಟಿನಿಬ್ ಮಿಸ್ಲೈಲೇಟ್ ಎಂಬುದೊಂದು ಔಷಧ. ಬಲು ದುಬಾರಿಯ ಔಷಧವಿದು. ಭಾರತದಲ್ಲಿ ವಿವಿಧ ಕಂಪನಿಗಳು–ಸಿಪ್ಲಾ, ನಾಟ್ಕೊ, ರಾನಬಾಕ್ಸಿ ಮತ್ತು ಹೆಟಿರೋ–ಈ ಔಷಧವನ್ನು ಮೂಲ ರೂಪದಲ್ಲಿ ತಯಾರಿಸುತ್ತದೆ. ಮೂಲರೂಪದ ಔಷಧಕ್ಕೆ ತಿಂಗಳಿಗೆ ೮೦೦೦/–ರೂ. ಆದರೆ, ಗ್ಲೀವೆಕ್ ಬ್ರಾಂಡಿನ ಬೆಲೆ ತಿಂಗಳಿಗೆ ೧.೨ ಲಕ್ಷ ರೂಪಾಯಿಗಳು.

ತನ್ನ ಬ್ರಾಂಡಿಗೆ ಭಾರತದಲ್ಲಿ ಪೇಟೆಂಟ್ ನೀಡಬೇಕೆಂದು ಚೆನ್ನೈನಲ್ಲಿರುವ ಪೇಟೆಂಟ್ ಕಚೇರಿಯಲ್ಲಿ ಕಳೆದ ವರ್ಷ ನೊವಾರ್ಟಿಸ್ ಕಂಪನಿ ಅರ್ಜಿ ಹಾಕಿತು. ಆದರೆ ಆ ಔಷಧಕ್ಕೆ ಆ ಕಂಪನಿಗೆ ಪೇಟೆಂಟ್ ಸಿಗಲಿಲ್ಲ. ಅದಕ್ಕೆ ಪ್ರತಿಯಾಗಿ ನೊವಾರ್ಟಿಸ್, ಪೇಟೆಂಟ್ ಕಚೇರಿಯ ತೀರ್ಪನ್ನು ಪ್ರಶ್ನಿಸಿ, ತನಗೆ ನ್ಯಾಯ ಕೊಡಬೇಕೆಂದು ಮದ್ರಾಸ್ ಹೈಕೋರ್ಟಿನಲ್ಲಿ ದಾವೆ ಹಾಕಿದೆ.

ಸ್ವಿಸ್ ಕಂಪನಿಯ ದಾವೆಯು ಇಡೀ ಜಗತ್ತಿನಲ್ಲಿ ತಳಮಳ ಉಂಟುಮಾಡಿದೆ. ಈ ದಾವೆಗೇನಾದರೂ ಜಯ ಸಿಕ್ಕಿತೆಂದರೆ ತಾವು ಯಾವ್ಯಾವ ಔಷಧಗಳ ಮೇಲೆ ಭಾರತದಲ್ಲಿ ಪೇಟೆಂಟ್ ಪಡೆಯಬಹುದೆಂದು ಅನೇಕ ಬಹುರಾಷ್ಟ್ರೀಯ ಕಂಪನಿಗಳೂ, ಪೇಟೆಂಟ್‌ಗಳದ್ದೇ ಆಳ್ವಿಕೆಯಾಯಿತೆಂದರೆ ತಮ್ಮ ಗತಿ ಏನೆಂದು ಕ್ಯಾನ್ಸರ್ ರೋಗಿಗಳು, ಇದು ಅನ್ಯಾಯದ ಪರಮಾವಧಿಯಲ್ಲವೇ ಎಂದು ರೋಗಿಗಳ ಪರ ಜನಪರ ಸಂಘಟನೆಗಳು, ದೇಶ ವಿದೇಶಗಳ ಡಾಕ್ಟರುಗಳು... ಹೀಗೆ ಆ ಔಷಧಕ್ಕೆ ಹತ್ತಿರದ ಸಂಬಂಧ ಬರುವಂಥವರೆಲ್ಲ ಏನೆಂದು ತೀರ್ಪು ಬರುವುದೋ ಎಂದು ಹಾದಿ ನೋಡುತ್ತಿದ್ದಾರೆ. ಈ ಕೇಸನ್ನು ಹಿಂತೆಗೆದುಕೊಳ್ಳುವಂತೆ ಕೋರಿ ಕಂಪನಿಗೆ ಪತ್ರ ಬರೆಯಬೇಕೆಂದು ಜಗತ್ತಿನಾದ್ಯಂತ ಜನರಿಗೆ ಫ್ರಾನ್ಸ್ ಮೂಲದ 'ಡಾಕ್ಟರ್ಸ್ ವಿದೌಟ್ ಬಾರ್ಡರ್' ಸಂಸ್ಥೆಯು ಕೇಳಿಕೊಳ್ಳುತ್ತಿದೆ. ಈಗಾಗಲೇ ಎರಡು ಲಕ್ಷಕ್ಕೂ ಮೀರಿ ಜನರು ನೊವಾರ್ಟಿಸ್ ಕಂಪನಿಗೆ ಪತ್ರವನ್ನೂ ಬರೆದಾಗಿದೆ.

ಈ ಕೇಸಿನಲ್ಲಿ ನೊವಾರ್ಟಿಸ್ ಗೆದ್ದು ಗ್ಲೀವೆಕ್‌ಗೆ ಭಾರತದಲ್ಲಿ ಪೇಟೆಂಟ್ ದೊರೆಯಿತೆಂದರೆ, ಆ ಔಷಧವನ್ನು ನಮ್ಮ ಕಂಪನಿಗಳು ತಯಾರಿಸುವಂತಿಲ್ಲ. ಗ್ಲೀವೆಕ್‌ನ ಬೆಲೆ ೧.೨ ಲಕ್ಷ ರೂಪಾಯಿಗಳು. ಕ್ಯಾನ್ಸರ್ ರೋಗಿಗಳಲ್ಲಿ ೯೯% ಜನರಿಗೆ ಗ್ಲೀವೆಕ್ ಸಹಾಯದಿಂದ ಬದುಕಿರಲು ಸಾಧ್ಯವೇ ಇಲ್ಲ. ಭಾರತದಂಥ ಬಡದೇಶದಲ್ಲಿ, ಶ್ರೀಮಂತ ಜನರಿಗೂ ಸಾಧ್ಯವಾಗದ ಬೆಲೆಯಲ್ಲಿ ಆ ಕಂಪನಿಯು ಔಷಧ ಉತ್ಪಾದಿಸಿ ಮಾರುವ ಯೋಚನೆ ಹೇಗೆ ಮಾಡುತ್ತಿದ್ದೆಯೋ ಈ ಪ್ರಶ್ನೆಗಳಿಗೆ ಉತ್ತರವೇ ಇಲ್ಲ.

ಎರಡು ವರ್ಷಕ್ಕಿಂತ ಹಿಂದೆಯಾದರೆ ನೊವಾರ್ಟಿಸ್‌ಗೆ ತನ್ನ ಔಷಧದ ಮೇಲೆ ಭಾರತದಲ್ಲಿ ಪೇಟೆಂಟ್ ಪಡೆಯುವ ಪ್ರಶ್ನೆಯೇ ಬರುತ್ತಿರಲಿಲ್ಲ. ಯಾಕೆಂದರೆ ಆಗ ನಮ್ಮಲ್ಲಿದ್ದುದು ಔಷಧ ತಯಾರಿಕೆ ವಿಧಾನದ ಸ್ವಾಮ್ಯ ಹಕ್ಕು ಕಾನೂನು. ಆದರೆ ೨೦೦೫ರಲ್ಲಿ ನಮ್ಮ ಬೌದ್ಧಿಕ ಸ್ವಾಮ್ಯ ಹಕ್ಕು ಕಾನೂನು ಬದಲಾಯಿತು. ವಸ್ತು ತಯಾರಿಕಾ ವಿಧಾನದ ಮೇಲೆ ಪೇಟೆಂಟ್ ಕೊಡುವ ಪದ್ಧತಿ ಹೋಗಿ, ವಸ್ತುವಿಗೇ ಪೇಟೆಂಟ್ ಕೊಡುವಂಥ ಕಾನೂನು ಜಾರಿಯಲ್ಲಿ ಬಂತು. ಈಗ ಕಂಪನಿಗಳು ತಾವು ತಯಾರಿಸಿದ ವಸ್ತುಗಳ ಮೇಲೆ ಪೇಟೆಂಟ್ ಪಡೆಯಬಹುದು. ಒಂದು ವಸ್ತುವಿನ ಮೇಲೆ ಒಬ್ಬರು ಪೇಟೆಂಟ್ ಪಡೆದರೆಂದರೆ ಆ ವಸ್ತುವನ್ನು ಬೇರೆ ಯಾರೂ, ಯಾವ ವಿಧಾನದಲ್ಲೂ ತಯಾರಿಸುವಂತಿಲ್ಲ. ಗ್ಲೀವೆಕ್ ಮೇಲೆ ನೊವಾರ್ಟಿಸ್‌ಗೆ ಪೇಟೆಂಟ್ ಸಿಕಿಟ್ಟಿತೆಂದರೆ ಅದನ್ನು ಬೇರೆ ಯಾವ ವಿಧಾನದಲ್ಲೂ, ಯಾರೂ, ಎಷ್ಟೇ ಕಡಿಮೆ ಬೆಲೆಗೆ ಮಾಡಿಕೊಡುತ್ತೇನೆಂದರೂ ತಯಾರಿಸದಂತೆ ಕೈ ಕಟ್ಟಿ ಹಾಕಿದಂತಾಗುತ್ತದೆ.



ಕ್ಯಾನ್ಸರ್ ರೋಗಿಗಳ ಕತ್ತು ಹಿಚುಕುತ್ತಿರುವ ಪೇಟೆಂಟ್ ಕದನ

ನಮ್ಮ ಹಿಂದಿನ ಪೇಟೆಂಟ್ ಕಾನೂನಿನ ಪ್ರಕಾರ ಒಂದು ಕಂಪನಿಗೆ ಒಂದು ವಸ್ತುವಿನ ಮೇಲೆ ಕೇವಲ ೭ ವರ್ಷಗಳವರೆಗೆ ಬೌದ್ಧಿಕ ಸ್ವಾಮ್ಯ ಹಕ್ಕು ಇರುತ್ತಿತ್ತು. ಆದರೀಗ ಅದು ೨೦ ವರ್ಷಗಳ ಅವಧಿಗೆ ವಿಸ್ತರಿಸಿಕೊಂಡಿದೆ. ಅಂದರೆ ಅಂಥದ್ದೇ ಔಷಧವನ್ನು ಬೇರೆ ಯಾರು ತಯಾರಿಸಬೇಕೆಂದರೂ ಪೇಟೆಂಟ್ ಪಡೆದವರಿಗೆ ೨೦ ವರ್ಷಗಳವರೆಗೆ ಸಹಾಯಧನ ಕೊಡುತ್ತಿರಲೇಬೇಕು. ಈ ಪೇಟೆಂಟ್ ಕೇಸಿನ ವಿಶೇಷವೆಂದರೆ ಇದು ಹೊಸದಾಗಿ ಕಂಡು ಹಿಡಿದ ವಸ್ತು ಅಲ್ಲವೇ ಅಲ್ಲ. ಅನೇಕ ವರ್ಷಗಳಿಂದಲೂ ಚಾಲ್ತಿಯಲ್ಲಿರುವ ಕ್ಯಾನ್ಸರ್ ಔಷಧವದು. ಆ ಔಷಧವನ್ನು ರೂಪಾಂತರ ಮಾಡಿ ಗುಣಮಟ್ಟ ಹೆಚ್ಚಿಸಲಾಗಿದೆ. ಇದನ್ನು ಶೇಖರಿಸಿಟ್ಟುಕೊಳ್ಳಲು ಬಲು ಅನುಕೂಲ, ತಯಾರಿಸುವುದೂ ಸುಲಭ. ಅದಕ್ಕೇ ತನಗೆ ಪೇಟೆಂಟ್ ಕೊಡಬೇಕೆಂದು ಅದರ ಕೋರಿಕೆಯಾಗಿತ್ತು.

ಡಾ॥ ಗೋಪಾಲ ದಾಬಡೆ

ನಮ್ಮ ಹಿಂದಿನ ಪೇಟೆಂಟ್ ಕಾನೂನಿನ ಪ್ರಕಾರ ಒಂದು ಕಂಪನಿಗೆ ಒಂದು ವಸ್ತುವಿನ ಮೇಲೆ ಕೇವಲ ೫ ವರ್ಷಗಳವರೆಗೆ ಬೌದ್ಧಿಕ ಸ್ವಾಮ್ಯ ಹಕ್ಕು ಇರುತ್ತಿತ್ತು. ಆದರೀಗ ಅದು ೨೦ ವರ್ಷಗಳ ಅವಧಿಗೆ ವಿಸ್ತರಿಸಿಕೊಂಡಿದೆ. ಅಂದರೆ ಅಂಥದ್ದೇ ಔಷಧ ವನ್ನು ಬೇರೆ ಯಾರು ತಯಾರಿಸಬೇಕೆಂದರೂ ಪೇಟೆಂಟ್ ಪಡೆದವರಿಗೆ ೨೦ ವರ್ಷಗಳವರೆಗೆ ಸಹಾಯಧನ ಕೊಡುತ್ತಿರಲೇಬೇಕು.

ಈ ಪೇಟೆಂಟ್ ಕೇಸಿನ ವಿಶೇಷವೆಂದರೆ ಇದು ಹೊಸದಾಗಿ ಕಂಡು ಹಿಡಿದ ವಸ್ತು ಅಲ್ಲವೇ ಅಲ್ಲ. ಅನೇಕ ವರ್ಷಗಳಿಂದಲೂ ಚಾಲ್ತಿಯಲ್ಲಿರುವ ಕ್ಯಾನ್ಸರ್ ಔಷಧವದು. ಆ ಔಷಧವನ್ನು ರೂಪಾಂತರ ಮಾಡಿ ಗುಣಮಟ್ಟ ಹೆಚ್ಚಿಸಲಾಗಿದೆ. ಇದನ್ನು ಶೇಖರಿಸಿಟ್ಟುಕೊಳ್ಳಲು ಬಲು ಅನುಕೂಲ, ತಯಾರಿಸುವುದೂ ಸುಲಭ. ಅದಕ್ಕೇ ತನಗೆ ಪೇಟೆಂಟ್ ಕೊಡಬೇಕೆಂದು ಅದರ ಕೇಳಿಕೆಯಾಗಿತ್ತು. ಆದರೆ ಇಮಾಟಿನಿಬ್ ಮಿಸ್ಯೆಲೇಟ್ ಒಂದು ಹೊಸ ಆವಿಷ್ಕಾರವಲ್ಲ ಎಂಬ ಕಾರಣಕ್ಕಾಗಿಯೇ ಚೆನ್ನೈನ ಪೇಟೆಂಟ್ ಕಚೇರಿಯು ನೊವಾರ್ಟಿಸ್‌ಗೆ ಪೇಟೆಂಟ್ ಹಕ್ಕು ಕೊಡಲು ನಿರಾಕರಿಸಿದ್ದು. ಭಾರತದ ಬೌದ್ಧಿಕ ಸ್ವಾಮ್ಯ ಹಕ್ಕು ಕಾನೂನಿನ ಸೆಕ್ಷನ್ ೩ಡಿಯು ಈಗಾಗಲೇ ಇರುವಂಥ ವಸ್ತುವಿನ ರೂಪಾಂತರಕ್ಕೆ ಸ್ವಾಮ್ಯ ಹಕ್ಕು ನೀಡಲಾಗುವುದಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತದೆ.

ಪ್ರತಿಯೊಂದು ದೇಶವೂ ತನ್ನ ಜನರ ಆರೋಗ್ಯವನ್ನು ರಕ್ಷಿಸಲು ತನ್ನದೇ ಆದ ಉಪನಿಯಮಗಳನ್ನು ರಚಿಸಿಕೊಳ್ಳಬೇಕೆಂದು ಟ್ರಿಪ್ಸ್ ಒಪ್ಪಂದವು ಸ್ಪಷ್ಟವಾಗಿ ಹೇಳುತ್ತದೆ. ೨೦೦೫ರಲ್ಲಿ ನಡೆದ ವಿಶ್ವ ವ್ಯಾಪಾರ ಸಂಸ್ಥೆಯ ದೋಹಾ ಘೋಷಣೆಯಲ್ಲೂ ಹೀಗೆಯೇ ಹೇಳಲಾಗಿದೆ. ಭಾರತೀಯ ಪೇಟೆಂಟ್ ಕಾನೂನು ಬದಲಾಗುವಾಗ ಪೇಟೆಂಟ್‌ನ ದುರುಪಯೋಗ ಆಗದಿರಲೆಂದೇ ಪಾರ್ಲಿಮೆಂಟಿನಲ್ಲಿ ವಿಶೇಷ ಚರ್ಚೆ ಮಾಡಿ ಸೆಕ್ಷನ್ ೩ಡಿಯನ್ನು ಮುದ್ದಾಂ ಸೇರಿಸಿಯಾಗಿದೆ. ಅಂತರ್‌ರಾಷ್ಟ್ರೀಯ ಕಾನೂನುಗಳಿಗೆ ಸಮ್ಮತವಾಗಿ ಇದ್ದರೂ ಕೂಡ 'ಇದು ಟ್ರಿಪ್ಸ್ ಒಪ್ಪಂದದ ಉಲ್ಲಂಘನೆ' ಎಂದು ದೂರುತ್ತದೆ ಆ ಕಂಪನಿ. ನಮ್ಮ ಪಾರ್ಲಿಮೆಂಟಿನಲ್ಲಿ ನಿರ್ಧಾರವಾಗಿರುವ ಒಂದು ಅಧಿನಿಯಮವನ್ನೇ ನೊವಾರ್ಟಿಸ್ ಪ್ರಶ್ನಿಸಿದ್ದು ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಗೇ ಸವಾಲೆಸೆದಿದೆ.

ಅಕಸ್ಮಾತ್ ನೊವಾರ್ಟಿಸ್ ತನ್ನ ಕೇಸನ್ನು ಗೆದ್ದುಕೊಂಡಿತೆಂದರೆ ಇಂಥ ಇನ್ನೂ ಹತ್ತಾರು ಔಷಧಗಳನ್ನು ಹಿಡಿದು ಕಂಪನಿಗಳು ಕ್ಯೂ ನಿಂತಿವೆ. ಒಂದರ ಬಣ್ಣ ಬದಲಾಯಿಸಿ, ಇನ್ನೊಂದರ ರೂಪ ಬದಲಾಯಿಸಿ ಇನ್ನೂ ಇಪ್ಪತ್ತು ವರ್ಷಗಳ ಕಾಲ ಆ ಔಷಧಗಳ ಸ್ವಾಮ್ಯ ಹಕ್ಕು ಪಡೆದು ಜನರ ಕೈಗೆ ನಿಲುಕದಂತೆ ಮಾಡಲು. ಇದರ ಪರಿಣಾಮ ಕೇವಲ ಭಾರತದ ಜನತೆಯ ಮೇಲಷ್ಟೇ ಅಲ್ಲ, ತೃತೀಯ ಜಗತ್ತಿನ ಫಾರ್ಮಸಿ ಎನಿಸಿಕೊಂಡಿರುವ ಭಾರತದಲ್ಲಿ ಔಷಧಗಳು ದುಬಾರಿಯಾದುವೆಂದರೆ ಸುತ್ತಲಿನ ೧೫೦ ಬಡದೇಶಗಳ ಬಡರೋಗಿಗಳಿಗೆ ಬೀಳುವ ಬೃಹತ್ ಪೆಟ್ಟದು. ಉದಾಹರಣೆಗೆ ಏಡ್ಸ್ ಔಷಧಗಳಲ್ಲಿ ಅರ್ಧಕ್ಕರ್ಧದಷ್ಟು ಭಾರತದಲ್ಲಿ ಕಡಿಮೆ ಬೆಲೆಗೆ ತಯಾರಾಗಿ ಆಫ್ರಿಕಾ, ಇಂಡೋನೇಶ್ಯಾಗಳಿಗೆಲ್ಲ ಹೋಗುತ್ತವೆ.

ವಿದೇಶಗಳಲ್ಲಿ ಪೇಟೆಂಟ್ ಆದ ಔಷಧಗಳನ್ನು ಅವುಗಳ ಮೂಲ ರೂಪದಲ್ಲಿ ಉತ್ಪಾದಿಸಲು ಇಲ್ಲಿನ ಜನರಿಕ್ ಕೈಗಾರಿಕೆಗೆ ಸಾಧ್ಯವಾಗಿದೆ. ಅದಕ್ಕೆ ತಡೆ ಉಂಟಾಯಿತೆಂದರೆ ಆಫ್ರಿಕಾ, ಏಶಿಯಾ, ಲ್ಯಾಟಿನ್ ಅಮೆರಿಕಾಗಳ ಸಾವಿರಾರು ಬಡ ರೋಗಿಗಳು ಬದುಕುವ ಆಶೆಯನ್ನು ಬಿಡಬೇಕು. ಇದಕ್ಕಾಗಿಯೇ ನೊವಾರ್ಟಿಸ್ ಕೇಸು ಇಡೀ ಜಗತ್ತಿಗೇ ಕಳವಳ ಉಂಟು ಮಾಡಿದ್ದು. 'ಓ ನೊವಾರ್ಟಿಸ್ ಮಹಾಶಯ, ಕೇಸನ್ನು ಕೈ ಬಿಡು' ಎಂದು ಫ್ರಾನ್ಸ್ ಮೂಲದ 'ಡಾಕ್ಟರ್ಸ್ ವಿದೌಟ್ ಬಾರ್ಡರ್'ನವರು ಕರೆ ಕೊಟ್ಟಿದ್ದು. ಅದಕ್ಕೇ ದೇಶಾಂತರಗಳಿಂದ ಲಕ್ಷಾಂತರ ಸಹಿಗಳ ಸಂಗ್ರಹಣೆ ಆಗುತ್ತಿರುವುದು. ನಮ್ಮ ಆರೋಗ್ಯ ಮಂತ್ರಿ ಅನ್ಬುಮಣಿ ರಾಮದಾಸ್, ನಾರ್ವೆಯ ಅಂತರಾಷ್ಟ್ರೀಯ ಅಭಿವೃದ್ಧಿ ಮಂತ್ರಿ ಎರಿಕ್ ಸೊಲ್ಹೈಂ ಅಮೆರಿಕಾದ ಕಾಂಗ್ರೆಸ್ ಮುಖ್ಯಸ್ಥ ಹೆನ್ರಿ ವಾಕ್ಸ್‌ಮನ್ ಇವರೆಲ್ಲ ನೊವಾರ್ಟಿಸ್‌ಗೆ ಬೇಡಿಕೊಳ್ಳುತ್ತಿರುವುದು.

ನೊವಾರ್ಟಿಸ್ ಮಾತ್ರ ಈ ಎಲ್ಲರ ಬೇಡಿಕೆಗಳಿಗೆ ಕಿವಿ ಮುಚ್ಚಿ ಕುಳಿತಿದೆ. ಕೇಸು ಗೆಲ್ಲುವತ್ತಲೇ ಇದರ ಲಕ್ಷ್ಯ. ಕೈಲಾಗದ ಬಡರೋಗಿಗಳಿಗೆ ನಾವು ಬೇಕಾದರೆ ಮುಕ್ಕಟೆ ಔಷಧ ಕೊಡುತ್ತೇವೆ ಎನ್ನುತ್ತದದು. ಈಗಾಗಲೇ ಇರುವ ರಕ್ತ ಕ್ಯಾನ್ಸರ್ ರೋಗಿಗಳ ಸಂಖ್ಯೆಗೆ ಪ್ರತಿವರ್ಷ ೨೦,೦೦೦ ರೋಗಿಗಳು ಹೊಸದಾಗಿ ಸೇರ್ಪಡೆಯಾಗುತ್ತಿದ್ದಾರೆ. ಇಂದು ನೊವಾರ್ಟಿಸ್ ಸಹಾಯ ಮಾಡುತ್ತಿರುವುದು ೬,೭೦೦ ರೋಗಿಗಳಿಗೆ ಮಾತ್ರ.

ನೊವಾರ್ಟಿಸ್ ಉತ್ಪಾದಿಸುವ ಎಲ್ಲಾ ಔಷಧಗಳನ್ನು ಬರೆಯುವುದನ್ನು, ಖರೀದಿಸುವುದನ್ನು ನಿಲ್ಲಿಸಿ, ವೈದ್ಯರು ಮತ್ತು ರೋಗಿಗಳು ಅದಕ್ಕೆ ಸಾಮಾಜಿಕ ಬಹಿಷ್ಕಾರ ಹಾಕಬೇಕೆನ್ನುತ್ತದೆ **ಕರ್ನಾಟಕ–ಔಷಧ ಕ್ರಿಯಾ ವೇದಿಕೆ**. ಅದಕ್ಕಾಗಿ ವೇದಿಕೆಯು ಭಾರತೀಯ ವೈದ್ಯ ಸಂಘವನ್ನು ಸಂಪರ್ಕಿಸಿ ಅಪೀಲು ಮಾಡಿಕೊಂಡಿದೆ. ದೇಶ ಮಟ್ಟದಲ್ಲೂ ಇದೇ ಪ್ರಯತ್ನ ನಡೆದಿದೆ. ಒಂದೊಂದೇ ಐ.ಎಮ್.ಎ.ಗಳು ವೇದಿಕೆಯ ಕರೆಗೆ ಓಗೊಡುತ್ತಿರುವುದು ಒಂದು ಶುಭ ಸೂಚನೆ. ಕತ್ತಲೆಯ ದಾರಿಯಲ್ಲಿ ಗೋಚರವಾಗುತ್ತಿರುವ ಆಶಾಕಿರಣ. □

ಸಮಾಜ ವಿಜ್ಞಾನಿಯ ಆಲೋಚನೆಗಳು

(೩೫ನೇ ಪುಟದಿಂದ)

ಬಂದ ಪ್ರತಿಭಟನೆಯ ಸಂದರ್ಭ ಹಾಗೂ ಅದರ ಪೂರ್ವಾಪರಗಳ ವಿಶ್ಲೇಷಣೆ ಇದೆ. ದಲಿತ ಕಾಯಕ ಜೀವಿಗಳ ಹೋರಾಟ ಎಂದು ಅರ್ಥವಿಸಲ್ಪಟ್ಟ ಬಂಡಾಯಧರ್ಮವು ಬಸವೋತ್ತರಯುಗದಲ್ಲಿ ಸಂಸ್ಕೃತಾನುಕರಣಕ್ಕೆ ಪಕ್ಕಾಗಿ ಬಸವತತ್ವದ ವಿರುದ್ಧವೇ ರೂಪುಗೊಂಡ ದುರಂತವನ್ನು ತಾತ್ವಿಕ ನೆಲೆಯಲ್ಲಿ ಚರ್ಚಿಲಾಗಿದೆ.

'ಚಿತ್ತರಾಗಿ ವಿಜಯಮಹಾಂತೇಶಮಠ ಇಲಕಲ್ಲ',

'ಸ್ವಾಮೀಜಿ–ಜನಪರಿವರ್ತನೆ' 'ಪರಿವರ್ತನೆಯ ಹಾದಿಯಲ್ಲಿ ಇಲಕಲ್ಲ ಮಠ' 'ಸಮಾಜಸೇವಾ ದೀಕ್ಷೆ–ಒಂದು ನೆನಪು' ಈ ಲೇಖನಗಳು ಸ್ವಾಮಿಗಳ ಸಾಮಾಜಿಕ ಕಾರ್ಯಗಳು, ಸಾಧನೆಗಳನ್ನು ವಿವರಿಸುವುದಲ್ಲದೆ ಈಚೆಗೆ ಸಮಾಜ ಸೇವಾದೀಕ್ಷೆಯನ್ನು ಚಿತ್ರದುರ್ಗದ ಬೃಹನ್ಮಠದಲ್ಲಿ ಸಾಧಕರಾಗಿದ್ದ ಸಿದ್ಧರಾಮಸ್ವಾಮಿಗಳಿಗೆ ನೆರವೇರಿಸುವ ಸಂದರ್ಭದ ಪೂರ್ವೋತ್ತರಗಳನ್ನೆಲ್ಲ ದಾಖಲಿಸುತ್ತಾರೆ. ಈ ಲೇಖನಗಳು ಚಾರಿತ್ರಿಕ ದಾಖಲೆಗಳನ್ನಷ್ಟೇ ಒದಗಿಸದೆ ಇವೆಲ್ಲವುಗಳನ್ನು ಸಾಮಾಜಿಕ ಸೈದ್ಧಾಂತಿಕ ಕಣ್ಣೆಲೆಯಲ್ಲಿ ವಸ್ತುನಿಷ್ಠವಾಗಿ ವಿವೇಚಿಸಲಾಗಿದೆ. ಲೇಖಕ ತಾನಿರುವ ಪರಿಸರದಲ್ಲೇ ಜರುಗಿದ ಕಳವಳಕಾರಿ ಪ್ರಸಂಗಗಳನ್ನೂ ಸಹ ಉದ್ವೇಗಗೊಳ್ಳದೆ ಸಂಯಮದಿಂದ ತಣ್ಣಗೆ ಚರ್ಚಿಸುತ್ತಾರೆ. ಜಡಗಟ್ಟಿದ ಸಂಪ್ರದಾಯ ಮತ್ತು ಪರಿವರ್ತನೆ ಇವುಗಳ ಘರ್ಷಣೆಯಲ್ಲಿ ಲೇಖಕ ಪ್ರಗತಿಪರ ನಿಲುವನ್ನು ಹೊಂದುವುದು ಸಹಜವೇ. ಹಾಗಿದ್ದರೂ ಘರ್ಷಣೆಯ ಎಲ್ಲ ಪೂರ್ವಾಪರಗಳನ್ನು ಮುಕ್ತ ಮನಸ್ಸಿನಿಂದ ಪರಿಶೀಲಿಸುತ್ತಾರೆ. ಪರಿವರ್ತನೆ ಸವೆಯಿಸಬೇಕಾದ ಹಾದಿಯ ಬಗ್ಗೆ ಕೂಡ ಸಮಚಿತ್ತರಾಗಿ ಆಲೋಚಿಸುತ್ತಾರೆ. ಸಾಮಾನ್ಯವಾಗಿ ನಮ್ಮ ಸಮಾಜವಿಜ್ಞಾನಿಗಳು ತಮ್ಮ ಸುತ್ತ ಜರುಗುತ್ತಿರುವ ವಿದ್ಯಮಾನಗಳಿಗೆ, ಸಾಮಾಜಿಕ ಸಮಸ್ಯೆಗಳಿಗೆ ಸ್ಪಂದಿಸದೆ ಕೇವಲ ಗತಕಾಲದ ಸಮಾಜ ಸನ್ನಿವೇಶಗಳ ಕುರಿತು ಚರ್ಚೆಯಲ್ಲಿ ತೊಡಗುವುದೇ ಹೆಚ್ಚು. ಇಲ್ಲಿ ಲೇಖಕ ತಾನಿದ್ದ ಸಮಾಜದ ಏಳು ಬೀಳುಗಳನ್ನು ಸಂಘರ್ಷಗಳನ್ನು ಅಂತರ್‌ಶಿಸ್ತೀಯ ಅಧ್ಯಯನದ ಹಿನ್ನೆಲೆಯಲ್ಲಿ ವಿಶ್ಲೇಷಿಸುತ್ತ ನಮ್ಮ ಅರಿವನ್ನು ತೀವ್ರಗೊಳಿಸುತ್ತಾರೆ. ಲೇಖಕರೇ ಆತಂಕಪಟ್ಟಿರುವಂತೆ ವಿಷಯದ ಪುನರಾವರ್ತನೆ ಆಗಿದೆ. ಒಂದು ವಸ್ತುವಿನ ವಿಭಿನ್ನ ಆಯಾಮಗಳನ್ನು ಕುರಿತು ಚರ್ಚಿಸುವಾಗ ಕೆಲಮಟ್ಟಿಗೆ ಪುನರಾವರ್ತನೆ ಅನಿವಾರ್ಯವೂ ಆಗಬಹುದು.

'ಬಸವಮಾರ್ಗ ಏಳುಬೀಳುಗಳ ವರದಿ' 'ವಚನಗಳಿಗೆ ಹೊಸ ದಿಕ್ಸೂಚಿ' 'ಪ್ರಾಥಮಿಕ ಶಿಕ್ಷಣ: ಪ್ರಥಮ ಮಾಹಿತಿ' 'ಮಹಿಳಾ ಸಬಲೀಕರಣ' ಸಮಾಜಶಾಸ್ತ್ರಜ್ಞನ ಸಾಹಿತ್ಯಿಕ ಒಳನೋಟ' ಈ ಲೇಖನಗಳು ಪುಸ್ತಕ ವಿಮರ್ಶೆಗಳಾಗಿವೆ. ಟಿ.ಆರ್. ಚಂದ್ರಶೇಖರ ಅನುವಾದಿಸಿದ ನೆದರ್‌ಲ್ಯಾಂಡಿನ ಡಾ॥ ಶೌಟನ್ನರ ('Revolution Mystics') 'ಅನುಭಾವಿಗಳ ಕ್ರಾಂತಿ' ಪುಸ್ತಕ, ಟಿ.ಆರ್. ಚಂದ್ರಶೇಖರವರ 'ವಚನ ಸಂಸ್ಕೃತಿಯ ಆಯಾಮಗಳು; ಡಾ॥ ಬಾಬುರಾವ್ ಮುಡಬಿಯವರ 'ಮಹಿಳಾ ಸಬಲೀಕರಣ: ಅಂಬೇಡ್ಕರ್ ದೃಷ್ಟಿಕೋನ', ಡಾ॥ ಪ್ರಶಾಂತ್‌ರವರ 'ಈಶಾನ್ಯ ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಸಮಾಜ' ಈ ಚಿಂತನಪರ ಗ್ರಂಥಗಳ ಪರಿಶೀಲನೆ ಲೇಖಕರು ಪ್ರತಿಪಾದಿಸಿದ ಆಲೋಚನೆಗೆ ಪೂರಕವಾಗಿಯೇ ಇವೆ. ಹೀಗಾಗಿ ಇಲ್ಲಿಯ ಎಲ್ಲ ಲೇಖನಗಳು ಪರಂಪರೆ–ಪರಿವರ್ತನೆ ಕುರಿತ ಸಮಾಜ ವಿಜ್ಞಾನಿಯ ಆಲೋಚನೆಗಳೇ ಆಗಿದ್ದು ಇಡೀ ಪುಸ್ತಕಕ್ಕೆ ಒಂದು ಏಕಸೂತ್ರತೆ ಪ್ರಾಪ್ತವಾಗಿದೆ. ಹನ್ನೆರಡನೆಯ ಶತಮಾನದ ಶರಣರ ಕ್ರಾಂತಿ ಕುರಿತು ಬರೆಯುವಾಗ ಹಾಗೂ ಪ್ರಸ್ತುತ ಸಾಮಾಜಿಕ ಸನ್ನವೇಶಗಳ ಬಗ್ಗೆ ಬರೆಯುವಾಗ ಅವುಗಳನ್ನು ಒಂದಕ್ಕೊಂದು ಪೂರಕವಾಗಿಸಿ ಹಲವಾರು ನೆಲೆಗಳಲ್ಲಿ ವಸ್ತುನಿಷ್ಠವಾಗಿ ಚರ್ಚಿಸುವ ವಿಧಾನದಿಂದಾಗಿ ತಿಪ್ಪಶೆಟ್ಟಿಯವರ ಬರವಣಿಗೆ ಗಮನಾರ್ಹವಾಗುತ್ತದೆ. □

ಬೆನ್ನಿಗೆ ಅಂಟಿಕೊಂಡ ಒಡನಾಡಿ

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಒಬಿಸಿ ಸ್ಥಾನದಲ್ಲಿದ್ದಾಗಿಯೂ ಸಹ ರಾಜಸ್ತಾನದ ಗುಜ್ಜಾರ್ ಸಮುದಾಯದವರು ತಮ್ಮ ಸಮುದಾಯದಿಂದ ಡಾಕ್ಟರ್‌ಗಳನ್ನು, ಇಂಜಿನಿಯರ್‌ಗಳನ್ನು, ವಿಜ್ಞಾನಿಗಳನ್ನು ಹಾಗೂ ಪ್ರೊಫೆಸರ್‌ಗಳನ್ನು ತಯಾರಿಸಲೇ ಇಲ್ಲ. ರಾಜಸ್ತಾನದಲ್ಲಿ ಭುಗಿಲೆದ್ದ ಹಿಂಸೆಯ ಬಗ್ಗೆ ಪ್ರತಿಕ್ರಿಯೆ ನೀಡಬಲ್ಲ ಒಬ್ಬ ಗುಜ್ಜಾರ್ ಬುದ್ಧಿಜೀವಿಗಾಗಿ ನಡೆಸಿದ ದೆಹಲಿಯ ಮಾಧ್ಯಮಗಳ ಪ್ರಯತ್ನ ಫಲಿಸದೇ ಹೋಯಿತು. ರಾಜಸ್ತಾನ, ಉತ್ತರಪ್ರದೇಶ್ ಮತ್ತು ಹರಿಯಾಣಾಗಳಲ್ಲಿ ಅತ್ಯಂತ ಶ್ರೀಮಂತ ಗುಜ್ಜಾರ್ ರೈತರಿದ್ದು, ಅವರೆಲ್ಲಾ ಸ್ಥಳೀಯ ವ್ಯವಹಾರಗಳಲ್ಲಿ ಸಾಕಷ್ಟು ಪ್ರಭಾವ ಹೊಂದಿರುವುದನ್ನು ಹೊರತು ಪಡಿಸಿಯೂ ಅವರಲ್ಲಿ ಬುದ್ಧಿಜೀವಿಗಳೆನಿಸಿದವರು ಯಾರೂ ಕಾಣ ಸಿಗುವುದಿಲ್ಲ.

ಗುಜ್ಜಾರ್ ಸಮುದಾಯವಷ್ಟೆ ಅಲ್ಲ. ಉತ್ತರಭಾರತದ ಗ್ರಾಮೀಣ ಆರ್ಥಿಕತೆ, ಮತ್ತು ಸ್ಥಳೀಯ ವಾಣಿಜ್ಯವನ್ನು ಒಬಿಸಿಗಳೇ ನಿಯಂತ್ರಿಸುತ್ತಿದ್ದಾರೆ. ೧೯೭೦ರ ಹೊತ್ತಿಗೆ ಈ ಒಬಿಸಿಗಳು ರಾಜಕೀಯವಾಗಿ ತಮ್ಮ ಹಾಜರಾತಿಯನ್ನು ಸಾಬೀತು ಪಡಿಸಿದ್ದರು. ಒಂದು ದಶಕದ ವೇಳೆಗೆ ಇವರು ಪಾರ್ಲಿಮೆಂಟ್ ಮತ್ತು ವಿಧಾನ ಸಭೆಗಳ ಸಾಮಾಜಿಕ ಮುಖವನ್ನು ಬದಲಿಸಿದ್ದರು. ಹಾಗಾಗಿ ಮಂಡಲ್ ಎನ್ನೋದು ದೇಶದಲ್ಲಿನ ಅವರ ರಾಜಕೀಯ ಅಧಿಕಾರ ಸಾಮರ್ಥ್ಯವನ್ನು ಸಾರ್ವತ್ರಿಕವಾಗಿ ತೋರಿಸಿತ್ತಷ್ಟೆ.

ಆದರೂ ಈ ಒಬಿಸಿ ಸಮುದಾಯಗಳು ಬುದ್ಧಿಜೀವಿಗಳು ಅಥವಾ ಸಮಾಜ ಸುಧಾರಕರನ್ನು ಸಿದ್ಧಗೊಳಿಸುವಲ್ಲಿ ಸೋತವು. ಅವರಲ್ಲಿ ಸಾಕಷ್ಟು ಮಂದಿ ಕೇಂದ್ರ ಸರ್ಕಾರದಲ್ಲಿ ಸಚಿವರು, ಮುಖ್ಯಮಂತ್ರಿಗಳು, ಗುತ್ತಿಗೆದಾರರು, ಸಾರಿಗೆ ವಾಣಿಜ್ಯದಾರರು, ರಿಯಲ್ ಎಸ್ಟೇಟ್ ವಾಲಗಳು ಇದ್ದರು ಸಹ ಅವರಲ್ಲಿ ಐಟಿ ವೃತ್ತಿಪರರಾಗಲೀ, ವಿಜ್ಞಾನಿಗಳಾಗಲೀ, ಪ್ರೊಫೆಸರ್‌ಗಳಾಗಲೀ, ಪತ್ರಕರ್ತರಾಗಲೀ, ಬುದ್ಧಿಜೀವಿಗಳಾಗಲೀ ಅಥವಾ ಸುಧಾರಕರಾಗಲೀ ಇಲ್ಲ. ಅವರ ಸವಲತ್ತು ಮತ್ತು ರಾಜಕೀಯ ಅಧಿಕಾರಕ್ಕೆ ಸಮಾನವಾದ ಸಂಖ್ಯೆಯಲ್ಲಿ ನಾಗರಿಕ ಸೇವೆಯಲ್ಲಿ ಅವರಿರುವುದು ಕಮ್ಮಿ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ಶಿಕ್ಷಣದಲ್ಲಿ ಅವರ ಸಾಧನೆ ಏನೇನೂ ಇಲ್ಲ.

ಈ ವಿಚಿತ್ರ ದ್ವಂದ್ವವನ್ನು ವಿವರಿಸುವುದಾದರೂ ಹೇಗೆ? ಅವರೆಲ್ಲಾ ಜ್ಞಾನ ಶಾಖೆಗಳನ್ನು ಹೊರತು ಪಡಿಸಿ, ಉಳಿದೆಲ್ಲಾ ಕ್ಷೇತ್ರಗಳಲ್ಲಿ ಸಾಧನೆ ಚೆನ್ನಾಗಿದೆ. ಅಂದರೆ ಅವರು ಯಾವುದಾದರೊಂದು ಕ್ಷೇತ್ರದಲ್ಲಿ ಮುಂದುವರೆದಿದ್ದಾರೆಂದರೆ ಅವರ ಅಭಿವೃದ್ಧಿಗೆ ಸಮಾಜ ಅಡ್ಡಿಯಾಗಿಲ್ಲವೆಂಬುದು ಖಚಿತವಾಗುತ್ತದೆ. ಆದ್ದರಿಂದ ಅವರು ಶಿಕ್ಷಣದಲ್ಲಿ ಮುಂದುವರೆಯಲು ಯಾರೂ ಅಡ್ಡಿಯಾಗಿಲ್ಲ. ಅಲ್ಲದೆ ದಲಿತರಂತೆ ಅವರು ಯಾವುದೇ ತಾರತಮ್ಯಕ್ಕೆ ಒಳಗಾಗಿಲ್ಲ. ಆದರೆ ಎಲ್ಲಾ ರೀತಿಯಲ್ಲಿಯೂ ಅವರು ಆಧುನಿಕತೆಗೆ ಪ್ರವೇಶ ಪಡೆಯದಂತೆ ಅವರದ್ದೇ ಆದ ಸಾಂಸ್ಕೃತಿಕ ಟ್ರಾಪ್‌ನಲ್ಲಿ ಸಿಲುಕಿಕೊಂಡಿದ್ದಾರೆ.

ಉದಾಹರಣೆಗೆ, ದೆಹಲಿಯ ಹೊರ ಪ್ರದೇಶ ಬಹುತೇಕ ಜಾಟ್-ಗುಜ್ಜಾರ್ ಕಾರಿಡಾರ್ ಆಗಿದೆ. ದೆಹಲಿಯ ವಿಸ್ತಾರಕ್ಕಾಗಿ ಭೂಮಿ ಸ್ವಾಧೀನ ಅಗತ್ಯವಾಗಿತ್ತು. ಇದರಿಂದಾಗಿ ಸಾವಿರಾರು ಮಂದಿ ಜಾಟ್ ಮತ್ತು ಗುಜ್ಜಾರರು ಕೇವಲ ಮೂರು ದಶಕಗಳಲ್ಲಿ ಮಿಲಿಯನ್ನೇರರಾಗಿ ಬದಲಾದರು. ಅತ್ಯುತ್ತಮ ಬಂಗಲೆಗಳನ್ನು ಕೊಳ್ಳುವ ಸಾಮರ್ಥ್ಯವನ್ನು ಸಾವಿರಾರು ಮಂದಿ ಗುಜ್ಜಾರರು ಪಡೆದರು. ಆದರೂ ಸಹ ಬೆರಳೆಣಿಕೆಯಷ್ಟು ಗುಜ್ಜಾರರಾಗಲೀ ಅಥವಾ ಜಾಟ್‌ರಾಗಲೀ ಅಂಥ ಬಂಗಲೆಗಳಲ್ಲಿ ವಾಸಿಸುವುದನ್ನು ನಾವು ಕಾಣಲಾಗುವುದಿಲ್ಲ. ಅವರೆಲ್ಲಾ ಇಂದಿಗೂ ಹಳ್ಳಿ-ಕೇರಿಗಳಂತಿರುವ ಕಡೆಗಳಲ್ಲೇ ಜೀವಿಸುತ್ತಿದ್ದಾರೆ. ಏಕೆ?

ಅದಕ್ಕೆ ಕಾರಣ- "ನಮ್ಮ ಸಂಬಂಧಿಗಳಿಂದ, ಜಾತಿ ಬಾಂಧವರಿಂದ ನಾವು ಹೇಗೆ ದೂರ ಹೋಗುವುದು. ಆ ಅತ್ಯಾಧುನಿಕ ಅಪಾರ್ಟ್‌ಮೆಂಟ್‌ಗಳಲ್ಲಿ ನಾವು ಹೊರಗಿನವರಂತೆ ಕಾಣುತ್ತೇವೆ. ನಮ್ಮ ಎಮ್ಮೆಗಳನ್ನು ಅಲ್ಲಿ ಸಾಕುವುದಾದರೂ ಹೇಗೆ?" ಮತ್ತೂ ಮುಂದುವರೆದು ನೋಡುವುದಾದರೆ ಒಂದೆರಡು ಎಮ್ಮೆಗಳಿಲ್ಲದೆ ಜೀವಿಸುವ ಗುಜ್ಜಾರ್ ಆಗಲೀ ಜಾಟ್‌ನಾಗಲೀ ಕಾಣಸಿಗುವುದಿಲ್ಲ. "ನಮಗೆ ಶುದ್ಧ ಹಾಲು, ಶುದ್ಧ ತುಪ್ಪ ನಮ್ಮ ಎಮ್ಮೆ-ದನಗಳಿಂದಲೇ ಬೇಕು" ಎಂದು ಅವರು ಹೇಳುತ್ತಾರೆ.

ಕೆಲವೇ ಮಂದಿ ಕುಶಲಕರ್ಮಿಗಳಾಗಿರುವ ಒಬಿಸಿಗಳನ್ನು ಬಿಟ್ಟರೆ ಉತ್ತರ ಭಾರತದ ಒಬಿಸಿಗಳೆಲ್ಲಾ ಎಮ್ಮೆಗಳೊಡನೆ ಜೀವಿಸುವವರಾಗಿದ್ದಾರೆ. ಎಮ್ಮೆಗಳಿಲ್ಲದ ಬದುಕನ್ನು ಅವರು ಊಹಿಸಿಕೊಳ್ಳಲು ಸಾಧ್ಯವಿಲ್ಲ. ಅಂದರೆ ಒಬಿಸಿ ಸಮುದಾಯಗಳು ಮೂಲಭೂತವಾಗಿ ಕೃಷಿಕ ಸಮಾಜದವರಾಗಿದ್ದು ಹಳ್ಳಿ ಇಲ್ಲವೆ ಪಟ್ಟಣಗಳಲ್ಲಿ ಜೀವಿಸುವವರಾಗಿದ್ದಾರೆ. ಎಮ್ಮೆಗಳು ಕುಟುಂಬವೊಂದಕ್ಕೆ ಆಧಾರವಾಗಿವೆಯಲ್ಲದೆ ಅದಕ್ಕೆ ಅಗತ್ಯವಾದ ಆದಾಯವನ್ನು ನೀಡುತ್ತವೆ.

ಇದು ಪೂರ್ಣ ಸತ್ಯವೇ? ಬಡ ಒಬಿಸಿ ಕುಟುಂಬವೊಂದು ಈ ಮೇಲಿನ ಉಪಯೋಗ ವಾದವನ್ನು ಒಪ್ಪಿಕೊಳ್ಳಬಹುದು. ಆದರೆ ಒಬಿಸಿಗಳಲ್ಲಿ ಎದ್ದು ಕಾಣುವ ಲಾಲು ಪ್ರಸಾದ್ ಯಾದವ್ ತನ್ನ ಪಾಟ್ನಾದಲ್ಲಿರುವ ಮುಖ್ಯಮಂತ್ರಿ ಮನೆಯನ್ನೇ ಎಮ್ಮೆ/ದನಗಳ ಸ್ವರ್ಗವನ್ನಾಗಿ ಏಕೆ ಪರಿವರ್ತಿಸಬೇಕು? ಹಾಗೆಯೇ ಒಬಿಸಿಗಳ ಮತ್ತೊಂದು ಮಾದರಿಯಾಗಿರುವ ಮುಲಾಯಂ ಸಿಂಗ್ ಯಾದವ್ ಸಹ ಎಮ್ಮೆ ಮತ್ತು ದನಗಳ ಬಗ್ಗೆ ಇನ್ನಿಲ್ಲದ ಒಲವನ್ನು ಹೊಂದಿದ್ದಾರೆ ಏಕೆ? ಇವರೇಕೆ ಬೇರೆಯವರಂತೆ ಹಾಲನ್ನು ಮಾರುಕಟ್ಟೆಯಿಂದ ತೆಗೆದುಕೊಳ್ಳಬಾರದು?

ಇಲ್ಲಿ ಯಾರೂ ಸಹ ಇನ್ನೂ ಸಂಶೋಧನೆ ಮಾಡದೆ ಇರುವ ಸಂಗತಿ ಎಂದರೆ ಒಬಿಸಿಗಳು ಎಮ್ಮೆ ಮತ್ತು ದನಗಳೊಡನೆ ಜೀವಿಸಲು ನಿರ್ಧಾರ ಮಾಡಿಕೊಂಡಂತಿದೆ ಎಂಬುದು. ಸಾಂಪ್ರದಾಯಿಕ ಸಮಾಜದಲ್ಲಿ ಎಮ್ಮೆಗಳು ಮತ್ತು ದನಗಳು ಹೆಮ್ಮೆಯ ಸಂಗತಿಗಳಾಗಿದ್ದವು. ಇಂದು ನಗರ ಬದುಕಿಗೆ ಹೇಗೆ ವ್ಯಾಪಾರ ಮುಖ್ಯವೋ ಹಾಗೆಯೇ ಗ್ರಾಮಕ್ಕೆ ಎಮ್ಮೆ ಮುಖ್ಯ.

ಕಾಲಮಾನ ಬದಲಾಗಿದೆ. ಇಂದು ಎಮ್ಮೆ ಎನ್ನುವುದು ಬಹು ದೊಡ್ಡ ಶಾಪವಾಗಿದೆ. ಒಂದು ಎಮ್ಮೆ ಬ್ರಾಹ್ಮಣನ್ನು ಸಹ ಒಬ್ಬ ಒಬಿಸಿಯನ್ನಾಗಿ ಮಾರ್ಪಡಿಸಬಲ್ಲದು. ಒಂದು ಎಮ್ಮೆ ಮನೆಯಲ್ಲಿರುವವರೆಲ್ಲರ ಸೇವೆಯನ್ನು ಬೇಡುತ್ತದೆ. ಯಾವ ಕುಟುಂಬ ಎಮ್ಮೆಗಳ ಬಗ್ಗೆ ಆಧಾರವನ್ನಿಟ್ಟುಕೊಂಡಿದೆಯೋ ಅಲ್ಲಿನ ಮಕ್ಕಳು ಶಾಲೆಯಲ್ಲಿ ಪ್ರವೇಶ ಪಡೆಯಲು ಪ್ರಯತ್ನ ಮಾಡುವುದು ಕಮ್ಮಿ. ಹಾಗೇನಾದರು ಪ್ರವೇಶ ಪಡೆದರಾದರೂ ಆ ಮಕ್ಕಳು ಶಾಲೆ ಬಿಡುವುದರಲ್ಲಿ

ಒಬಿಸಿ ಸಮುದಾಯಗಳು ಬುದ್ಧಿಜೀವಿಗಳು ಅಥವಾ ಸಮಾಜ ಸುಧಾರಕರನ್ನು ಸಿದ್ಧಗೊಳಿಸುವಲ್ಲಿ ಸೋತವು. ಅವರಲ್ಲಿ ಸಾಕಷ್ಟು ಮಂದಿ ಕೇಂದ್ರ ಸರ್ಕಾರದಲ್ಲಿ ಸಚಿವರು, ಮುಖ್ಯಮಂತ್ರಿಗಳು, ಗುತ್ತಿಗೆದಾರರು, ಸಾರಿಗೆ ವಾಣಿಜ್ಯದಾರರು, ರಿಯಲ್ ಎಸ್ಟೇಟ್ ವಾಲಗಳು, ಇದ್ದರು ಸಹ ಅವರಲ್ಲಿ ಐಟಿ ವೃತ್ತಿಪರರಾಗಲೀ, ವಿಜ್ಞಾನಿಗಳಾಗಲೀ, ಪ್ರೊಫೆಸರ್‌ಗಳಾಗಲೀ, ಪತ್ರಕರ್ತರಾಗಲೀ, ಬುದ್ಧಿಜೀವಿಗಳಾಗಲೀ ಅಥವಾ ಸುಧಾರಕರಾಗಲೀ ಇಲ್ಲ. ಅವರ ಸವಲತ್ತು ಮತ್ತು ರಾಜಕೀಯ ಅಧಿಕಾರಕ್ಕೆ ಸಮಾನವಾದ ಸಂಖ್ಯೆಯಲ್ಲಿ ನಾಗರಿಕ ಸೇವೆಯಲ್ಲಿ ಅವರಿರುವುದು ಕಮ್ಮಿ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ಶಿಕ್ಷಣದಲ್ಲಿ ಅವರ ಸಾಧನೆ ಏನೇನೂ ಇಲ್ಲ.

ಅನು : ಡೊಮಿನಿಕ್. ಡಿ

ಅನುಮಾನವಿಲ್ಲ. ಯಾರು ಕಾಲೇಜು ಮೆಟ್ಟಿಲು ಹತ್ತುತ್ತಾರೋ ಅವರು ಉತ್ತಮ ಫಲಿತಾಂಶ ನೀಡದೆ ಉದ್ಯೋಗ ಮಾರುಕಟ್ಟೆಯಲ್ಲಿ ನಿಷ್ಪ್ರಯೋಜಕರಾಗಿ ಬಿಡುತ್ತಾರೆ. ಕೆಲವೇ ಮಂದಿ ಉತ್ತೀರ್ಣರಾಗುತ್ತಾರಷ್ಟೆ. ಅಂದರೆ ಎಮ್ಮೆ ಮಾತ್ರ ಒಂದು ಕುಟುಂಬವನ್ನು ಪ್ರತಿಗಾಮಿಯನ್ನಾಗಿ ಮಾಡುತ್ತದೆ ಎಂದು ಭಾವಿಸಬೇಕಿಲ್ಲ. ಆಧುನಿಕತೆಗೆ ವಿರೋಧವಾಗಿರುವ ಈ ಎಮ್ಮೆ ಸಂಕೇತ ಮಧ್ಯಯುಗೀನ ಸಂಸ್ಕೃತಿಯ ಧ್ಯೋತಕವಾಗಿದೆ.

ಗುಜ್ಜಾರರಂತೆ ಒಬಿಸಿಗಳಿಗೆ ಒಂದು ಆಯ್ಕೆ ಇದೆ: ಅವರು ಎಮ್ಮೆಗಳನ್ನು ಹೊಂದುವುದು ಅಥವಾ ಐಐಎಂಗಳಲ್ಲಿ ಪ್ರವೇಶ ಪಡೆಯುವುದು. ಒಬ್ಬ ಒಬಿಸಿ ಅಥವಾ ಎಸ್‌ಟಿ ಎರಡನ್ನು ನಿಭಾಯಿಸಲು ಸಾಧ್ಯವಿಲ್ಲ. ಏಕೆಂದರೆ, ಒಬಿಸಿಗಳ ಎಮ್ಮೆ ಸಂಕೇತ, ಖಾಸಗೀ ವಲಯದಲ್ಲಿ ಮೀಸಲಾತಿಯ ಪಾಲುಕೇಳುತ್ತಿರುವ ದಲಿತ/ಆದಿವಾಸಿಗಳಿಗೆ ಅಪ್ರಸ್ತುತ ಎನಿಸಿ ಬಿಡುತ್ತದೆ.

ಹಿಪ್ಪೆಯಾಗಿರುವ ಕುಲೀನರು

ಭಾರತೀಯ ಕುಲೀನರ ಬಗ್ಗೆ ವಿಮರ್ಶೆ ಮಾಡುವಾಗ, ಮತ್ತೊಮ್ಮೆ ನಾನು ಹೇಳುವ ಸಂಗತಿಯೆಂದರೆ ಈ ಕುಲೀನ ವರ್ಗಕ್ಕೆ ಬಚ್ಚಿಟ್ಟ ಹಿತಾಸಕ್ತಿ ಎಂದೇನೂ ಇಲ್ಲ. ಏನೇ ಇದ್ದರೂ ಸಹ ಸುದ್ದಿ ಮಾಧ್ಯಮಗಳ ಮಾಲೀಕರಾಗಿರುವ ಅವರಲ್ಲಿ ಕೆಲವರು ಉದಾರವಾದಿಗಳಾಗಿದ್ದಾರೆ. ಆದರೆ ಈ ಮಾಧ್ಯಮಗಳು ಸೋಲುವಂತೆ ಕುಲೀನ ವರ್ಗವು ಅಕಾಡೆಮಿಕ್ ಆಗಿಯೂ ಸೋತಿದೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಭಾರತೀಯ ಕುಲೀನ ವರ್ಗ ಎನ್ನುವುದೇ ಸಮಸ್ಯಾತ್ಮಕವಾಗಿದೆ.

ಆದ್ದರಿಂದ, ಉತ್ತರಪ್ರದೇಶದಲ್ಲಿ ಅತಂತ್ರ ಸರ್ಕಾರದ ಬಗೆಗಿನ ಪ್ರಚಾರವನ್ನು ಅನುಕಂಪದಿಂದ ಅರ್ಥ ಮಾಡಿಕೊಳ್ಳಬೇಕಿದೆ. ಈ ಕುಲೀನ ವರ್ಗವು ಸಿಲುಕಿರುವ ಬಲವಾದ ಟ್ರಾಪ್ ಬಗ್ಗೆ ಉತ್ತರ ಪ್ರದೇಶದ ಚುನಾವಣೆ ಬೊಟ್ಟು ಮಾಡಿ ತೋರಿಸಿದೆ. ಬೆಳೆಯುತ್ತಿರುವ ಅವರ ಸಾಂಸ್ಕೃತಿಕ ವಾರಸುದಾರಿಕೆ ಭಾರತಕ್ಕೆ ಅಪ್ರಸ್ತುತವಾದುದು.

ಈ ಹಿಂದೆ ಹೇಳಿದಂತೆ ಭಾರತೀಯ ಕುಲೀನ ವರ್ಗ ಎನ್ನುವುದು ತಾರ್ಕಿಕವಾದ ಸಾಮಾಜಿಕ ಪ್ರಕ್ರಿಯೆಯಿಂದ ಬೆಳೆದವರೇನೂ ಅಲ್ಲ. ಆದ್ದರಿಂದ ಇಂದು ಕ್ರಿಯಾಶೀಲವಾಗಿರುವ ಸಾಮಾಜಿಕ ಪ್ರಕ್ರಿಯೆಗಳನ್ನು ಅರಿತುಕೊಳ್ಳಲು ಅವರಿಂದ ಸಾಧ್ಯವಾಗುತ್ತಿಲ್ಲ.

ಸವಲತ್ತುಗಳ ಕೂಸುಗಳಾಗಿರುವ ಈ ಕುಲೀನವರ್ಗವು ಕಾಲಾನುಕ್ರಮದಲ್ಲಿ ಭಾರತೀಯ ಸಾಂಸ್ಕೃತಿಕ ಸಂಬಂಧಗಳಿಂದ ಕಳಚಿಕೊಂಡಿದೆ. ಅತಿಯಾದ ಸಂಪತ್ತಿನ ವಾರಸುದಾರರಾಗಿರುವ ಇವರು ಕೊರತೆಯ ಸನ್ನಿವೇಶಗಳಿಗೆ ಕಾರಣರಾಗಿದ್ದಾರೆ. ಈ ಎರಡು ಕಾರಣಗಳಿಂದಾಗಿ ಇವರು ಯಾವುದೇ ರೀತಿಯ ಉಪಯುಕ್ತ ದುಡಿಮೆಯಲ್ಲಿ ತೊಡಗಿಕೊಳ್ಳಲು ಆಗಲಿಲ್ಲ. ಚರಿತ್ರೆಯ ಚಲನೆಯಲ್ಲಿ ಸ್ತಬ್ಧರಾದ ಇವರು ಬದಲಾವಣೆಗೆ ಕಾರಣೀಭೂತವಾದ ಸಂಗತಿಗಳನ್ನು ಅರಿತುಕೊಳ್ಳಲಾಗಿಲ್ಲ.

ಹೀಗೆ ಯಾವುದೇ ಬದಲಾವಣೆಯ ಅವಕಾಶವಿಲ್ಲದ ಈ ಕುಲೀನವರ್ಗ ಬದಲಾವಣೆಯಲ್ಲಿರುವ ವಿದ್ಯಮಾನಗಳಿಗೆ ಸ್ಪಂದಿಸಲು ಸಾಧ್ಯವಾಗಲಿಲ್ಲ.

ಜನವರಿ ೨೦೦೨ರಲ್ಲಿ ಮಾಯಾವತಿಯವರು ತಮ್ಮ ಹುಟ್ಟು ಹಬ್ಬದ ಸಂದರ್ಭದಲ್ಲಿ ತರಿಸಿಕೊಂಡ ಕೇಕ್ ಮಾಯಾವತಿಯವರ ಯೋಗವರ್ಧಕವಾಗಿ ಸಮೀಸ

ಭಾರತೀಯ ಕುಲೀನರ ಬಗ್ಗೆ ವಿಮರ್ಶೆ ಮಾಡುವಾಗ, ಮತ್ತೊಮ್ಮೆ ನಾನು ಹೇಳುವ ಸಂಗತಿಯೆಂದರೆ ಈ ಕುಲೀನ ವರ್ಗಕ್ಕೆ ಬಚ್ಚಿಟ್ಟ ಹಿತಾಸಕ್ತಿ ಎಂದೇನೂ ಇಲ್ಲ. ಏನೇ ಇದ್ದರೂ ಸಹ ಸುದ್ದಿ ಮಾಧ್ಯಮಗಳ ಮಾಲೀಕರಾಗಿರುವ ಅವರಲ್ಲಿ ಕೆಲವರು ಉದಾರವಾದಿಗಳಾಗಿದ್ದಾರೆ. ಆದರೆ ಈ ಮಾಧ್ಯಮಗಳು ಸೋಲುವಂತೆ ಕುಲೀನ ವರ್ಗವು ಅಕಾಡೆಮಿಕ್ ಆಗಿಯೂ ಸೋತಿದೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಭಾರತೀಯ ಕುಲೀನ ವರ್ಗ ಎನ್ನುವುದೇ ಸಮಸ್ಯಾತ್ಮಕವಾಗಿದೆ. ಆದ್ದರಿಂದ, ಉತ್ತರಪ್ರದೇಶದಲ್ಲಿ ಅತಂತ್ರ ಸರ್ಕಾರದ ಬಗೆಗಿನ ಪ್ರಚಾರವನ್ನು ಅನುಕಂಪದಿಂದ ಅರ್ಥ ಮಾಡಿಕೊಳ್ಳಬೇಕಿದೆ. ಈ ಕುಲೀನ ವರ್ಗವು ಸಿಲುಕಿರುವ ಬಲವಾದ ಟ್ರಾಪ್ ಬಗ್ಗೆ ಉತ್ತರ ಪ್ರದೇಶದ ಚುನಾವಣೆ ಬೊಟ್ಟು ಮಾಡಿ ತೋರಿಸಿದೆ. ಬೆಳೆಯುತ್ತಿರುವ ಅವರ ಸಾಂಸ್ಕೃತಿಕ ವಾರಸುದಾರಿಕೆ ಭಾರತಕ್ಕೆ ಅಪ್ರಸ್ತುತವಾದುದು. ಈ ಹಿಂದೆ ಹೇಳಿದಂತೆ ಭಾರತೀಯ ಕುಲೀನವರ್ಗ ಎನ್ನುವುದು ತಾರ್ಕಿಕವಾದ ಸಾಮಾಜಿಕ ಪ್ರಕ್ರಿಯೆಯಿಂದ ಬೆಳೆದವರೇನೂ ಅಲ್ಲ. ಆದ್ದರಿಂದ ಇಂದು ಕ್ರಿಯಾಶೀಲವಾಗಿರುವ ಸಾಮಾಜಿಕ ಪ್ರಕ್ರಿಯೆಗಳನ್ನು ಅರಿತುಕೊಳ್ಳಲು ಅವರಿಂದ ಸಾಧ್ಯವಾಗುತ್ತಿಲ್ಲ. ಸವಲತ್ತುಗಳ ಕೂಸುಗಳಾಗಿರುವ ಈ ಕುಲೀನವರ್ಗವು ಕಾಲಾನುಕ್ರಮದಲ್ಲಿ ಭಾರತೀಯ ಸಾಂಸ್ಕೃತಿಕ ಸಂಬಂಧಗಳಿಂದ ಕಳಚಿಕೊಂಡಿದೆ. ಅತಿಯಾದ ಸಂಪತ್ತಿನ ವಾರಸುದಾರರಾಗಿರುವ ಇವರು ಕೊರತೆಯ ಸನ್ನಿವೇಶಗಳಿಗೆ ಕಾರಣರಾಗಿದ್ದಾರೆ.

ರೀತಿಯ ಸಾಮಾಜಿಕ ಭಾವವನ್ನು ಸೂಚಿಸುತ್ತಿತ್ತು ಎಂಬುದನ್ನು ಅರ್ಥೈಸುವಲ್ಲಿ ಈ ಕುಲೀನ ವರ್ಗ ಸೋತಿತ್ತು. ಆದ್ದರಿಂದಲೇ ಉ.ಪ್ರದ ಚುನಾವಣೆಯಲ್ಲಾದ ಪಲ್ಲಟವನ್ನೂ ಸಹ ಅವರು ಗ್ರಹಿಸಲು ಸಾಧ್ಯವಾಗಲಿಲ್ಲ.

ಈ ಪರಿಣಾಮವನ್ನು ಗ್ರಹಿಸಲು ಸೋತದ್ದು ಮುಂದಿನ ಸಾಂಸ್ಕೃತಿಕ ಮುನ್ಸೂಚನೆಗೆ ನಾಂದಿಯಾಯಿತು. ಈ ಕುಲೀನವರ್ಗ ದಲಿತರೊಂದಿಗೆ ಏನನ್ನು ಹಂಚಿಕೊಳ್ಳುವ ಅನುಭವ ಇಲ್ಲದವರು. ಈ ಕಾರಣದಿಂದ ಆ ವರ್ಗ ದಲಿತರು ಮಾತನಾಡುವ ಭಾಷೆಗೆ ಅಪರಿಚಿತರಾಗಿಯೇ ಇರುತ್ತದೆ. ಈ ಕುಲೀನವರ್ಗಕ್ಕೆ ದಲಿತರು ಯಾವತ್ತೂ ಸಾಮಾಜಿಕವಾಗಿ ಹೊರಗಿನವರು. ಈ ಸಾಂಸ್ಕೃತಿಕ ಸಂಬಂಧ ಇಲ್ಲದವರಾದ ಕುಲೀನ ವರ್ಗದ ಬುದ್ಧಿಜೀವಿಗಳು ಅಲೆಮಾರಿಗಳಾಗಿದ್ದಾರೆ.

ಒಂದು ಅಸಂಗತ ಸಾಂಸ್ಕೃತಿಕ ಪರಿಸರದಲ್ಲಿ ಬದುಕುವ ಈ ಕುಲೀನ ವರ್ಗ ದಲಿತರನ್ನು ಭೂತದ ಕನ್ನಡಿಯಿಂದಲೇ ನೋಡುತ್ತಾರೆ. ತಮ್ಮ ಹಿಂದಿನ ತಲೆಮಾರುಗಳು ದಲಿತರನ್ನು ವಿಧೇಯ ಸೇವಕರು, ಮೈಲಿಗೆಯನ್ನುಂಟುಮಾಡುವ ಮತ್ತು ನಿಷ್ಪ್ರಯೋಜಕರೆಂದು ಕಾಣುತ್ತಿದ್ದರು.

ರಾಜ್ಯಾಂಗದ ಸಕಾರಾತ್ಮಕ ಕ್ರಿಯೆಗಳಿಂದಾಗಿ ಹೊರಹೊಮ್ಮಿದ ಹೊಸ ದಲಿತ ಮಧ್ಯಮವರ್ಗದ ಬದುಕು ಮತ್ತು ಆಶೋತ್ತರಗಳಿಗೆ ಅಪರಿಚಿತವಾಗಿರುವ ಈ ಕುಲೀನ ವರ್ಗ ದಲಿತರ ಸಿದ್ಧಮಾದರಿಯ ಒಂದು ರೂಪವನ್ನೇ ಇನ್ನೂ ಉಳಿಸಿಕೊಂಡಿದ್ದಾರೆ.

ಆ ಸಿದ್ಧಮಾದರಿಯಲ್ಲಿ ದಲಿತ ಎಂದೂ ಗೆಲ್ಲುವುದಿಲ್ಲ, ಸ್ವತಂತ್ರನಾಗಿ ಏನನ್ನೂ ಸಾಧಿಸಲಾರ.

ಕಾಲಮಾನ ಬದಲಾಗಿದ್ದರೂ ಸಹ ಈ ಕುಲೀನ ವರ್ಗ ಭೂತ ಮತ್ತು ವರ್ತಮಾನಗಳ ಮಧ್ಯೆ ಪಚಡಿಯಾಗಿ ಸ್ತಬ್ಧಗೊಂಡಿದೆ. ಆದ್ದರಿಂದ ಮಾಯಾವತಿಯ ಕೇಕ್, ಅಥವಾ ಉತ್ತರ ಪ್ರದೇಶದಲ್ಲಿ ಆಕೆಯ ಗೆಲುವು ಈ ಕುಲೀನ ವರ್ಗದ ಸಾಂಸ್ಕೃತಿಕ ಮನೋಭಾವಕ್ಕೆ ಹಿಡಿಸುವುದಿಲ್ಲ.

ಯಾವುದು ಸಾಂಸ್ಕೃತಿಕ ಪ್ರಶ್ನೆಯಾಗಬೇಕಿತ್ತೋ, ಅದು ಸಾಂಸ್ಕೃತಿಕ ದಿವಾಳಿತನದಿಂದಾಗಿ ಮನೋವಿಕಾರತೆಯ ಸಮಸ್ಯೆಯಾಗಿ ಪರಿಣಮಿಸಿದೆ.

ಆದ್ದರಿಂದ ದಲಿತ ಏನೂ ಇಲ್ಲದೆ ಭಾರತದ ರಾಷ್ಟ್ರಪತಿಯಾಗಲಾರ; ಅಥವಾ ದಲಿತನೊಬ್ಬ ಒಂದು ಕಳಪೆ ಕಂಪನಿಯ ಮುಖ್ಯ ಅಧಿಕಾರಿಯಾಗಲು ಆಗುವುದಿಲ್ಲ. ಒಬ್ಬ ದಲಿತ ವಾಷಿಂಗ್ಟನ್ ಡಿಸಿಯಲ್ಲಿ ಒಬ್ಬ ವೈದ್ಯನಾಗಿ ಹೆಸರು ಪಡೆಯಬಲ್ಲ. ಆದರೆ ಆತ ಒಬ್ಬ ಪತ್ರಕರ್ತನಾಗಿ ಭಾರತದಲ್ಲಿ ಸುದ್ದಿಕೋಣೆಯನ್ನು ಪ್ರವೇಶಿಸಲಾಗುವುದಿಲ್ಲ.

ಅಮೆರಿಕಾದ ಸಿಲಿಕಾನ್‌ವ್ಯಾಲಿಯಲ್ಲಿ ಒಬ್ಬ ದಲಿತ, ದಲಿತೇತರ ಕಂಪನಿಯಲ್ಲಿ ಉದ್ಯೋಗಸ್ಥನಾಗಬಹುದು. ಆದರೆ ತನ್ನ ಮನೆಗೆ ಹಿಂತಿರುಗಿದಾಗ ಆತ ಸುದ್ದಿ ಚಾನಲ್‌ಗಳಲ್ಲಿ ಕ್ಯಾಮರ ವ್ಯಕ್ತಿಗೆ ಸಹಾಯಕನಾಗಲೂ ಸಾಧ್ಯವಿಲ್ಲ.

ತನ್ನ ಪವಿತ್ರ ದಾರದಿಂದ ಚಕಿತರಾಗಿರುವ ಕುಲೀನ ವರ್ಗವು ಸನಾತನಿಯಾಗಿಯೇ ಉಳಿದಿದು ದಲಿತ

ಜಗತ್ತಿನಿಂದ ದೂರ ಉಳಿದು ಬಿಟ್ಟಿದೆ. ಆದ್ದರಿಂದ ಅವರು ದಲಿತ ಸಂಸ್ಕೃತಿಯನ್ನು ಸವಿಯಲು ಅಸಮರ್ಥರಾಗುತ್ತಾರೆ. ಈ ಕುಲೀನ ವರ್ಗದ ಸಾಂಸ್ಕೃತಿಕ ಬೇರ್ಪಡುವಿಕೆಯು ದಲಿತರ ಬಗ್ಗೆ ಅನಗತ್ಯ ಭಯವನ್ನು ಹುಟ್ಟಿಸುತ್ತದೆ. ಈ ಕಾರಣದಿಂದ ದಲಿತ ಸಂಗತಿಗಳೆಂದರೆ ಭಯಂಕರವಾಗಿ ವರ್ತಿಸುತ್ತಾರೆ.

ಉತ್ತರಪ್ರದೇಶದಲ್ಲಿ ಅತಂತ್ರ ಸರ್ಕಾರ ಬರುತ್ತದೆ ಎನ್ನೋ ಸುದ್ದಿ ಚಾನಲ್‌ಗಳ ಪ್ರಚಾರವನ್ನು ಈ ಸನ್ನಿವೇಶದಲ್ಲಿ ಮಾತ್ರ ಅರ್ಥೈಸಬೇಕಾಗುತ್ತದೆ. ಬಿಎಸ್‌ಪಿಯು ಅಲ್ಲಿ ಜಯಭೇರಿಯಾಗುತ್ತದೆ ಎಂಬುದನ್ನು ಕೆಲವರು ತಿಳಿದಿದ್ದರೂ ಸಹ, ಅಂಥ ಮಹಾನ್ ಘಟನೆಗೆ ಅವರು ಸ್ಪಂದಿಸಲು ತಯಾರಿರಲಿಲ್ಲ. ಕಾರಣ ಅವರ ಮನೋಭೂಮಿಕೆಯಲ್ಲಿ ಧಲಿತರೆಂದರೆ ಸೋಲುವವರೇ ಆಗಿದ್ದಾರೆ ಅಥವಾ ಪರಾವಲಂಭಿಗಳೇ ಆಗಿದ್ದಾರೆ.

ಹೀಗೆ ಭಾರತೀಯ ಕುಲೀನ ವರ್ಗವು ಸಾಂಸ್ಕೃತಿಕ ಅ-ಸಂಬಂಧದಿಂದಾಗಿ ಎದುರಾಗುತ್ತಿರುವ ಸಾಮಾಜಿಕ ವಾಸ್ತವಗಳನ್ನು ಅರಿಯಲು ಅಸಮರ್ಥರಾಗುತ್ತಿದ್ದಾರೆ.

ಈ ಸಾಂಸ್ಕೃತಿಕ ಪರಕೀಯತೆಯಿಂದ ಕುಲೀನ ವರ್ಗವನ್ನು ಎತ್ತಬೇಕಾಗಿರುವುದು ಆಧುನಿಕ ಭಾರತಕ್ಕೆ ಎದುರಾಗಿರುವ ಬಹು ಮುಖ್ಯ ಸವಾಲೆಂದೇ ಪರಿಗಣಿಸಬೇಕಾಗಿದೆ.

ಜನಸಾಮಾನ್ಯರಿಂದ ಪರಕೀಯರಾಗಿರುವ ಕುಲೀನ ವರ್ಗವು ಯಾವುದೇ ಸಮಾಜಕ್ಕೆ ನಾಶದ ಮುನ್ಸೂಚನೆಯಾಗಿದೆ. ಮಧ್ಯಮ ವರ್ಗವು ತನ್ನ ವರ್ಗಹಿತಾಸಕ್ತಿಯನ್ನು ಕಾಪಾಡಿಕೊಳ್ಳಲು ಹವಣಿಸುತ್ತಿರುತ್ತದೆ. ಜರ್ಮನಿಯಲ್ಲಿ ಅದೊಂದು ತಾತ್ಕಾಲಿಕ ವಿದ್ಯಮಾನವೆಂದೇ ಹೇಳಬೇಕು. ಭಾರತದಲ್ಲಿ ಜನಸಾಮಾನ್ಯರಿಂದ ಪರಕೀಯರಾಗಿರುವ ಕುಲೀನವರ್ಗದ ದುರಂತ ಹೇಳಲು ಅಸಾಧ್ಯ. ಯಾವಾಗ ಕುಲೀನ ವರ್ಗವು ಒಂಟಿಯೆಂದು ಭಾವಿಸುತ್ತದೋ ಆಗಲೇ·ಅದು ಎಲ್ಲಾ ಸಾಮಾಜಿಕ ವರ್ಗಗಳಿಂದ ಹೆದರಿಕೆಯನ್ನು ಅನುಭವಿಸುತ್ತದೆ. ಅವರ ಪ್ರತ್ಯೇಕಿತ ಆಶೋತ್ತರಗಳಿಂದಾಗಿ ಕುಲೀನವರ್ಗವು ತಾವು ಜೀವಿಸು ತ್ತಿರುವ ಸಮಾಜದಲ್ಲಿ ಸಮಸ್ಯೆಗಳನ್ನು ಹುಟ್ಟುಹಾಕುತ್ತದೆ.

ಜನಸಾಮಾನ್ಯರಿಂದ ಪರಕೀಯರಾಗಿರುವ ಕುಲೀನ ವರ್ಗವು ಯಾವುದೇ ಸಮಾಜಕ್ಕೆ ನಾಶದ ಮುನ್ಸೂಚನೆಯಾಗಿದೆ. ಜರ್ಮನಿಯಲ್ಲಿ ಎರಡನೇ ಮಹಾಯುದ್ಧ ಮೊದಲು ಮತ್ತು ನಂತರ ಏನಾಯಿತೆಂದು ನಮಗೆ ತಿಳಿದಿದೆ. ಮಧ್ಯಮವರ್ಗವು ತನ್ನ ವರ್ಗ ಹಿತಾಸಕ್ತಿಯನ್ನು ಕಾಪಾಡಿಕೊಳ್ಳಲು ಹವಣಿಸುತ್ತಿರುತ್ತದೆ. ಜರ್ಮನಿಯಲ್ಲಿ ಅದೊಂದು ತಾತ್ಕಾಲಿಕ ವಿದ್ಯಮಾನವೆಂದೇ ಹೇಳಬೇಕು. ಭಾರತದಲ್ಲಿ ಜನಸಾಮಾನ್ಯರಿಂದ ಪರಕೀಯರಾಗಿರುವ ಕುಲೀನವರ್ಗದ ದುರಂತ ಹೇಳಲು ಅಸಾಧ್ಯ.

ಯಾವಾಗ ಕುಲೀನವರ್ಗವು ಒಂಟಿಯೆಂದು ಭಾವಿಸುತ್ತದೋ ಆಗಲೇ ಅದು ಎಲ್ಲಾ ಸಾಮಾಜಿಕ ವರ್ಗಗಳಿಂದ ಹೆದರಿಕೆಯನ್ನು ಅನುಭವಿಸುತ್ತದೆ. ಅವರ ಪ್ರತ್ಯೇಕಿತ ಆಶೋತ್ತರಗಳಿಂದಾಗಿ ಕುಲೀನವರ್ಗವು ತಾವು ಜೀವಿಸುತ್ತಿರುವ ಸಮಾಜದಲ್ಲಿ ಸಮಸ್ಯೆಗಳನ್ನು ಹುಟ್ಟುಹಾಕುತ್ತದೆ.

ಅಮೆರಿಕಾದಲ್ಲಿಯೂ ಸಹ ಇದೇ ರೀತಿಯಲ್ಲಿ ಕುಕ್ಲುಕ್ಸ್ ಕ್ಲಾನ್‌ಗೆ ಅಲ್ಲಿನ ಕುಲೀನ ವರ್ಗವು ಕಾರಣವಾಯಿತು. ೧೯ನೇ ಶತಮಾನದ ಕೊನೆಯಿಂದ ೧೯೩೦ರ ಮೊದಲಿಗೆ ಬಿಳಿಯರ ಪ್ರಾಬಲ್ಯಕ್ಕಾಗಿ ಕು ಕ್ಲುಕ್ಸ್ ಕ್ಲಾನ್ ಯಹೂದಿ ವಿರೋಧಿ, ಕ್ಯಾಥೋಲಿಕ್ ವಿರೋಧಿ, ನರಹತ್ಯೆ ಮತ್ತು ಸ್ಥಳೀಯತೆಗಾಗಿ ಹೋರಾಡುವಂತೆ ತೋರಿಸಿಕೊಂಡಿತು.

ಹೀಗೆ ಅಮೇರಿಕಾದ ನಾಗರೀಕತೆಯಲ್ಲಿ ಈ ಕು ಕ್ಲುಕ್ಸ್ ಕ್ಲಾನ್ ಅತಿಯಾದ ಅಂದರೆ ಗುಲಾಮ ಪದ್ಧತಿಗಿಂತಲೂ ಹೀನವಾಗಿ ಬಿಂಬಿತವಾಗಿದೆ.

ಭಾರತೀಯ ನಾಗರೀಕತೆಯು ಸಹ ಮತ್ತಷ್ಟು ವಿಷವರ್ತುಲವಾಗಿ ಎಲ್ಲಾ ಕಡೆ ಪಸರಿಸಿಬಿಟ್ಟಿದೆ. ಕೇವಲ ಅರ್ಧ ಶತಮಾನದಲ್ಲೇ ಕು ಕ್ಲುಕ್ಸ್ ಕ್ಲಾನ್ ಸಂಬಂಧವನ್ನು ಬಿಳಿಯ ಬಣ್ಣದ ಕುಲೀನ ವರ್ಗವು ತೊರೆಯಿತು. ಇದು ಅವರ ಪ್ರತ್ಯೇಕತೆಯ ಸಂಬಂಧವನ್ನು ಕೊನೆಗೊಳಿಸಬೇಕಾಗಿ ಬಂದ ಒತ್ತಡವು ಹೌದು. ಆದರೂ ಭಾರತೀಯ ಕುಲೀನ ವರ್ಗವು ಅದಕ್ಕಿಂತಲೂ ಅಧಿಕವಾದ ಪ್ರತ್ಯೇಕತೆಯನ್ನು ಅನುಭವಿಸುತ್ತಿದ್ದರೂ ಅದರ ಬಗ್ಗೆ ಏನೂ ಗೊತ್ತಿಲ್ಲದಂತೆ ವರ್ತಿಸುತ್ತಿದೆ.

ಪ್ರತ್ಯೇಕತೆ ಮತ್ತು ಅಜ್ಞಾನದಿಂದ ಈ ಒತ್ತಡಕ್ಕೊಳಗಾಗಿರುವ ಈ ಕುಲೀನ ವರ್ಗವು ಯಾವುದೇ ರೀತಿಯ ತರ್ಕ ಮತ್ತು ಸಾಮಾಜಿಕ ಕಾರಣಗಳಿಗೆ ವಿರುದ್ಧವಾಗಿದೆ.

ಆದ್ದರಿಂದ ಟೈಮ್ಸ್ ನೌವ್, ಇಂಡಿಯಾ ಟಿವಿ, ಎನ್‌ಡಿಟಿವಿ-೨೪x೭, ಎನ್‌ಡಿಟಿವಿ ಇಂಡಿಯಾ, ಸಿಎನ್‌ಎನ್ - ಐಬಿಎನ್, ಐಬಿಎನ್ - ೦೭ ಇವುಗಳೆಲ್ಲಾ ಅನಧಿಕೃತವಾಗಿ ಎಷ್ಟು ಬಾರಿ ದಲಿತರೊಡನೆ ಊಟ ಮಾಡುತ್ತಾರೆ ಎನ್ನುವುದನ್ನು ಪರಿಶೀಲಿಸಬೇಕಾಗುತ್ತದೆ. "ನಾವ್ಯಾರು ಊಟಮಾಡುವಾಗ ಅತಿಥಿಗಳ/ ಆಹ್ವಾನಿಸಿದವರ ಜಾತಿಯ ಬಗ್ಗೆ ಚಿಂತೆ ಮಾಡುವುದಿಲ್ಲ" ಎಂದು ಅವರು ಹೇಳುತ್ತಾರೆ.

ಮತ್ತೂ ಪರಿಶೀಲಿಸಿದಲ್ಲಿ ಅವರು ಏಕೆ ಆ ರೀತಿ ಸುಳ್ಳು ಹೇಳುತ್ತಿದ್ದಾರೆ ಎನ್ನುವುದರ ಬಗ್ಗೆ ನಾವು ಅನುಕಂಪ ತೋರಿಸಬೇಕಷ್ಟೆ. ಇದನ್ನು ಸಾಮಾಜಿಕ ಸುಪ್ತಪ್ರಜ್ಞೆ ಎನ್ನದೆ ವಿಧಿಯಿಲ್ಲ.

ಹೀಗಿರುವಲ್ಲಿ ಸುದ್ದಿ ಮಾಧ್ಯಮಗಳ ಮಾಲೀಕರು ದಲಿತರನ್ನು ಕೆಲಸಕ್ಕೆ ತೆಗೆದುಕೊಳ್ಳದಿರುವುದರಿಂದ ಅವರ್‍ಯಾರೂ ಸಹ ದಲಿತರೊಡನೆ ಊಟಮಾಡುವ ಸಂದರ್ಭ ಬರುವುದೇ ಇಲ್ಲ.

ಇದನ್ನು ನಾವು ದಲಿತರ ವಿರುದ್ಧ ತಾರತಮ್ಯ ಎಂದು ವಿವರಿಸಲಾಗದು. ಕಾರಣ ಯಾವುದೇ ಘಟನೆ ಗೊತ್ತಿಲ್ಲದೆ ನಡೆಯುವುದರಿಂದ ಅದನ್ನು ನಾವು ಸಾಮಾಜಿಕ ಮೌಲ್ಯವೆಂದು ನೋಡಲಾಗದು. ಕುಲೀನ ವರ್ಗ ದಲಿತ ಜಗತ್ತಿನ ಹೊಸತನದ ಬಗ್ಗೆ ಯಾವುದೇ ಅರಿವಿಲ್ಲದ ಕಾರಣ ಉತ್ತರ ಪ್ರದೇಶದಲ್ಲಿ ಬೆಳೆಯುತ್ತಿರುವ ಬಿಎಸ್‌ಪಿಯ ಜನಪ್ರಿಯತೆಯನ್ನು ಅವರು ಗ್ರಹಿಸಲಾಗುವುದಿಲ್ಲ.

ಕೇವಲ ಸುದ್ದಿ ಜಾಲಗಳು ಮಾತ್ರ ಸಾಮಾಜಿಕ ಸುಪ್ತಾವಸ್ಥೆಗೆ ಸಿಲುಕಿಕೊಂಡಿದ್ದವೆಂದು ಭಾವಿಸಬೇಕಿಲ್ಲ. ಅವುಗಳೊಡನೆ ಭಾರತೀಯ ಕುಲೀನವರ್ಗ, ವಾಣಿಜ್ಯ ಕೇಂದ್ರಗಳು, ಸಿನೆಮಾ ತಯಾರಕರು, ಅಕಾದೆಮಿಕ್ ಜನ, ಮತ್ತು ಸಾಂಸ್ಕೃತಿಕ ಸರದಾರರು - ಇವರೆಲ್ಲರೂ ಸಹ ಅದೇ ರೋಗಕ್ಕೆ ತುತ್ತಾಗಿದ್ದಾರೆ. ಭಾರತೀಯ ಕುಲೀನ ವರ್ಗಗಳು ಎದುರಿಸುತ್ತಿರುವ ಬಿಕ್ಕಟ್ಟಿಗೆ ಈ ಸುದ್ದಿಜಾಲಗಳು ಸಾಕ್ಷಿಯಾಗಿವೆಯಷ್ಟೆ.

ಈ ಅತಾರ್ಕಿಕ ಮನೋವ್ಯಾಧಿಗೆ ಭಾರತೀಯ ಕುಲೀನ ವರ್ಗವು ಚಾರಿತ್ರಿಕವಾಗಿ ತುತ್ತಾಗಿ, ಮತ್ತಷ್ಟು ಪ್ರತ್ಯೇಕತೆಯತ್ತ ಸರಿಯುತ್ತಿದ್ದಾರೆ. ಭಾರತೀಯ ಸಾಮಾಜಿಕ ಬಿಕ್ಕಟ್ಟಿಗೆ ಸಂಬಂಧಿಸಿದಂತೆ ಬಂದಿರುವ ಕೆಲವು ಯೋಗ್ಯ ಪುಸ್ತಕಗಳೆಂದರೆ ವಿದೇಶಿ ಲೇಖಕರು ಬರೆದದ್ದೇ ಆಗಿವೆ.

ಈ ಕುಲೀನ ವರ್ಗವು ತಮ್ಮ ವಿನ್ಯಾಸದಲ್ಲೇ ದಬ್ಬಾಳಿಕೆಯ ವರ್ಗ ಎಂದು ನಾವು ನಂಬುತ್ತಿಲ್ಲ. ಆದರೆ ಇವರೆಲ್ಲಾ ಚಾರಿತ್ರಿಕ ಬದಲಾವಣೆಯ ಪ್ರಕ್ರಿಯೆಯಿಂದ ವಂಚಿತರಾಗಿದ್ದು, ಪ್ರಸ್ತುತ ಸಾಮಾಜಿಕ ವಿದ್ಯಮಾನಗಳಿಗೆ ಬಲಿಪಶುಗಳಾಗಿದ್ದಾರಷ್ಟೆ.

ಯಾವಾಗ ಚಾರಿತ್ರಿಕ ಪ್ರಕ್ರಿಯೆಗಳು ಇರುವುದಿಲ್ಲವೋ ಅಂತೆಡೆ ಯಾವ ವರ್ಗವೂ ಸಹ ತನ್ನದೇ ಆದ ಚರಿತ್ರೆಯನ್ನು ಹೊಂದಲಾಗದು. ಯಾವ ವರ್ಗಕ್ಕೆ ಅಂಥ ಚರಿತ್ರೆ ಇರುವುದಿಲ್ಲವೋ ಆ ವರ್ಗ ಅತಾರ್ಕಿಕವಾಗಿ ಬಿಡುತ್ತದೆ.

ಆದ್ದರಿಂದ ಇಲ್ಲಿರುವ ಪ್ರಶ್ನೆಯೆಂದರೆ ಇದಕ್ಕೆ ಪರಿಹಾರವೇನು ಎನ್ನುವುದು. ನಾವು ಈ ಭಾರತೀಯ ಕುಲೀನ ವರ್ಗದ ವಿರುದ್ಧ ಹೋರಾಟ ಮಾಡಬೇಕೆ? ಅಥವಾ ಅವರ ಮನಸ್ಸನ್ನು ಬದಲಾಯಿಸುವ ಯಾವುದಾದರೂ ಮಾರ್ಗವಿದೆಯೇ?

ಅವರ ಸಮಸ್ಯೆಗಳೆಲ್ಲಾ ಅವರ ಸಾಂಸ್ಕೃತಿಕ ಪ್ರತ್ಯೇಕದಿಂದ ಬಂದಿವೆಯಾದ್ದರಿಂದ ಅವರು ದಲಿತರೊಡನೆ ಒಂದಾಗಬೇಕಾಗಿದೆ.

ಆದರೆ ಇದೇನೂ ಸುಲಭ ಸಾಧ್ಯವೇನೂ ಅಲ್ಲ. ಸಮರೋಪಾದಿಯಲ್ಲಿ ದಲಿತರನ್ನು ದೊಡ್ಡ ದೊಡ್ಡ ನಿಗಮ

ಉಪಾಯವಿಲ್ಲದ ಕುಲೀನವರ್ಗ

ಕುಲೀನ ವರ್ಗಕ್ಕೆ ಚಿಕಿತ್ಸೆ

ಮಂಡಲಿಗಳಲ್ಲಿ, ಮಾಧ್ಯಮ, ಸಿನೆಮಾ, ಜ್ಞಾನ ಕೇಂದ್ರಗಳು, ಕಲೆ ಮತ್ತು ಸಾಹಿತ್ಯ ವಲಯಗಳಲ್ಲಿ ತೊಡಗಿಸಿಕೊಳ್ಳುವ ಅಗತ್ಯ ಇದೆ.

ಹೀಗೆ ದಲಿತರನ್ನು ಕುಲೀನ ವರ್ಗದೊಡನೆ ಸೇರಿಸಿಕೊಳ್ಳದಿದ್ದರೆ ಕುಲೀನವರ್ಗವು ತನ್ನ ಸಾಮಾಜಿಕ ಪ್ರತ್ಯೇಕತೆಯಿಂದ ಹೊರಬರಲು ಸಾಧ್ಯವಿರುವುದಿಲ್ಲ. ಹೀಗಾದಾಗಲೇ ಅವರು ಒಂದು ಘಟಕವಾಗಿರುವುದರಿಂದ ಹೊರ ಬಂದು ಒಂದು ಸಾಮಾಜಿಕ ವರ್ಗವಾಗಿ ಹೊರಮ್ಮಲು ಸಾಧ್ಯ.

ಅಲ್ಲದೆ, ಸಾಂಸ್ಕೃತಿಕವಾಗಿ ಪ್ರತ್ಯೇಕಗೊಂಡಿರುವ ಕುಲೀನ ವರ್ಗವು ಸಾಮಾಜಿಕ ಭಾರವಾಗಿರುವುದರಿಂದ ಸಾಮಾಜಿಕ ಸಂಪತ್ತಾಗಿ ಪರಿವರ್ತನೆಗೊಳ್ಳಲು ಸಾಧ್ಯ.

ಭಾರತೀಯ ಕುಲೀನವರ್ಗವನ್ನು ಅವರ ವಿಧಿಲಿಖಿತ ಶಿಕ್ಷೆಗೆ ಬಿಟ್ಟುಬಿಡಬೇಕೆ ಅಥವಾ ಕೆಲವೊಂದು ಸಾಮಾಜಿಕ ಮಾನದಂಡಗಳನ್ನು ನೀಡಿ ಅವರನ್ನು ತಮ್ಮ ಅಚಾರಿತ್ರಿಕ ಬಂಧನದಿಂದ ಹೊರ ತರಬೇಕೆ?

ಕಾಲಮಾನ ವೇಗವಾಗಿ ಬದಲಾಗುತ್ತಿರುವ ಪ್ರಸ್ತುತ ಜಗತ್ತಿನಲ್ಲಿ ಸಾಮಾಜಿಕವಾಗಿ ಅಸಂಗತವಾಗಿರುವ ಕುಲೀನ ವರ್ಗವು ಆಧುನಿಕತೆಯಲ್ಲಿ ಒಂದು ನಿರ್ಣಾಯಕ ಪಾತ್ರ ವಹಿಸಬಲ್ಲದು. ಏಕೆಂದರೆ ಎಲ್ಲಾ ಸಮಾಜಗಳಲ್ಲಿಯೂ ಕುಲೀನವರ್ಗವು ಆಧುನಿಕತೆಗೆ ಅಡ್ಡಿಯಾದುವುಗಳನ್ನೆಲ್ಲಾ ತೆರವುಗೊಳಿಸಿ, ಹಾದಿಯನ್ನು ಸುಗಮಗೊಳಿಸುತ್ತದೆ.

ದುರಾದೃಷ್ಟ ಎಂಬಂತೆ ಭಾರತೀಯ ಕುಲೀನವರ್ಗವು ಆಧುನಿಕತೆಗೆ ಅಡ್ಡಗಾಲನ್ನು ಹಾಕಿದೆ. ಭಾರತೀಯ ಕುಲೀನವರ್ಗದ ಭವಿಷ್ಯದ ಮೇಲಿನ ಮುಕ್ತಾಯದ ಈ ಸರಣಿ ಲೇಖನಗಳಲ್ಲಿ ನಂಬಿಗಸ್ತ ದಲಿತ ಚಿಕಿತ್ಸೆಯನ್ನು ಸೂಚಿಸುವುದರ ಮೂಲಕ ಅವರಿಗೆ ಅಂಟಿರುವ ಜಾಡ್ಯವಕ್ಕೆ ಮದ್ದನ್ನು ಸೂಚಿಸಲಾಗಿದೆ. ಈ ದಲಿತ ಚಿಕಿತ್ಸೆಯ ಪರಿಣಾಮಕಾರಿ ಸಾಮಾಜಿಕ ಔಷಧಿಯನ್ನು ಅರಿಯ ಬೇಕಾದರೆ ಉತ್ತರ ಪ್ರದೇಶದ ಚುನಾವಣೆಯಲ್ಲಾದ ಅನುಭವವನ್ನು ನೆನಪಿಸಿಕೊಳ್ಳಬೇಕಾಗಿದೆ.

ಈಗ ಎಲ್ಲರೂ ಗುರುತಿಸುವಂತೆ ಗ್ರಾಮೀಣ ಭಾಗದ ಬಹುಮಂದಿ ದ್ವಿಜರು ಬಿಎಸ್‌ಪಿಗೆ ಮತಚಲಾಯಿಸಿದ್ದಾರೆ. ಅಂದರೆ ಬಿಎಸ್‌ಪಿಯ ದ್ವಿಜ ಮತದಾರರು ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಅಂಚಿಗೆ ದೂಡಲ್ಪಟ್ಟಿದ್ದಾರೆ.

ಇಲ್ಲಿ ನಾವು ಸ್ವ-ದ್ವಂದ್ವದಲ್ಲಿ ಸಿಲುಕಿಕೊಳ್ಳುವಂಥ ವಿಶೇಷ ಸಾಮಾಜಿಕ ಸನ್ನಿವೇಶ ಎದುರಾಗಿದೆ. ದಲಿತ ಎನ್ನುವ ಎಲ್ಲವನ್ನೂ ವಿರೋಧಿಸುವ ಭಾರತೀಯ ಕುಲೀನ ವರ್ಗ ಮತ್ತು ಗ್ರಾಮೀಣ ದ್ವಿಜರು ಸಾಮಾಜಿಕವಾಗಿ ಒಂದೇ ವಿಭಾಗದಿಂದ ಬಂದವರಾಗಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ದ್ವಿಜರು ತಮ್ಮನ್ನಾಳಲು ದಲಿತ ನಾಯಕತ್ವವನ್ನು ಒಪ್ಪಿಕೊಂಡರೆ, ಅದೇ ಕುಲೀನವರ್ಗ ದಲಿತರನ್ನು ತಮ್ಮ ವರ್ಗಕ್ಕೆ ಸೇರಲು ಸಮರ್ಥರಿದ್ದಾರೆನ್ನುವುದನ್ನು ತಿರಸ್ಕರಿಸುತ್ತದೆ. ಹೀಗೇಕೆ? ಈ ಸಮಸ್ಯೆಯನ್ನು ಅರಿತೇ ದಲಿತ ಚಿಕಿತ್ಸೆಯ ಅದ್ಭುತವನ್ನು ಪ್ರತಿಪಾದಿಸುತ್ತಿರುವುದು.

೭೦ ವರ್ಷದ ಒಬ್ಬ ಬ್ರಾಹ್ಮಣ ಬಿಎಸ್‌ಪಿಯ ಪರವಾಗಿ ಪ್ರಚಾರಮಾಡಲು ನಿರ್ಧರಿಸುವುದನ್ನು ಸ್ವಲ್ಪ ಪರೀಕ್ಷಿಸೋಣ. ಅಥವಾ ಉತ್ತರಪ್ರದೇಶದ ಚುನಾವಣೆ ಮುಗಿದಾಕ್ಷಣ ಬಿಎಸ್‌ಪಿಯ ಬಾವುಟವನ್ನು ಹಾರಿಸುತ್ತಿರುವ ೧೭ ವರ್ಷದ ಬ್ರಾಹ್ಮಣ ಯುವಕನನ್ನು ಗಮನಿಸೋಣ.

ಇದೆಲ್ಲಾ ಕೇವಲ ಅಧಿಕಾರದ ದುರಾಸೆಯಿಂದ ಎಂದು ಹೇಳಬಹುದೇ? ಅವಕಾಶವಾದಿಯೆಂದು ಭಾವಿಸೋಣ. ಆದರೆ ಅದೇ ಸಂಗತಿ ರಾಜಕೀಯವಾಗಿ ಪ್ರತ್ಯೇಕಿತರಾಗಿರುವ ಕುಲೀನವರ್ಗಕ್ಕೂ ಹೇಳಬಹುದಲ್ಲವೇ? ಇಲ್ಲೇ ದಲಿತ ಚಿಕಿತ್ಸೆಯ ಪರಿಣಾಮ ಅಡಗಿರುವುದು.

೭೦ ವರ್ಷದ ಬ್ರಾಹ್ಮಣ, ತನ್ನ ಯುವವಯಸ್ಸಿನಲ್ಲಿ ಕಣ್ಣೆದುರೆ ಭಿಕಾರಿಯಾಗಿ ಬದುಕುತ್ತಿದ್ದ ದಲಿತ ಕುಟುಂಬವನ್ನು ಗಮನಿಸಿದ್ದಾನೆ. ತನ್ನ ಕುಟುಂಬದ ಉಳಿವಿಗಾಗಿ ಅಗತ್ಯವಿದ್ದ ಕೇವಲ ಒಂದು ರುಪಾಯಿಗಾಗಿ ತಾಸುಗಟ್ಟಳೆ ತನ್ನ ಮನೆ ಎದುರು ಕಾಯುತ್ತಿದ್ದ ದಲಿತ ಮುದುಕನನ್ನು ಆತ ನೋಡಿದ್ದಾನೆ. ಅಲ್ಲದೆ, ತನ್ನ ಹೊಲದಲ್ಲಿ ಮಳೆ ಬಂದರೂ ಸಹ ದಿನಗಟ್ಟಳೆ ದುಡಿಯುವ ಅಥವಾ ಬಿಸಿಲಿದ್ದರೂ ಗೋಧಿ ಕೊಯ್ಲಲ್ಲಿ ತೊಡಗಿರುವ ದಲಿತರನ್ನು ನೆನಪಿಸಿಕೊಳ್ಳಬಹುದು. ಹೀಗೆ ದಲಿತನೊಬ್ಬ ಪರಾವಲಂಬಿಯಾಗಿ ಅವಮಾನಿತನಾದುದನ್ನು ನೆನಪಿಸಿಕೊಳ್ಳಬಹುದು.

> **ಕಾಲಮಾನ ವೇಗವಾಗಿ ಬದಲಾಗುತ್ತಿರುವ ಪ್ರಸ್ತುತ ಜಗತ್ತಿನಲ್ಲಿ ಸಾಮಾಜಿಕವಾಗಿ ಅಸಂಗತವಾಗಿರುವ ಕುಲೀನವರ್ಗವು ಆಧುನಿಕತೆಯಲ್ಲಿ ಒಂದು ನಿರ್ಣಾಯಕ ಪಾತ್ರ ವಹಿಸಬಲ್ಲದು. ಏಕೆಂದರೆ ಎಲ್ಲಾ ಸಮಾಜಗಳಲ್ಲಿಯೂ ಕುಲೀನವರ್ಗವು ಆಧುನಿಕತೆಗೆ ಅಡ್ಡಿಯಾದುವುಗಳನ್ನೆಲ್ಲಾ ತೆರವುಗೊಳಿಸಿ, ಹಾದಿಯನ್ನು ಸುಗಮಗೊಳಿಸುತ್ತದೆ. ದುರಾದೃಷ್ಟ ಎಂಬಂತೆ ಭಾರತೀಯ ಕುಲೀನವರ್ಗವು ಆಧುನಿಕತೆಗೆ ಅಡ್ಡಗಾಲನ್ನು ಹಾಕಿದೆ. ಭಾರತೀಯ ಕುಲೀನವರ್ಗದ ಭವಿಷ್ಯದ ಮೇಲಿನ ಮುಕ್ತಾಯದ ಈ ಸರಣಿ ಲೇಖನಗಳಲ್ಲಿ ನಂಬಿಗಸ್ತ ದಲಿತ ಚಿಕಿತ್ಸೆಯನ್ನು ಸೂಚಿಸುವುದರ ಮೂಲಕ ಅವರಿಗೆ ಅಂಟಿರುವ ಜಾಡ್ಯವಕ್ಕೆ ಮದ್ದನ್ನು ಸೂಚಿಸಲಾಗಿದೆ. ಈ ದಲಿತ ಚಿಕಿತ್ಸೆಯ ಪರಿಣಾಮಕಾರಿ ಸಾಮಾಜಿಕ ಔಷಧಿಯನ್ನು ಅರಿಯಬೇಕಾದರೆ ಉತ್ತರ ಪ್ರದೇಶದ ಚುನಾವಣೆಯಲ್ಲಾದ ಅನುಭವವನ್ನು ನೆನಪಿಸಿಕೊಳ್ಳಬೇಕಾಗಿದೆ.**

ಆದರೆ ಕೇವಲ ಅರ್ಧ ಶತಮಾನದಲ್ಲೇ ಸಂಪೂರ್ಣ ಪಲ್ಲಟಗೊಂಡಿರುವ ವಿದ್ಯಮಾನಗಳು ಕಾಣುತ್ತಿವೆ. ರಾಜ್ಯಾಂಗದ ಸಕಾರಾತ್ಮಕಕ್ರಿಯೆ ಮತ್ತು ನೀತಿಗಳಿಂದಾಗಿ ತನ್ನೊಳಗೆ ಆದ ತೀವ್ರವಾದ ಸಾಮಾಜಿಕ ಸುಧಾರಣೆಗಳ ಪರಿಣಾಮ ಅದೇ ದಲಿತ ಕುಟುಂಬದ ಮಗು ಶಿಕ್ಷಿತನಾಗಿ ಇಂಜಿನಿಯರ್ ಆಗಿ ಹೊರ ಹೊಮ್ಮಿದ್ದಾನೆ. ಈ ದಲಿತ ಇಂಜಿನಿಯರ್ ಒಂದು ಸಾರ್ವಜನಿಕ ವಲಯದ ಕಂಪನಿಯಲ್ಲಿ ಉದ್ಯೋಗಸ್ಥನಾಗಿ ತನ್ನ ಮನೆಯ ಸ್ಥಿತಿಯನ್ನೆ ಬದಲಾಯಿಸಲನುವಾದ. ಹೊಸ ಮನೆಯಾಗಿ, ಮನೆಯಲ್ಲಿನ ಹೆಂಗಸರು ದ್ವಿಜರ ಹೊಲದಲ್ಲಿ ದುಡಿಯುವುದು ನಿಂತು, ಅವರ ಘನತೆ ಮರುಕಳಿಸಿದಂತಾಗಿದೆ. ಈ ದಲಿತ ಯುವಕ ಒಂದು ಬೈಕನ್ನು ಕೊಂಡಿದ್ದು, ವರ್ಷದಲ್ಲಿ ಎರಡುಬಾರಿ ತನ್ನ ಹಳ್ಳಿಗೆ ಭೇಟಿನೀಡುತ್ತಾನೆ. ಕೇವಲ ಎರಡು ದಶಕದಲ್ಲೇ ಆತ ಹೆಮ್ಮೆಯಿಂದ ಒಂದು ಕಾರನ್ನು ಖರೀದಿಸಿದ್ದು ಅದರಲ್ಲಿ ಸುಮಾರು ೫೦೦ ಕಿ.ಮೀ.ಗಳ ದೂರದಲ್ಲಿರುವ ತನ್ನ ಊರಿಗೆ ಬರುತ್ತಾನೆ.

ಆದರೆ ಬ್ರಾಹ್ಮಣ ಕುಟುಂಬ ಮಾತ್ರ ಕ್ರಮೇಣವಾಗಿ ಕುಸಿಯುತ್ತಿರುವುದನ್ನು ಕಾಣುತ್ತಿದ್ದಾನೆ. ಯಾವುದೇ ಆದಾಯ ಮೂಲವಿಲ್ಲದೆ, ೭೦ ವರ್ಷದ ಬ್ರಾಹ್ಮಣ ದಲಿತ ಕುಟುಂಬದ ಸುತ್ತಲೂ ಸುತ್ತುತ್ತಾನೆ.

ಯಾವಾಗ ಆ ದಲಿತ ಇಂಜಿಯರ್ ತನ್ನ ಮನೆಗೆ ಬರುತ್ತಾನೋ ಆಗ ಈ ಹಿರಿಯ ಬ್ರಾಹ್ಮಣ ಸಣ್ಣ ಹಣಕಾಸಿನ ಸಹಾಯ ಯಾಚಿಸಿ ಅಲ್ಲಿಗೆ ಬರುತ್ತಾನೆ. ಹೀಗೆ ಪರಿಸ್ಥಿತಿ ಪಲ್ಲಟಗೊಂಡಿದೆ. ಈಗ ದಲಿತ ನೀಡುತ್ತಿದ್ದಾನೆ; ಆ ಬ್ರಾಹ್ಮಣ ಆತನನ್ನು ಆಶ್ರಯಿಸಿದ್ದಾನೆ.

ಇಂಥ ಪರಿವರ್ತನೆಗೊಂಡ ಸಾಮಾಜಿಕ ಸನ್ನಿವೇಶಕ್ಕೆ ಗ್ರಾಮೀಣ ದ್ವಿಜರು ಸಾಕ್ಷಿಗಳಾಗಿದ್ದಾರೆ. ಹೀಗೆಂದಾಕ್ಷಣ ಎಲ್ಲಾ ದಲಿತ ಕುಟುಂಬಗಳು ಅದೇರೀತಿ ಬದಲಾಗಿವೆ ಎಂದಲ್ಲ. ಆದರೆ ಸಾಕಷ್ಟು ಮಂದಿ ಆರ್ಥಿಕವಾಗಿ ಸುಧಾರಿಸಿದ್ದಾರೆನ್ನುವುದು ಸತ್ಯ. ಈ ದಲಿತ ಚಿಕಿತ್ಸೆಯೇ ಗ್ರಾಮೀಣ ದ್ವಿಜನು ಅನುಭವಿಸುತ್ತಿರುವುದು.

ಹೀಗೆಂದು ಕುಲೀನ ವರ್ಗ ಅದೇ ರೀತಿಯ ಪ್ರಕ್ರಿಯೆಯಲ್ಲಿ ತೊಡಗಬೇಕಾಗಿಲ್ಲ. ಈ ಕುಲೀನವರ್ಗವು ದಲಿತರನ್ನು ತಮ್ಮ ಸಹವರ್ತಿಗಳಾಗಲು ಬಿಡಬೇಕಾಗಿದೆ. ಅಲ್ಲಿ ಅವಕಾಶವೊಂದು ದೊರೆತಲ್ಲಿ ದಲಿತರು ಅವರನ್ನು ಮೀರಿಸಬಲ್ಲರು ಎಂಬುದನ್ನು ಗಮನಿಸಬೇಕಾಗುತ್ತದೆ.

ದಲಿತರೊಡನೆ ಉದ್ಯೋಗ ಹಂಚಿಕೊಳ್ಳುವುದರಿಂದ ಮತ್ತು ಅವರೊಡನೆ ಊಟಮಾಡುವುದರಿಂದ ಕುಲೀನ ವರ್ಗವು ತಮ್ಮ ಸಾಂಸ್ಕೃತಿಕ ಘೆಟೋ/ ಪರಕೀಯತೆಯಿಂದ ಮುಕ್ತಿಯನ್ನು ಕಾಣಲು ಸಾಧ್ಯವಾಗುತ್ತದೆ. □

ಬುದ್ಧಾಯಣ

೨೪

'ಬಾ ಸೋಪಕ ನನ್ನ ತೊಡೆ ನಿನಗಾಗಿ'



ಸೋಪಕ ಮತ್ತು ಸುಪ್ರಿಯ ತಮ್ಮ ಬಾಲ್ಯವನ್ನು ಅನ್ಯೋನವಾಗಿ ಒಟ್ಟಿಗೆ ಕಳೆಯತೊಡಗಿದರು. ಸೋಪಕನಿಗೆ ಆಗಿನ್ನೂ ಏಳು ವರ್ಷ ಮಾತ್ರ ವಯಸ್ಸಾಗಿತ್ತು. ಆತ ತನ್ನ ಮುಂದಿನ ಬದುಕಿನ ಬಗ್ಗೆ ಕನಸು ಕಾಣತೊಡಗಿದ್ದ. ಓದಿ ವಿದ್ಯಾವಂತನಾಗಿ ಮುಂದೆ ನೂರಾರು ಜನರ ಮಧ್ಯೆ ಗಣ್ಯನಾಗಬೇಕು ಎಂದು ಹಂಬಲಿಸುತ್ತಿದನು; ಅವನು ಜಾತಿಯಲ್ಲಿ ಪಂಚಮನಾದ್ದರಿಂದ ಯಾವ ಬ್ರಾಹ್ಮಣ ಗುರುವು ಇವನನ್ನು ಹತ್ತಿರ ಬಿಟ್ಟುಕೊಳ್ಳಲಿಲ್ಲ. ತುಚ್ಛವಾಗಿ ಕಂಡು ನಾಯಿ ನರಿಯಂತೆ ಒದ್ದು ಅವಾಚ್ಯವಾಗಿ ಬೈದು ಓಡಿಸುತ್ತಿದ್ದರು.

ಸಿ. ಎಚ್. ರಾಜಶೇಖರ್

ಶ್ರಾವಸ್ತಿ ನಗರದ ಹರಿಜನ ಕೇರಿಯ ಒಂದು ಗುಡಿಸಲ ಮುಂದೆ ನೂರಾರು ಜನ ಬಂಧು-ಮಿತ್ರರು ನೆರೆದಿದ್ದರು. ಅವರುಗಳು ದುಃಖದ ಭಾರದಿಂದ ಕುಸಿದು ಹೋಗಿದ್ದರು. ಆದರೂ ಯಾವುದೋ ದೂರದ ಆಶಾಕಿರಣಕ್ಕಾಗಿ ಕಾಯುವವರಂತೆ ಕಂಡು ಬರುತ್ತಿದ್ದರು. ಅದೆಂದರೆ ಪಂಚಮರಲ್ಲಿಯೇ ಕೀಳು ಉಪಪಂಗಡವಾದ ಸೋಪಕ ಕುಲಕ್ಕೆ ಸೇರಿದ ತುಂಬು ಗರ್ಭಿಣಿಯೊಬ್ಬಳು ಮಗು ಹಡೆಯುವ ಮೊದಲು ಒಂದು ದೀರ್ಘವು ಮತ್ತು ಗಾಢವು ಆದ ಮೂರ್ಛೆಗೆ ಒಳಗಾಗಿದ್ದಳು.

ಮೂರು ದಿನ ಕಳೆದರೂ ಆಕೆಗೆ ಪ್ರಜ್ಞೆ ಬರಲಿಲ್ಲ. ಆಕೆಯ ಗಂಡ ಮತ್ತು ಬಂಧುಗಳು ಈಕೆ ಮರಣ ಹೊಂದಿದಳು ಎಂಬ ತೀರ್ಮಾನಕ್ಕೆ ಬಂದರು. ಆಕೆಯ ಶವದ ಮುಂದೆ ಕುಳಿತ ಕೆಲವು ಹೆಂಗಸರು, ಮಕ್ಕಳು ಗುಡಿಸಲ ಒಳಗೆ ಎದೆ ಬಿರಿಯುವಂತೆ ಅಳುತ್ತಿದ್ದರು. ಹೊರಗಡೆ ಕೆಲವು ಗಂಡಸರು ಜತೆಯಾಗಿ ನೆರೆದು ಚಟ್ಟವನ್ನು ಕಟ್ಟುತ್ತಿದ್ದರು. ಮತ್ತೊಂದು ಬದಿಯಲ್ಲಿ ಬೆಂಕಿ ಹಾಕಿದ್ದರು. ಆ ಬೆಂಕಿಯ ಜ್ವಾಲೆಗೆ ಕೆಲವರು ಮೈ ಒಡ್ಡಿ ಚಳಿ ಕಾಯಿಸಿಕೊಳ್ಳುತ್ತಿದ್ದರು. ಅದರಲ್ಲೊಬ್ಬ ತನ್ನ ತಮಟೆಯ ಚರ್ಮವನ್ನು ಕಾಯಿಸಿ ನಡು ನಡುವೆ ಬಡಿಯುತ್ತಾ ಧ್ವನಿ ಪರೀಕ್ಷಿಸುತ್ತಿದ್ದ.

ಶೃಂಗರಿಸಿ ಪೂಜೆ ಮಾಡಿದ ಶವವನ್ನು ಚಟ್ಟದ ಮೇಲಿಡುತ್ತಿದ್ದಂತೆ ಬಂಧು ಬಾಂಧವರು ಎದೆ ಬಿರಿಯುವಂತೆ ಮತ್ತೆ ದುಃಖಿಸಿ ಬೀಳ್ಕೊಟ್ಟರು. ಮೆರವಣಿಗೆಯಲ್ಲಿ ಹೊರಟ ಶವಯಾತ್ರೆ ಸ್ಮಶಾನವನ್ನು ತಲುಪಿತು. ಕಟ್ಟಿಗೆಯನ್ನು ಜೋಡಿಸಿ ಚಿತೆಯನ್ನು ಸಿದ್ಧಗೊಳಿಸುತ್ತಿದ್ದಂತೆ ಎಲ್ಲಿಲ್ಲದ ಬಿರುಗಾಳಿ ಬೀಸತೊಡಗಿತು. ಆಕಾಶದಲ್ಲಿ ಕಾರ್ಮೋಡ ಕವಿಯಿತು. ಗುಡುಗು, ಮಿಂಚು, ಸಿಡಿಲಿನಿಂದ ವಾತಾವರಣ ಭೀಕರಗೊಂಡಿತು. ಮಳೆ ಬೀಳುವ ಸೂಚನೆ ಅರಿತ ಅವರೆಲ್ಲ ತುಂಬು ಗರ್ಭಿಣಿಯ ಶವವನ್ನು ಚಿತೆಯ ಮೇಲೆ ಮಲಗಿಸಿ ಬೆಂಕಿ ಹಚ್ಚತೊಡಗಿದರು. ಪ್ರಚಂಡ ಬಿರುಗಾಳಿಗೆ ಬೆಂಕಿ ಹತ್ತಲಿಲ್ಲ. ಅಷ್ಟರಲ್ಲಿ ಹಿಂದೆಂದೂ ಕಂಡರಿಯದ ಭೀಕರ ಮಳೆ ಸುರಿಯಿತು. ಇದರಿಂದ ಕಂಗೆಟ್ಟ ಅವರೆಲ್ಲ ಶವವನ್ನು ಚಿತೆಯ ಮೇಲೆಯೆ ಬಿಟ್ಟು ಮನೆಯ ಕಡೆ ಓಡಿದರು.

ಸ್ಮಶಾನದ ಕಾವಲುಗಾರ ತನಗೆ ಸಲ್ಲಬೇಕಾದ ಕಾಣಿಕೆಗಾಗಿ ಆ ಬಿರುಗಾಳಿ ಮಳೆಯ ಮಧ್ಯೆ ಕೂಗೇ ಕೂಗಿದ. ಅವನ ಕೂಗು ಯಾರಿಗೂ ಕೇಳಲಿಲ್ಲ. ಖಿನ್ನನಾದ ಅವನು ಚಿತೆಯ ಮುಂದೆ ಬಂದು ನಿಂತ. ಶವದ ಮೇಲೆ ಹೊಸ ಬಟ್ಟೆಯೋ, ಅಕ್ಕಿ, ಪುಡಿಗಾಸು ಅಥವಾ ತಿಂಡಿ ತಿನಿಸೇನಾದರೂ ಇದೆಯೋ ಎಂದು ಸೂಕ್ಷ್ಮವಾಗಿ ಪರೀಕ್ಷಿಸ ತೊಡಗಿದ. ಅದ್ಯಾವುದರ ಸುಳಿವೂ ಅಲ್ಲಿರಲಿಲ್ಲ. ಬದಲಿಗೆ ಶವವು ಸಣ್ಣಗೆ ಅಲುಗಾಡುತ್ತಿತ್ತು. ಕ್ಷೀಣವಾಗಿ ನರಳುತ್ತಿತ್ತು ತನ್ನನ್ನೇ ತಾನು ನಂಬದವನಂತೆ ಬೆಚ್ಚಿ ಮತ್ತೂ ಹತ್ತಿರ ಸರಿದು ಆಕೆಯ ಮೂಗಿನ ಮೇಲೆ ಕೈ ಇಕ್ಕಿದ. ಉಸಿರಾಟ ನಿಂತಿರಲಿಲ್ಲ ಆಕೆ ಸತ್ತಿರಲಿಲ್ಲ. ತುಂಬು ಗರ್ಭಿಣಿಯಾಗಿದ್ದಳು. ಆತ ತನ್ನನ್ನೇ ತಾನು ಹಂಗಿಸಿಕೊಳ್ಳುವಂತೆ:

'ಜಗದಲ್ಲಿ ಹೀಗೂ ಉಂಟೇ, ಇಂತಹ ಕೆಟ್ಟ ಜನರೂ ಇದ್ದಾರೆಯೇ?' ಎಂದು ತನ್ನನ್ನು ತಾನೆ ಪ್ರಶ್ನಿಸಿಕೊಂಡ! ಚಿತೆಯ ಮೇಲೆ ಮಲಗಿದ್ದ ಆಕೆಯ ಮುಖದಲ್ಲಿ ಅಸಾಧಾರಣವೂ ಅಲೌಕಿಕವೂ ಆದ ತೇಜಸ್ಸಿತ್ತು. ಆಕೆಯ ಮುಖದಲ್ಲಿ ತನ್ನ ತಾಯಿಯ ಪ್ರತಿಬಿಂಬ ಕಂಡ! ಆಕೆ ನಿಧಾನವಾಗಿ ಕಣ್ಣು ತೆರೆಯುತ್ತಾ:

'ಅಯ್ಯೋ... ಅಮ್ಮ... ನೋವು... ಹೊಟ್ಟೆನೋವು... ಹೆರಿಗೆ ನೋವು ಕಾಪಾಡಿ... ಕಾಪಾಡಿ...!' ಎಂದು ಎದುರಿಗಿದ್ದ ಸ್ಮಶಾನದ ಕಾವಲುಗಾರನನ್ನು ಅಂಗಲಾಚಿದಳು.

ಆ ಕಾವಲುಗಾರ ಆಕೆಗೆ ಕೈ ಮುಗಿದು ಹೀಗೆ ಹೇಳಿದ:

'ಚಿಂತಿಸಬೇಡ ತಾಯಿ, ನಿನ್ನ ಪಾಲಿಗೆ ನಾನು ನನ್ನ ಹೆಂಡತಿ ಇದ್ದೇವೆ. ಮಿಕ್ಕದ್ದು ದೈವಕ್ಕೆ ಬಿಟ್ಟದ್ದು' ಎಂದು ಅವನು ತನ್ನ ಗುಡಿಸಲ ಕಡೆ ಮುಖ ಮಾಡಿ ತನ್ನ ಹೆಂಡತಿಯನ್ನು ಕೂಗೇ ಕೂಗಿದ. ಆ ಭೀಕರ ಮಳೆ ಗಾಳಿಯಲ್ಲಿ ಆ ಕೂಗು ಕೇಳಿಸಲಿಲ್ಲ. ಅವನೆ ಓಡಿ ಹೋಗಿ ಕ್ಷಣಾರ್ಧದಲ್ಲಿ ತನ್ನ ಹೆಂಡತಿಯನ್ನು ಕರೆತಂದ. ಆ ಇಬ್ಬರೂ ಚಿತೆಯ ಮೇಲಿದ್ದ ಆ ತುಂಬು ಗರ್ಭಿಣಿಯನ್ನು ಹೊತ್ತುಕೊಂಡು ತಮ್ಮ ಗುಡಿಸಲು ಸೇರಿದರು. ಕ್ಷಣಾರ್ಧದಲ್ಲಿ ಆಕೆಗೊಂದು ತೇಜೋಮಯನಾದ ಗಂಡು ಕೂಸು ಜನನವಾಯಿತು.

ತನ್ನ ಮಗುವನ್ನು ನೋಡುವ ಆಸೆ ವ್ಯಕ್ತಪಡಿಸಿದಳು. ಸ್ಮಶಾನದ ಕಾವಲುಗಾರನ ಹೆಂಡತಿ ಆ ಹಸುಕಂದನನ್ನು ಎತ್ತಿ ಆಕೆಯ ಎದೆಯ

ಮೇಲೆ ಹಾಕಿದಳು, ಅಪಾರ ಪ್ರೀತಿಯ ನಡುವೆ ಕಣ್ಣೀರು ಸುರಿಸುತ್ತಿದ್ದ ಆಕೆ ಮಗುವನ್ನು ಮುದ್ದಾಡಿ ಆಶೀರ್ವದಿಸಿದಳು.

ತನ್ನ ಸ್ಮಶಾನದ ಕಾವಲುಗಾರನ ಹೆಂಡತಿ ಆಕೆಯನ್ನು ಉದ್ದೇಶಿಸಿ ಪ್ರಶ್ನಿಸಿಯೇ ಪ್ರಶ್ನಿಸಿದಳು. 'ನಿನ್ನ ಕುಲ ಯಾವುದು? ನಿನ್ನ ಹೆಸರೇನು? ನಿನ್ನ ಗಂಡನ ಹೆಸರೇನು? ನಿನ್ನ ಊರು ಕೇರಿ ಯಾವುದು...?!' ಹೀಗೆ ನಡೆದೆ ಇತ್ತು ಆಕೆ ಅತೀ ಪ್ರಯಾಸದಿಂದ:

'ನಾ... ನಾನು... ಸೋಪಕ ಕುಲಕ್ಕೆ ಸೇರಿದ ಪಂಚ ಮಳು...!' ಎನ್ನುವಷ್ಟರಲ್ಲಿ ಆಕೆ ತನ್ನ ಕೊನೆಯುಸಿರನ್ನು ಎಳೆದಳು.

ಆ ಬಡ ದಂಪತಿಗಳಿಗೆ ಮದುವೆಯಾಗಿ ಬಹು ವರ್ಷಗಳೇ ಕಳೆದಿದ್ದರೂ, ಮಕ್ಕಳ ಭಾಗ್ಯವಿರಲಿಲ್ಲ. ಈ ಮಗು ದೇವರೆ ನಮಗಾಗಿ ಕೊಟ್ಟಾ ವರ ಎಂದು ಬಗೆದರು. ಆ ಮಗುವಿನ ತಾಯಿಯ ಕುಲದ ಹೆಸರಾದ 'ಸೋಪಕ' ಎಂಬುದನ್ನೇ ಆ ಮಗುವಿಗೆ ನಾಮಕರಣ ಮಾಡಿದರು. ತಮ್ಮ ಸರ್ವಸ್ವವನ್ನೆಲ್ಲಾ ಆ ಮಗುವಿಗೆ ಧಾರೆಯೆರೆದು ಮಗುವನ್ನು ಬದುಕಿಸಿಕೊಂಡರು. ಪ್ರೀತಿ ಪ್ರೇಮದಿಂದ ಬೆಳೆಸಿದರು.

ಸೋಪಕನಿಗೆ ನಾಲ್ಕು ವರ್ಷ ಇರುವಾಗ ಆ ದಂಪತಿಗಳಿಗೆ ಚೊಚ್ಚಲ ಗಂಡು ಮಗುವಾಯಿತು. ಆ ಮಗುವಿಗೆ 'ಸುಪ್ರಿಯ' ಎಂಬ ಹೆಸರಿಟ್ಟರು. ಆ ಎರಡು ಮಕ್ಕಳಲ್ಲಿಯು ಯಾವುದೇ ಭೇದ ಎಣಿಸಲಿಲ್ಲ. ಸೋಪಕನಿಗೆ ತನ್ನ ತಮ್ಮನಾದ ಸುಪ್ರಿಯನಲ್ಲಿ ಎಲ್ಲಿಲ್ಲದ ಪ್ರೀತಿ, ವಿಶ್ವಾಸ ಮತ್ತು ಸ್ನೇಹವಿತ್ತು. ಸೋಪಕ ಮತ್ತು ಸುಪ್ರಿಯ ತಮ್ಮ ಬಾಲ್ಯವನ್ನು ಅನ್ಯೋನ್ಯವಾಗಿ ಒಟ್ಟಿಗೆ ಕಳೆಯ ತೊಡಗಿದರು.

ಸೋಪಕನಿಗೆ ಆಗಿನ್ನೂ ಏಳು ವರ್ಷ ಮಾತ್ರ ವಯಸ್ಸಾಗಿತ್ತು. ಆತ ತನ್ನ ಮುಂದಿನ ಬದುಕಿನ ಬಗ್ಗೆ ಕನಸು ಕಾಣತೊಡಗಿದ್ದ. ಓದಿ ವಿದ್ಯಾವಂತನಾಗಿ ಮುಂದೆ ನೂರಾರು ಜನರ ಮಧ್ಯೆ ಗಣ್ಯನಾಗಬೇಕು ಎಂದು ಹಂಬಲಿಸುತ್ತಿದ್ದನು; ಅವನು ಜಾತಿಯಲ್ಲಿ ಪಂಚಮನಾದ್ದರಿಂದ ಯಾವ ಬ್ರಾಹ್ಮಣ ಗುರುವು ಇವನನ್ನು ಹತ್ತಿರ ಬಿಟ್ಟುಕೊಳ್ಳಲಿಲ್ಲ. ತುಚ್ಛವಾಗಿ ಕಂಡು ನಾಯಿ ನರಿಯಂತೆ ಒದ್ದು ಅವಾಚ್ಯವಾಗಿ ಬೈದು ಓಡಿಸುತ್ತಿದ್ದರು. ಅಂತಹ ಸಮಯದಲ್ಲಿ ಅವನ ಕಿವಿಗೆ ಗೌತಮ ಬುದ್ಧ ಹೆಸರು ಬಿತ್ತು. ಆತ ಮಹಾ ದಯಾಮಯನು, ಗುಣಶೀಲನು ಎಂಬುದನ್ನು ಅವರಿವರಿಂದ ಕೇಳಿ ತಿಳಿದನು. ಆತನನ್ನು ದೂರದಿಂದ ಕಂಡು ಗುರುತಿಸಿದನು. ಮನಸ್ಸಿನಲ್ಲಿಯೇ ನಮಿಸಿದನು. ಆತ ದಿನವೂ ಬೆಳಗ್ಗಿನ ಮುಂಜಾನೆ ತಮ್ಮ ಸ್ಮಶಾನದ ಮುಂದೆ ಹಾದು ಹೋಗುವುದನ್ನು ಸೂಕ್ಷ್ಮವಾಗಿ ಗಮನಿಸಿದನು.

ಒಂದು ಮುಂಜಾನೆ ಸೋಪಕನುಗೌತಮ ಬುದ್ಧನಿಗೆ ಎದುರಾಗಿ ಅತಿ ಗೌರವದಿಂದ ವಂದಿಸುತ್ತಾ:

'ಗುರುದೇವಾ, ತಮ್ಮ ಪಾದಗಳಿಗೆ ನನ್ನ ಪುಟ್ಟ ಕೈಗಳಿಂದ ವಂದಿಸುವೆ' ಎಂದ.

ಆ ಮುದ್ದಾದ ಮಗುವಿನ ಮುಖದಲ್ಲಿದ್ದ ದೃಢ ಚಿತ್ತತೆಯನ್ನು ಕಂಡ ಗೌತಮ ಬುದ್ಧ ಮುಗುಳ್ನಕ್ಕು:

'ಮಗು ನಿನ್ನ ಹೆಸರೇನು?'

'ಸೋಪಕ ಎಂದು ಗುರುದೇವಾ'

'ಬಹಳ ಮುದ್ದಾದ ಹೆಸರು ಮೋಹಕವಾದ ಮುಖ ಇತ್ತ ಬಾ!' ಎದು ಕೈ ಚಾಚಲು ಬುದ್ಧನಿಂದ ದೂರ ಸರಿದ ಸೋಪಕ:

'ಬೇಡ ಗುರುದೇವಾ, ನಿಮ್ಮ ಕೈ ಸ್ಪರ್ಶಕ್ಕೆ ನಾನು ಅರ್ಹನಲ್ಲ: ನಾನು ಕುಲದಲ್ಲಿ ಪಂಚಮ'

'ಹಾಗೇನು ಒಳ್ಳೆಯದೇ ಆಯಿತು! ಹಾಗಾದರೆ ನನ್ನ ತೊಡೆಯ ಮೇಲೆ ಕೂರಲು ನೀನು ಅರ್ಹ!!' ಎಂದ ಬುದ್ಧ ಸೋಪಕನನ್ನು ಪ್ರೀತಿಯಿಂದ ಬಾಚಿ, ತಬ್ಬಿ, ಎತ್ತಿ ಮುದ್ದಾಡಿ ತನ್ನ ತೊಡೆಯ ಮೇಲೆ ಕೂರಿಸಿಕೊಂಡು:

'ಈಗ ಹೇಳು ನಿನ್ನ ಆಸೆ ಏನು? ನಿನ್ನ ಕನಸೇನು?!'

'ಗುರುದೇವಾ, ನಾನು ನಿಮ್ಮಂತೆಯೇ ವಿದ್ಯಾವಂತನಾಗಬೇಕು. ಮಹಾತ್ಮನಾಗಬೇಕು. ನನ್ನ ತಂದೆ ತಾಯಿ ಹಾಗೂ ನನ್ನ ತಮ್ಮನಿಗೆ ಅಂಟಿರುವ ಕೀಳುತನವನ್ನು ತೊಡೆಯಬೇಕು. ಅದಕ್ಕಾಗಿ ನಾನು ನಿಮ್ಮ ಸಂಘಕ್ಕೂ ಧರ್ಮಕ್ಕೂ ಶರಣಾಗಬೇಕು. ದಯವಿಟ್ಟು ಅನುಮತಿಯನ್ನು ನಿರಾಕರಿಸಬೇಡಿ.'

'ಮಗು ಸೋಪಕನೇ, ಈ ನಿನ್ನ ಇಚ್ಛೆಗೆ ನಿನ್ನ ತಂದೆ ತಾಯಿಗಳ ಅನುಮತಿ ಇದೆಯೇ?'

'ಖಂಡಿತ ಇದೆ ಗುರುದೇವಾ. ಕ್ಷಣ ಕಾಲದ ಅವಕಾಶ ಕೊಡಿ. ನನ್ನ ತಂದೆ ತಾಯಿಗಳನ್ನು ತಮ್ಮಲ್ಲಿಗೆ ಶರಣು ತರುತ್ತೇನೆ' ಎಂದ ಸೋಪಕನು ಬುದ್ಧನ ಉತ್ತರಕ್ಕಾಗಿ ಕಾಯದೆ ತನ್ನ ಗುಡಿಸಲ ಕಡೆ ಓಡಿ ಹೋದ. ಕ್ಷಣಾರ್ಧದಲ್ಲಿ ತನ್ನ ತಂದೆ ತಾಯಿ ಮತ್ತು ತಮ್ಮನನ್ನು ಬುದ್ಧನ ಬಳಿ ಕರೆತಂದ. ಅಷ್ಟೇ ವಿಶ್ವಾಸ ಮತ್ತು ಸಲುಗೆಯಿಂದ ಬುದ್ಧನ ತೊಡೆಯ ಮೇಲೆ ಕೂತ:

'ಗುರುದೇವಾ, ಇವರೇ ನನ್ನ ತಂದೆ ತಾಯಿಗಳು!' ಎಂದ. ಅವರುಗಳು ಕನಸು ಮನಸ್ಸಿನಲ್ಲಿಯು ನೆನೆಸದ, ಕೇಳದ, ಕಂಡರಿಯದ ಈ ಆಶ್ಚರ್ಯಕರ ಘಟನೆಗೆ ಪ್ರತಿಕ್ರಿಯೆ ವ್ಯಕ್ತಪಡಿಸುವ ಶಕ್ತಿಯನ್ನೇ ಕಳೆದುಕೊಂಡು ಮೂಕ ವಿಸ್ಮಿತರಾಗಿ ನಿಂತರು. ಬುದ್ಧನು ತನ್ನ ಶಾಂತವಾದ ಕಂಚಿನ ಕಂಠದಿಂದ ಆ ತಂದೆ ತಾಯಿಗಳನ್ನು ಉದ್ದೇಶಿಸಿ ಹೀಗೆ ಕೇಳಿದ:'

'ಬಹು ಅಪರೂಪವಾದ ಇಂತಹ ಮಗುವನ್ನು ಪಡೆದ ಎಲ್ಲೈ ಹಿರಿಯ ದಂಪತಿಗಳೇ, ನಿಮ್ಮ ಮಗ ನನ್ನ ಸಂಘಕ್ಕೆ ಸೇರಲು ಬಯಸಿದ್ದಾನೆ. ಇದಕ್ಕೆ ನಿಮ್ಮ ಅನುಮತಿ ಇದೆಯೇ' ಎನ್ನಲು:

ನಂಬಲಾಗದ, ತಡೆಯಲಾಗದ, ಆನಂದ ಮತ್ತು ಪರಮಾಶ್ಚರ್ಯದಿಂದ ಅವರ ಕಣ್ಣುಗಳಲ್ಲಿ ಆನಂದಭಾಷ್ಪಗಳಗಳನೆ ಉಕ್ಕಿ ಹರಿಯುತ್ತಿತ್ತು. ಮಾತು ಮೌನವಾಗಿ ಭಾವನೆಯೇ ಎಲ್ಲವೂ ಆದ ಆ ದಂಪತಿಗಳು ಬುದ್ಧನ ಪಾದಕ್ಕೆ ಶರಣಾದರು.

ಮುಂದೆ ಇದೇ ಸೋಪಕನು ಬುದ್ಧನ ಪರಮ ಶಿಷ್ಯರಲ್ಲಿ ಒಬ್ಬನಾದನು, ಭಿಕ್ಷುಗಳಲ್ಲಿಯೇ ಉನ್ನತವಾದ ಥೇರನಾದನು. ಇವನ ತಮ್ಮನಾದ ಸುಪ್ರಿಯ ತನ್ನ ಅಣ್ಣನನ್ನೆ ಅನುಸರಿಸಿ ಭಿಕ್ಷುವಾದ. ಇದೇ ರೀತಿ ಕೀಳು ಜಾತಿಗೆ ಸೇರಿದ ಸುಮಂಗಲನೆಂಬ ರೈತ, ಧನ್ನಿ ಎಂಬ ಕುಂಬಾರ, ಕಪ್ಪಟಕುರ ಎಂಬ ಭಿಕ್ಷುಕ ಮುಂತಾದವರು ಬುದ್ಧನ ಶಿಷ್ಯರಾದರು. ತನ್ನ ಸಮಕಾಲೀನರಿಗಿಂತ ಬಹು ಬೇಗ ಅರ್ಹಂತ ಪದವಿಯನ್ನು ಪಡೆದ ಸೋಪಕ ಬುದ್ಧನನ್ನು ಸಂಧಿಸಿ, ತನ್ನ ಕೃತಜ್ಞತೆಯನ್ನು ಹೀಗೆ ಸಲ್ಲಿಸಿದ:

"ಗುರುದೇವಾ, ಪಾತಾಳದಲ್ಲಿದ್ದ ನನ್ನನ್ನು ಉನ್ನತ ಶಿಖರದತ್ತ ಕೊಂಡೊಯ್ದ ಮಹಾತ್ಮ ನೀನು! ಕನಸುಗಳೇ ಬತ್ತಿ ಹೋಗಿದ್ದ ಈ ಕಣ್ಣುಗಳಲ್ಲಿ ಹೊಸ ಲೋಕವನ್ನೇ ಮೂಡಿಸಿದ ಕಾರುಣ್ಯ ಮೂರ್ತಿ ನೀನು...!! ವಿದ್ಯೆಯನ್ನು, ಅರಿವನ್ನು ಸಮಾನತೆಯನ್ನು ಕರುಣಿಸಿದ ನೀನೇ ನನ್ನ ಕುಲದೈವ....!!!' □

ಗ್ರಹಿಕೆಯೇ ಮೊದಲು

ಒಮ್ಮೆ ಬುದ್ಧನು ಸಕ್ಕರವೆಂಬ ಶಾಕ್ಯರ ಪಟ್ಟಣದಲ್ಲಿ ತಂಗಿದ್ದ. ಬುದ್ಧನನ್ನು ಕಾಣುವ ಸಲುವಾಗಿ ಆನಂದನು ಬಂದನು. ತಥಾಗತನಿಗೆ ವಂದಿಸಿದ ಆನಂದ ಪಕ್ಕದಲ್ಲಿ ಕುಳಿತು ಹೀಗೆ ಪ್ರಶ್ನಿಸಿದ;

'ಗುರುವೆ, ತಾವು ಗ್ರಹಿಕೆಯ ಬಗ್ಗೆ ಸದಾ ಒತ್ತು ಕೊಡಲು ಕಾರಣವೇನು?'

'ಆನಂದ. ಒಳಿತು ಮತ್ತು ಕೆಡುಕಿನ ಮೂಲವೇ ಗ್ರಹಿಕೆ ಆದ್ದರಿಂದ!'

'ಗುರುವೆ, ಬದುಕಿನಲ್ಲಿ ನಾವು ಬಹುಮುಖ್ಯವಾಗಿ ಏನನ್ನು ಗ್ರಹಿಸಬೇಕು?'

'ಆನಂದ, ಮನೋಹರವಾಗಿರುವುದರ ಜತೆಗಿನ ಸಖ್ಯ, ಸ್ನೇಹ ಮತ್ತು ಆತ್ಮೀಯತೆ'

'ಗುರುವೆ, ನಾವು ರೂಢಿಸಿಕೊಳ್ಳಬೇಕಾದ ಬಹು ಮುಖ್ಯ ಅಂಶಗಳೇನು?'

'ಆನಂದ, ಸರಿಯಾದ ಗುರಿ. ಸರಿಯಾದ ಮಾತು. ಕ್ರಿಯೆ. ಜೀವನ ಕ್ರಮ ಪ್ರಯತ್ನ, ಮನಸ್ಸಿನ ಸ್ವಾಸ್ಥ್ಯ, ಏಕಾಗ್ರಚಿತ್ತತೆ'

'ಗುರುವೆ, ಆತ್ಮಾರ್ಪಣೆ ಎಂದರೆ ಏನು? ಅಷ್ಟಾಂಗ ಮಾರ್ಗ ವನ್ನು ಯಾವಾತ ಶುದ್ಧವಾಗಿ ಆಚರಿಸಬಲ್ಲ?'

'ಆನಂದ, ಯಾವಾತ ವಿರಕ್ತನೋ, ರಾಗ ದ್ವೇಷರಹಿತನೋ, ವ್ಯವಧಾನವನ್ನು ಆಧರಿಸಿ ಸರಿಯಾದ ದೃಷ್ಟಿಕೋನವನ್ನು ಬೆಳೆಸಿ ಕೊಂಡಿರುವನೊ ಅಂತವನೇ ಆತ್ಮವನ್ನು ಸಮರ್ಪಣೆ ಮಾಡಿಕೊಂಡವನು. ಅಂತವನು ಮಾತ್ರ ಅಷ್ಟಾಂಗ ಮಾರ್ಗವನ್ನು ಶುದ್ಧವಾಗಿ ಆಚರಿಸಬಲ್ಲ!'

'ಗುರುವೆ, ಸಾವು, ನಾಶ, ನೋವು, ದುಃಖ, ಯಾತನೆ. ನಿರಾಶೆಯಿಂದ ಮುಕ್ತಿ ಹೊಂದುವುದು ಹೇಗೆ?'

'ಆನಂದ, ಮನೋಹರವಾದುದ್ದರ ಜತೆಗೆ ಬದುಕುವುದರಿಂದ'

'ಗುರುವೆ ಈ ಮನೋಹರವಾದದ್ದು ಎಂದರೆ ಏನು?'

'ಆನಂದ, ಅದೇ ನಮ್ಮ ಪವಿತ್ರವಾದ ಬದುಕು ಅದರ ಜತೆ ಸಖ್ಯ, ಸಾಂಗತ್ಯ ಮತ್ತು ಆತ್ಮೀಯತೆಯನ್ನು ಹೊಂದಬೇಕು ಎಂದದ್ದು. ಅದನ್ನೇ ನಾವು 'ಗ್ರಹಿಕೆ' ಎಂದು ಕರೆಯುತ್ತೇವೆ' ಎಂದ ಬುದ್ಧ. ಆಗ ಆನಂದನು:

ಹೌದು ಗುರುವೆ ನಿನ್ನ ಗ್ರಹಿಕೆಯೇ ಅಸಾಧಾರಣವಾದದ್ದು...! ಅನನ್ಯವಾದದ್ದು...!! ಅದ್ಭುತವಾದದ್ದು...!' ಎಂದು ಅಭಿನಂದಿಸಿದ.

□

'SAMVADA' Kannada Monthly, Aug 2007 RNI-KAR KAN/2002/9246 CPMG/KA/BGW-706/2006-08
Office of Posting: RAJAJINAGAR HO, Date of Posting: 27-28 of Every Month

ಸುಂದರ ಕರ್ನಾಟಕಕ್ಕೆ ಸುವರ್ಣ ಮಹೋತ್ಸವ

ಸುಮಾರು ೨೦೦೦ ವರ್ಷಗಳ ಇತಿಹಾಸ ಕನ್ನಡಿಗರದು. ನಾನಾ ಕಾರಣಗಳಿಂದಾಗಿ ಬೇರೆ ಬೇರೆ ಭಾಗಗಳಲ್ಲಿ ಚದುರಿ ಹೋಗಿದ್ದ ಕನ್ನಡಿಗರು ಮತ್ತೆ ನವೆಂಬರ್ ೧, ೧೯೫೬ ರಂದು ಒಂದಾದರು. ಇದು ಏಕೀಕೃತ ಕರ್ನಾಟಕ ಉದಯವಾದ ಸುದಿನ. ಈ ಸಾಧನೆಗಾಗಿ ಆಲೂರು ವೆಂಕಟರಾಯರಾದಿಯಾಗಿ ಅಸಂಖ್ಯಾತ ಸಾಹಿತಿಗಳು, ಕಲಾವಿದರು ಮತ್ತು ವಿವಿಧ ರಂಗಗಳ ಗಣ್ಯರು ಹಾಗೂ ಜನಸಮುದಾಯದ ಪರಿಶ್ರಮ ಮತ್ತು ತ್ಯಾಗವಿದೆ. ಇವರೆಲ್ಲರಿಗೂ ಇಂದು ನಮ್ಮ ನಮನ.

ಕರ್ನಾಟಕ –೫೦ ವರ್ಷಗಳ ಒಂದು ಅವಲೋಕನ

* ಸರ್ಕಾರದ ಆಡಳಿತ ನಿರ್ವಹಣೆಗಾಗಿ ವಿನೂತನ ಶೈಲಿಯ ವಿಧಾನಸೌಧದ ನಿರ್ಮಾಣ.
* "ಉಳುವವನಿಗೆ ಭೂಮಿ" ಕಾಯಿದೆಯನ್ನು ಜಾರಿಗೊಳಿಸಿದ ಭಾರತದ ಮೊದಲ ರಾಜ್ಯ.
* ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಪ್ರತ್ಯೇಕ ಆಯೋಗ ರಚಿಸಿ, ರಾಷ್ಟ್ರಕ್ಕೆ ಮಾದರಿಯಾದ ರಾಜ್ಯ.
* ಆಡಳಿತ ವಿಕೇಂದ್ರೀಕರಣದ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಯಶಸ್ವಿಯಾಗಿ ಜಾರಿಗೆ ತಂದ ಮೊಟ್ಟ ಮೊದಲ ಮಾದರಿ ರಾಜ್ಯ.
* ಸಾಕ್ಷರತೆಯಲ್ಲಿ ಗಣನೀಯ ಸಾಧನೆ–ಕೇವಲ ಶೇ. ೨೪ ರಷ್ಟಿದ್ದ ಸಾಕ್ಷರತೆ ಈಗ ಶೇ. ೭೧ಕ್ಕೆ ಏರಿಕೆ.
* ಮಹಿಳೆಯರಿಗೆ ಉದ್ಯೋಗ ಮತ್ತು ಆಡಳಿತದಲ್ಲಿ ಮೀಸಲಾತಿ.
* ನೀರಾವರಿ ಸಾಮರ್ಥ್ಯ– ೨೩.೮೪ ಲಕ್ಷ ಹೆಕ್ಟೇರ್ ಜಮೀನಿಗೆ ನೀರಾವರಿ ಸೌಲಭ್ಯ.
* ವಿಶ್ವ ಸಂಸ್ಥೆಯ ಪ್ರಶಂಸೆ ಮತ್ತು ಪ್ರಶಸ್ತಿಗೆ ಪಾತ್ರವಾದ "ಭೂಮಿ" ಯೋಜನೆಯಡಿ ರೈತರಿಗೆ ಕಂಪ್ಯೂಟರ್ ಮೂಲಕ ಪಹಣಿ ವಿತರಿಸಿದ ಪ್ರಪ್ರಥಮ ರಾಜ್ಯ.

ಕರ್ನಾಟಕ ಸುವರ್ಣ ಮಹೋತ್ಸವದ ಈ ಶುಭ ಸಂದರ್ಭದಲ್ಲಿ ನಮ್ಮ ನಾಡಿನ ಅಪೂರ್ವ ಸಂಸ್ಕೃತಿ ಮತ್ತು ಭವ್ಯ ಪರಂಪರೆಯನ್ನು ಎತ್ತಿ ಹಿಡಿಯೋಣ. ಅದರ ಉಜ್ವಲ ಬೆಳಕಿನಲ್ಲಿ ರಾಜ್ಯದ ಭವ್ಯ ಭವಿಷ್ಯವನ್ನು ರೂಪಿಸಲು ಕಂಕಣಬದ್ಧರಾಗೋಣ.

ಕರ್ನಾಟಕ ವಾರ್ತೆ
Karnataka Information